

# ಹಿಂಸೆಯ ಮೇಲೆ ವಿಜಯ

# ಹಿಂಸೆಯ ಮೇಲೆ ವಿಜಯ

ಈಗಿನ ಕಾಲದಲ್ಲಿ
ಕ್ರಿಸ್ತನಿಗಾಗಿ ಹಿಂಸಿಸಲ್ಪಡುವ
ಸಭೆಯ ಅನುಭವಗಳು

*Other Books in English*

*by* RICHARD WURMBRAND :

- * IN GOD'S UNDERGROUND
- * THE SOVIET SAINTS
- * SERMONS IN SOLITARY CONFINEMENT
- * IF THAT WERE CHRIST, WOULD YOU GIVE HIM YOUR BLANKET ?

# ಹಿಂಸೆಯ ಮೇಲೆ ವಿಜಯ

* * * *

ಲೇಖಕ: ರಿಚರ್ಡ್ ವುರ್ಮ್‌ಬ್ರಾಂಡ್

* * * *

ವುರ್ಮ್‌ಬ್ರಾಂಡ್ ಪ್ರಕಾಶನ

ಪೋಸ್ಟ್ ಬಾಕ್ಸ್ 656

ಮುಂಬಾಯಿ

# Tortured for Christ

## Kannada Edition

Copyright 2015 Voice Media

info@VM1.global
Web home: www.VM1.global

All rights reserved. No part of the publication may be reproduced, distributed or transmitted in any form or by any means, including photocopying, recording, or other electronic, or mechanical methods, without the prior written permission of the publisher, except in the case of brief quotations embodied in critical reviews and certain other noncommercial uses permitted by copyright law. For permission requests, email the publisher, addressed “Attention: Permission Coordinator,” at the address above.

This publication **may not be sold, and is for free distribution** only.

# ರೂಮೆನಿಯಾ ದೇಶ

ನೈರುತ್ಯ ಯೂರೋಪದಲ್ಲಿರುವ ಬಾಲ್ಕನ್ ದೇಶಗಳಲ್ಲಿ ರೂಮೆನಿಯಾ ಒಂದು ದೇಶವಾಗಿದೆ. ಪ್ರಾಚೀನ ಕಾಲದಲ್ಲಿ ಅದರ ಹೆಸರು ಡಾಕಿಯಾ ಆಗಿತ್ತು. ಕೆಲವು ಕಾಲದ ವರೆಗೆ ಅದು ರೋಮ ಸಾಮ್ರಾಜ್ಯದ ಒಂದು ಭಾಗವಾಗಿತ್ತು. ರೂಮೆನಿಯಾ ಭಾಷೆಯು ಲ್ಯಾಟಿನ್ ಭಾಷೆಯಿಂದ ಉಂಟಾದದ್ದಾಗಿದೆ. ನಂತರ ಗೋಥರು ರೂಮೆನಿಯಾ ದೇಶದಲ್ಲಿ ಇಳುಕೊಂಡರು. ಕ್ರಿ. ಶ. 341–348 ರಲ್ಲಿ ಉಲ್ಫಿಲಾಸನು ಗೋಥರಿಗೆ ಸುವಾರ್ತೆಯನ್ನು ಸಾರಿದನು. ಅದರ ಪರಿಣಾಮವಾಗಿ ಅನೇಕರು ಕ್ರೈಸ್ತರಾದರು. ಕ್ರಿ. ಶ. 500 ರಿಂದ 1,000 ವರೆಗೆ ಬೇರೆ ಬೇರೆ ಜನಾಂಗದವರು ಆ ಪ್ರಾಂತವನ್ನು ದಾಟಿದರು. ಕೆಲವರು ಅಲ್ಲಿಯೇ ನೆಲೆಸಿದರು. ಇದರ ಪರಿಣಾಮಗಳು ದೇಶದ ಜನರಲ್ಲಿ ಕಾಣಿಸಿಕೊಳ್ಳುತ್ತವೆ.

16 ನೆಯ ಶತಮಾನದಲ್ಲಿ ತುರ್ಕಿ ಜನರು ಯುರೋಪ ಖಂಡದ ಈ ಭಾಗವನ್ನು ಸ್ವಾಧೀನಮಾಡಿಕೊಂಡರು. 1822 ವರೆಗೆ ವಲ್ಲಾಕಿಯಾ ಮತ್ತು ಮುಂಟೇನಿಯಾ ಎಂಬ ಎರಡು ಪ್ರಾಂತಗಳು ತುರ್ಕರಿಂದ ಆಳಲ್ಪಟ್ಟವು. ಆ ಎರಡು ಪ್ರಾಂತಗಳು ಸಂಯುಕ್ತವಾಗಿ ರೂಮೆನಿಯಾ ದೇಶವಾಯಿತು. 1861 ರಲ್ಲಿ ಈ ಹೆಸರು ಕೊಡಲ್ಪಟ್ಟಿತು. 1878 ರಲ್ಲಿ ಆ ದೇಶವು ವಿಸ್ತಾರವಾಗಿತ್ತು. 1913 ರಲ್ಲಿ ಸಹ ಅದರಲ್ಲಿ ಇನ್ನೂ ಸ್ವಲ್ಪ ಭಾಗ ಜೋಡಿಸಲ್ಪಟ್ಟಿತು. ಮೊದಲನೆಯ ಮಹಾ ಯುದ್ಧದ ಸಮಯದಲ್ಲಿ (1914–1918) ರೂಮೆನಿಯಾವು ಜರ್ಮನಿ ಹಾಗೂ ಆಸ್ಟ್ರೀಯಾ ದೇಶಗಳ ವಿರುದ್ಧವಾಗಿ ಹೋರಾಡುತ್ತಿತ್ತು. ಜರ್ಮನ್ ಸೈನ್ಯವು ರೂಮೆನಿಯಾದಲ್ಲಿ ದಾಳಿಮಾಡಿ 1916 ರಲ್ಲಿ ಅದನ್ನು ಸ್ವಾಧೀನಮಾಡಿಕೊಂಡಿತು. ಆ ಯುದ್ಧವಾದ ನಂತರ ಇನ್ನೂ ಮೂರು ಪ್ರಾಂತಗಳು ರೂಮೆನಿಯಾ ದೇಶಕ್ಕೆ ಸೇರಿಸಲ್ಪಟ್ಟವು. ಅವುಗಳು ಯಾವುವೆಂದರೆ—ಮೊದಲು ರಷ್ಯ ಸಾಮ್ರಾಜ್ಯದಲ್ಲಿದ್ದ ಬೆಸೆರೇಬಿಯಾ ಮತ್ತು ಮೊದಲು ಆಸ್ಟ್ರಿಯಾ ಸಾಮ್ರಾಜ್ಯದಲ್ಲಿದ್ದ ಬುಕೋವಿನ ಹಾಗೂ ಟ್ರಾನ್ಸಿಲ್ವೆನಿಯಾ ಎಂಬುವೇ.

ಎರಡನೆಯ ಮಹಾ ಯುದ್ಧದ ಸಮಯದಲ್ಲಿ (1939–1945) ಹಿಟ್ಲರನ ಅಪ್ಪಣೆಯ ಪ್ರಕಾರವಾಗಿ ಜರ್ಮನಿ ದೇಶದ ಪಕ್ಷವನ್ನು ಸೇರಿ, 1941 ರಿಂದ 1944 ವರೆಗೆ ರೂಮೆನಿಯಾ ಜರ್ಮನಿಯ ಆಳಿಕೆಯಲ್ಲಿತ್ತು. 1944 ರಲ್ಲಿ ರಷ್ಯ ಸೈನ್ಯದವರು ರೂಮೆನಿಯಾ ದೇಶದಲ್ಲಿ ಸೇರಿದರು. ಮರು ವರುಷ ರೂಮೆನಿಯಾ ದೇಶವು ರಷ್ಯದವರ ಸ್ವಾಧೀನವಾಯಿತು. ರಷ್ಯ ಸೇನಾಧಿಕಾರಿಗಳು ರೂಮೆನಿಯಾ ದೇಶದ ಅರಸನಾದ ಮೈಕಲನಿಗೆ—"ನೀನು ಕಮ್ಯುನಿಷ್ಟರನ್ನು ಅಧಿಕಾರಿಗಳನ್ನಾಗಿ ನೇಮಿಸಬೇಕು," ಎಂದು ಆಜ್ಞಾಪಿಸಿದರು. ಕೆಲವು ವರ್ಷಗಳಾದ ನಂತರ ಅರಸುತನ ಇಲ್ಲದಂತಾಯಿತು. ರೂಮೆ

ನಿಯಾ ಕಮ್ಯುನಿಷ್ಟರ ಗಣರಾಜ್ಯವಾಗಿತ್ತು. ಬೆಸರೇಬಿಯಾವೂ ಬುಕೋವಿಸದ ಒಂದು ಭಾಗವೂ ತಿರಿಗಿ ರಷ್ಯ ದೇಶದ ಪ್ರಾಂತಗಳಾದವು.

ರೂಮೆನಿಯಾ ದೇಶದಲ್ಲಿ ಕೆಲವು ದೊಡ್ಡ ನದಿಗಳಿವೆ. ಅನೇಕ ಮೈಲುಗಳ ವರೆಗೆ ಡನ್ಯೂಬ್ ನದಿಯು ದಕ್ಷಿಣ ಸೀಮೆಯ ಗುರುತಾಗಿದೆ. ಪ್ರೂಟ್ ನದಿಯು ಪೂರ್ವ ದಿಸೆಯ ಸೀಮೆಯಾಗಿದೆ. ಜನಸಂಖ್ಯೆ 1,60,00,000. ನೂರಕ್ಕೆ ಎಂಬತ್ತರಷ್ಟು ಜನರು ಹಳ್ಳಿಗಳಲ್ಲಿಯೂ ಚಿಕ್ಕ ಊರುಗಳಲ್ಲಿಯೂ ವಾಸಿಸುತ್ತಾರೆ. ಗೋಂಜಾಲ ಮುಖ್ಯವಾದ ಧಾನ್ಯವಾಗಿದೆ. ಎತ್ತುಗಳ ಗಾಡಿಗಳೂ, ಎಮ್ಮೆಗಳೂ ರಸ್ತೆಗಳಲ್ಲಿ ಕಾಣಿಸುತ್ತವೆ. 1918 ರಲ್ಲಿ ಭೂಮಿಯು ಒಕ್ಕಲಿಗರಿಗೆ ಹಂಚಿ ಕೊಡಲ್ಪಟ್ಟಿತು. ಕೆಲವರು ಮಾತ್ರ ಐಶ್ವರ್ಯವಂತರಾಗಿದ್ದರು. ಬರಡಾದ ಪ್ರಾಂತಗಳಲ್ಲಿ ಅನೇಕರು ಬಡವರಾಗಿದ್ದರು. ಯಾವ ವರ್ಷಗಳಲ್ಲಿ ಸುಗ್ಗಿಯು ಚೆನ್ನಾಗಿ ಆಗಲಿಲ್ಲವೋ ಆ ವರ್ಷಗಳಲ್ಲಿ ಅನೇಕರು ಹಸಿವೆಯಿಂದಿರುತ್ತಿದ್ದರು. ಆ ದೇಶದಲ್ಲಿರುವ ಕೆಲವು ದೊಡ್ಡಿಗಳಲ್ಲಿ ಕೆಲವರು ಮಾತ್ರ ಬಹಳ ಐಶ್ವರ್ಯವಂತರಾಗಿದ್ದರು. ಹೆಚ್ಚು ಮಂದಿ ಅಧಿಕಾರಿಗಳಿಗೂ ಗುರುಗಳಿಗೂ ಉಳಿದ ಸರಕಾರದ ಸೇವಕರಿಗೂ ಕೇವಲ ಸ್ವಲ್ಪ ಸಂಬಳ ಸಿಕ್ಕುತ್ತಿತ್ತು. ಅನೇಕಾವರ್ತಿ ಅದು ಸರಿಯಾಗಿ ಕೊಡಲ್ಪಡುತ್ತಿರಲಿಲ್ಲ. ಸಾಧಾರಣ ಜನರಲ್ಲಿ ಅನೇಕರಿಗೆ ಕೆಲಸವಿಲ್ಲ. ಪಟ್ಟಣಗಳಲ್ಲಿರುವ ಕೂಲಿಯಾಳುಗಳಿಗೆ ಸಹ ಅಲ್ಪವಾದ ಪಗಾರ ಸಿಕ್ಕುತ್ತಿತ್ತು. 1918 ನಂತರ ಎಲ್ಲರಿಗಾಗಿ ಪ್ರಾಥಮಿಕ ಶಾಲೆಗಳಿದ್ದರೂ ಒಕ್ಕಲಿಗರಲ್ಲಿ ಅನೇಕರಿಗೆ ಪುಸ್ತಕಗಳು ಇಲ್ಲದ ಕಾರಣ ಅವರು ಓದುವದನ್ನು ಮರೆತುಬಿಟ್ಟರು.

25 ವರ್ಷಗಳ ಮುಂಚಿತವಾಗಿ ರೂಮೆನಿಯಾ ಕ್ರೈಸ್ತ ದೇಶವೆಂದು ಎಣಿಸಲ್ಪಡುತ್ತಿತ್ತು. ಜನರೆಲ್ಲರೂ ಕರ್ತನಾದ ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವವರಾಗಿದ್ದಾರೆಂದು ಇದರ ಅರ್ಥವಲ್ಲ. ಆದರೆ ಹೆಚ್ಚು ಮಂದಿ ಕ್ರೈಸ್ತ ಧರ್ಮವನ್ನು ಆಚರಿಸುತ್ತಿದ್ದರು. ಸಂಸ್ಥಾನಿಕ ಸಭೆ ಅಂದರೆ ಆರ್ಥೊಡೊಕ್ಸ್ ಸಭೆ. ಮುಕ್ಕಾಲು ಜನರು ಅದರ ಸದಸ್ಯರಾಗಿದ್ದರು. ನೂರಕ್ಕೆ ಹದಿನಾಲ್ಕು ಜನರು ಕ್ಯಾಥೊಲಿಕ್‌ರೂ ನೂರಕ್ಕೆ ಐದು ಜನರು ಪ್ರೊಟೆಸ್ಟಂಟರೂ ಆಗಿದ್ದರು. ನೂರಕ್ಕೆ ಐವರು ಯೆಹೂದ್ಯರೂ ನೂರಕ್ಕೆ ಒಬ್ಬರು ಮುಸಲ್ಮಾನರೂ ಆಗಿದ್ದರು. ಜರ್ಮನ್ ದೇಶದವರು ಯೆಹೂದ್ಯರನ್ನು ಹಿಂಸಿಸುತ್ತಿದ್ದರು. ಕಮ್ಯುನಿಷ್ಟರು ಅಧಿಕಾರವನ್ನು ಹೊಂದಿದಾಗ ಆರ್ಥೊಡೊಕ್ಸ್ ಸಭೆಯ ಮುಂದಾಳುಗಳಲ್ಲಿ ಹೆಚ್ಚು ಮಂದಿ ಅವರಿಗೆ ಅಧೀನರಾದರು. ಜನರನ್ನು ಹೆದರಿಸಲಿಕ್ಕೆ ಬೇರೆ ಸಭೆಗಳ ಅನೇಕ ಪಾದ್ರಿಗಳೂ ಇತರ ಮುಂದಾಳುಗಳೂ ಪೊಲೀಸರಿಂದ ಹಿಡಿಯಲ್ಪಟ್ಟರು. ಇನ್ನೂ ತೆರೆಯಲ್ಪಡುವ ಸಭಾಸ್ಥಾನಗಳು ಸರಕಾರದ ಮೇಲ್ವಿಚಾರಣೆಯಿಂದ ನಡೆಸಲ್ಪಡುತ್ತವೆ. ಸದಸ್ಯರ ಟಿಪ್ಪಣಿಗಳು ಪೊಲೀಸರಿಗೆ ಕೊಡಲ್ಪಡಬೇಕು. ನೇಮಕವಾದ ವೇಳೆಗಳಲ್ಲಿ ಮಾತ್ರ ಸಭೆಗಳನ್ನು ನಡೆಸಲಿಕ್ಕೆ ಅನುಕೂಲವಿದೆ. ಯಾವದೊಂದು ಕಾಲದಲ್ಲಿ ಸಂಕಟ ತಿರಿಗಿ ಬರುವದು ಸಾಧ್ಯವಾಗಿದೆ.

# ಲೇಖಕನಾದ ರಿಚರ್ಡ್ ವುರ್ಮ್‌ಬ್ರ್ಯಾಂಡ್

ರಿಚರ್ಡ್ ವುರ್ಮ್‌ಬ್ರ್ಯಾಂಡ್ ಬುಕೋರೆವಿನದಲ್ಲಿ ಯೆಹೂದಿ ಕುಟುಂಬದಲ್ಲಿ ಹುಟ್ಟಿದನು. ಅವನು ಇನ್ನೂ ಯೌವನಸ್ಥನಾಗಿದ್ದಾಗ ನಾಸ್ತಿಕನಾದನು. 1938 ರಲ್ಲಿ ಅವನು ಯೇಸು ಕ್ರಿಸ್ತನನ್ನು ತನ್ನ ಸ್ವಂತ ರಕ್ಷಕನನ್ನಾಗಿ ಅಂಗೀಕಾರ ಮಾಡಿ 1939 ರಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡನು. ಎರಡನೆಯ ಮಹಾ ಯುದ್ಧದ ಕಾಲದಲ್ಲಿ ಅವನು ಲೂಥರನ್ ಸಭೆಯಲ್ಲಿ ಪಾದ್ರಿಯಾಗಿ ನೇಮಿಸಲ್ಪಟ್ಟನು.

1945 ರಲ್ಲಿ ಕಮ್ಯುನಿಷ್ಟರು ರೂಮೆನಿಯಾ ದೇಶವನ್ನು ಸ್ವಾಧೀನ ಮಾಡಿಕೊಂಡಾಗ, ರಿಚರ್ಡ್ ವುರ್ಮ್‌ಬ್ರ್ಯಾಂಡ್ ಗುಪ್ತವಾದ ರೀತಿಯಲ್ಲಿ ತನ್ನ ಸ್ವಂತ ಜನರಿಗೂ ರಷ್ಯ ಸೈನ್ಯದವರಿಗೂ ಸುವಾರ್ತೆಯನ್ನು ಸಾರಲು ಪ್ರಾರಂಭಿಸಿದನು. 1948ರಲ್ಲಿ ಅವನೂ ಅವನ ಹೆಂಡತಿಯಾದ ಸಾಬೀನಳೂ ಪೊಲೀಸರಿಂದ ಹಿಡಿಯಲ್ಪಟ್ಟರು. ಅವನ ಹೆಂಡತಿ ಮೂರು ವರ್ಷಗಳ ವರೆಗೆ ಬಿಟ್ಟೀ ಕೆಲಸ ಮಾಡಬೇಕಾಯಿತು. ರಿಚರ್ಡ್ ವುರ್ಮ್‌ಬ್ರ್ಯಾಂಡ್ ಮೂರು ವರ್ಷಗಳ ವರೆಗೆ ಏಕಾಂತವಾದ ಕೋಣೆಯೊಳಗೆ ಹಾಕಲ್ಪಟ್ಟನು. ತನ್ನ ಹಿಂಸಕರನ್ನು ಹೊರತಾಗಿ ಅವನು ಇನ್ಯಾರನ್ನೂ ನೋಡಲಿಲ್ಲ. ಮೂರು ವರುಷಗಳಾದ ನಂತರ ಅವನು ಬೇರೆ ಕೈದಿಗಳ ಸಂಗಡ ಇಡಲ್ಪಟ್ಟನು. ಆದರೆ ಹಿಂಸೆ ನಡೆಯುತ್ತಾ ಇತ್ತು.

ಅಷ್ಟರೊಳಗೆ ಅವನ ಹೆಸರು ಸ್ವದೇಶದಲ್ಲಿಯೂ ಪರದೇಶಗಳಲ್ಲಿಯೂ ಪ್ರಸಿದ್ಧವಾಯಿತು. ಬೇರೆ ದೇಶಗಳ ಪ್ರತಿನಿಧಿಗಳು ಅವನ ಪರಿಸ್ಥಿತಿಯ ವಿಷಯವಾಗಿ ರೂಮೆನಿಯಾ ಅಧಿಕಾರಿಗಳನ್ನು ಕೇಳಲು ಪ್ರಾರಂಭಿಸಿದರು. ಅವನು ಸ್ವದೇಶವನ್ನು ಬಿಟ್ಟು, ಓಡಿ ಹೋದನೆಂದು ಕಮ್ಯುನಿಸ್ಟ್ ಅಧಿಕಾರಿಗಳು ಉತ್ತರ ಕೊಟ್ಟರು. ಆದರೆ ಗುಪ್ತ ಪೊಲೀಸರು, ಬಿಡುಗಡೆ ಹೊಂದಿದ ಕೈದಿಗಳ ವೇಶವನ್ನು ಧರಿಸಿಕೊಂಡು, ಅವನ ಹೆಂಡತಿಯನ್ನು ಭೆಟ್ಟಿಯಾಗಿ, ಅವನು ಸೆರೆಮನೆಯಲ್ಲಿ ಸತ್ತು, ಹೂಣಲ್ಪಟ್ಟನೆಂದು ಹೇಳಿದರು. ಜನರು ಅವನನ್ನು ಮರೆತು ಬಿಡುವರೆಂದು ಅವರ ಉದ್ದೇಶವಾದಿತ್ತು.

ಎಂಟು ವರುಷಗಳಾದ ನಂತರ ಅವನು ಸೆರೆಮನೆಯಿಂದ ಬಿಡುಗಡೆ ಹೊಂದಿ, ಗುಪ್ತ ಸಭೆಯ ಸೇವೆಯಲ್ಲಿ ತಿರಿಗಿ ಪಾಲುಗಾರನಾದನು. 1959 ರಲ್ಲಿ ಅವನು ತಿರಿಗಿ ಪೊಲೀಸರಿಂದ ಹಿಡಿಯಲ್ಪಟ್ಟು 25 ವರುಷಗಳ ವರೆಗೆ ಸೆರೆಮನೆಯಲ್ಲಿರಬೇಕೆಂಬ ದಂಡನೆಯನ್ನು ಹೊಂದಿದನು. ಆದರೆ 1964 ರಲ್ಲಿ ಇನ್ನೂ ಅನೇಕ ಕೈದಿಗಳ ಸಂಗಡ ಅವನಿಗೆ ಬಿಡುಗಡೆ ಸಿಕ್ಕಿತು. ಅವನು ತಿರಿಗಿ ತನ್ನ ಗುಪ್ತ ಸೇವೆಯನ್ನು ಸಾಧಿಸಲು ಪ್ರಾರಂಭಿಸಿದನು.

ಆದರೆ ಅವನು ಮೂರನೆಯ ಸಾರಿ ಹಿಡಿಯಲ್ಪಡಬಹುದೆಂದು ಗ್ರಹಿಸಿಕೊಂಡು, ನೋರ್ವೇ ದೇಶದಲ್ಲಿದ್ದ ಕ್ರೈಸ್ತರು ಕಮ್ಯುನಿಷ್ಟ ಅಧಿಕಾರಿಗಳ ಸಂಗಡ ಅವನ ವಿಷಯವಾಗಿ ಸಂಭಾಷಣೆ ಮಾಡತೊಡಗಿದರು. ಯಾಕಂದರೆ, ಕಮ್ಯುನಿಷ್ಟ ಸರಕಾರವು ರಾಜಕೀಯ ಕೈದಿಗಳನ್ನು ಮಾರಲು ಪ್ರಾರಂಭ ಮಾಡಿದ್ದಿತು. ಸಾಧಾರಣ ಕೈದಿಗಳ ಕ್ರಯ ಸುಮಾರು ರೂಪಾಯಿ 10,000 ಆಗಿತ್ತು. ಆದರೆ ವುರ್ಮ್‌ಬ್ರಾಂಡ್‌ನಿಗೆ ಸ್ವದೇಶವನ್ನು ಬಿಡುವ ಆಜ್ಞೆಗಾಗಿ ಅವರು ಅದಕ್ಕಿಂತ ಮೂರರಷ್ಟು ಕೊಡಬೇಕಾಯಿತು. ಕಡೆಯದಾಗಿ ಅವನು ಡಿಸೆಂಬರ್ 1965 ರಲ್ಲಿ ತನ್ನ ಕುಟುಂಬದ ಸಂಗಡ ಸ್ವದೇಶವಾದ ರೂಮೆನಿಯಾ ದೇಶವನ್ನು ಬಿಟ್ಟುಬಿಟ್ಟನು.

ಅವನ ಅನುಭವಗಳ ಇತಿಹಾಸವು ಅನೇಕ ದೇಶಗಳ ವರ್ತಮಾನ ಪತ್ರಗಳಲ್ಲಿ ಪ್ರಕಟವಾಗಿತ್ತು. ಅವನನ್ನು ಕೊಲ್ಲಬೇಕೆಂದು ಒಳಸಂಚುಗಳು ಮಾಡಲ್ಪಟ್ಟಿದ್ದರೂ ಅವನು ಇಂದಿನ ವರೆಗೆ ಗುಪ್ತ ಸಭೆಯ ಹಿತಕ್ಕಾಗಿ ತನ್ನ ಕಾರ್ಯವನ್ನು ಸಾಧಿಸುತ್ತಾ ಬಂದಿದ್ದಾನೆ.

# ಅಧ್ಯಾಯ—೧

## ಒಬ್ಬ ನಾಸ್ತಿಕನಿಗೆ ಕ್ರಿಸ್ತನು ಸಿಕ್ಕಿದನು

ನಾನು ಬೆಳೆದು ಬಂದ ಕುಟುಂಬದಲ್ಲಿ ಯಾರೂ ಯಾವ ಧರ್ಮಕ್ಕೂ ಲಕ್ಷ್ಯ ಕೊಡುತ್ತಿರಲಿಲ್ಲ. ನನ್ನ ಬಾಲ್ಯದಲ್ಲಿ ನನಗೆ ಯಾವ ಧಾರ್ಮಿಕ ಶಿಕ್ಷಣವು ಸಿಗಲಿಲ್ಲ. ನಾನು ಹದಿನಾಲ್ಕು ವಯಸ್ಸಿನವನಾಗಿದ್ದಾಗ ದೃಢ ನಾಸ್ತಿಕನಾಗಿದ್ದೆನು. ಯಾಕೆಂದರೆ ನನ್ನ ಬಾಲ್ಯದಲ್ಲಿ ನನಗೆ ಅನೇಕ ಕಡು ಅನುಭವಗಳಾದವು. ನಾನು ಚಿಕ್ಕ ವಯಸ್ಸಿನಿಂದ ಅನಾಥನಾಗಿದ್ದೆನು. ಮೊದಲನೆಯ ಮಹಾ ಯುದ್ಧದ ಸಮಯದಲ್ಲಿ ನನಗೆ ಕಠಿಣವಾದ ಬಡತನವಿತ್ತು. ಯಾವ ರೀತಿಯಲ್ಲಿ ಈ ಹೊತ್ತು ಕಮ್ಯುನಿಷ್ಟರು ನಾಸ್ತಿಕರಾಗಿದ್ದಾರೋ ಅದೇ ರೀತಿಯಲ್ಲಿ ನಾನು ಹದಿನಾಲ್ಕು ವರ್ಷದ ಹುಡುಗನಾಗಿ ನಿಷ್ಠ ನಾಸ್ತಿಕನಾಗಿದ್ದೆನು. ನಾಸ್ತಿಕತ್ವದ ಪುಸ್ತಕಗಳನ್ನು ನಾನು ಅಭ್ಯಾಸಿಸಿದ್ದೆನು. ನಾನು ದೇವರಲ್ಲಿಯೂ ಕ್ರಿಸ್ತನಲ್ಲಿಯೂ ನಂಬಿಕೆಯಿಟ್ಟಿರಲಿಲ್ಲ. ಮಾತ್ರವಲ್ಲ ಇಂಥ ನಂಬಿಕೆಯು ಮಾನವನ ಮನಸ್ಸಿಗೆ ಕೇಡನ್ನು ಮಾಡುವದನ್ನು ಯೋಚಿಸಿ ಅದನ್ನು ಹಗೆ ಮಾಡುತ್ತಿದ್ದೆನು. ಧರ್ಮವನ್ನು ಕಹಿಯೆಂದು ಯೋಚಿಸುತ್ತಾ ನಾನು ಬೆಳೆದೆನು.

ಅನಂತರ ನಾನು ಆಶ್ಚರ್ಯಕರವಾದ ಸತ್ಯವನ್ನು ಗ್ರಹಿಸಿಕೊಂಡೆನು. ಇದರ ಮೂಲ ಕಾರಣ ನನಗೆ ಇನ್ನೂ ಗೊತ್ತಿಲ್ಲ. ನನ್ನ ಸ್ವಭಾವದಲ್ಲಿ ಒಳ್ಳೇತನವಿರಲಿಲ್ಲ. ಆದರೂ ದೇವರು ತನ್ನ ಸ್ವಂತ ಕೃಪೆಯಿಂದ ನನ್ನನ್ನು ಆರಿಸಿಕೊಂಡನು.

ನಾನು ನಾಸ್ತಿಕನಾಗಿದ್ದರೂ ವಿನಾಃಕಾರಣವಾಗಿ ಚರ್ಚುಗಳು (ಕ್ರೈಸ್ತರ ಸಭಾ ಸ್ಥಾನಗಳು) ನನ್ನನ್ನು ಯಾವಾಗಲೂ ಆಕರ್ಷಿಸುತ್ತಿದ್ದವು. ನಾನು ತಿರುಗಾಡುತ್ತಿರುವಾಗ ಅಂಥ ಸ್ಥಳಗಳ ಹತ್ತಿರ ಬಂದರೆ ಒಳಗೆ ಹೋಗಲಿಕ್ಕೆ ಯಾವಾಗಲೂ ಆಶೆಯಾಗುತ್ತಿತ್ತು. ಅವುಗಳನ್ನು ದಾಟಿ ಮುಂದೆ ಹೋಗಲು ನನಗೆ ಕಠಿಣವೆನ್ನಿಸುತ್ತಿತ್ತು. ಆದರೆ ಅಂಥ ಚರ್ಚುಗಳಲ್ಲಿ ನಡೆಯುತ್ತಿದ್ದ ಸಂಗತಿಗಳ ಅರ್ಥವನ್ನು ನಾನು ಎಂದಿಗೂ ಗ್ರಹಿಸಿಕೊಂಡಿರಲಿಲ್ಲ. ನಾನು ಉಪದೇಶಗಳನ್ನು ಕೇಳುತ್ತಿದ್ದರೂ ಅವುಗಳು ನನ್ನ ಹೃದಯವನ್ನು ಆಕರ್ಷಿಸಲಿಲ್ಲ. ದೇವರಿಲ್ಲವೆಂಬ ದೃಢವಾದ ನಿಶ್ಚಯತ್ವ ನನ್ನಲ್ಲಿತ್ತು. ಯಾವ ಸರ್ವಾಧಿಕಾರಿಗೆ ನಾನು ಅಧೀನನಾಗಿರಬೇಕಾಗಿತ್ತೋ ಆ ಸರ್ವಾಧಿಕಾರಿಯಾದ ದೇವರ ಯೋಚನೆ ನನಗೆ ಅಸಹ್ಯವಾಗಿತ್ತು. ಆದರೆ ಈ ಪ್ರಪಂಚದ ಕೇಂದ್ರದಲ್ಲಿ ಪ್ರೀತಿಸ್ವರೂಪನು ಇದ್ದಾನೆಂದು ತಿಳಿದುಕೊಳ್ಳಲು ನನ್ನಲ್ಲಿ ಕುತೂಹಲವಿತ್ತು. ಬಾಲ್ಯದ ಯೌವನದ ಸಂತೋಷಗಳಲ್ಲಿ ನಾನು ಕೆಲವು ಮಾತ್ರ ಅನುಭವಿಸಿದೆನು. ನನ್ನನ್ನು ಪ್ರೀತಿಸುವ ವ್ಯಕ್ತಿ ಇರಬೇಕೆಂದು ನನ್ನಲ್ಲಿ ಹಂಬಲವಿತ್ತು.

ದೇವರಿಲ್ಲವೆಂದು ನನಗೆ ಗೊತ್ತಾಗಿದ್ದರೂ ಪ್ರೀತಿಯುಳ್ಳ ದೇವರು ಇಲ್ಲದ ಕಾರಣ ನನಗೆ ದುಃಖವಿತ್ತು. ನನ್ನ ಹೃದಯದಲ್ಲಿ ಆತ್ಮಿಯ ಹೋರಾಟ ನಡೆಯುತ್ತಿತ್ತು. ಆ ಸಮಯದಲ್ಲಿ ನಾನು ಒಮ್ಮೆ ಕ್ಯಾಥೊಲಿಕ್ ಚರ್ಚಿನಲ್ಲಿ ಪ್ರವೇಶಿಸಿದೆನು. ಜನರು ಅಲ್ಲಿ ಮೊಣಕಾಲೂರಿ ಏನಾದರೂ ಹೇಳುತ್ತಿದ್ದರು. ನನ್ನ ಮನಸ್ಸಿನಲ್ಲಿ ಒಂದು ಯೋಚನೆ ಬಂತು. ನಾನು ಅವರ ಹತ್ತಿರ ಮೊಣಕಾಲೂರಿಕೊಂಡು ಅವರ ಮಾತುಗಳನ್ನು ಕೇಳಿ ಅದೇ ಮಾತುಗಳಿಂದ ಪ್ರಾರ್ಥಿಸುತ್ತೇನೆಂದು ನಿಶ್ಚಯಿಸಿಕೊಂಡೆನು. ಇದರಿಂದ ನನಗೆ ಏನಾಗಬಹುದೆಂಬುದನ್ನು ನೋಡಬೇಕೆಂದಿದ್ದೆನು. ಅವರು ಯೇಸು ಸ್ವಾಮಿಯ ತಾಯಿಯಾದ ಮರಿಯಳಿಗೆ ಪ್ರಾರ್ಥನೆ ಮಾಡುತ್ತಿದ್ದರು. "ಕೃಪೆಯಿಂದ ತುಂಬಿದ ಮರಿಯಳೇ, ನಿನಗೆ ನಮಸ್ಕಾರ," ಎಂದು ಅವರು ಹೇಳುತ್ತಿದ್ದ ಮಾತುಗಳನ್ನು ನಾನು ಸಹ ಹೇಳುತ್ತಿದ್ದೆನು. ಅಲ್ಲಿ ಕನ್ಯೆಯಾದ ಮರಿಯಳ ಒಂದು ಪ್ರತಿಮೆಯಿತ್ತು. ನಾನು ಅದರ ಮೇಲೆ ದೃಷ್ಟಿಯಿಟ್ಟೆನು. ಆದರೆ ಏನೂ ಆಗಲಿಲ್ಲ. ನನಗೆ ಬಹಳ ದುಃಖವಾಯಿತು.

ನಾನು ನಿಷ್ಠ ನಾಸ್ತಿಕನಾಗಿದ್ದಾಗ್ಯೂ ಒಂದು ದಿವಸ ದೇವರಿಗೆ ಪ್ರಾರ್ಥನೆ ಮಾಡಿದೆನು. ನನ್ನ ಪ್ರಾರ್ಥನೆ ಹೀಗಿತ್ತು :—"ದೇವರೇ, ನೀನು ಅಸ್ತಿತ್ವದಲ್ಲಿಲ್ಲವೆಂದು ನನಗೆ ಸ್ಪಷ್ಟವಾಗಿ ಗೊತ್ತಾಗಿದೆ. ಆದರೆ ನೀನು ಒಂದು ವೇಳೆ ಇರಬಹುದು. ನಾನು ಇದನ್ನು ನಂಬುವದಿಲ್ಲ. ಆದರೆ ನೀನು ನಿಜವಾಗಿಯೂ ಇದ್ದದ್ದಾದರೆ ನಿನ್ನಲ್ಲಿ ನಂಬಿಕೆಯಿಡುವದು ನನ್ನ ಜವಾಬ್ದಾರಿಕೆಯಲ್ಲ. ನಿನ್ನನ್ನು ನನಗೆ ಪ್ರಕಟಿಸಿಕೊಳ್ಳುವದು ನಿನ್ನ ಜವಾಬ್ದಾರಿಕೆಯಾಗಿದೆ," ಎಂಬುದೇ. ನಾನು ನಾಸ್ತಿಕನಾಗಿದ್ದೆನು. ಆದರೆ ನಾಸ್ತಿಕತ್ವದಿಂದ ನನ್ನ ಹೃದಯಕ್ಕೆ ಸಮಾಧಾನ ಸಿಕ್ಕಲಿಲ್ಲ.

ಯಾವಾಗ ನನಗೆ ಒಳಗಿನ ಹೋರಾಟ ನಡೆದಿತ್ತೋ ಆವಾಗ ನನಗೆ ಗೊತ್ತಿಲ್ಲದ ಮತ್ತೊಂದು ಕಾರ್ಯ ನಡೆದಿತ್ತು. ರೊಮೆನಿಯದ ಬೆಟ್ಟ ಪ್ರದೇಶದಲ್ಲಿದ್ದ ಒಂದು ಗ್ರಾಮದಲ್ಲಿ ಮುದುಕನಾದ ಒಬ್ಬ ಬಡಿಗನು ಈ ರೀತಿಯಲ್ಲಿ ಪ್ರಾರ್ಥನೆ ಮಾಡುತ್ತಿದ್ದನು : "ನನ್ನ ದೇವರೇ, ನಾನು ಭೂಲೋಕದಲ್ಲಿ ನಿನ್ನನ್ನು ಸೇವಿಸುತ್ತಾ ಬಂದಿದ್ದೇನೆ. ಪರಲೋಕದಲ್ಲಿ ಮಾತ್ರವಲ್ಲದೇ ಇಹಲೋಕದಲ್ಲಿ ಸಹ ನನಗೆ ಪ್ರತಿಫಲ ಬೇಕು. ಆ ಪ್ರತಿಫಲ ಯಾವುದೆಂದರೆ—ನಾನು ಸಾಯುವದಕ್ಕಿಂತ ಮೊದಲು ಒಬ್ಬ ಯೆಹೂದ್ಯನನ್ನು ಕ್ರಿಸ್ತನ ಕಡೆಗೆ ತರಬೇಕೆಂಬುದೇ. ಯಾಕೆಂದರೆ ಯೇಸು ಯೆಹೂದ್ಯರಿಂದ ಬಂದವನಾಗಿದ್ದಾನೆ. ಆದರೆ ನಾನು ಬಡವನೂ ಮುದುಕನೂ ಅಸ್ವಸ್ಥನೂ ಆಗಿದ್ದೇನೆ. ನಾನು ಅಡ್ಡಾಡಿ ಯೆಹೂದ್ಯನನ್ನು ಹುಡುಕಲಾರೆನು. ನನ್ನ ಹಳ್ಳಿಯಲ್ಲಿ ಯೆಹೂದ್ಯನೊಬ್ಬನೂ ಇಲ್ಲ. ನೀನೇ ಒಬ್ಬ ಯೆಹೂದ್ಯನನ್ನು ನನ್ನ ಗ್ರಾಮಕ್ಕೆ ಕರೆದು

ಕೊಂಡು ಬರಬೇಕು. ಹಾಗಾದರೆ ನಾನು ಅವನನ್ನು ಕ್ರಿಸ್ತನ ಕಡೆಗೆ ಎಳೆಯಲು ಹೃದಯಪೂರ್ವಕವಾಗಿ ಪ್ರಯತ್ನಿಸುವೆನು," ಎಂಬುದೇ.

ಅದೇ ಹಳ್ಳಿಗೆ ಹೋಗಬೇಕೆಂದು ನನಗೆ ಒತ್ತಾಯವಾಯಿತು. ಅಲ್ಲಿ ನನಗೆ ಯಾವ ಕೆಲಸವೂ ಇರಲಿಲ್ಲ. ರೂಮೇನಿಯಾ ದೇಶದಲ್ಲಿ ಹನ್ನೆರಡು ಸಾವಿರ ಹಳ್ಳಿ–ಪಳ್ಳಿಗಳಿವೆ. ಆದರೆ ನಾನು ಆ ಹಳ್ಳಿಗೆ ಹೋದೆನು. ನಾನು ಯೆಹೂದ್ಯನಾಗಿದ್ದೇನೆಂದು ನೋಡಿ ಆ ಬಡವನು ನನ್ನನ್ನು ಸ್ನೇಹಿಸಿದನು. ಯಾವ ರೀತಿಯಲ್ಲಿ ಯೌವನಸ್ಥನು ತಾನು ಮದುವೆ ಮಾಡಿಕೊಳ್ಳಬೇಕೆಂದು ಆಶಿಸುವ ಸುಂದರವಾದ ಹುಡುಗಿಯನ್ನು ಆಕರ್ಷಿಸಲು ಪ್ರಯತ್ನಿಸುತ್ತಾನೋ ಅದೇ ರೀತಿಯಲ್ಲಿ ಅವನು ಪ್ರಯತ್ನಿಸಿದನು. ಯಾಕೆಂದರೆ ನಾನು ಅವನೂರಿಗೆ ಬಂದಾಗ ದೇವರು ತನ್ನ ಪ್ರಾರ್ಥನೆಯನ್ನು ಕೇಳಿ ಉತ್ತರ ಕಳುಹಿಸಿದನೆಂದು ಅವನು ನಂಬಿದ್ದನು. ಅವನು ನನಗೆ ಸತ್ಯವೇದವನ್ನು ಕೊಟ್ಟು ಇದನ್ನು ಓದ ಬೇಕೆಂದು ಬೇಡಿಕೊಂಡನು. ಸಂಸ್ಕೃತಿಯನ್ನು ಅರಿತುಕೊಳ್ಳಲು ನಾನು ಮುಂಚಿತವಾಗಿ ಅನೇಕಾವರ್ತಿ ಸತ್ಯವೇದವನ್ನು ಓದಿದ್ದೆನು. ಆದರೆ ಅವನು ನನಗೆ ಕೊಟ್ಟ ಸತ್ಯವೇದವು ಬೇರೆ ಪ್ರಕಾರದ್ದಾಗಿತ್ತು. ಆ ಸಮಯದಲ್ಲಿ ಅವನೂ ಅವನ ಹೆಂಡತಿಯೂ ಅನೇಕಾವರ್ತಿ ಕೆಲವು ಗಂಟೆಗಳ ವರೆಗೆ ನನಗೋಸ್ಕರವೂ ನನ್ನ ಹೆಂಡತಿಗೋಸ್ಕರವೂ ಪ್ರಾರ್ಥಿಸುತ್ತಿದ್ದರೆಂದು ಅನಂತರ ನಮಗೆ ತಿಳಿಸಿದನು. ನಾವು ದೇವರ ಕಡೆಗೆ ತಿರುಗಿಕೊಳ್ಳಬೇಕೆಂದು ಅವನ ಹೃದಯದ ಅಪೇಕ್ಷೆಯಾಗಿತ್ತು. ಅವನು ನನಗೆ ಕೊಟ್ಟ ಸತ್ಯವೇದವು ಅಕ್ಷರಗಳಿಂದ ಬರೆಯಲ್ಪಟ್ಟದ್ದಲ್ಲದೇ ಅವನ ಪ್ರಾರ್ಥನೆಗಳಿಂದ ಅಂಟಿಸಿದ ಪ್ರೀತಿಸಿದ ಜ್ವಾಲೆಯಿಂದ ಬರೆಯಲ್ಪಟ್ಟಿತ್ತು. ಇದನ್ನು ಓದುವದು ನನಗೆ ಕಠಿಣವಾಗಿತ್ತು. ನಾನು ಯೇಸುವಿನ ಜೀವನದೊಡನೆ ನನ್ನ ಕೆಟ್ಟ ಜೀವನವನ್ನು ಹೋಲಿಸಿ ನೋಡಿದಾಗ ನಾನು ಕಣ್ಣೀರು ಸುರಿಸಿದೆನು. ಆತನು ಪರಿಶುದ್ಧನಾಗಿದ್ದನು ; ನಾನು ಅಶುದ್ಧನಾಗಿದ್ದೆನು. ಆತನು ಪ್ರೀತಿ ಸ್ವರೂಪನಾಗಿದ್ದನು ; ನಾನು ದ್ವೇಷದಿಂದ ತುಂಬಿದವನಾಗಿದ್ದೆನು. ನಾನು ಕ್ರಿಸ್ತನ ಮೇಲೆ ನಂಬಿಕೆಯಿಟ್ಟಾಗ ಆತನು ನನ್ನನ್ನು ತನ್ನ ಮಕ್ಕಳಲ್ಲಿ ಒಬ್ಬನನ್ನಾಗಿ ಅಂಗೀಕಾರ ಮಾಡಿದನು.

ಸ್ವಲ್ಪಕಾಲ ಕಳೆದ ನಂತರ ನನ್ನ ಹೆಂಡತಿಯೂ ದೇವರ ಕಡೆಗೆ ತಿರುಗಿಕೊಂಡಳು. ಆಕೆ ಇನ್ನೂ ಕೆಲವರನ್ನು ಕ್ರಿಸ್ತನ ಕಡೆಗೆ ಎಳೆದಳು. ಆ ಜನರು ಕ್ರಮವಾಗಿ ಬೇರೆಯವರನ್ನು ಕ್ರಿಸ್ತನ ಹತ್ತಿರ ಸೇರಿಸಿದರು. ಈ ರೀತಿಯಲ್ಲಿ ಹೊಸ ಲೂಥರನ್ ಕ್ರೈಸ್ತ ಸಭೆ ರೂಮೇನಿಯಾದಲ್ಲಿ ಸ್ಥಾಪಿಸಲ್ಪಟ್ಟಿತು.

ಆ ಮೇಲೆ ಎರಡನೆಯ ಮಹಾ ಯುದ್ಧ ಪ್ರಾರಂಭವಾಯಿತು. ನಾಝಿ ಎಂಬ ಜರ್ಮನ್ ಪಕ್ಷದವರು ನಮ್ಮ ದೇಶದಲ್ಲಿ ರಾಜ್ಯಾಧಿಕಾರವನ್ನು ನಡೆಸುತ್ತಿದ್ದರು. ಅವರು ಆರ್ಥೊಡೊಕ್ಸ್ ಸಭೆಯವರ ಸಂಗಡ ಒಡಂಬಡಿಕೆ ಮಾಡಿ ಪ್ರೊಟೆಸ್ಟಂಟರನ್ನೂ ಯೆಹೂದ್ಯರನ್ನೂ ಹಿಂಸಿಸುತ್ತಿದ್ದರು.

ನಾನು ಲೂಥರನ್ ಸಭೆಯಲ್ಲಿ ಸಭಾ ಪಾಲಕನ ದೀಕ್ಷೆಯನ್ನೂ ಹಾಗೂ ಶಿಕ್ಷಣವನ್ನೂ ಹೊಂದುವದಕ್ಕಿಂತ ಮೊದಲು ಈ ಹಳ್ಳಿಯ ಸಭೆಯ ಸ್ಥಾಪಕನಾಗಿದ್ದ ಕಾರಣ ಅದರ ಮುಂದಾಳಾಗಿದ್ದೆನು. ಅದರ ಜವಾಬ್ದಾರಿಕೆ ನನ್ನ ಮೇಲೆ ಬಿದ್ದಿತ್ತು. ಕೆಲವು ಸಾರೆ ನಾನೂ ನನ್ನ ಹೆಂಡತಿಯೂ ಪೋಲೀಸರಿಂದ ಹಿಡಿಯಲ್ಪಟ್ಟು ಹೊಡೆಯಲ್ಪಟ್ಟು ನಾಝಿ ನ್ಯಾಯಸ್ಥಾಪಕರ ಮುಂದೆ ಎಳೆಯಲ್ಪಟ್ಟೆವು. ನಾಝಿಯ ಹಿಂಸೆ ಭಯಂಕರವಾಗಿತ್ತು. ಆದರೆ ಕಮ್ಯುನಿಷ್ಟರ ಹಿಂಸೆ ಅದಕ್ಕಿಂತ ಅತಿ ಭಯಂಕರವಾಗಿತ್ತು. ನನ್ನ ಮಗನು ನಾಝಿ ಪಕ್ಷದವರಿಂದ ಕೊಲ್ಲಲ್ಪಡಬಾರದೆಂದು ನಾವು ಅವನಿಗೆ ಮೀಹಾಯ ಅಂದರೆ ಯೆಹೂದ್ಯರಲ್ಲದ ಹೆಸರನ್ನು ಕೊಡಬೇಕಾಯಿತು.

ಆದರೆ ನಾಝಿಯ ಕಾಲಗಳಿಂದ ನಮಗೆ ಒಂದು ದೊಡ್ಡ ಪಾಠ ಸಿಕ್ಕಿತು. ಅದೇನೆಂದರೆ ಶಾರೀರಿಕ ಹಿಂಸೆಯನ್ನು ತಾಳುವದು ಸಾಧ್ಯವೆಂದು ನಾವು ಗ್ರಹಿಸಿಕೊಂಡೆವು. ದೇವರ ಸಹಾಯದಿಂದ ಮಾನವನ ಆತ್ಮವು ಭಯಂಕರವಾದ ನೋವನ್ನು ತಾಳಬಲ್ಲದು. ಆ ಕಾಲದಲ್ಲಿ ಗುಪ್ತವಾದ ರೀತಿಯಲ್ಲಿ ಕ್ರೈಸ್ತ ಸೇವೆ ಹೇಗೆ ಮಾಡಬೇಕೆಂದು ನಾವು ತಿಳಿದುಕೊಂಡೆವು. ಈ ರೀತಿಯಲ್ಲಿ ಬೇಗನೇ ನಮ್ಮ ಮೇಲೆ ಬರುವಂಥ ಅತಿ ಭಯಂಕರವಾದ ಕಷ್ಟಕ್ಕಾಗಿ ನಾವು ಸಿದ್ಧಮಾಡಲ್ಪಟ್ಟೆವು.

## ರಷ್ಯದವರಿಗೆ ನನ್ನ ಸೇವೆ

ನಾನು ನಾಸ್ತಿಕನಾಗಿದ್ದ ಕಾರಣ ಪಶ್ಚಾತ್ತಾಪ ಪಟ್ಟು ದೇವರ ಕಡೆಗೆ ತಿರುಗಿಕೊಂಡ ದಿನದಿಂದ ರಷ್ಯದವರಿಗೆ ಸಾಕ್ಷಿ ಕೊಡಬೇಕೆಂದು ಅಪೇಕ್ಷಿಸಿದೆನು. ಬಾಲ್ಯದಿಂದ ರಷ್ಯದವರು ನಾಸ್ತಿಕತ್ವದಲ್ಲಿ ಶಿಕ್ಷಣ ಹೊಂದುವವರಾಗಿದ್ದಾರೆ. ಅವರಿಗೆ ಸುವಾರ್ತೆಯನ್ನು ಸಾರುವ ನನ್ನ ಅಪೇಕ್ಷೆ ನೆರವೇರಿಸಲ್ಪಟ್ಟಿದೆ. ನಾಝಿ ಕಾಲದಲ್ಲಿ ಇದು ಪ್ರಾರಂಭವಾಯಿತು. ಯಾಕೆಂದರೆ ರೂಮೇನಿಯದಲ್ಲಿ ಸಾವಿರಾರು ರಷ್ಯದ ಯುದ್ಧ ಕೈದಿಗಳಿದ್ದರು. ಅವರ ಮಧ್ಯದಲ್ಲಿ ಕ್ರೈಸ್ತ ಸೇವೆ ಮಾಡಲು ನಮಗೆ ಅನುಕೂಲತೆಯಿತ್ತು.

ಈ ಸೇವೆಯು ದೆಸೆಯಿಂದ ನಮಗೆ ಅನೇಕ ತರದ ಮನೋಭಾವನೆಗಳಿದ್ದವು. ನಾನು ರಷ್ಯ ಕೈದಿಯನ್ನು ಮೊದಲನೆಯ ಸಾರೆ ಭೆಟ್ಟಿಯಾದ ಸಮಯವನ್ನು ಎಂದಿಗೂ ಮರೆಯಲಾರೆನು. ತಾನು ಎಂಜಿನಿಯರನಾಗಿದ್ದೇನೆಂದು ನನಗೆ ತಿಳಿಸಿದನು. ನಾನು ಅವನಿಗೆ—"ನೀವು ದೇವರಲ್ಲಿ ನಂಬಿಕೆಯಿಡುತ್ತೀರೋ ?" ಎಂದು ಪ್ರಶ್ನಿಸಿದೆನು. ಅವನು—"ಇಲ್ಲ" ಎಂದು ಉತ್ತರ ಕೊಟ್ಟಿದ್ದರೆ ನನಗೆ ಆಶ್ಚರ್ಯವಾಗುತ್ತಿರಲಿಲ್ಲ. ಯಾಕೆಂದರೆ ನಂಬಿಕೆಯಿಡುವದೂ ಇಡದೇ ಹೋಗುವದೂ ಪ್ರತಿಯೊಬ್ಬ ಮನುಷ್ಯನಿಗೆ ಬಿಡಲ್ಪಟ್ಟಿದೆ. ಆದರೆ ನಾನು ಆ ಪ್ರಶ್ನೆಯನ್ನು ಹಾಕಿದಾಗ ಅವನು ನನ್ನ ಕಡೆಗೆ ದೃಷ್ಟಿಸಿ—"ನಂಬಬೇ

ಕೆಂದು ನನಗೆ ಸೈನ್ಯದಿಂದ ಆಜ್ಞೆ ಸಿಕ್ಕಲಿಲ್ಲ. ನಂಬಬೇಕೆಂದು ನನಗೆ ಅಪ್ಪಣೆ ಸಿಕ್ಕರೆ ನಾನು ನಂಬುವೆನು," ಎಂದು ಉತ್ತರ ಕೊಟ್ಟನು. ನನ್ನ ಪ್ರಶ್ನೆಯು ಅರ್ಥ ಅವನಿಗೆ ಗೊತ್ತಿರಲಿಲ್ಲ.

ನಾನು ಕಣ್ಣೀರನ್ನು ಸುರಿಸಿದೆ. ನನ್ನ ಹೃದಯವು ಕಳವಳಗೊಂಡಿತು. ನನ್ನ ಮುಂದೆ ನಿಂತಿದ್ದ ಮನುಷ್ಯನ ಮನಸ್ಸು ನಿರ್ಜೀವವಾಗಿತ್ತು. ದೇವರು ಮನುಷ್ಯರಿಗೆ ಕೊಡುವ ಅತ್ಯುತ್ತಮವಾದ ದಾನವನ್ನು ಅಂದರೆ ವ್ಯಕ್ತಿಯಾಗುವ ಹಕ್ಕನ್ನು ಅವನು ಕಳೆದುಕೊಂಡಿದ್ದನು. ಅವನು ಕಮ್ಯುನಿಷ್ಟರ ಕೈಯಲ್ಲಿ ಕೇವಲ ಯಂತ್ರದಂತಿದ್ದನು. ಅವನು ತನಗಾಗಿ ಯೋಚಿಸದೇ ತನಗೆ ಸಿಕ್ಕಿದ್ದ ಆಜ್ಞೆಯ ಪ್ರಕಾರವಾಗಿ ನಂಬಲೂ ನಂಬಲಾರದೆ ಇರಲೂ ಸಿದ್ಧನಾಗಿದ್ದನು. ಕಮ್ಯುನಿಷ್ಟರ ಅನೇಕ ವರ್ಷದ ಆಳಿಕೆಯಾದ ನಂತರ ಆ ದೇಶದಲ್ಲಿ ಇಂಥ ಜನರಿದ್ದರು. ಕಮ್ಯುನಿಷ್ಟ ತತ್ವಗಳಿಂದ ಈ ಜನರಿಗೆ ಆದ ಕೇಡನ್ನು ನೋಡಿ, ಅವರಿಗೆ ತಿರಿಗಿ ವ್ಯಕ್ತಿತ್ವವನ್ನು ದೇವರ ಮತ್ತು ಕ್ರಿಸ್ತನ ಮೇಲಿರುವ ವಿಶ್ವಾಸವನ್ನೂ ಕೊಡಬೇಕೆಂದು ನಾನು ನನ್ನ ಜೀವನವನ್ನು ಮೀಸಲಾಗಿರಿಸಲು ದೇವರಿಗೆ ವಾಗ್ದಾನ ಮಾಡಿದೆನು.

ರಷ್ಯದವರಿಗೆ ಸುವಾರ್ತೆಯನ್ನು ಸಾರಲು ನಾನು ರಷ್ಯ ದೇಶಕ್ಕೆ ಹೋಗುವ ಅಗತ್ಯವಿರಲಿಲ್ಲ. ಯಾಕೆಂದರೆ ಆಗಸ್ಟ 23, 1944 ಮೊದಲುಗೊಂಡು 10 ಲಕ್ಷ ರಷ್ಯ ಸೈನಿಕರು ರೂಮೆನಿಯದಲ್ಲಿ ಸೇರಿದ್ದರು. ಸ್ವಲ್ಪಕಾಲವಾದ ನಂತರ ನಮ್ಮ ದೇಶದಲ್ಲಿ ಕಮ್ಯುನಿಷ್ಟರ ಆಳಿಕೆ ಪ್ರಾರಂಭವಾಗಲಿತ್ತು. ಅವರ ಚಿತ್ರಹಿಂಸೆಯಿಂದ ನಾಝಿಯ ಕಾಲದಲ್ಲಿ ನಮಗಿದ್ದ ಹಿಂಸೆಯು ಅಲ್ಪವೆಂದು ಕಂಡುಬಂದಿತು.

ರೂಮೆನಿಯ ದೇಶದ ಜನಸಂಖ್ಯೆ 1,80,00,000 ಇತ್ತು. ಆ ಸಮಯದಲ್ಲಿ ಕಮ್ಯುನಿಷ್ಟ ಪಕ್ಷದಲ್ಲಿ ಕೇವಲ 10, 000 ಸದಸ್ಯರಿದ್ದರು. ಆದರೆ ರಷ್ಯ ದೇಶದ ಪರದೇಶೀಯ ಮಂತ್ರಿಯು ನಮ್ಮ ಜನಪ್ರಿಯ ಅರಸರಾದ ಮೈಕಲ್ ರವರ ಆಫೀಸಿನಲ್ಲಿ ಹೊಕ್ಕು ಮೇಜಿನ ಮೇಲೆ ಮುಟ್ಟಿಗೆಯಿಂದ ಹೊಡೆದು ಅವರಿಗೆ—"ನೀನು ಸರಕಾರದಲ್ಲಿ ಕಮ್ಯುನಿಷ್ಟರನ್ನು ನೇಮಿಸಲೇಬೇಕು," ಎಂದು ಆಜ್ಞಾಪಿಸಿದನು. ರಷ್ಯದವರು ನಮ್ಮ ಸೈನಿಕರಿಂದಲೂ ಪೊಲೀಸರಿಂದಲೂ ಅವರ ಆಯುಧಗಳನ್ನು ತೆಗೆದುಕೊಂಡು ಹೋದರು. ಈ ರೀತಿಯಲ್ಲಿ ಬಲಾತ್ಕಾರದಿಂದ ಕಮ್ಯುನಿಷ್ಟರು ರಾಜ್ಯಾಧಿಕಾರವನ್ನು ನಡೆಸಲು ಪ್ರಾರಂಭಿಸಿದರು. ನಮ್ಮ ಜನರಲ್ಲಿ ಹೆಚ್ಚು ಮಂದಿ ಅವರನ್ನು ದ್ವೇಷಿಸಿದರು. ಯುದ್ಧದಲ್ಲಿ ರಷ್ಯರು ತಮ್ಮ ಪಕ್ಷದವರಾಗಿದ್ದ ಕಾರಣ ಅಮೆರಿಕ ಹಾಗೂ ಬ್ರಿಟನ್‌ದವರ ಮುಂದಾಳುಗಳು ಇದಕ್ಕೆ ಒಪ್ಪಿದರು.

ತಮ್ಮ ವೈಯಕ್ತಿಕ ಪಾಪಗಳ ದೆಸೆಯಿಂದ ಮಾತ್ರವಲ್ಲದೇ ತಮ್ಮ ರಾಷ್ಟ್ರೀಯ ಪಾಪದ ದೆಸೆಯಿಂದಲೂ ಮನುಷ್ಯರು ದೇವರ ಮುಂದೆ ಜವಾಬ್ದಾರಿಕೆಯುಳ್ಳವರಾಗಿದ್ದಾರೆ. ಕಮ್ಯುನಿಷ್ಟರ ಆಳಿಕೆಗೆ ಅಧೀನರಾಗಿದ್ದ ಜನರ ವಿಷಯವಾಗಿ ಅಮೆರಿಕ ಹಾಗೂ ಬ್ರಿಟನ್ ದೇಶದಲ್ಲಿದ್ದ ಕ್ರೈಸ್ತ ವಿಶ್ವಾಸಿಗಳಿಗೆ ಹೊಣೆಗಾರಿಕೆಯಿದೆ. ಅವರಿಗೆ ಕ್ರಿಸ್ತನ ಪ್ರಕಾಶವನ್ನು ಕೊಡಬೇಕೆಂದು ಅವರು ಸಹಾಯಮಾಡುವ ಹಂಗಿನಲ್ಲಿದ್ದಾರೆ.

## ಪ್ರೀತಿಸುವವನ ಹಾಗೂ ವಂಚಿಸುವವನ ಭಾಷೆ ಒಂದೇ

ಕಮ್ಯುನಿಷ್ಟರು ರಾಜ್ಯಾಧಿಕಾರವನ್ನು ಹೊಂದಿದ ನಂತರ ಸಭೆಯನ್ನು ವಂಚಿಸಲು ತಮ್ಮ ಮಾತುಗಳನ್ನು ಯುಕ್ತಿಯಿಂದ ಉಪಯೋಗಿಸುತ್ತಿದ್ದರು. ಹುಡುಗಿಯನ್ನು ಹೆಂಡತಿಯನ್ನಾಗಿ ಅಪೇಕ್ಷಿಸುವವನೂ ಆಕೆಯನ್ನು ಒಂದೇ ರಾತ್ರಿ ಉಪಯೋಗಿಸಿ ತ್ಯಜಿಸಿಬಿಡಬೇಕೆಂದು ಅಪೇಕ್ಷಿಸುವವನೂ ಆಕೆಗೆ—"ನಿನ್ನ ಮೇಲೆ ನನಗೆ ಪ್ರೇಮವಿದೆ," ಎಂದು ಹೇಳುವನು. ನಾವು ವಂಚಕನ ಭಾಷೆಗೂ ಸತ್ಯವಂತನ ಭಾಷೆಗೂ ಇರುವ ವ್ಯತ್ಯಾಸವನ್ನು ಕಂಡು ಹಿಡಿಯಬೇಕೆಂದು ಯೇಸು ಸ್ವಾಮಿ ನಮಗೆ ಆಜ್ಞಾಪಿಸಿದ್ದಾನೆ. ನಿಜವಾದ ಕುರಿಗಳಿಗೂ ಕುರಿಯ ವೇಷವನ್ನು ಹಾಕಿಕೊಂಡ ತೋಳಗಳಿಗೂ ಇರುವ ವ್ಯತ್ಯಾಸವು ನಮಗೆ ಗೊತ್ತಾಗಬೇಕು. ಆದರೆ ಕಮ್ಯುನಿಷ್ಟರು ರೂಮೆನಿಯದಲ್ಲಿ ಅಧಿಕಾರ ಹೊಂದಿದಾಗ ಈ ಎರಡು ಧ್ವನಿಗಳ ವ್ಯತ್ಯಾಸವನ್ನು ಗ್ರಹಿಸಿಕೊಳ್ಳಲು ಸಾವಿರಾರು ಮಂದಿ ಪಾದ್ರಿಗಳಿಗೂ ಸಭಾ ಪಾಲಕರಿಗೂ ಸಭಾ ಸೇವಕರಿಗೂ ಸಾಧ್ಯವಿರಲಿಲ್ಲ.

ಕಮ್ಯುನಿಷ್ಟರು ನಮ್ಮ ಪಾರ್ಲಿಮೆಂಟಿನ ಕಟ್ಟಡದಲ್ಲಿ ಎಲ್ಲಾ ಕ್ರೈಸ್ತ ಸಮಾಜಗಳ ಪ್ರತಿನಿಧಿಗಳನ್ನು ಕೂಡಿಸಿದರು. ಎಲ್ಲಾ ಬೇರೆ ಬೇರೆ ಸಭೆಗಳಿಂದ ನಾಲ್ಕು ಸಾವಿರ ಪಾದ್ರಿಗಳೂ ಸಭಾ ಪಾಲಕರೂ ಸಭಾ ಸೇವಕರೂ ಕೂಡಿ ಬಂದಿದ್ದರು. ಅವರು ಆ ಕೂಟದ ಪ್ರಧಾನ ಅಧ್ಯಕ್ಷನನ್ನಾಗಿ ಜೋಸೇಫ್ ಸ್ಟ್ಯಾಲಿನ್‌ನನ್ನು ಆರಿಸಿಕೊಂಡರು. ಆ ಸಮಯದಲ್ಲಿ ಅವನು ಲೋಕದ ನಾಸ್ತಿಕರ ಸಂಘದ ಅಧ್ಯಕ್ಷನಾಗಿದ್ದನು. ಅವನು ಸಾವಿರಾರು ಕ್ರೈಸ್ತರನ್ನು ಕೊಲ್ಲಿಸಿದ್ದನು. ಆದರೆ ಅಲ್ಲಿದ್ದ ಅನೇಕ ಬಿಷಪರೂ ಪಾಲಕರೂ ನಿಂತುಕೊಂಡು—"ಕಮ್ಯುನಿಷ್ಟತ್ವವೂ ಕ್ರೈಸ್ತತ್ವವೂ ನಿಜವಾಗಿ ಒಂದೇಯಾಗಿರುವದರಿಂದ ಕೂಡಿ ಜೀವಿಸಬಹುದು," ಎಂದು ಹೇಳಿದರು. ಅನೇಕ ಪಾಲಕರು ಕಮ್ಯುನಿಷ್ಟತ್ವವನ್ನು ಸ್ತುತಿಸಿ ನಮ್ಮ ಸಭೆಯು ಹೊಸ ಸರಕಾರಕ್ಕೆ ನಂಬಿಗಸ್ತವಾಗುವದೆಂದು ಪ್ರಕಟಿಸಿದರು.

ನನ್ನ ಹೆಂಡತಿಯೂ ನಾನೂ ಆ ದೊಡ್ಡ ಕೂಟದಲ್ಲಿ ಹಾಜರಿದ್ದೆವು. ಆಕೆಯು ನನ್ನ ಹತ್ತಿರ ಕುಳಿತುಕೊಂಡು ನನಗೆ—"ಹಿರಿಯರೇ, ನೀವು ನಿಂತುಕೊಂಡು ಕ್ರಿಸ್ತನ ಮುಖದಿಂದ ಈ ಅಪಮಾನವನ್ನು ತೊಳೆಯಿರಿ. ಅವರು

ಆತನ ಮೇಲೆ ಉಗುಳುತ್ತಿದ್ದಾರೆ," ಎಂದು ಹೇಳಿದಳು. ನಾನು ಆಕೆಗೆ—"ನಾನು ಹಾಗೆ ಮಾಡಿದರೆ ನೀನು ನಿನ್ನ ಗಂಡನನ್ನು ಕಳೆದುಕೊಳ್ಳುವಿ," ಎಂದು ಉತ್ತರಿಸಿದೆನು. ಆಕೆ ನನಗೆ—"ನನ್ನ ಹಿರಿಯರು ಹೇಡಿಯಾಗಿರಲು ನನಗೆ ಮನಸ್ಸಿಲ್ಲ," ಎಂದು ಉತ್ತರಿಸಿದಳು.

ಆ ಮೇಲೆ ನಾನು ನಿಂತುಕೊಂಡು ಆ ಸಮ್ಮೇಲನದಲ್ಲಿ ಭಾಷಣ ಮಾಡಿದೆನು. ನಾನು ಕ್ರೈಸ್ತರ ಹಿಂಸಕರನ್ನು ಸ್ತುತಿಸದೆ ದೇವರನ್ನೂ ಕ್ರಿಸ್ತನನ್ನೂ ಸ್ತುತಿಸುತ್ತಿದ್ದೆನು. ನಾವು ಮೊದಲು ಆತನಿಗೆ ನಂಬಿಗಸ್ತರಾಗಬೇಕೆಂದು ಸೂಚಿಸಿದೆನು. ಆ ಸಮ್ಮೇಲನದ ಎಲ್ಲಾ ಭಾಷಣಗಳು ಆಕಾಶವಾಣಿಯ ಮೂಲಕವಾಗಿ ಪ್ರಸಾರವಾಗುತ್ತಿದ್ದವು. ದೇಶದಲ್ಲೆಲ್ಲಾ ಜನರು ಕಮ್ಯುನಿಷ್ಟರ ಪಾರ್ಲಿಮೆಂಟಿನ ಪೀಠದಿಂದ ಕ್ರಿಸ್ತನ ಸಂದೇಶವನ್ನು ಕೇಳಬಲ್ಲವರಾಗಿದ್ದರು. ಅನಂತರ ನಾನು ಇದಕ್ಕಾಗಿ ಪ್ರತಿಫಲವನ್ನು ಹೊಂದಿದೆನು. ಆದರೆ ನಾನು ಆ ಸುಪ್ರಸಂಗವನ್ನು ಉಪಯೋಗಿಸಿದ್ದದರಿಂದ ಸಂತೋಷಪಟ್ಟೆನು.

ಆರ್ಥೊಡೋಕ್ಸ್ ಹಾಗೂ ಪ್ರೊಟೆಸ್ಟಂಟ್ ಸಭೆಗಳ ಮುಂದಾಳುಗಳು ತಾವು ಕಮ್ಯುನಿಷ್ಟತ್ವಕ್ಕೆ ಸಂತೋಷದಿಂದ ಅಧೀನರಾಗುತ್ತೇವೆಂದು ಒಪ್ಪಿಕೊಳ್ಳುತ್ತಿದ್ದರು. ಆರ್ಥೊಡೋಕ್ಸ್ ಸಭೆಯ ಒಬ್ಬ ಬಿಷಪ್‌ನು ತನ್ನ ದೀಕ್ಷಾ ಬಟ್ಟೆಗಳ ಮೇಲೆ ಹತೋಡೆ ಮತ್ತು ಕುರುಪಿ ಎಂಬ ಕಮ್ಯುನಿಷ್ಟರ ಗುರುತನ್ನು ಹಾಕಿಕೊಂಡು ತನ್ನ ಕೈಕೆಳಗಿರುವ ಪಾದ್ರಿಗಳಿಗೆ—ನೀವು ಇನ್ನು ಮುಂದೆ ನನಗೆ ಕರ್ತನೇ ಎಂದು ಹೇಳದೇ ಸಂಗಡಿಗನಾದ ಬಿಷಪ್‌ರೇ ಎಂದು ಹೇಳಬೇಕೆಂದು ಆಜ್ಞಾಪಿಸಿದನು. ರೆಸಿತಾ ಎಂಬ ಊರಲ್ಲಿ ನಡೆದ ಬಾಪ್ಟಿಸ್ಟರ್ ಒಂದು ಸಮ್ಮೇಲನದಲ್ಲಿ ನಾನು ಹಾಜರಾಗಿದ್ದೆನು. ಅಲ್ಲಿ ಕೆಲವು ಧ್ವಜದ ಕೆಳಗೆ ಎಲ್ಲರೂ ನಿಂತುಕೊಂಡು ರಷ್ಯ ದೇಶದ ರಾಷ್ಟ್ರಗೀತೆಯನ್ನು ಹಾಡಿದರು. ಬಾಪ್ಟಿಸ್ಟರ ಅಧ್ಯಕ್ಷನು—"ಸ್ಟ್ಯಾಲಿನ್ ರವರು ಕೇವಲ ದೇವರ ಆಜ್ಞೆಗಳನ್ನು ನೆರವೇರಿಸಿದರು," ಎಂದು ಪ್ರಚಾರಮಾಡಿ ಸ್ಟ್ಯಾಲಿನ್‌ನನ್ನು ಸತ್ಯವೇದದ ದೊಡ್ಡ ಬೋಧಕನನ್ನಾಗಿ ಸುತ್ತಿಸಿದನು. ಕೆಲವು ಪಾದ್ರಿಗಳು ಗುಪ್ತ ಪೊಲೀಸಿನ ಅಧಿಕಾರಿಗಳಾದರು. ಲೂಥರನ್ ಸಭೆಯ ಉಪಾಧ್ಯಕ್ಷನಾದ ರಾಪ್ ಎಂಬವನು ಸತ್ಯವೇದದ ವಿಶ್ವ ವಿದ್ಯಾಲಯದಲ್ಲಿ ಭಾಷಣಗಳನ್ನು ಮಾಡಿದಾಗ—"ದೇವರು ಮೂರು ಪ್ರಕಟನೆಗಳನ್ನು ಕೊಟ್ಟಿದ್ದಾನೆ. ಮೊದಲನೆಯದು ಮೋಶೆಯ ಮುಖಾಂತರವಾಗಿಯೂ ಎರಡನೆಯದು ಯೇಸುವಿನ ಮುಖಾಂತರವೂ ಮೂರನೆಯದು ಸ್ಟ್ಯಾಲಿನನ ಮುಖಾಂತರವಾಗಿಯೂ ಆದವು. ಇವುಗಳಲ್ಲಿ ಎರಡನೆಯದು ಮೊದಲನೆಯದಕ್ಕಿಂತಲೂ ಮೂರನೆಯದು ಎರಡನೆಯದಕ್ಕಿಂತಲೂ ಶ್ರೇಷ್ಠವಾದವುಗಳು," ಎಂದು ಬೋಧಿಸಿದನು.

ನಂಬಿಗಸ್ತರಾದ ಬಾಪ್ಟಿಸ್ಟರು ನನಗೆ ಅತಿ ಪ್ರಿಯರಾಗಿದ್ದಾರೆ. ಅವರು ಇದಕ್ಕೆ ಒಪ್ಪಲಿಲ್ಲ. ಅವರು ಕ್ರಿಸ್ತನಿಗೆ ನಂಬಿಗಸ್ತರಾದಿ ಬಹು ಕಷ್ಟಗಳನ್ನು

ತಾಳಿದರು. ಆದರೆ ಕಮ್ಯುನಿಷ್ಟರು ಅವರ ಮುಂದಾಳುಗಳನ್ನು ಆರಿಸಿಕೊಂಡ ಕಾರಣ ಅವರು ಇವರನ್ನು ಅಂಗೀಕಾರ ಮಾಡಬೇಕಾಯಿತು. ಇಂದಿನ ವರೆಗೂ ಕಮ್ಯುನಿಷ್ಟರು ಸಭೆಗಳ ಮುಂದಾಳುಗಳನ್ನು ಆರಿಸಿಕೊಳ್ಳುವವರಾಗಿದ್ದಾರೆ. ಕಮ್ಯುನಿಷ್ಟರ ಅಧಿಕಾರಕ್ಕೆ ತಮ್ಮನ್ನು ಅಧೀನಮಾಡಿಕೊಂಡವರು ತಮ್ಮಲ್ಲಿ ಸೇರಲೊಲ್ಲದ ತಮ್ಮ ಸಹೋದರರನ್ನು ನಿರಾಕರಿಸಲಿಕ್ಕೆ ಪ್ರಾರಂಭಿಸಿದರು.

ರಷ್ಯ ದೇಶದಲ್ಲಿ ಕಮ್ಯುನಿಷ್ಟರ ಕ್ರಾಂತಿಯಾದ ನಂತರ ಆ ದೇಶದಲ್ಲಿರುವ ನಿಜವಾದ ಕ್ರೈಸ್ತ ವಿಶ್ವಾಸಿಗಳು ಗುಪ್ತವಾದ ರೀತಿಯಲ್ಲಿ ಕೂಡಿಬರಲು ಪ್ರಾರಂಭಿಸಿದರು. ಅದೇ ರೀತಿಯಲ್ಲಿ ಕಮ್ಯುನಿಷ್ಟರು ರೂಮೆನಿಯಾ ದೇಶದಲ್ಲಿ ರಾಜ್ಯಾಧಿಕಾರವನ್ನು ಹೊಂದಿ ಸಭೆಗಳನ್ನು ಅಧೀನಪಡಿಸಿಕೊಂಡದ್ದರಿಂದ ನಾವು ಸಹ ಗುಪ್ತವಾದ ರೀತಿಯಲ್ಲಿ ಕೂಡಿಬರಬೇಕಾಯಿತು. ಯಾಕೆಂದರೆ ಸಭೆಗಳ ಹೊರಗಿನ ಮುಂದಾಳುಗಳು ಕ್ರಿಸ್ತನ ಹಿತವನ್ನು ನೋಡಿಕೊಳ್ಳಲಿಲ್ಲ. ನಮ್ಮ ಗುಪ್ತ ಸಭೆಯ ಮುಖಾಂತರವಾಗಿ ನಾವು ದೊಡ್ಡವರಿಗೂ ಸಣ್ಣವರಿಗೂ ಸುವಾರ್ತೆಯನ್ನು ಸಾರಲು ಪ್ರಾರಂಭಿಸಿದೆವು. ಕಮ್ಯುನಿಷ್ಟರ ಅಧಿಕಾರಿಗಳು ಸುವಾರ್ತೆಯನ್ನು ಯಾರಿಗೂ ಸಾರಬಾರದೆಂದು ಆಜ್ಞಾಪಿಸಿದಾಗ ನಾಮಿಕ ಕ್ರೈಸ್ತರ ಮುಂದಾಳುಗಳು ಒಪ್ಪಿಕೊಂಡರು.

ಬೇರೆಯವರ ಸಂಗಡ ನಾನು ಗುಪ್ತವಾದ ರೀತಿಯಲ್ಲಿ ಕ್ರೈಸ್ತ ಸೇವೆಯನ್ನು ಮಾಡಲು ಪ್ರಾರಂಭಿಸಿದೆನು. ನಾನು ಸಮಾಜದಲ್ಲಿ ಸನ್ಮಾನ್ಯವಾದ ಉದ್ಯೋಗದಲ್ಲಿದ್ದೆನು. ನಾನು ಲೂಥರನ್ ಮಿಶನ್‌ದ ಪಾಲಕನಾಗಿಯೂ 'ಜಾಗತಿಕ ಸಭೆಗಳ ಸಮಿತಿ' (WORLD COUNCIL OF CHURCHES) ಯ ಸ್ಥಾನಿಕ ಪ್ರತಿನಿಧಿಯೂ ಆಗಿದ್ದೆನು. ಆ ಕಾಲದಲ್ಲಿ ಆ ಸಮಿತಿಯು ಕಮ್ಯುನಿಷ್ಟರ ಸಂಗಡ ಸಹಕಾರ ಮಾಡುತ್ತಿರಲಿಲ್ಲ. ಅದು ನಮ್ಮ ದೇಶದಲ್ಲಿ ಕೇವಲ ಬಡವರ ಕೊರತೆ ನೀಗಿಸಲು ಸಹಾಯ ಮಾಡುತ್ತಿತ್ತು. ಈ ಎರಡು ಉದ್ಯೋಗಗಳ ದೆಸೆಯಿಂದ ನಾನು ಅಧಿಕಾರಿಗಳ ದೃಷ್ಟಿಯಲ್ಲಿ ಯೋಗ್ಯನಾಗಿ ಕಾಣಿಸುತ್ತಿದ್ದೆನು. ಯಾಕೆಂದರೆ ನನ್ನ ನಿಜವಾದ ಗುಪ್ತ ಸೇವೆಯ ವಿಷಯವಾಗಿ ಅವರಿಗೆ ಏನೂ ಗೊತ್ತಿರಲಿಲ್ಲ. ಆ ಗುಪ್ತ ಸೇವೆಯಲ್ಲಿ ಎರಡು ಭಾಗಗಳಿದ್ದವು. ಮೊದಲನೆಯದು ಅಂದರೆ ಹತ್ತು ಲಕ್ಷ ರಷ್ಯ ಸೈನಿಕರಲ್ಲಿರುವ ನಮ್ಮ ಸೇವೆ. ಎರಡನೆಯದು ಕಮ್ಯುನಿಷ್ಟರ ಗುಲಾಮತನದಲ್ಲಿದ್ದ ನಮ್ಮ ಸ್ವಂತ ರೂಮೆನಿಯ ದೇಶದವರಿಗಿರುವ ಸೇವೆ.

## ರಷ್ಯದವರಿಗೆ ಆತ್ಮಿಯ ನೀರಡಿಕೆ ಬಹಳ ಇದೆ

ರಷ್ಯದವರಿಗೆ ಸುವಾರ್ತೆಯನ್ನು ಸಾರುವದರಿಂದ ಇಹಲೋಕದಲ್ಲಿ ನನಗೆ ಪರಲೋಕದ ಆನಂದವಾಗುತ್ತದೆ. ನಾನು ಅನೇಕ ದೇಶಗಳವರಿಗೆ ಸುವಾರ್ತೆಯನ್ನು ಸಾರಿದ್ದೇನೆ. ಆದರೆ ರಷ್ಯದವರ ಹಾಗೆ ಅತಿ ಉತ್ತೇಜನದಿಂದ ಸುವಾ

ರ್ತೆಯನ್ನು ಕೇಳುವವರನ್ನು ನಾನು ಬೇರೆ ಕಡೆಗೆ ನೋಡಲೇ ಇಲ್ಲ. ಅವರಿಗೆ ಆತ್ಮಿಯ ನೀರಡಿಕೆ ಬಹಳ ಇದೆ.

ಆರ್ಥೊಡೊಕ್ಸ್ ಸಭೆಯ ಒಬ್ಬ ಪಾಲಕನು ನನ್ನ ಸ್ನೇಹಿತನಾದವು. ಅವನು ಒಮ್ಮೆ ನನಗೆ ಫೋನ್ ಮಾಡಿ ರಷ್ಯ ಸೈನ್ಯದ ಒಬ್ಬ ಆಫೀಸರನು ತನ್ನ ಪಾಪವನ್ನು ಅರಿಕೆ ಮಾಡಬೇಕೆಂದು ತನ್ನ ಕಡೆಗೆ ಬಂದಿದ್ದಾನೆಂದು ತಿಳಿಸಿದನು. ನನ್ನ ಮಿತ್ರನಿಗೆ ರಷ್ಯ ಭಾಷೆ ಬರುತ್ತಿರಲಿಲ್ಲ. ನನಗೆ ರಷ್ಯ ಭಾಷೆಯು ಬರುತ್ತದೆಂದು ತಿಳಿದು ಆ ಪಾದ್ರಿಯು ಆ ಆಫೀಸರನಿಗೆ ನನ್ನ ವಿಳಾಸವನ್ನು ಕೊಟ್ಟನು. ಮರು ದಿವಸ ಆ ಮನುಷ್ಯ ನನ್ನನ್ನು ಭೆಟ್ಟಿಯಾಗಲು ಬಂದನು. ಅವನು ದೇವರನ್ನು ಪ್ರೀತಿಸುತ್ತಿದ್ದನು. ಅವನು ದೇವರ ದರ್ಶನವನ್ನು ಹೊಂದಲು ಕುತೂಹಲದಿಂದ ಅಪೇಕ್ಷಿಸುತ್ತಿದ್ದನು. ಆದರೆ ಅವನು ಎಂದಿಗೂ ಸತ್ಯವೇದವನ್ನು ನೋಡಿರಲಿಲ್ಲ. ಅವನು ಎಂದಿಗೂ ಕ್ರೈಸ್ತ ಸಭೆಗಳಿಗೆ ಹೋಗಿರ ಲಿಲ್ಲ. ಯಾಕೆಂದರೆ ರಷ್ಯ ದೇಶದಲ್ಲಿ ಸಭಾಸ್ಥಾನಗಳ ಸಂಖ್ಯೆ ಅತ್ಯಲ್ಪವಾಗಿದೆ. ಅವನಿಗೆ ಧಾರ್ಮಿಕ ಶಿಕ್ಷಣ ಇಲ್ಲವೇ ಇಲ್ಲ. ದೇವರ ವಿಷಯವಾಗಿ ಅವನಿಗೆ ತಿಳುವಳಿಕೆ ಇಲ್ಲದಿದ್ದರೂ ಅವನು ದೇವರನ್ನು ಪ್ರೀತಿಸುತ್ತಿದ್ದನು.

ನಾನು ಅವನಿಗೆ ಪರ್ವತ ಪ್ರಸಂಗವನ್ನೂ ಯೇಸುವಿನ ಸಾಮ್ಯಗಳನ್ನೂ ಓದಲು ಪ್ರಾರಂಭಿಸಿದೆನು. ಇವುಗಳನ್ನು ಕೇಳಿ ಅವನು ಅತ್ಯಾನಂದ ಪಡುವವ ನಾಗಿ ನನ್ನ ಕೋಣೆಯಲ್ಲಿ ಕುಣಿದಾಡಿದನು. ಅವನು—"ಎಂಥ ಆಶ್ಚರ್ಯಕರ ವಾದ ಸೌಂದರ್ಯ! ಈ ಕ್ರಿಸ್ತನನ್ನು ಗುರುತು ಹಿಡಿಯದ ಹೊರತಾಗಿ ನಾನು ಜೀವಿಸಲಾರೆನು," ಎಂದು ಉದ್ಗರಿಸಿದನು. ನಾನು ಒಬ್ಬ ವ್ಯಕ್ತಿಯಲ್ಲಿ ಇಂಥ ಪರಮಾನಂದವನ್ನು ನೋಡಿದ್ದು ಇದೇ ಮೊದಲನೆಯ ಸಾರಿ.

ಅನಂತರ ನಾನು ಒಂದು ತಪ್ಪು ಮಾಡಿದೆನು. ನಾನು ಕ್ರಿಸ್ತನ ಶ್ರಮ ಮರಣಗಳ ವಿಷಯವಾಗಿ ಅವನಿಗೆ ಓದಿದೆನು. ಇದನ್ನು ಕೇಳಲಿಕ್ಕೆ ಅವನು ಸಿದ್ಧನಾಗಿರಲಿಲ್ಲ. ಕ್ರಿಸ್ತನು ಹೊಡೆಯಲ್ಪಟ್ಟು, ಶಿಲುಬೆಗೆ ತೂಗಲ್ಪಟ್ಟು ಕಡೆ ಯಲ್ಲಿ ಸತ್ತನೆಂದು ಕೇಳಿ ಅವನು ಕುಸಿದುಕೊಂಡು ಅಳುವುದಕ್ಕೆ ಪ್ರಾರಂಭಿಸಿದನು. ಯಾವ ರಕ್ಷಕನಲ್ಲಿ ಅವನು ನಂಬಿಕೆಯಿಟ್ಟಿದ್ದನೋ ಆ ರಕ್ಷಕನು ಸತ್ತುಹೋದನು!

ನಾನು ಕರುಣೆಯಿಂದ ಅವನ ಕಡೆಗೆ ನೋಡಿದೆನು. ನಾನು ಕ್ರೈಸ್ತ ಪಾಲಕನೂ ಬೋಧಕನೂ ಆಗಿದ್ದಾಗ್ಯೂ ಈ ರಷ್ಯ ಸೈನ್ಯಾಧಿಕಾರಿಯ ಹಾಗೆ ಕ್ರಿಸ್ತನ ಶ್ರಮಗಳಲ್ಲಿ ಎಂದಿಗೂ ಪಾಲುಗಾರನಾಗಿರಲಿಲ್ಲ. ನನಗೆ ನಾಚಿಕೆ ಯುಂಟಾಯಿತು. ಯಾಕೆಂದರೆ ಯಾವ ರೀತಿಯಲ್ಲಿ ಮಗ್ದಲದ ಮರಿಯಳು ಶಿಲುಬೆಯ ಬುಡದಲ್ಲಿ ಕಣ್ಣೀರು ಸುರಿಸಿದಳೋ ಅದೇ ರೀತಿಯಲ್ಲಿ ಈ ಮನುಷ್ಯ ಕಣ್ಣೀರು ಸುರಿಸಿದ್ದನ್ನು ನಾನು ನೋಡಿದೆನು. ಯೇಸುವಿನ ದೇಹವು ಸಮಾಧಿ ಯಲ್ಲಿದ್ದಾಗ ಮರಿಯಳು ಅದೇ ರೀತಿಯಲ್ಲಿ ಅಳುತ್ತಿದ್ದಳು.

ಅನಂತರ ನಾನು ಕ್ರಿಸ್ತನ ಪುನರುತ್ಥಾನದ ವಿಷಯುವಾಗಿ ಅವನಿಗೆ ಓದಿ ತೋರಿಸಿದೆನು. ತನ್ನ ರಕ್ಷಕನು ಸಮಾಧಿಯಿಂದ ಎದ್ದು ಬಂದನೆಂದು ಅವನು ಎಂದಿಗೂ ಕೇಳಿರಲಿಲ್ಲ. ಅವನು ಈ ಆಶ್ಚರ್ಯಕರವಾದ ಸಮಾಚಾರವನ್ನು ಕೇಳಿ ತನ್ನ ಮೊಣಕಾಲುಗಳ ಮೇಲೆ ಹೊಡೆದುಕೊಂಡು ಉದ್ಗರಿಸಿದನು. ಅವನ ಮಾತುಗಳು ಅಶುದ್ಧವಾಗಿದ್ದರೂ ಅವನಲ್ಲಿ ಪರಮಾನಂದವಿತ್ತು. "ಆತನು ಜೀವಿತನಾಗಿದ್ದಾನೆ," ಎಂದು ಸಂತೋಷದಿಂದ ಕೂಗಿ ಆನಂದಭರಿತನಾಗಿ ಕೋಣೆಯಲ್ಲಿ ಕುಣಿದಾಡಿದನು.

ನಾನು ಅವನಿಗೆ—"ಪ್ರಾರ್ಥನೆ ಮಾಡೋಣ," ಎಂದು ಹೇಳಿದೆನು. ನಾವು ಪ್ರಾರ್ಥನೆಗಳಲ್ಲಿ ಉಪಯೋಗಿಸುವ ಶಬ್ದಗಳನ್ನು ಅವನು ಎಂದಿಗೂ ಕಲಿತುಕೊಂಡಿರಲಿಲ್ಲ. ಆದರೆ ಅವನು ನನ್ನ ಸಂಗಡ ಮೊಣಕಾಲೂರಿ—"ದೇವರೇ, ನೀನು ಎಂಥ ಒಳ್ಳೆಯವನು. ನಾನು ನೀನಾಗಿದ್ದರೆ ಹಾಗೂ ನೀನು ನಾನಾಗಿದ್ದರೆ ನಾನು ಎಂದಿಗೂ ನಿನ್ನ ಪಾಪಗಳನ್ನು ಕ್ಷಮಿಸುತ್ತಿರಲಿಲ್ಲ. ಆದರೆ ನೀನು ನಿಜವಾಗಿ ಬಹಳ ಒಳ್ಳೆಯವನಾಗಿದ್ದೀ. ನಾನು ಪೂರ್ಣ ಹೃದಯದಿಂದ ನಿನ್ನನ್ನು ಪ್ರೀತಿಸುತ್ತೇನೆ," ಎಂದು ಪ್ರಾರ್ಥಿಸಿದನು. ರಷ್ಯ ಸೇನಾಧಿಕಾರಿಯು ಮಾಡುತ್ತಿದ್ದ ಈ ಪ್ರಾರ್ಥನೆಗೆ ಕಿವಿಗೊಡಲು ಪರಲೋಕದಲ್ಲಿರುವ ಎಲ್ಲಾ ದೇವದೂತರು ತಮ್ಮ ಕೆಲಸವನ್ನು ನಿಲ್ಲಿಸಿರಬಹುದೆಂದು ನನಗನ್ನಿಸುತ್ತದೆ. ಯಾಕೆಂದರೆ ಆ ಮನುಷ್ಯನು ಕ್ರಿಸ್ತನ ಕಡೆಗೆ ತಿರುಗಿಕೊಂಡಿದ್ದನು.

ಒಂದು ದಿವಸ ಒಂದು ಅಂಗಡಿಯಲ್ಲಿ ನಾನು ಮತ್ತೊಬ್ಬ ರಷ್ಯ ಸೇನಾಧಿಕಾರಿಯನ್ನು ಸಂದರ್ಶಿಸಿದೆನು. ಅವನ ಸಂಗಡ ಒಬ್ಬ ಅಧಿಕಾರಿಣಿಯೂ ಇದ್ದಳು. ಅವರು ಅನೇಕ ತರದ ಸಾಮಾನುಗಳನ್ನು ಕೊಂಡುಕೊಳ್ಳುತ್ತಿದ್ದರು. ಆದರೆ ಮಾರುವವನಿಗೆ ರಷ್ಯ ಭಾಷೆ ಬಾರದ್ದ ಕಾರಣ ಅವರಿಗೆ ತೊಂದರೆಯಾಗುತ್ತಿತ್ತು. ನಾನು ಭಾಷಾಂತರ ಮಾಡಲಿಕ್ಕೆ ಮುಂದೆ ಬಂದು ಅವರ ಗುರುತನ್ನು ಮಾಡಿಕೊಂಡೆನು. "ನೀವು ನಮ್ಮ ಮನೆಗೆ ಬಂದು ಊಟ ಮಾಡಬೇಕು," ಎಂದು ನಾನು ಅವರಿಗೆ ಆಮಂತ್ರಣ ಕೊಟ್ಟೆನು. ಊಟ ಮಾಡುವದಕ್ಕಿಂತ ಮೊದಲು ನಾನು ಅವರಿಗೆ—"ನೀವು ಕ್ರೈಸ್ತ ಮನೆಯಲ್ಲಿದ್ದೀರಿ. ಊಟ ಮಾಡುವದಕ್ಕಿಂತ ಮೊದಲು ನಾನು ಯಾವಾಗಲೂ ದೇವರಿಗೆ ಪ್ರಾರ್ಥನೆ ಮಾಡುತ್ತೇನೆ," ಎಂದು ವಿವರಿಸಿದೆನು. ನಾನು ರಷ್ಯ ಭಾಷೆಯಲ್ಲಿ ಪ್ರಾರ್ಥನೆ ಮಾಡಿದೆನು. ಊಟ ಮಾಡಲಿಕ್ಕೆ ಅವರಿಗೆ ಇನ್ನು ಮುಂದೆ ಮನಸ್ಸಿರಲಿಲ್ಲ. ದೇವರ, ಕ್ರಿಸ್ತನ ಹಾಗೂ ಸತ್ಯವೇದದ ವಿಷಯುವಾಗಿ ಅವರು ಅನೇಕ ಪ್ರಶ್ನೆಗಳನ್ನು ಕೇಳಲು ಪ್ರಾರಂಭಿಸಿದರು. ಅವರಿಗೆ ಏನೂ ಗೊತ್ತಿರಲಿಲ್ಲ.

ಅವರ ಸಂಗಡ ಮಾತನಾಡುವದು ಸುಲಭವಾಗಿರಲಿಲ್ಲ. ನಾನು ಕುರುಬನ ವಿಷಯುವಾಗಿದ್ದ ಸಾಮ್ಯವನ್ನು ಅವರಿಗೆ ತಿಳಿಸಿದೆನು. ಅವನ ಹತ್ತಿರವಿದ್ದ

ನೂರು ಕುರಿಗಳಲ್ಲಿ ಒಂದು ತಪ್ಪಿಹೋಯಿತು. ಇದರ ಅರ್ಥ ಅವರು ಗ್ರಹಿಸಲಿಲ್ಲ. ಅವರು ನನ್ನನ್ನು—"ಒಬ್ಬ ಮನುಷ್ಯನಿಗೆ ನೂರು ಕುರಿಗಳು ಇರುವದು ಹೇಗೆ ಸಾಧ್ಯ? ಸರಕಾರದವರು ಅವುಗಳನ್ನು ಸಾರ್ವಜನಿಕ ಉಪಯೋಗಕ್ಕಾಗಿ ಯಾಕೆ ತಕ್ಕೊಳ್ಳಲಿಲ್ಲ?" ಎಂದು ಕೇಳಿದರು. ಅನಂತರ ನಾನು—"ಯೇಸು ಅರಸನಾಗಿದ್ದಾನೆ," ಎಂದು ಹೇಳಿದೆನು. ಅವರು ಪ್ರತ್ಯುತ್ತರವಾಗಿ ನಮಗೆ—"ಎಲ್ಲಾ ಅರಸರು ದುಷ್ಟರಾಗಿ ಜನರನ್ನು ಪೀಡಿಸುತ್ತಿದ್ದರು. ಯೇಸು ಅರಸನಾಗಿದ್ದರೆ ಅವನೂ ಸಹ ಅಂಥವನಾಗಿದ್ದಿರಬೇಕು," ಎಂದು ಹೇಳಿದರು. ನಾನು ದ್ರಾಕ್ಷಾತೋಟದ ಒಕ್ಕಲಿಗರ ಸಂಬಂಧವಾಗಿರುವ ಸಾಮ್ಯವನ್ನು ಅವರಿಗೆ ಹೇಳಿದಾಗ ಅವರು—"ಹೀಗೆ ಆ ಯಜಮಾನನ ವಿರುದ್ಧವಾಗಿ ಕ್ರಾಂತಿ ಮಾಡುವದು ಯೋಗ್ಯವಾಗಿತ್ತು. ಯಾಕೆಂದರೆ ದ್ರಾಕ್ಷಾತೋಟವು ಸಾರ್ವಜನಿಕರ ಕೈಯಲ್ಲಿದ್ದರೆ ಒಳ್ಳೆಯದು," ಎಂದು ಹೇಳಿದರು. ಎಲ್ಲಾ ಸಂಗತಿಗಳು ಅವರಿಗೆ ಹೊಸದಾಗಿದ್ದವು. ನಾನು ಯೇಸುವಿನ ಜನ್ಮದ ವಿಷಯವಾಗಿ ಅವರಿಗೆ ಹೇಳಿದಾಗ ಅವರು—"ಮರಿಯಳು ದೇವರ ಹೆಂಡತಿಯಾಗಿದ್ದಳೋ?" ಎಂದು ಕೇಳಿದರು. ಇವರ ಸಂಘದಲ್ಲೂ ಬೇರೆ ರಷ್ಯ ದೇಶದ ಸಂಘದಲ್ಲೂ ಸಂಭಾಷಣೆ ಮಾಡಿದ ನಂತರ ಇಂಥವರಿಗೆ ಸುವಾರ್ತೆಯನ್ನು ಸಾರಬೇಕೆಂದು ಹೊಸ ಭಾಷೆಯನ್ನು ಉಪಯೋಗಿಸಬೇಕೆಂಬುದನ್ನು ಗ್ರಹಿಸಿಕೊಂಡೆನು. ಯಾಕೆಂದರೆ ಕಮ್ಯುನಿಷ್ಟರ ಪ್ರಭಾವದ ದೆಸೆಯಿಂದ ನಮ್ಮ ಸಾಧಾರಣ ಭಾಷೆಯನ್ನು ಅವರು ಗ್ರಹಿಸಿಕೊಳ್ಳಲಾರರು.

ಆಫ್ರಿಕಾ ಖಂಡದ ಮಧ್ಯ ಭಾಗಕ್ಕೆ ಹೋದಂಥ ಮಿಶನರಿಯರಿಗೆ ಅದೇ ತರದ ತೊಂದರೆಯಿತ್ತು. ಪ್ರವಾದಿಯಾದ ಯೆಶಾಯನು—"ನಿಮ್ಮ ಪಾಪಗಳು ಕಡುಕೆಂಪಾಗಿದ್ದರೂ ಹಿಮದ ಹಾಗೆ ಬಿಳುಪಾಗುವವು," ಎಂದು ತನ್ನ ಗ್ರಂಥದಲ್ಲಿ ಬರೆದನು. ಆದರೆ ಆ ಬಿಸಿಲು ಭಾಗದಲ್ಲಿ ಯಾರೂ ಎಂದಿಗೂ ಹಿಮವನ್ನು ನೋಡಿರಲಿಲ್ಲ. ಹಿಮವೆಂಬ ಶಬ್ದವೂ ಅವರಿಗೆ ಗೊತ್ತಿರಲಿಲ್ಲ. ಆದಕಾರಣ ಅವರು—"ನಿಮ್ಮ ಪಾಪಗಳು ಕಡುಕೆಂಪಾಗಿದ್ದರೂ ಹಸಿ ಕೊಬ್ಬರಿಯ ಹಾಗೆ ಬಿಳುಪಾಗುವವು," ಎಂದು ಭಾಷಾಂತರ ಮಾಡಬೇಕಾಯಿತು.

ಅದೇ ರೀತಿಯಲ್ಲಿ ನಾವು ಕಮ್ಯುನಿಷ್ಟರ ಭಾಷೆಯಲ್ಲಿ ಸುವಾರ್ತೆಯನ್ನು ಭಾಷಾಂತರಮಾಡಿ ಅದರ ಅರ್ಥವನ್ನು ಸ್ಪಷ್ಟೀಕರಿಸಬೇಕಾಯಿತು. ನಮ್ಮಷ್ಟಕ್ಕೆ ನಾವೇ ಆ ಕೆಲಸವನ್ನು ಮಾಡಲಾರದೆ ಹೋದೆವು. ಆದರೆ ಪವಿತ್ರಾತ್ಮನು ನಮ್ಮ ಮೂಲಕವಾಗಿ ತನ್ನ ಕಾರ್ಯವನ್ನು ಸಾಧಿಸಿದನು.

ಆ ದಿನದಲ್ಲಿ ಆ ಸೇನಾಧಿಕಾರಿಯೂ ಅಧಿಕಾರಿಣಿಯೂ ದೇವರ ಕಡೆಗೆ ತಿರುಗಿಕೊಂಡರು. ಆ ನಂತರ ನಾವು ರಷ್ಯದವರ ಮಧ್ಯದಲ್ಲಿ ಮಾಡಿದ ಗುಪ್ತ ಸೇವೆಯಲ್ಲಿ ನಮಗೆ ಬಹಳ ಸಹಾಯವನ್ನು ನೀಡಿದರು. ನಾವು ಗುಪ್ತವಾಗಿ

ಸಾವಿರಾರು ಸುವಾರ್ತೆಯ ಪುಸ್ತಕಗಳನ್ನು ಮುದ್ರಿಸಿ ರಷ್ಯದವರಿಗೆ ಹಂಚಿದೆವು. ದೇವರ ಕಡೆಗೆ ತಿರುಗಿಕೊಂಡ ರಷ್ಯ ಸೈನಿಕರಿಂದ ನಾವು ಅನೇಕ ಸತ್ಯವೇದಗಳನ್ನೂ ಸತ್ಯವೇದ ಭಾಗಗಳನ್ನೂ ರಷ್ಯ ದೇಶಕ್ಕೆ ಕಳುಹಿಸಿದೆವು.

ರಷ್ಯದವರ ಕೈಗೆ ದೇವರ ವಾಕ್ಯವನ್ನು ಮುಟ್ಟಿಸುವ ಹಾಗೆ ನಾವು ಮತ್ತೊಂದು ಯುಕ್ತಿಯನ್ನು ಉಪಯೋಗಿಸಿದೆವು. ರಷ್ಯ ಸೈನಿಕರು ಅನೇಕ ವರ್ಷಗಳಿಂದ ಯುದ್ಧ ಮಾಡುತ್ತಾ ಬಂದಿದ್ದರು. ಅವರಲ್ಲಿ ಅನೇಕರಿಗೆ ಮನೆಯಲ್ಲಿ ಮಕ್ಕಳಿದ್ದರು. ಅವರು ಕೆಲವು ವರ್ಷಗಳಿಂದ ತಮ್ಮ ಮಕ್ಕಳನ್ನು ನೋಡಿರಲಿಲ್ಲ. ರಷ್ಯದವರು ತಮ್ಮ ಮಕ್ಕಳನ್ನು ಬಹಳ ಪ್ರೀತಿಸುತ್ತಾರೆ. ನನ್ನ ಚಿಕ್ಕ ಮಗನೂ ಹತ್ತು ವಯಸ್ಸಿಗಿಂತ ಕಡಿಮೆ ಇರುವ ಬೇರೆ ಮಕ್ಕಳೂ ತಮ್ಮ ಜೇಬುಗಳಲ್ಲಿ ಸುವಾರ್ತಾ ಸಾಹಿತ್ಯವನ್ನು ತೆಗೆದುಕೊಂಡು ಓಣಿಗಳಲ್ಲಿಯೂ ಉದ್ಯಾನಗಳಲ್ಲಿಯೂ ರಷ್ಯ ಸೈನಿಕರನ್ನು ಸಂದರ್ಶಿಸುತ್ತಿದ್ದರು. ಆ ಸೈನಿಕರು ತಾವು ಅನೇಕ ವರ್ಷಗಳಿಂದ ನೋಡದ ಮನೆಯಲ್ಲಿದ್ದ ತಮ್ಮ ಸ್ವಂತ ಮಕ್ಕಳನ್ನು ಜ್ಞಾಪಕಮಾಡಿ ಈ ಮಕ್ಕಳ ತಲೆಗಳನ್ನು ಸವರಿ ಅವರಿಗೆ ಮಿಠಾಯಿಗಳನ್ನು ಕೊಡುತ್ತಿದ್ದರು. ಪ್ರತಿಯಾಗಿ ಮಕ್ಕಳು ಅವರಿಗೆ ಸುವಾರ್ತಾ ಪುಸ್ತಕಗಳನ್ನು ಕೊಡುತ್ತಿದ್ದರು. ಅವರು ಸಂತೋಷದಿಂದ ಅವುಗಳನ್ನು ಅಂಗೀಕರಿಸುತ್ತಿದ್ದರು. ಯಾವ ಕೆಲಸ ಬಹಿರಂಗವಾಗಿ ದೊಡ್ಡವರಿಗೆ ಮಾಡಲಿಕ್ಕೆ ಅಪಾಯಕರವಾಗಿತ್ತೋ ಆ ಕೆಲಸವನ್ನು ನಮ್ಮ ಮಕ್ಕಳು ಸುರಕ್ಷಿತವಾಗಿ ಮಾಡಬಲ್ಲವರಾಗಿದ್ದರು. ಅವರು ರಷ್ಯದವರಿಗೆ ಚಿಕ್ಕ ಸೌವಾರ್ತಿಕರಾಗಿದ್ದರು. ಇದರಿಂದ ಒಳ್ಳೇ ಪರಿಣಾಮಗಳಾದವು. ರಷ್ಯ ಸೈನಿಕರಿಗೆ ಸುವಾರ್ತೆಯನ್ನು ಕೊಡುವುದಕ್ಕೆ ಬೇರೆ ಮಾರ್ಗವೂ ಇಲ್ಲದಿರುವಾಗ ಅನೇಕರು ಈ ರೀತಿಯಲ್ಲಿ ಅದನ್ನು ಹೊಂದಿದರು.

## ರಷ್ಯ ಸೈನಿಕರ ಕ್ಯಾಂಪಿನಲ್ಲಿ ಸುವಾರ್ತಾ ಪ್ರಸರಣ

ನಾವು ವ್ಯಕ್ತಿಗಳಿಗೆ ಮಾತ್ರವಲ್ಲದೇ ರಷ್ಯ ಸೈನಿಕರ ಚಿಕ್ಕ ಗುಂಪುಗಳಿಗೂ ಸುವಾರ್ತೆಯನ್ನು ಸಾರುತ್ತಿದ್ದೆವು.

ಕೈ ಗಡಿಯಾರಗಳನ್ನು ಹೊಂದಲಿಕ್ಕೆ ರಷ್ಯ ದೇಶದವರಿಗೆ ತುಂಬಾ ಇಷ್ಟವಿತ್ತು. ಅವರು ಎಲ್ಲರಿಂದಲೂ ಅವುಗಳನ್ನು ಕದಿಯುತ್ತಿದ್ದರು. ಅವರು ಬೀದಿಯಲ್ಲಿ ಕೈ ಗಡಿಯಾರ ಧರಿಸಿಕೊಂಡ ಯಾವನೊಬ್ಬ ವ್ಯಕ್ತಿಯನ್ನು ನೋಡಿದರೆ ಅವನನ್ನು ನಿಲ್ಲಿಸಿ ಅವನ ಕೈ ಗಡಿಯಾರವನ್ನು ಕಸಿದುಕೊಳ್ಳುತ್ತಿದ್ದರು. ಕೆಲವು ರಷ್ಯದವರ ಎರಡೂ ಕೈಗಳಲ್ಲಿ ನಾಲ್ಕೈದು ಕೈ ಗಡಿಯಾರಗಳಿದ್ದವು. ರಷ್ಯ ಸೈನ್ಯದ ಅಧಿಕಾರಿಣಿಗಳಲ್ಲಿ ಕೆಲವರು ಸಾಧಾರಣ ಗಡಿಯಾರಗಳನ್ನು ಮಂಗಳಸೂತ್ರದ ಹಾಗೆ ತಮ್ಮ ತೋಳುಗಳ ಮೇಲೆ ಕಟ್ಟುತ್ತಿದ್ದರು. ಪೂರ್ವದಲ್ಲಿ ಅವರಲ್ಲಿ ಗಡಿಯಾರಗಳು ಇಲ್ಲದ್ದ ಕಾರಣ ಅವುಗಳನ್ನು ಸಾಕಷ್ಟು ಹೊಂದಲು ಅವರಿಗೆ ಸಾಧ್ಯವಿರಲಿಲ್ಲ. ರೂಮೆನಿಯಾ ದೇಶದವರಲ್ಲಿ ಯಾರಾ

ರಿಗೆ ಗಡಿಯಾರ ಕೊಂಡುಕೊಳ್ಳಲಿಕ್ಕೆ ಇಷ್ಟವಿತ್ತೋ ಅವರು ರಷ್ಯ ಸೈನಿಕರ ವಾಸಸ್ಥಾನಕ್ಕೆ ಹೋಗಿ ಅವುಗಳನ್ನು ಕೊಂಡುಕೊಳ್ಳುತ್ತಿದ್ದರು. ಅನೇಕಾವರ್ತಿ ಜನರು ತಮ್ಮ ಸ್ವಂತ ಕೈ ಗಡಿಯಾರಗಳನ್ನು ತಿರಿಗಿ ಕೊಂಡುಕೊಳ್ಳಬೇಕಾಯಿತು. ಈ ಕಾರಣದಿಂದ ಅನೇಕ ರೂಮೆನಿಯಾ ದೇಶದವರು ರಷ್ಯ ಸೈನಿಕರ ವಾಸ ಸ್ಥಾನಕ್ಕೆ ಹೋಗುತ್ತಿದ್ದರು. ಗುಪ್ತ ಸಭೆಯವರಾದ ನಾವು ಅದೇ ನೆವದಿಂದ ಅಲ್ಲಿಗೆ ಹೋಗುತ್ತಿದ್ದೆವು.

ನಾನು ಮೊದಲನೆಯ ಸಲ ಅಲ್ಲಿಗೆ ಹೋದಾಗ ಆರ್ಥೊಡೋಕ್ಸ್ ಸಭೆಯ ಒಂದು ಹಬ್ಬದ ದಿನವನ್ನು ಆರಿಸಿಕೊಂಡೆನು. ಅದು ಸಂತ ಪೌಲ, ಸಂತ ಪೇತ್ರರ ಹಬ್ಬವಾಗಿತ್ತು. ನಾನು ಸೈನ್ಯದ ಕೇಂದ್ರಸ್ಥಾನಕ್ಕೆ ಹೋಗಿ ನನಗೆ ಕೈ ಗಡಿಯಾರ ಬೇಕೆಂದು ನಟಿಸಿದೆನು. "ಅದರ ಬೆಲೆ ಬಹಳ ಹೆಚ್ಚಾಗಿದೆ. ಇದು ಬಹಳ ಸಣ್ಣದು. ಅದು ಬಹಳ ದೊಡ್ಡದು," ಎಂದು ನಾನು ಹೇಳುತ್ತಿದ್ದೆನು. ಸೈನಿಕರ ಗುಂಪು ನನ್ನ ಸುತ್ತುಮುತ್ತಲೂ ಕೂಡಿತು. ಪ್ರತಿಯೊಬ್ಬನು ಏನಾದರೂ ನನಗೆ ತೋರಿಸುತ್ತಿದ್ದನು. ನಾನು ನಗುತ್ತಾ ಅವರಿಗೆ—"ನಿಮ್ಮಲ್ಲಿ ಯಾರಿಗಾದರೂ ಪೌಲ ಅಥವಾ ಪೇತ್ರ ಎಂಬ ಹೆಸರಿದೆಯೋ ?" ಎಂದು ಪ್ರಶ್ನಿಸಿದೆನು. ಕೆಲವರು ಹೌದೆಂದರು. ಅನಂತರ ನಾನು—"ಈ ಹೊತ್ತು ನಿಮ್ಮ ಆರ್ಥೊಡೋಕ್ಸ್ ಸಭೆಯು ಸಂತ ಪೌಲನಿಗೂ ಸಂತ ಪೇತ್ರನಿಗೂ ಸನ್ಮಾನ ಕೊಡಬೇಕೆಂದು ಹಬ್ಬವನ್ನಾಚರಿಸುತ್ತದೆಂದು ನಿಮಗೆ ಗೊತ್ತಾಗಿದೆಯೋ ?" ಎಂದು ಕೇಳಿದೆನು. ಸೈನಿಕರಲ್ಲಿ ಹೆಚ್ಚಿನ ವಯಸ್ಸಿನವರಲ್ಲಿ ಕೆಲವರಿಗೆ ಇದು ಗೊತ್ತಿತ್ತು. ಅನಂತರ ನಾನು—"ಪೌಲ ಮತ್ತು ಪೇತ್ರ ಯಾರೆಂದು ನಿಮಗೆ ಗೊತ್ತಿದೆಯೋ ?" ಎಂದು ಕೇಳಿದೆನು. ಯಾರಿಗೂ ಗೊತ್ತಿರಲಿಲ್ಲ. ಈ ರೀತಿಯಲ್ಲಿ ನಾನು ಪೌಲ ಪೇತ್ರರ ಸಂಬಂಧವಾಗಿ ಅವರಿಗೆ ತಿಳಿಸಲು ಪ್ರಾರಂಭಿಸಿದೆನು. ಸೈನಿಕರಲ್ಲಿ ಹಿರಿಯನಾದ ಒಬ್ಬನು ನನಗೆ—"ನೀವು ಗಡಿಯಾರಗಳನ್ನು ಕೊಂಡುಕೊಳ್ಳಲಿಕ್ಕೆ ಬಾರದೇ ಕ್ರೈಸ್ತ ವಿಶ್ವಾಸದ ವಿಷಯವಾಗಿ ನಮಗೆ ತಿಳಿಸಬೇಕೆಂದು ಬಂದಿದ್ದೀರಿ. ಇಲ್ಲಿ ನಮ್ಮ ಸಂಗಡ ಕೂತುಕೊಂಡು ನಮಗೆ ಉಪದೇಶಮಾಡಿರಿ. ಆದರೆ ನೀವು ಎಚ್ಚರವಾಗಿರಬೇಕು. ನನ್ನ ಸುತ್ತಲಿರುವ ಎಲ್ಲಾ ಸೈನಿಕರು ಒಳ್ಳೆಯವರಾಗಿದ್ದಾರೆ. ಆದರೆ ಕೆಲವರ ವಿಷಯವಾಗಿ ನಾವು ಎಚ್ಚರವಾಗಿರಬೇಕು. ನಾನು ನಿಮ್ಮ ತೊಡೆಯ ಮೇಲೆ ನನ್ನ ಕೈಯಿಡುವಾಗ ನೀವು ಕೇವಲ ಗಡಿಯಾರಗಳ ಸಂಬಂಧವಾಗಿ ಮಾತನಾಡಬೇಕು. ನಾನು ನನ್ನ ಕೈಯನ್ನು ಎಬ್ಬಿಸಿದ ನಂತರ ನೀವು ನಮಗೆ ಉಪದೇಶವನ್ನು ಮಾಡಲು ತಿರಿಗಿ ಪ್ರಾರಂಭಿಸಬಹುದು," ಎಂದು ಹೇಳಿದನು ನನ್ನ ಸುತ್ತಮುತ್ತಲೂ ಸೈನಿಕರು ಗುಂಪು ಗುಂಪಾಗಿ ಕೂಡಿಬಂದಿದ್ದರು. ನಾನು ಪೌಲ ಪೇತ್ರರ ವಿಷಯವಾಗಿಯೂ ಇವರಿಗೋಸ್ಕರ ಸತ್ತ ಕ್ರಿಸ್ತನ ವಿಷಯವಾಗಿಯೂ ಅವರಿಗೆ ತಿಳಿಸಿದೆನು. ಆಗಾಗ ಯಾವನೊಬ್ಬ ವ್ಯಕ್ತಿಯು ನಮ್ಮ ಹತ್ತಿರ ಬರುತ್ತಿದ್ದನು. ಅಂಥವನಲ್ಲಿ ಅವರಿಗೆ ಭರವಸವಿಲ್ಲದಿದ್ದರೆ ಆ ಸೈನಿಕನು ನನ್ನ ತೊಡೆಯ ಮೇಲೆ ತನ್ನ ಕೈ

ಇಡುತ್ತಿದ್ದನು. ನಾನು ತಿರಿಗಿ ಕೈ ಗಡಿಯಾರಗಳ ಸಂಬಂಧವಾಗಿ ಮಾತನಾಡಲು ಪ್ರಾರಂಭಿಸುತ್ತಿದ್ದೆನು. ಆ ವ್ಯಕ್ತಿ ಹೊರಟು ಹೋದ ನಂತರ ನಾನು ತಿರಿಗಿ ಉಪದೇಶಿಸಲು ಪ್ರಾರಂಭಿಸುತ್ತಿದ್ದೆ. ರಷ್ಯ ಕ್ರೈಸ್ತ ಸೈನಿಕರ ಸಹಾಯದಿಂದ ನಾನು ಅನೇಕಾನೇಕಾವರ್ತಿ ಈ ರೀತಿ ಮಾಡಿದೆನು. ಅನೇಕ ಸೈನಿಕರು ಕ್ರಿಸ್ತನ ಮೇಲೆ ನಂಬಿಕೆ ಇಟ್ಟರು. ಈ ರೀತಿಯಲ್ಲಿ ನಾವು ಸಾವಿರಾರು ಸುವಾರ್ತಾ ಪುಸ್ತಕಗಳನ್ನು ಹಂಚಿಕೊಟ್ಟೆವು.

ನಮ್ಮ ಗುಪ್ತ ಸಭೆಯಲ್ಲಿದ್ದ ಅನೇಕ ಸಹೋದರ ಸಹೋದರಿಯರು ಹಿಡಿಯಲ್ಪಟ್ಟು ಚೆನ್ನಾಗಿ ಹೊಡೆಯಲ್ಪಟ್ಟಿದ್ದಾಗ್ಯೂ ನಮ್ಮ ಸಂಘದ ವಿಷಯವಾಗಿ ಏನೂ ತಿಳಿಸಲಿಲ್ಲ. ನಾವು ಈ ಕಾರ್ಯವನ್ನು ಮಾಡುತ್ತಿದ್ದಾಗ ರಷ್ಯ ದೇಶದಲ್ಲಿಯ ಗುಪ್ತ ಸಭೆಯಲ್ಲಿದ್ದ ಸಹೋದರರನ್ನು ಭೆಟ್ಟಿಯಾಗಿ ಅವರ ಅನುಭವಗಳನ್ನು ಸಂತೋಷದಿಂದ ಆಲಿಸುತ್ತಿದ್ದೆವು. ಅವರಲ್ಲಿ ಅನೇಕರು ದೊಡ್ಡ ದೇವಭಕ್ತರಾಗಲಿಕ್ಕಿದ್ದರು. ಅವರು ಅನೇಕ ವರ್ಷಗಳಿಂದ ಕಮ್ಯುನಿಷ್ಟರ ತತ್ವಗಳನ್ನು ಚೆನ್ನಾಗಿ ಕಲಿತುಕೊಳ್ಳಬೇಕಾಯಿತು. ಕೆಲವರು ಕಮ್ಯುನಿಷ್ಟರ ವಿಶ್ವ ವಿದ್ಯಾಲಯಗಳಲ್ಲಿ ಅಭ್ಯಾಸಮಾಡಿದ್ದರು. ಆದರೆ ಯಾವ ರೀತಿಯಲ್ಲಿ ಉಪ್ಪಿನ ನೀರಿನಲ್ಲಿ ವಾಸಿಸುವ ಮೀನುಗಳ ಮಾಂಸವು ಸಿಹಿಯಾಗಿದೆಯೋ ಅದೇ ರೀತಿಯಲ್ಲಿ ಅವರು ಕಮ್ಯುನಿಷ್ಟರ ಶಾಲೆಗಳಲ್ಲಿ ತಮ್ಮ ಆತ್ಮಗಳನ್ನು ಕ್ರಿಸ್ತನಲ್ಲಿ ಶುದ್ಧವಾಗಿ ಕಾಪಾಡಿಕೊಂಡಿದ್ದರು. ಈ ವಿಶ್ವಾಸಿಗಳಿಗೆ ಸುಂದರವಾದ ಆತ್ಮಗಳಿದ್ದವು. ಅವರು ನಮಗೆ–"ನಮ್ಮ ಟೊಪ್ಪಿಗೆಗಳ ಮೇಲಿರುವ ಕೆಂಪು ನಕ್ಷತ್ರವು ಕ್ರಿಸ್ತ ವಿರೋಧಿಯ ಗುರುತೆಂದು ನಮಗೆ ಗೊತ್ತಾಗಿದೆ," ಎಂದು ಮಹಾದುಃಖದಿಂದ ಹೇಳುತ್ತಿದ್ದರು. ಬೇರೆ ರಷ್ಯ ಸೈನಿಕರ ಮಧ್ಯದಲ್ಲಿ ಸುವಾರ್ತಾ ಪ್ರಚಾರವನ್ನು ಮಾಡಲು ಅವರು ಬಹಳ ಸಹಾಯವನ್ನು ನೀಡಿದರು.

ಆನಂದವೆಂಬ ಸದ್ಗುಣವು ಹೊರತಾಗಿ ಎಲ್ಲಾ ಕ್ರೈಸ್ತ ಸದ್ಗುಣಗಳು ಅವರಲ್ಲಿ ಕಂಡುಬರುತ್ತಿದ್ದವು. ಅವರು ದೇವರ ಕಡೆಗೆ ತಿರುಗಿಕೊಂಡ ಕೂಡಲೇ ಆನಂದಪಟ್ಟರು. ಅನಂತರ ಆ ಆನಂದವು ಇಲ್ಲದಂತಾಯಿತು. ಇದರಿಂದ ನನಗೆ ಬಹಳ ಆಶ್ಚರ್ಯವಾಯಿತು. ನಾನು ಒಬ್ಬ ವಿಶ್ವಾಸಿಯನ್ನು—"ನಿಮಗೆ ಯಾಕೆ ಆನಂದವಿಲ್ಲ ?" ಎಂದು ಕೇಳಿದೆನು. ಅವನು ನನಗೆ—"ನಾನು ನಿಜವಾದ ವಿಶ್ವಾಸಿಯಾಗಿದ್ದೇನೆ. ನಾನು ದಿನಾಲು ಪ್ರಾರ್ಥನೆಮಾಡುತ್ತಾ ಜೀವಿಸುತ್ತೇನೆ. ನಾನು ಆತ್ಮಗಳನ್ನು ಕ್ರಿಸ್ತನ ಕಡೆಗೆ ಬರಮಾಡಲು ಪ್ರಯತ್ನಿಸುತ್ತೇನೆ. ಆದರೆ ನಾನು ಈ ಎಲ್ಲಾ ವಿಷಯಗಳನ್ನು ನನ್ನ ಸಭೆಯ ಪಾಲಕನಿಂದ ಮುಚ್ಚಿಕೊಳ್ಳಬೇಕು. ಅವನು ಗುಪ್ತ ಪೊಲೀಸರ ಸಹಾಯಕನಾಗಿದ್ದಾನೆ. ನಮ್ಮ ಸಭೆಯಲ್ಲಿ ಅನೇಕರು ಒಬ್ಬೊಬ್ಬರ ವಿಷಯವಾಗಿ ಗುಪ್ತವಾಗಿ ಸರಕಾರಕ್ಕೆ ತಿಳುವಳಿಕೆಯನ್ನು ಕೊಡುವವರಾಗಿದ್ದಾರೆ. ಸಭಾ ಪಾಲಕರಲ್ಲಿ ಅನೇಕರು ತಮ್ಮ ಸಭಿಕರನ್ನು ಪೊಲೀಸರ ಕೈಗೆ ಕೊಡಲು ಸಿದ್ಧರಾಗಿದ್ದಾರೆ. ನಮ್ಮ ಹೃದಯಾಂತ

ರಾಳದಲ್ಲಿ ರಕ್ಷಣೆಯ ಆನಂದ ಇರುತ್ತದೆ. ಆದರೆ ನೀವು ಹೊರಗೆ ತೋರಿಸುವ ಆನಂದವನ್ನು ನಾವು ಈಗ ತೋರಿಸಲಾರೆವು.

"ನಮ್ಮ ಕ್ರೈಸ್ತತ್ವಕ್ಕೆ ಕೆಲವು ವಿಶೇಷವಾದ ಪರಿಣಾಮಗಳಿವೆ. ಸ್ವತಂತ್ರ್ಯರಾದ ವಿಶ್ವಾಸಿಗಳಾದ ನೀವು ಯಾವನೊಬ್ಬ ವ್ಯಕ್ತಿಯನ್ನು ಕ್ರಿಸ್ತನ ಕಡೆಗೆ ಎಳೆಯುವಾಗ, ಅವನು ಸಮಾಧಾನದಿಂದ ಜೀವಿಸುವ ಸಭೆಯಲ್ಲಿ ಸೇರುತ್ತಾನೆ. ಆದರೆ ನಾವು ಒಬ್ಬ ಮನುಷ್ಯನನ್ನು ಕ್ರಿಸ್ತನ ಕಡೆಗೆ ಸೇರಿಸುತ್ತಿರುವಾಗ, ಅವನು ಸೆರೆಮನೆಗೆ ಹೋಗಬಹುದೆಂತಲೂ ಅವನ ಮಕ್ಕಳು ಅನಾಥರಾಗಬಹುದೆಂತಲೂ ನಮಗೆ ಗೊತ್ತಾಗಿದೆ. ಕ್ರಿಸ್ತನ ಕಡೆಗೆ ಒಬ್ಬನನ್ನು ತರುವ ಆನಂದದಲ್ಲಿ ಆ ವ್ಯಕ್ತಿಯು ತಾಳಬೇಕಾದ ಕಷ್ಟಗಳ ಯೋಚನೆಯು ಯಾವಾಗಲೂ ಇದೆ," ಎಂದು ಉತ್ತರಿಸಿದನು.

ನಾವು ಹೊಸ ತರದ ವಿಶ್ವಾಸಿಯನ್ನು ಅಂದರೆ ಗುಪ್ತಸಭೆಯ ವಿಶ್ವಾಸಿಯನ್ನು ಭೇಟಿಮಾಡಿದೆವು. ನಮಗೆ ಅನೇಕ ವಿಷಯಗಳಿಂದ ಆಶ್ಚರ್ಯವಾಯಿತು.

ಯಾವ ರೀತಿಯಲ್ಲಿ ತಾವು ಕ್ರೈಸ್ತರೆಂದು ನಂಬುವ ಜನರಲ್ಲಿ ಅನೇಕರು ನಿಜವಾದ ಕ್ರೈಸ್ತರಲ್ಲವೋ ಅದೇ ರೀತಿಯಲ್ಲಿ ತಾವು ನಾಸ್ತಿಕರೆಂದು ನಂಬುವ ಜನರಲ್ಲಿ ಅನೇಕರು ನಿಜವಾಗಿ ನಾಸ್ತಿಕರಲ್ಲ !

ನಾನು ಒಂದು ದಂಪತಿಯನ್ನು ಸಂದರ್ಶಿಸಿದೆನು. ಅವರಿಬ್ಬರು ಶಿಲ್ಪಿಗಾರರಾಗಿದ್ದರು. ನಾನು ದೇವರ ವಿಷಯವಾಗಿ ಅವರ ಸಂಗಡ ಮಾತನಾಡಿದಾಗ, ಅವರು ನನಗೆ—"ದೇವರು ನಿಜವಾಗಿ ಇರುವದಿಲ್ಲ. ನಾವು ನಾಸ್ತಿಕರಾಗಿದ್ದೇವೆ. ಆದರೆ ನಮ್ಮ ಒಂದು ಅನುಭವವನ್ನು ನಿಮಗೆ ತಿಳಿಸುತ್ತೇವೆ," ಎಂದು ಉತ್ತರ ಕೊಟ್ಟರು. ಅದೇನಂದರೆ—"ನಾವು ಒಮ್ಮೆ ಸ್ಟ್ಯಾಲಿನ್‌ನವರ ಒಂದು ಪ್ರತಿಮೆಯನ್ನು ತಯಾರಿಸುತ್ತಿದ್ದೆವು. ನಾವು ಕೆಲಸ ಮಾಡುತ್ತಿರುವಾಗ, ನನ್ನ ಹೆಂಡತಿ ನನಗೆ—'ಹಿರಿಯರೇ, ಹೆಬ್ಬೊಟ್ಟಿನ ವಿಷಯವೇನು ? ನಮ್ಮ ಕೈ ಬೆರಳುಗಳು ಕಾಲಿನ ಬೆರಳುಗಳ ಹಾಗಿದ್ದರೆ ನಾವು ಹೆಬ್ಬೆರಳು ಉಳಿದ ಬೆರಳುಗಳಿಗೆ ಜೋಡಿಸಲಾಗುತ್ತಿರಲಿಲ್ಲ. ಹಾಗಾದರೆ ಹತೋಡಿಯನ್ನಾಗಲೀ ಯಾವದೊಂದು ಆಯುಧವನ್ನಾಗಲೀ ಪುಸ್ತಕವನ್ನಾಗಲೀ ರೊಟ್ಟಿಯನ್ನಾಗಲೀ ಹಿಡಿಯಲಿಕ್ಕಾದೇ ಹೋಗುತ್ತಿದ್ದೆವು. ಹೆಬ್ಬೆರಳಿಲ್ಲದೇ ನಮ್ಮ ಅನುದಿನದ ಜೀವನವು ಚೆನ್ನಾಗಿ ನಡೆಯುತ್ತಿರಲಿಲ್ಲ. ಹಾಗಾದರೆ ಹೆಬ್ಬೆರಳನ್ನು ಮಾಡಿದವರ್‍ಯಾರು ? ನಾವಿಬ್ಬರೂ ಶಾಲೆಯಲ್ಲಿ ಮಾರ್ಕ್ಸ್‌ನವರ ತತ್ವಜ್ಞಾನವನ್ನು ಕಲಿತುಕೊಂಡಿದ್ದೆವು. ಆಕಾಶವೂ ಭೂಮಿಯೂ ತಮ್ಮಷ್ಟಕ್ಕೆ ತಾವೇ ಇರುವವೆಂದು ನಾವು ತಿಳಿದುಕೊಂಡಿದ್ದೇವೆ. ಅವುಗಳು ದೇವರಿಂದ ಉಂಟಾಗಲಿಲ್ಲ. ಹಾಗೆ ನಾವು ಕಲಿತುಕೊಂಡು ನಂಬುತ್ತೇವೆ. ಆದರೆ ದೇವರು ಆಕಾಶವನ್ನೂ ಭೂಮಿ

ಯನ್ನೂ ಉಂಟುಮಾಡದೇ ಕೇವಲ ಹೆಬ್ಬೆರಳನ್ನೇ ಉಂಟುಮಾಡಿದರೆ ಆತನು ಈ ಅಲ್ಪ ಕೃತ್ಯದಿಂದ ನಮ್ಮ ಸ್ತೋತ್ರಕ್ಕೆ ಪಾತ್ರನಾಗಿದ್ದಾನೆ.

"ವಿದ್ಯುತ್‌ದೀಪವನ್ನು ನಿರ್ಮಿಸಿದ ಎಡಿಸೋನನನ್ನೂ, ಟೆಲಿಫೋನವನ್ನು ನಿರ್ಮಿಸಿದ ಬೆಲ್‌ನನ್ನೂ ಉಗಿಯಂತ್ರವನ್ನು ನಿರ್ಮಿಸಿದ ಸ್ಟೆಫನ್‌ಸನ್‌ನನ್ನೂ ನಾವು ಸ್ತುತಿಸುತ್ತೇವೆ. ಹಾಗಾದರೆ ಹೆಬ್ಬೆರಳನ್ನು ಉಂಟುಮಾಡಿದಾತನಿಗೆ ನಾವು ಸ್ತೋತ್ರಿಸಬಾರದೋ ? ಎಡಿಸೋನನಿಗೆ ಹೆಬ್ಬೆರಳು ಇಲ್ಲದಿದ್ದರೆ ಏನನ್ನೂ ನಿರ್ಮಿಸುವದು ಸಾಧ್ಯವಾಗುತ್ತಿರಲಿಲ್ಲ. ಹೆಬ್ಬೆರಳನ್ನು ಮಾಡಿದ ದೇವರಿಗೆ ಆರಾಧನೆ ಮಾಡುವದು ಯೋಗ್ಯವಾಗಿದೆ,'' ಎಂದು ಹೇಳಿದಳು.

ಹೆಂಡಂದಿರು ತಮ್ಮ ಗಂಡಂದಿರಿಗೆ ಬುದ್ಧಿ ಮಾತುಗಳನ್ನು ಹೇಳುತ್ತಿರುವಾಗ ಅವರು ಅನೇಕಾವರ್ತಿ ಕೋಪಗೊಳ್ಳುತ್ತಾರೆ. ಈ ಮನುಷ್ಯ ಸಿಟ್ಟುಗೊಂಡು ಆಕೆಗೆ—"ಹುಚ್ಚುತನ ಹೇಳಬೇಡ ! ದೇವರಿಲ್ಲವೆಂದು ನೀನು ಕಲಿತುಕೊಂಡಿದ್ದೀ. ಗುಪ್ತ ಪೊಲೀಸರು ಗುಪ್ತವಾದ ಒಂದು ಟೆಲಿಫೋನ ನಮ್ಮ ಮನೆಯಲ್ಲಿ ಇಟ್ಟಿದ್ದಾರೋ ಇಲ್ಲವೋ ನಮಗೆ ಗೊತ್ತಿಲ್ಲ. ಅವರು ಇಂಥ ಸಂಭಾಷಣೆ ಕೇಳಿದರೆ ನಮಗೆ ಕಷ್ಟ ಬಂದೇ ಬರುವದು. ದೇವರಿಲ್ಲವೆಂದು ಮನಃಪೂರ್ವಕವಾಗಿ ಗ್ರಹಿಸಿಕೊಳ್ಳಬೇಕು. ಪರಲೋಕದಲ್ಲಿ ಯಾರೂ ಇಲ್ಲ," ಎಂದು ಉತ್ತರ ಕೊಟ್ಟನು.

ಅದಕ್ಕೆ ಆಕೆಯು—"ಇದು ಅತ್ಯಾಶ್ಚರ್ಯ ಸಂಗತಿಯಾಗಿದೆ. ಅಜ್ಞಾನಿಗಳಾದ ನಮ್ಮ ಪೂರ್ವಿಕರು ನಂಬಿದ್ದ ಹಾಗೆ ಪರಲೋಕದಲ್ಲಿ ಸರ್ವಶಕ್ತನಾದ ದೇವರಿದ್ದರೆ, ನಮಗೆ ಹೆಬ್ಬೆರಳು ಇರುವದು ಸ್ವಾಭಾವಿಕವಾಗಿದೆ. ಸರ್ವಶಕ್ತನಾದ ದೇವರು ಎಲ್ಲವನ್ನು ಮಾಡಬಲ್ಲವನಾಗಿ ಹೆಬ್ಬೆರಳನ್ನೂ ಮಾಡಬಲ್ಲವನಾಗಿದ್ದಾನೆ. ಆದರೆ ಪರಲೋಕದಲ್ಲಿ ಯಾರೂ ಇಲ್ಲದಿದ್ದರೆ, ಹೆಬ್ಬೆರಳನ್ನು ಮಾಡಿದ ಆ ಇಲ್ಲದ ವ್ಯಕ್ತಿಯನ್ನು ನಾನು ಹೃದಯಪೂರ್ವಕವಾಗಿ ಆರಾಧಿಸಲು ನಿಶ್ಚಯ ಮಾಡಿಕೊಂಡಿದ್ದೇನೆ !" ಎಂದು ಉತ್ತರ ಕೊಟ್ಟಳು.

ಈ ರೀತಿಯಲ್ಲಿ ಅವರು ಇಲ್ಲದ ವ್ಯಕ್ತಿಯನ್ನು ಆರಾಧಿಸುವವರಾದರು. ವೇಳೆ ದಾಟಿಹೋಗುತ್ತಾ ಇದ್ದಾಗ, ಆತನು ಹೆಬ್ಬೆರಳನ್ನು ಮಾತ್ರವಲ್ಲದೆ, ತಾರೆಗಳನ್ನೂ ಹೂವುಗಳನ್ನೂ ಮಕ್ಕಳನ್ನೂ ಉಳಿದ ಎಲ್ಲಾ ಸುಂದರವಾದ ವಸ್ತುಗಳನ್ನೂ ಉಂಟುಮಾಡಿದ್ದಾನೆಂದು ನಂಬುವವರಾದರು. ಶ್ರೀ ಪೌಲನ ಕಾಲದಲ್ಲಿ ಅಥೇನೆ ಪಟ್ಟಣದಲ್ಲಿ ಕೆಲವರು ''ತಿಳಿಯದ ದೇವರಿಗೆ'' ಆರಾಧನೆ ಮಾಡಿದ ಹಾಗೆ ಇವರು ಮಾಡುತ್ತಿದ್ದರು.

ನಾನು ಅವರಿಗೆ—''ನೀವು ಸರಿಯಾಗಿ ನಂಬಿದ್ದೀರಿ. ಪರಲೋಕದಲ್ಲಿ ಒಬ್ಬನು ಇದ್ದಾನೆ. ಆ ದೇವರು ಆತ್ಮಸ್ವರೂಪನಾಗಿದ್ದಾನೆ. ಆತನು ಪ್ರೀತಿ,

ಜ್ಞಾನ, ಸತ್ಯ, ಬಲಗಳುಳ್ಳವನಾಗಿದ್ದಾನೆ. ಆತನು ನಿಮ್ಮನ್ನು ಪ್ರೀತಿಸಿ, ನಿಮಗಾಗಿ ಶಿಲಬೆಯ ಮೇಲೆ ಸ್ವಪ್ರಾಣವನ್ನು ಅರ್ಪಿಸಬೇಕೆಂದು ತನ್ನ ಒಬ್ಬನೇ ಮಗನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು," ಎಂದು ತಿಳಿಸಿದಾಗ, ಅವರು ಅತ್ಯಾನಂದಪಟ್ಟರು. ಅವರು ತಿಳಿಯದೆ ದೇವರಲ್ಲಿ ನಂಬಿಕೆಯಿಡುವವರಾದರು. ಅವರನ್ನು ರಕ್ಷಣೆಯ ಅನುಭವಕ್ಕೆ ತರುವ ಹಕ್ಕು ನನಗೆ ಸಿಕ್ಕಿತು.

ಒಂದು ಸಮಯದಲ್ಲಿ ರಷ್ಯ ಸೈನ್ಯದ ಒಬ್ಬ ಸ್ತ್ರೀ ಅಧಿಕಾರಿಣಿಯು ಓಣಿಯಲ್ಲಿ ನನಗೆ ಕಾಣಿಸಿದಳು. ನಾನು ಆಕೆಯ ಹತ್ತಿರ ಹೋಗಿ ಕ್ಷಮಾಪಣೆ ಬೇಡಿ ಆಕೆಗೆ—''ಗುರುತಿಲ್ಲದ ಒಬ್ಬ ಹೆಂಗಸನ್ನು ಓಣಿಯಲ್ಲಿ ಎದುರುನೋಡುವದು ಅಮರ್ಯಾದೆಯಾಗಿದೆಯೆಂಬುದು ನನಗೆ ಗೊತ್ತು. ಆದರೆ ನಾನು ಸಭಾಪಾಲಕನಾಗಿದ್ದೇನೆ. ನನಗೆ ಯೋಗ್ಯವಾದ ಉದ್ದೇಶವಿದೆ. ಕ್ರಿಸ್ತನ ವಿಷಯವಾಗಿ ನಿಮ್ಮ ಸಂಗಡ ಮಾತನಾಡಬೇಕೆಂದು ನನಗೆ ಇಚ್ಛೆಯಿದೆ," ಎಂದು ಹೇಳಿದೆನು.

ಆಕೆಯು ನನ್ನನ್ನು—"ನೀವು ಕ್ರಿಸ್ತನನ್ನು ಪ್ರೀತಿಸುತ್ತೀರೋ ?" ಎಂದು ಕೇಳಿದಳು. ನಾನು ಆಕೆಗೆ—"ಹೌದು, ನಾನು ಹೃದಯಪೂರ್ವಕವಾಗಿ ಆತನನ್ನು ಪ್ರೀತಿಸುತ್ತೇನೆ," ಎಂದು ಉತ್ತರ ಕೊಟ್ಟೆನು. ಆಕೆಯು ನನ್ನನ್ನು ಅಪ್ಪಿಕೊಂಡು ಮೇಲಿಂದ ಮೇಲೆ ಮುದ್ದಿಡಲು ಪ್ರಾರಂಭಿಸಿದಳು. ಇದು ಸಭಾ ಪಾಲಕನಿಗೆ ಸ್ವಲ್ಪ ನಾಚಿಕೆಯುಳ್ಳ ಸಂದರ್ಭವಾಗಿತ್ತು. ನಾವು ಸಂಬಂಧಿಕರೆಂದು ಜನರು ಯೋಚಿಸುತ್ತಾರೆಂದು ಆಶಿಸಿ ಆಕೆಗೆ ಪ್ರತಿಯಾಗಿ ಮುದ್ದಿಟ್ಟೆನು. ಆಕೆಯು ನನಗೆ—"ನಾನು ಸಹ ಕ್ರಿಸ್ತನನ್ನು ಪ್ರೀತಿಸುತ್ತೇನೆ," ಎಂದು ಉದ್ಗರಿಸಿದಳು.

ನಾನು ಆಕೆಯನ್ನು ಕರೆದುಕೊಂಡು ಮನೆಗೆ ಹೋದೆನು. ಅಲ್ಲಿ ಅತ್ಯಾಶ್ಚರ್ಯಕರವಾದ ಸಂಗತಿಯನ್ನು ನಾನು ತಿಳಿದುಕೊಂಡೆನು. ಕ್ರಿಸ್ತನ ಹೆಸರಿನ ಹೊರತಾಗಿ ಆತನ ವಿಷಯವಾಗಿ ಆಕೆಗೆ ಏನೂ ಗೊತ್ತಿರಲಿಲ್ಲ. ಆದರೂ ಆಕೆಯು ಆತನನ್ನು ಪ್ರೀತಿಸುತ್ತಿದ್ದಳು. ಆತನು ರಕ್ಷಕನಾಗಿದ್ದಾನೆಂತಲೂ ರಕ್ಷಣೆಯ ಅರ್ಥವೇನೆಂತಲೂ ಆಕೆಗೆ ಗೊತ್ತಿರಲಿಲ್ಲ. ಆತನ ಜೀವನ–ಮರಣಗಳ ವಿಷಯವಾಗಿ ಆಕೆಗೆ ತಿಳುವಳಿಕೆ ಇರಲಿಲ್ಲ. ಕ್ರಿಸ್ತನ ಬೋಧನೆ, ಕಾರ್ಯ, ನೇಮಗಳ ವಿಷಯವಾಗಿ ಆಕೆಗೆ ಏನೂ ಗೊತ್ತಿರಲಿಲ್ಲ. ನನಗೆ ಅತ್ಯಾಶ್ಚರ್ಯವಾಯಿತು. ಯಾಕೆಂದರೆ ಒಬ್ಬ ವ್ಯಕ್ತಿಯ ಹೆಸರು ಮಾತ್ರ ಗೊತ್ತಾಗಿದ್ದರೆ ಆತನನ್ನು ಪ್ರೀತಿಸುವದು ಹೇಗೆ ಸಾಧ್ಯ ?

ನಾನು ಇದರ ವಿಷಯವಾಗಿ ಕೇಳಿದಾಗ ಆಕೆಯು ನನಗೆ—"ನಾನು ಮಗುವಾಗಿದ್ದಾಗ ಚಿತ್ರಗಳ ಸಹಾಯದಿಂದ ಅಕ್ಷರಗಳನ್ನು ಕಲಿತುಕೊಂಡೆನು. 'ಅ' ಎಂಬ ಅಕ್ಷರವನ್ನು ಸೂಚಿಸಲು ಅಗಸನ ಚಿತ್ರವಿತ್ತು. 'ಆ' ಅಕ್ಷರ ಚಿತ್ರ ಆನೆ

ಇತ್ತು. 'ಇ' ಗಾಗಿ ಇಲಿಯಿತ್ತು. ನಾನು ಹೈಸ್ಕೂಲಿಗೆ ಹೋದಾಗ ಕಮ್ಯುನಿಷ್ಟರು ಸ್ವದೇಶವನ್ನು ಕಾಪಾಡುವದು ನಮ್ಮ ಪರಿಶುದ್ಧ ಕರ್ತವ್ಯವೆಂದು ನಾನು ಕಲಿತುಕೊಂಡೆನು. ಕಮ್ಯುನಿಷ್ಟರ ನೀತಿಸೂತ್ರಗಳ ವಿಷಯವಾಗಿ ನಮಗೆ ಬೋಧನೆ ಸಿಕ್ಕಿತು. ಆದರೆ ಪರಿಶುದ್ಧ ಕರ್ತವ್ಯ ಅಥವಾ ನೀತಿಸೂತ್ರ ಹೇಗೆ ಕಾಣಿಸುತ್ತಿತ್ತೆಂಬುದು ನನಗೆ ಗೊತ್ತಿರಲಿಲ್ಲ. ಅವುಗಳ ಚಿತ್ರ ನನಗೆ ಬೇಕಾಯಿತು. ಲೋಕದಲ್ಲಿರುವ ಸುಂದರವಾದ, ಸ್ತುತ್ಯವಾದ ಹಾಗೂ ನಂಬತಕ್ಕ ಎಲ್ಲಾ ವಿಷಯಗಳ ಒಂದು ಚಿತ್ರವು ನಮ್ಮ ಪೂರ್ವಿಕರಿಗೆ ಇತ್ತೆಂದು ನನಗೆ ಗೊತ್ತಾಯಿತು. ನನ್ನ ಅಜ್ಜಿಯು ಯಾವಾಗಲೂ ಆ ಚಿತ್ರಕ್ಕೆ ಪೂಜೆಮಾಡುತ್ತಿದ್ದಳು. ಆ ಚಿತ್ರದಲ್ಲಿದ್ದ ಮನುಷ್ಯನ ಹೆಸರು "ಕ್ರಿಸ್ತ" ಎಂದು ಆಕೆಯು ನನಗೆ ತಿಳಿಸಿದಳು. ನಾನು ಆ ಹೆಸರನ್ನು ಪ್ರೀತಿಸಿದೆನು. ಅದು ನನಗೆ ಸತ್ಯವಾಗಿತ್ತು. ಅದನ್ನು ಹೇಳುವದರಿಂದ ನನಗೆ ಅತ್ಯಾನಂದವಾಯಿತು," ಎಂದು ಹೇಳಿದಳು.

ಆಕೆಯ ಮಾತುಗಳನ್ನು ಕೇಳಿ, ನಾನು ಫಿಲಿಪ್ಪಿಯವರಿಗೆ ಬರೆದ ಪತ್ರಿಕೆಯಲ್ಲಿರುವ ಮಾತುಗಳನ್ನು ನೆನಸಿಕೊಂಡೆನು. "ಎಲ್ಲರೂ ಯೇಸುವಿನ ಹೆಸರಿನಲ್ಲಿ ಅಡ್ಡಬೀಳುವೆವು." ಒಂದು ವೇಳೆ ಕ್ರಿಸ್ತ ವಿರೋಧಿಯು ಸ್ವಲ್ಪ ವೇಳೆಯವರೆಗೆ ದೇವರ ತಿಳುವಳಿಕೆಯನ್ನು ಲೋಕದಿಂದ ತೆಗೆದುಹಾಕಬಹುದು. ಆದರೆ ಕ್ರಿಸ್ತನ ಹೆಸರಿನಲ್ಲಿ ಬಲವಿದೆ. ಅದರಿಂದ ಜನರು ಪ್ರಕಾಶಕ್ಕೆ ಬರುವರು. ಆ ಹೆಂಗಸು ನನ್ನ ಮನೆಯಲ್ಲಿ ಕ್ರಿಸ್ತನ ಗುರುತನ್ನು ಹಿಡಿದಳು. ಯಾವ ವ್ಯಕ್ತಿಯ ಹೆಸರನ್ನು ಆಕೆಯು ಮೊದಲು ಪ್ರೀತಿಸಿದಳೋ ಆ ವ್ಯಕ್ತಿಯು ಈಗ ಆಕೆಯ ಹೃದಯದಲ್ಲಿ ವಾಸಿಸುವವನಾಗಿದ್ದಾನೆ.

ನಾನು ರಷ್ಯರ ಸಂಗಡ ಸಂಭಾಷಣೆ ಮಾಡುತ್ತಿದ್ದಾಗ, ಅನೇಕ ವಿಷಯಗಳ ನಿಜವಾದ ಅರ್ಥವನ್ನು ಗ್ರಹಿಸಿಕೊಂಡೆನು. ರೇಲ್ವೆ ನಿಲ್ದಾಣಗಳಲ್ಲಿ ಸುವಾರ್ತಾ ಸೇವೆಮಾಡುತ್ತಿದ್ದ ಒಬ್ಬ ಸಹೋದರಿಯು ರಷ್ಯ ಸೈನ್ಯದ ಒಬ್ಬ ಅಧಿಕಾರಿಗೆ ನನ್ನ ವಿಳಾಸವನ್ನು ತಿಳಿಸಿದಳು. ಅವನು ಎತ್ತರವಾದ ಸುಂದರನಾದ ಮನುಷ್ಯನಾಗಿದ್ದನು. ಅವನು ಒಂದು ಸಾಯಂಕಾಲ ನನ್ನ ಮನೆಗೆ ಬಂದನು.

ನಾನು ಅವನನ್ನು—"ನಾನು ನಿಮಗೋಸ್ಕರ ಏನು ಮಾಡಲಿ ?" ಎಂದು ಕೇಳಿದೆನು. "ನಾನು ಬೆಳಕನ್ನು ಹೊಂದಲು ಬಂದಿದ್ದೇನೆ," ಎಂದು ಅವನು ಉತ್ತರ ಕೊಟ್ಟನು.

ನಾನು ಸತ್ಯವೇದದಿಂದ ಅತಿ ಪ್ರಮುಖವಾದ ಭಾಗಗಳನ್ನು ಅವನಿಗೆ ಓದಲು ಪ್ರಾರಂಭಿಸಿದೆನು. ಅವನು ತನ್ನ ಕೈಯನ್ನು ನನ್ನ ಕೈಯ ಮೇಲೆ

ಇಟ್ಟು, ನನಗೆ—"ನಾನು ಹೃದಯಪೂರ್ವಕವಾಗಿ ಬೇಡಿಕೊಳ್ಳುತ್ತೇನೆ—ನನ್ನನ್ನು ಮೋಸಗೊಳಿಸಬೇಡಿರಿ. ನಾನು ಕತ್ತಲೆಯಲ್ಲಿ ಇಡಲ್ಪಟ್ಟ ಜನರಲ್ಲಿ ಒಬ್ಬನಿದ್ದೇನೆ. ನನಗೆ ಸತ್ಯವಾಗಿ ಹೇಳಿರಿ : ಇದು ನಿಜವಾಗಿ ದೇವರ ವಾಕ್ಯವಾಗಿದೆಯೋ ?" ಎಂದು ಹೇಳಿದನು. ನಾನು ಅವನಿಗೆ—"ಇದು ನಿಜವಾಗಿ ದೇವರ ವಾಕ್ಯವಾಗಿದೆ," ಎಂದು ನಿಶ್ಚಯಪೂರ್ವಕವಾಗಿ ಹೇಳಿದೆನು. ಅವನು ಕೆಲವು ಘಂಟೆಗಳ ವರೆಗೆ ಕೇಳಿ, ಕ್ರಿಸ್ತನನ್ನು ಅಂಗೀಕರಿಸಿದನು.

ರಷ್ಯದವರು ಸುಮ್ಮನೆ ಧಾರ್ಮಿಕ ವಿಷಯಗಳ ಸಂಬಂಧವಾಗಿ ಯೋಚಿಸುವದಿಲ್ಲ. ಅವರು ಹೃದಯಪೂರ್ವಕವಾಗಿ ಧರ್ಮವನ್ನು ವಿರೋಧಿಸುತ್ತಿದ್ದರು. ಅಥವಾ ಅವರು ಹೃದಯಪೂರ್ವಕವಾಗಿ ಕ್ರಿಸ್ತನನ್ನು ಹುಡುಕುತ್ತಿದ್ದರು. ರಷ್ಯ ದೇಶದಲ್ಲಿ ಪ್ರತಿಯೊಬ್ಬ ವಿಶ್ವಾಸಿಯು ಇತರರನ್ನು ಕ್ರಿಸ್ತನ ಕಡೆಗೆ ಎಳೆಯಬೇಕೆಂದು ಪ್ರಯತ್ನಿಸುತ್ತಾನೆ. ರಷ್ಯ ದೇಶವು ಸುವಾರ್ತಾ ಕಾರ್ಯಕ್ಕಾಗಿ ಸಿದ್ಧವೂ ಸಫಲಕರವಾದದ್ದೂ ಇದೆ. ರಷ್ಯದವರು ಸ್ವಾಭಾವಿಕವಾಗಿ ಧಾರ್ಮಿಕ ಜನರಾಗಿದ್ದಾರೆ. ನಾವು ಅವರಿಗೆ ಸುವಾರ್ತೆಯನ್ನು ಹೇರಳವಾಗಿ ತಿಳಿಸಿದರೆ, ಲೋಕದ ಇತಿಹಾಸದಲ್ಲಿ ದೊಡ್ಡ ಬದಲಾವಣೆಯಾಗುವದು. ರಷ್ಯದೇಶದವರು ದೇವರ ವಾಕ್ಯಕ್ಕಾಗಿ ಹಸಿವೆಯುಳ್ಳವರಾಗಿದ್ದಾರೆ. ಅದನ್ನು ಅವರಿಗೆ ಕೊಡುವದು ನಮ್ಮ ಕರ್ತವ್ಯವಾಗಿದೆ.

ಒಂದು ರೇಲ್ವೆ ಗಾಡಿಯಲ್ಲಿ ಒಬ್ಬ ರಷ್ಯ ಸೈನ್ಯದ ಅಧಿಕಾರಿಯು ನನ್ನ ಮುಂದೆ ಕೂತುಕೊಂಡನು. ನಾನು ಕೆಲವು ನಿಮಿಷಗಳ ವರೆಗೆ ಕ್ರಿಸ್ತನ ಸಂಬಂಧವಾಗಿ ಅವನ ಸಂಗಡ ಮಾತನಾಡಿದೆನು. ಅವನು ವಾದ ವಿವಾದ ಮಾಡಲು ಪ್ರಾರಂಭಿಸಿದನು. ಮಾರ್ಕ್ಸ್, ಸ್ಟ್ಯಾಲಿನ್, ವೊಲ್ಟೇರ್, ಡಾರ್ವಿನ್ ಮುಂತಾದ ಬೇರೆ ನಾಸ್ತಿಕರು ಬರೆದ ಮಾತುಗಳನ್ನು ಅವನು ನನ್ನ ಗಮನಕ್ಕೆ ತಂದನು. ಅವುಗಳ ವಿರುದ್ಧವಾಗಿ ಮಾತನಾಡಲು ಅವನು ನನಗೆ ಅನುಕೂಲ ಕೊಡಲಿಲ್ಲ. "ದೇವರಿಲ್ಲ," ಎಂದು ನನ್ನನ್ನು ಒಡಂಬಡಿಸಬೇಕೆಂದು ಅವನು ಹೆಚ್ಚು ಕಡಿಮೆ ಒಂದು ಘಂಟೆಯ ವರೆಗೆ ಮಾತಾಡಿದನು. ಅವನು ತನ್ನ ವಾದ ವಿವಾದಗಳನ್ನು ಮುಗಿಸಿದ ನಂತರ, ನಾನು ಅವನನ್ನು—"ದೇವರಿಲ್ಲದಿದ್ದರೆ, ನೀವು ಕಷ್ಟದಲ್ಲಿರುವಾಗ ಯಾಕೆ ಪ್ರಾರ್ಥನೆ ಮಾಡುತ್ತೀರಿ ?" ಎಂದು ಕೇಳಿದೆನು. ಕಳ್ಳತನದಲ್ಲಿ ಸಿಕ್ಕಿದ ಕಳ್ಳನ ಹಾಗೆ ಅವನು ಆಶ್ಚರ್ಯಪಟ್ಟು—"ನಾನು ಪ್ರಾರ್ಥನೆ ಮಾಡುತ್ತೇನೆಂದು ನಿಮಗೆ ಹೇಗೆ ಗೊತ್ತಾಗಿದೆ ?" ಎಂದು ಕೇಳಿದನು. ನವ ಹೇಳಲು ನಾನು ಅವನಿಗೆ ಅನುಕೂಲ ಕೊಡದೆ, ಅವನಿಗೆ—"ನಾನು ನನ್ನ ಪ್ರಶ್ನೆ ಮೊದಲು ಹಾಕಿದೆನು. ನೀವು ಯಾಕೆ ಪ್ರಾರ್ಥನೆ ಮಾಡುತ್ತೀರೆಂದು ಕೇಳಿದೆನು. ದಯಮಾಡಿ, ಉತ್ತರ ಕೊಡಿ !" ಎಂದು ಹೇಳಿದೆನು. ಅವನು ತಲೆ ಬೊಗ್ಗಿಸಿ—"ನಾವು ಯುದ್ಧದಲ್ಲಿ ಜರ್ಮನ್ ಸೈನ್ಯದವರ ಸಂಗಡ ಹೋರಾಡುತ್ತಿದ್ದಾಗ, ನಾವೆಲ್ಲರೂ ಪ್ರಾರ್ಥನೆ ಮಾಡಿದೆವು. ಅದನ್ನು ಹೇಗೆ

ಮಾಡುವದು ನಮಗೆ ಗೊತ್ತಿರಲಿಲ್ಲ. ನಾವು—'ತಾಯಿಯು ಆರಾಧಿಸಿದ ದೇವರೇ,' ಎಂದು ಹೇಳಿ, ಪ್ರಾರ್ಥನೆ ಮಾಡಿಧೆವು," ಎಂದು ಒಪ್ಪಿಕೊಂಡನು. ದೇವರು ಹೃದಯವನ್ನು ನೋಡಿ, ಪ್ರಾರ್ಥನೆಗೆ ಉತ್ತರ ಕೊಡುವವನಾಗಿ ದ್ದಾನೆ. ನಾವು ರಷ್ಯದವರಲ್ಲಿ ಮಾಡಿದ ಸೇವೆಯಲ್ಲಿ ದೇವರು ಬಹಳ ಫಲವನ್ನು ಕೊಟ್ಟನು.

ಪೇತ್ರನೆಂಬ ಒಬ್ಬ ಯೌವನಸ್ಥನನ್ನು ನಾನು ನೆನಪು ಮಾಡಿಕೊಳ್ಳು ತ್ತೇನೆ. ಅವನು ಹೆಚ್ಚು ಕಡಿಮೆ ಇಪ್ಪತ್ತು ವರುಷದವನಾಗಿ ರಷ್ಯದಲ್ಲಿರುವ ಒಂದು ಸೆರೆಮನೆಯಲ್ಲಿ ಹಾಕಲ್ಪಟ್ಟನು. ಅವನು ರಷ್ಯ ಸೈನಿಕನಾಗಿ ರೂಮೆ ನಿಯಾ ದೇಶಕ್ಕೆ ಬಂದನು. ಗುಪ್ತವಾಗಿ ನಡೆದ ಒಂದು ಕೂಟದಲ್ಲಿ ಅವನು ದೇವರ ಕಡೆಗೆ ತಿರುಗಿಕೊಂಡನು. ಅವನು ನನ್ನನ್ನು—"ನೀವು ನನಗೆ ದೀಕ್ಷಾ ಸ್ನಾನವನ್ನು ಕೊಡಬೇಕು," ಎಂದು ಬೇಡಿಕೊಂಡನು. ಅದನ್ನು ಮಾಡಿದ ನಂತರ, ನಾನು ಅವನನ್ನು—"ನೀವು ಕ್ರಿಸ್ತನ ಕಡೆಗೆ ಬರುವ ಹಾಗೆ ದೇವರ ವಾಕ್ಯದಲ್ಲಿದ್ದ ಯಾವ ವಚನವು ನಿಮ್ಮ ಮೇಲೆ ಪ್ರಭಾವವನ್ನು ಮಾಡಿತು ?" ಎಂದು ಕೇಳಿದೆನು.

ಪ್ರತ್ಯುತ್ತರವಾಗಿ, ಅವನು ನನಗೆ—"ನಿಮ್ಮ ಒಂದು ಗುಪ್ತ ಕೂಟದಲ್ಲಿ ಲೂಕ 24 ನೆಯ ಅಧ್ಯಾಯವನ್ನು ಓದಿದ್ದಿರಿ. ಯೇಸು ಎಮ್ಮಾಹು ಎಂಬ ಹಳ್ಳಿಗೆ ಹೋಗುತ್ತಿದ್ದ ಇಬ್ಬರು ಶಿಷ್ಯರನ್ನು ಹೇಗೆ ಭೇಟಿಯಾದನೆಂದು ಬರೆಯ ಲ್ಪಟ್ಟಿದೆ. ಅವರು ಹಳ್ಳಿಯ ಸಮೀಪಕ್ಕೆ ಬಂದಾಗ ಆತನು ಇನ್ನೂ ಮುಂದಕ್ಕೆ ಹೋಗುವಂತೆ ಕಾಣಿಸಿಕೊಂಡನು. ಇದನ್ನು ಕೇಳಿ ನನಗೆ ಆಶ್ಚರ್ಯವಾಯಿತು. ತನ್ನ ಶಿಷ್ಯರ ಸಂಗಡ ಇರಬೇಕೆಂದು ಯೇಸು ನಿಜವಾಗಿ ಇಚ್ಛೈಸಿದ್ದನು. ಹಾಗಾದರೆ ತಾನು ಮುಂದಕ್ಕೆ ಹೋಗುವವನಂತೆ ಯಾಕೆ ಕಾಣಿಸಿಕೊಂಡನು ? ಯೇಸು ಮರ್ಯಾದೆಯುಳ್ಳವನಾದದ್ದರಿಂದ ಹಾಗೆ ಮಾಡಿದನೆಂದು ನನಗೆ ಕಾಣಿಸು ತ್ತದೆ. ತನಗೋಸ್ಕರ ನಿಜವಾದ ಸ್ವಾಗತವಿತ್ತೆಂದು ಚೆನ್ನಾಗಿ ತಿಳಿದುಕೊಳ್ಳಲು ಆತನು ಅಪೇಕ್ಷಿಸಿದನು. ಶಿಷ್ಯರು ಆತನನ್ನು ಸ್ವಾಗತಿಸಿದಾಗ ಆತನು ಸಂತೋಷ ದಿಂದ ಅವರೊಂದಿಗೆ ಮನೆಯಲ್ಲಿ ಸೇರಿದನು. ಕಮ್ಯುನಿಷ್ಟರು ಮರ್ಯಾದೆಯನ್ನು ತೋರಿಸುವದಿಲ್ಲ. ಅವರು ಬಲಾತ್ಕಾರದಿಂದ ನಮ್ಮ ಮನಸ್ಸುಗಳಲ್ಲಿ ಸೇರು ತ್ತಾರೆ. ಬೆಳಿಗ್ಗೆಯಿಂದ ರಾತ್ರಿಯ ವರೆಗೆ ನಾವು ಅವರ ಮಾತುಗಳನ್ನು ಕೇಳ ಬೇಕಾಗುತ್ತದೆ. ಅವರು ಶಾಲೆಗಳ ಮುಖಾಂತರವಾಗಿಯೂ ಆಕಾಶವಾಣಿ, ಸುದ್ದಿ ಪತ್ರಗಳು, ಭಿತ್ತಿಚಿತ್ರಗಳೂ, ಚಲನ ಚಿತ್ರಗಳೂ, ಸಭೆಗಳೂ ಮುಂತಾದ ಅನೇಕ ರೀತಿಗಳ ಮುಖಾಂತರವಾಗಿ ಅವರ ತತ್ವಗಳನ್ನು ಪ್ರಸಿದ್ಧಪಡಿಸುತ್ತಾರೆ. ನಿಮಗೆ ಇಚ್ಛೆಯಿದ್ದರೂ ಇಲ್ಲದಿದ್ದರೂ ನಾಸ್ತಿಕವಾದ ಅವರ ಸಂದೇಶಗಳನ್ನು ಕೇಳಲೇ ಬೇಕಾಗುತ್ತದೆ. ಆದರೆ ಯೇಸು ನಮ್ಮ ಹಕ್ಕುಗಳಿಗೆ ಲಕ್ಷ್ಯಕೊಡುತ್ತಾನೆ. ಆತನು ಇಂಪಾದ ರೀತಿಯಲ್ಲಿ ನಮ್ಮ ಬಾಗಿಲುಗಳನ್ನು ತಟ್ಟುತ್ತಾನೆ. ಯೇಸು

ತನ್ನ ಮರ್ಯಾದೆಯಿಂದ ನನ್ನನ್ನು ತನ್ನ ಕಡೆಗೆ ಎಳೆದಿದ್ದಾನೆ," ಎಂದು ಹೇಳಿದನು. ಇದರಲ್ಲಿರುವ ಕ್ರಿಸ್ತನಿಗೂ ಕಮ್ಯುನಿಷ್ಟತ್ವಕ್ಕೂ ವ್ಯತ್ಯಾಸದಿಂದ ಅವನು ಸತ್ಯ ವನ್ನು ಗ್ರಹಿಸಿಕೊಂಡನು. ಇನ್ನೂ ಅನೇಕ ರಷ್ಯದವರು ಯೇಸುವಿನ ಈ ಸದ್ಗುಣದಿಂದ ಆತನ ಕಡೆಗೆ ತಿರುಗಿಕೊಂಡಿದ್ದಾರೆ. (ಸಭಾ ಪಾಲಕನಾದ ನಾನು ಅದರ ವಿಷಯವಾಗಿ ವಿಶೇಷವಾಗಿ ಯೋಚನೆ ಮಾಡಿರಲಿಲ್ಲ.)

ಪೇತ್ರನು ದೇವರ ಕಡೆಗೆ ತಿರುಗಿಕೊಂಡ ನಂತರ ಅನೇಕಾವರ್ತಿ ರೂಮೆ ನಿಯಾ ದೇಶದಿಂದ ರಷ್ಯಾದೇಶಕ್ಕೆ ಅಲ್ಲಿದ್ದ ಗುಪ್ತವಾದ ಸಭೆಗಳಿಗೋಸ್ಕರ ಕ್ರೈಸ್ತ ಸಾಹಿತ್ಯವನ್ನು ಬೇರೆ ಸಹಾಯವನ್ನು ತರುವದರಲ್ಲಿ ತನ್ನ ಸ್ವಾತಂತ್ರ್ಯ ವನ್ನೂ ಜೀವನವನ್ನೂ ಅಪಾಯದಲ್ಲಿ ಇಟ್ಟನು. ಕಡೆಯದಾಗಿ ಅವನು ಹಿಡಿ ಯಲ್ಪಟ್ಟನು. 1959 ನೆಯ ಇಸ್ವಿಯಲ್ಲಿ ಅವನು ಇನ್ನೂ ಸೆರೆಮನೆಯಲ್ಲಿ ದ್ದನು. ಅವನು ಇಹಲೋಕದಲ್ಲಿದ್ದಾನೋ ಪರಲೋಕದಲ್ಲಿದ್ದಾನೋ ನನಗೆ ಗೊತ್ತಿಲ್ಲ. ಅವನು ಈಗ ಎಲ್ಲಿದ್ದಾನೆಂದು ದೇವರೇ ಬಲ್ಲ.

ಅವನ ಹಾಗೆ ಇನ್ನೂ ಅನೇಕರು ದೇವರ ಕಡೆಗೆ ತಿರುಗಿಕೊಂಡರು. ಆದರೆ ಒಬ್ಬನನ್ನು ಕ್ರಿಸ್ತನ ಕಡೆಗೆ ಎಳೆದ ನಂತರ ಅವನು ಇತರರನ್ನು ಸಹ ಎಳೆಯು ವವನಾಗಿರಬೇಕೆಂದು ನಾವು ಪ್ರಯತ್ನಿಸಬೇಕು. ರಷ್ಯದವರು ದೇವರ ಕಡೆಗೆ ತಿರಿಗಿಕೊಂಡ ನಂತರ ಗುಪ್ತ ಸಭೆಗಳಲ್ಲಿ ದೇವರ ಸೇವಕರಾದರು. ಕ್ರಿಸ್ತನು ತಮಗೋಸ್ಕರ ತನ್ನ ಪ್ರಾಣವನ್ನು ಕೊಟ್ಟಿದ್ದರಿಂದ ಅವರು ಕ್ರಿಸ್ತನಿಗಾಗಿ ತಮ್ಮ ಪ್ರಾಣಗಳನ್ನು ಅಪಾಯದಲ್ಲಿಡಲು ಸಿದ್ಧರಾಗಿದ್ದರು.

## ಗುಲಾಮರಾದ ಜನಾಂಗದವರಲ್ಲಿ ನಮ್ಮ ಗುಪ್ತ ಸೇವೆ

ನಮ್ಮ ಎರಡನೆಯ ತರದ ಕೆಲಸ ಯಾವುದೆಂದರೆ ರೂಮೆನಿಯಾ ದೇಶ ದವರಲ್ಲಿ ನಾವು ಮಾಡಿದ ಸೇವೆ.

ಪ್ರಾರಂಭದಲ್ಲಿ ಕಮ್ಯುನಿಷ್ಟರು ಮೋಸಗಾರರಾಗಿ ಪ್ರೀತಿಯಿಂದ ಕ್ರೈಸ್ತ ಸಭೆಗಳ ನಾಯಕರನ್ನು ತಮ್ಮ ಕಡೆಗೆ ಎಳೆಯುತ್ತಿದ್ದರು. ಅನಂತರ ಅವರು ತಮ್ಮ ನಿಜ ಸ್ವಭಾವವನ್ನು ತೋರ್ಪಡಿಸಿದರು. ಹಿಂಸಾಕಾಲ ಪ್ರಾರಂಭವಾ ಯಿತು. ಅನೇಕರು ಪೊಲೀಸರಿಂದ ಹಿಡಿಯಲ್ಪಟ್ಟರು. ಯಾವ ರೀತಿಯಲ್ಲಿ ರಷ್ಯದವರಿಗೆ ಒಂದು ಆತ್ಮವನ್ನು ಕ್ರಿಸ್ತನ ಕಡೆಗೆ ತರುವದು ವಿಚಿತ್ರವಾದ ಸಂಗತಿ ಯಾಗಿತ್ತೋ ಅದೇ ರೀತಿಯಲ್ಲಿ ನಮಗೂ ಆಯಿತು.

ಅನಂತರ ನಾನು ಕ್ರಿಸ್ತನ ಕಡೆಗೆ ದೇವರ ಸಹಾಯದಿಂದ ಬರಮಾಡಿದ ವ್ಯಕ್ತಿಗಳ ಸಂಗಡ ಸೆರೆಮನೆಯಲ್ಲಿದ್ದೆನು. ಒಂದು ಸಮಯದಲ್ಲಿ ನನ್ನ ಸ್ವಂತ ಕೋಣೆಯಲ್ಲಿ ಒಬ್ಬ ಮನುಷ್ಯನಿದ್ದನು. ಅವನಿಗೆ ಆರು ಜನ ಮಕ್ಕಳಿದ್ದರು.

ತನ್ನ ಕ್ರೈಸ್ತ ವಿಶ್ವಾಸಕ್ಕಾಗಿ ಆತನು ಸೆರೆಯಾಳಾದನು. ಅವನ ಹೆಂಡತಿಗೂ ಮಕ್ಕಳಿಗೂ ಆಹಾರವಿರಲಿಲ್ಲ. ಅವರನ್ನು ತಿರುಗಿ ನೋಡಲಾರೆನೆಂದು ಅವನಿಗೆನಿಸಿತು. ನಾನು ಅವನನ್ನು—"ನಾನು ನಿನ್ನನ್ನು ಕ್ರಿಸ್ತನ ಕಡೆಗೆ ಬರಮಾಡಿದ್ದರಿಂದ ನಿಮ್ಮ ಕುಟುಂಬಕ್ಕೆ ಎಷ್ಟೋ ಕಷ್ಟವಾದದ್ದರಿಂದ ನನ್ನ ವಿಷಯವಾಗಿ ನಿಮ್ಮ ಮನಸ್ಸಿನಲ್ಲಿ ಕಹಿಯಾದ ಭಾವನೆಯಿದೆಯೋ ?" ಎಂದು ಕೇಳಿದೆನು. ಅವನು ನನಗೆ—"ನೀವು ಅತಿ ಶ್ರೇಷ್ಠವಾದ ಈ ರಕ್ಷಕನ ಕಡೆಗೆ ನನ್ನನ್ನು ಕರೆದುಕೊಂಡು ಬಂದದ್ದಕ್ಕಾಗಿ ನನ್ನ ಕೃತಜ್ಞತೆಯನ್ನು ವ್ಯಕ್ತಪಡಿಸುವದು ನನಗೆ ಸಾಧ್ಯವಿಲ್ಲ. ಇದು ಬೇರೆಯಾಗಲು ನನಗೆ ಏನೂ ಮನಸ್ಸಿಲ್ಲ," ಎಂದು ಉತ್ತರ ಕೊಟ್ಟನು.

ಈ ಹೊಸ ಪರಿಸ್ಥಿತಿಯಲ್ಲಿ ಕ್ರಿಸ್ತನನ್ನು ಪ್ರಚಾರಪಡಿಸುವದು ಸುಲಭವಾಗಿರಲಿಲ್ಲ. ನಾವು ಕೆಲವು ಚಿಕ್ಕ ಪುಸ್ತಕಗಳನ್ನು ಛಾಪಿಸಿದೆವು. ಯಾವದೊಂದು ಸಾಹಿತ್ಯವನ್ನು ಪ್ರಕಟಿಸುವದಕ್ಕಿಂತ ಮೊದಲು ಅದು ಕಮ್ಯುನಿಷ್ಟರ ಅಧಿಕಾರಿಗಳಿಂದ ಪರೀಕ್ಷಿಸಲ್ಪಡಬೇಕಾಯಿತು. ನಾವು ಈ ಅಧಿಕಾರಿಗಳಿಗೆ ಒಂದು ಪುಸ್ತಕದ ಮೂಲ ಲೇಖನವನ್ನು ತೋರಿಸಿದೆವು. ಅದರ ಮುಖಚಿತ್ರವು ಕಮ್ಯುನಿಷ್ಟ ತತ್ವದ ಸ್ಥಾಪಕನಾದ ಕಾರ್ಲ್ ಮಾರ್ಕ್ಸ್‌ನದಿತ್ತು. ಅಂಥ ಪುಸ್ತಕಗಳಿಗೆ—"ಧರ್ಮವು ಜನಕ್ಕೆ ಅಫು" ಎಂಬ ಹೆಸರಿನ ಹಾಗೆ ಹೆಸರುಗಳನ್ನು ಕೊಟ್ಟೆವು. ಅವು ಕಮ್ಯುನಿಷ್ಟರ ಪುಸ್ತಕಗಳೆಂದು ಯೋಚಿಸಿ ಅವುಗಳನ್ನು ಮುದ್ರಿಸಲಿಕ್ಕೆ ನಮಗೆ ಅಪ್ಪಣೆ ಕೊಟ್ಟನು. ಆದರೆ ಮೊದಲನೆಯ ಕೆಲವು ಪುಟಗಳಲ್ಲಿ ಮಾತ್ರ ಮಾರ್ಕ್ಸ್, ಸ್ಟ್ಯಾಲಿನ್ ಹಾಗೂ ಲೆನಿನ್ ರವರ ಮಾತುಗಳು ಬರೆಯಲ್ಪಟ್ಟಿದ್ದವು. ಉಳಿದ ಭಾಗದಲ್ಲಿ ಕ್ರಿಸ್ತನ ವಿಷಯವಾಗಿರುವ ನಮ್ಮ ಸಂದೇಶವಿತ್ತು.

ಗುಪ್ತ ಸಭೆಯ ಕಾರ್ಯದಲ್ಲಿ ಸ್ವಲ್ಪ ಭಾಗ ಬಹಿರಂಗವಾಗಿತ್ತು. ಲೋಕದ ಚಳಿಯುಳ್ಳ ಭಾಗಗಳಲ್ಲಿ ಸಮುದ್ರದಲ್ಲಿ ಅನೇಕ ನೀರ್ಗಲ್ಲ ಗುಡ್ಡಗಳು ಇವೆ. ಅವುಗಳಲ್ಲಿ $\frac{1}{10}$ ಮಾತ್ರ ಕಾಣಿಸಿಕೊಳ್ಳುತ್ತದೆ. ಉಳಿದ ಭಾಗ ನೀರಿನ ಕೆಳಗೆ ಇದೆ. ನಮ್ಮ ಕೆಲಸ ಹಾಗಿತ್ತು. ನಾವು ಕಮ್ಯುನಿಷ್ಟರ ಸಭೆಗಳಿಗೆ ಹೋಗಿ ಈ ಪುಸ್ತಕಗಳನ್ನು ಹಂಚಿಕೊಟ್ಟೆವು. ಮಾರ್ಕ್ಸ್‌ನ ಚಿತ್ರವನ್ನು ನೋಡಿ ಕಮ್ಯುನಿಷ್ಟರು ಆತುರದಿಂದ ಆ ಪುಸ್ತಕಗಳನ್ನು ಕೊಂಡುಕೊಂಡರು. ಅವರು ಹತ್ತನೆಯ ಪುಟದ ವರೆಗೆ ಓದಿ ಆ ಪುಸ್ತಕ ನಿಜವಾಗಿ ದೇವರ ಹಾಗೂ ಕ್ರಿಸ್ತನ ವಿಷಯವಾಗಿದೆಯೆಂದು ತಿಳಿದುಕೊಳ್ಳುವದರೊಳಗಾಗಿ ನಾವು ದೂರವಾಗಿರುತ್ತಿದ್ದೆವು.

ಇಂಥ ಸ್ಥಿತಿಯಲ್ಲಿ ಸುವಾರ್ತಾ ಪ್ರಚಾರವು ಕಠಿಣವಾಗಿತ್ತು. ನಮ್ಮ ಜನರ ಮೇಲೆ ಕಠಿಣವಾದ ಭಾರವಿತ್ತು. ಕಮ್ಯುನಿಷ್ಟರು ಎಲ್ಲರ ಕಡೆಯಿಂದ

ಎಲ್ಲಾ ಸೊತ್ತನ್ನು ಕಸೆದುಕೊಂಡರು. ಅವರು ಒಕ್ಕಲಿಗನಿಂದ ಅವನ ಹೊಲಗಳನ್ನು ಕುರುಬನಿಂದ ಕುರಿಗಳನ್ನೂ ನಾವಲಿಕನಿಂದ ಅಥವಾ ಸಿಂಪಿಗ (ಹೊಲಿಗೆಯವ) ನಿಂದ ಅವನ ಅಂಗಡಿಯನ್ನೂ ವಶಪಡಿಸಿಕೊಳ್ಳುತ್ತಿದ್ದರು. ಶ್ರೀಮಂತರಿಗೆ ಮಾತ್ರವಲ್ಲದೇ ಬಡವರಿಗೆ ಸಹ ಅತಿ ತೀವ್ರವಾದ ಕಷ್ಟವಿತ್ತು. ಹೆಚ್ಚು ಕಡಿಮೆ ಪ್ರತಿಯೊಂದು ಮನೆಯಿಂದ ಯಾರಾದರೂ ಸೆರೆಮನೆಯಲ್ಲಿದ್ದರು. ದರಿದ್ರತನ ಹೆಚ್ಚಾಗಿತ್ತು. ಜನರು ನಮಗೆ--"ಪ್ರೀತಿಸ್ವರೂಪನಾದ ದೇವರು ಈ ರೀತಿಯಲ್ಲಿ ದುಷ್ಟತನಕ್ಕೆ ವಿಜಯಕೊಡುವದು ಹೇಗೆ ಸಾಧ್ಯ ?" ಎಂಬ ಪ್ರಶ್ನೆಗಳನ್ನೂ ಹಾಕಿದರು. ಆದರೆ ಯೇಸು ಶುಭಶುಕ್ರವಾರ ದಿನದಲ್ಲಿ ಶಿಲುಬೆಯ ಮೇಲೆ—"ನನ್ನ ದೇವರೇ, ನನ್ನ ದೇವರೇ, ನೀನು ನನ್ನನ್ನು ಯಾಕೆ ಕೈಬಿಟ್ಟಿದ್ದೀ ?" ಎಂದು ಕೂಗಿ ತನ್ನ ಪ್ರಾಣವನ್ನು ಕೊಟ್ಟನಂತರ ಆತನ ವಿಷಯವಾಗಿ ಪ್ರಸಂಗಮಾಡುವದು ಅಪೊಸ್ತಲರಿಗೆ ಸುಲಭವಾಗುತ್ತಿರಲಿಲ್ಲ. ಆದರೆ ಈ ಕೆಲಸ ನಿಜವಾಗಿ ನಡೆಯಿತು. ಅದು ನಮ್ಮಿಂದಾಗದೇ ದೇವರಿಂದ ನಡೆಸಲ್ಪಟ್ಟಿತು. ಇಂಥ ಪ್ರಶ್ನೆಗಳಿಗೆ ಕ್ರೈಸ್ತ ವಿಶ್ವಾಸವು ಉತ್ತರಗಳನ್ನು ಕೊಡುತ್ತದೆ.

ಯೇಸು ಲಾಜರನ ವಿಷಯವಾಗಿ ನಮಗೆ ತಿಳಿಸಿದನು. ಯಾವ ರೀತಿಯಲ್ಲಿ ಅವನು ಕಷ್ಟಪಡುತ್ತಿದ್ದನೋ ಅದೇ ರೀತಿಯಲ್ಲಿ ನಾವು ಕಷ್ಟಪಡುತ್ತಾ ಇದ್ದೆವು. ಅವನು ಅಜಾರಿಯಾಗಿ ಹಸಿವೆಯಿಂದ ನರಳುತ್ತಾ ಸಾಯುತ್ತಿದ್ದಾಗ ನಾಯಿಗಳು ಬಂದು ಅವನ ಗಾಯಗಳನ್ನು ನೆಕ್ಕುತ್ತಿದ್ದವು. ಆದರೆ ಕಡೆಯಲ್ಲಿ ದೇವದೂತರು ಅವನನ್ನು ಪರಲೋಕಕ್ಕೆ ಒಯ್ದರು.

## ಗುಪ್ತ ಸಭೆಯ ಬಹಿರಂಗವಾದ ಸೇವೆ

ಗುಪ್ತ ಸಭೆಗಳು ಮನೆಗಳಲ್ಲಿಯೂ ಅರಣ್ಯಗಳಲ್ಲಿಯೂ ಹಾಗೂ ಅನುಕೂಲ ಸಿಕ್ಕ ಇನ್ನೂ ಅನೇಕ ತರದ ಸ್ಥಳಗಳಲ್ಲಿ ಕೂಡಿಬರುತ್ತಿದ್ದವು. ಅಲ್ಲಿ ಅವರು ಗುಪ್ತವಾದ ರೀತಿಯಲ್ಲಿ ತಮ್ಮ ಹೊರಗಿನ ಸೇವೆಗಾಗಿ ಯೋಜನೆಗಳನ್ನು ಮಾಡುತ್ತಿದ್ದರು. ನಾವು ಓಣಿಗಳಲ್ಲಿ ಆಗಾಗ ಸುವಾರ್ತೆಯನ್ನು ಸಾರುತ್ತಿದ್ದೆವು. ಈ ಕೆಲಸವು ನಿಜವಾಗಿ ಅಪಾಯಕರವಾಗಿತ್ತು. ಆದರೆ ಈ ರೀತಿಯಲ್ಲಿ ನಾವು ಬೇರೆ ಮಾರ್ಗದಿಂದ ಮುಟ್ಟಲಾರದ ಜನರಿಗೆ ನಾವು ಸುವಾರ್ತೆಯನ್ನು ತಿಳಿಸಿದೆವು. ನನ್ನ ಹೆಂಡತಿ ಈ ಕೆಲಸದಲ್ಲಿ ಪ್ರವೀಣಳಾಗಿದ್ದಳು. ಕೆಲವು ವಿಶ್ವಾಸಿಗಳು ಎರಡು ಓಣಿಗಳ ಮೂಲೆಯಲ್ಲಿ ಶಾಂತವಾಗಿ ಕುಳಿತುಕೊಂಡು ಹಾಡಲಿಕ್ಕೆ ಪ್ರಾರಂಭಿಸುತ್ತಿದ್ದರು. ಇಂಪಾದ ಗಾಯನಗಳನ್ನು ಕೇಳಲಿಕ್ಕೆ ಜನರು ಗುಂಪಾಗಿ ಕೂಡಿಬರುತ್ತಿದ್ದರು. ನನ್ನ ಹೆಂಡತಿ ಉಪದೇಶವನ್ನು ಮಾಡುತ್ತಿದ್ದಳು. ಪೊಲೀಸರು ಬರುವದಕ್ಕಿಂತ ಮೊದಲು ಆ ಸ್ಥಳವನ್ನು ಬಿಟ್ಟು ಹೋಗುತ್ತಿದ್ದೆವು.

ಒಂದು ದಿವಸ ಮಧ್ಯಾಹ್ನದಲ್ಲಿ ನಾನು ಮತ್ತೊಂದು ಸ್ಥಳದಲ್ಲಿದ್ದಾಗ ನನ್ನ ಹೆಂಡತಿ ಬೊಕಾರೆಸ್ಟ್ ಪಟ್ಟಣದಲ್ಲಿರುವ ಒಂದು ದೊಡ್ಡ ಕಾರಖಾನೆಯ ಹೆಬ್ಬಾಗಲಿನ ಹತ್ತಿರ ಸಾವಿರಾರು ಕೆಲಸಗಾರರಿಗೆ ಸಂದೇಶಕೊಟ್ಟಳು. ಆಕೆಯು ದೇವರ ಹಾಗೂ ರಕ್ಷಣೆಯ ವಿಷಯವಾಗಿ ಅವರ ಸಂಗಡ ಮಾತನಾಡಿದಳು. ಮರು ದಿವಸ ಕಮ್ಯುನಿಷ್ಟರ ಅನ್ಯಾಯದ ವಿರುದ್ಧವಾಗಿ ಕ್ರಾಂತಿಮಾಡಿದ ಅನೇಕ ಕೆಲಸದವರು ಕೊಲ್ಲಲ್ಪಟ್ಟರು. ಅವರು ಕಡೆಯ ಗಳಿಗೆಯಲ್ಲಿ ದೇವರ ಸಂದೇಶ ವನ್ನು ಕೇಳಿದರು.

ಗುಪ್ತ ಸಭಿಕರಾದ ನಾವು ಸ್ನಾನಿಕನಾದ ಯೋಹಾನನ ಹಾಗೆ ಬಹಿರಂಗ ವಾಗಿ ಕ್ರಿಸ್ತನ ವಿಷಯವಾಗಿ ಮನುಷ್ಯನಿಗೂ ಅಧಿಕಾರಿಗಳಿಗೂ ಮಾತನಾಡು ತ್ತಿದ್ದೆವು. ಒಂದು ದಿವಸ ನಮ್ಮ ಸರಕಾರದ ಕಟ್ಟಡಗಳ ಮೆಟ್ಟಲುಗಳ ಮೇಲೆ ನಿಂತುಕೊಂಡು ಇಬ್ಬರು ಕ್ರೈಸ್ತ ಸಹೋದರರು ನಮ್ಮ ಪ್ರಧಾನ ಮಂತ್ರಿಯನ್ನು ಭೇಟ್ಟಿಯಾದರು. ಕೆಲವು ನಿಮಿಷಗಳ ವರೆಗೆ ಅವರು ಕ್ರಿಸ್ತನ ವಿಷಯವಾಗಿ ಅವನಿಗೆ ಸಾಕ್ಷಿ ಕೊಟ್ಟರು. "ನೀವು ನಿಮ್ಮ ಪಾಪವನ್ನು ಬಿಟ್ಟುಬಿಟ್ಟು ದೇವರ ಕಡೆಗೆ ತಿರುಗಿಕೊಂಡು ದೇವಜನರ ಹಿಂಸೆಯನ್ನು ನಿಲ್ಲಿಸಬೇಕು," ಎಂದು ಅವರು ಹೇಳಿದರು. ಅವನು ಸಿಟ್ಟುಮಾಡಿ ಅವರಿಬ್ಬರನ್ನೂ ಸೆರೆಮನೆಯಲ್ಲಿ ಹಾಕಿಸಿ ದನು.

ಅನೇಕ ವರ್ಷಗಳ ಹಿಂದೆ ಅದೇ ಮುಖ್ಯ ಮಂತ್ರಿಯು ಸ್ವತಃ ಬಹಳ ಅಸ್ವಸ್ಥನಾಗಿದ್ದನು. ಆ ಸಮಯದಲ್ಲಿ ಆ ಇಬ್ಬರು ಸಹೋದರರು ಬಿತ್ತಿದ್ದ ಬೀಜವು ಫಲವನ್ನು ಕೊಟ್ಟಿತು. ಅಷ್ಟರೊಳಗೆ ಅವರಿಬ್ಬರಿಗೆ ಬಹಳ ಕಷ್ಟ ವಾಗಿತ್ತು. ಆದರೆ ಮುಖ್ಯಮಂತ್ರಿಯು ತನ್ನ ಕೊರತೆಯನ್ನು ತಿಳಿದುಕೊಂಡು ಅವರಿಬ್ಬರು ತನಗೆ ಹೇಳಿದ ಮಾತುಗಳನ್ನು ಜ್ಞಾಪಕಮಾಡಿಕೊಂಡನು. ದೇವರ ವಾಕ್ಯವು ಸಜೀವವಾದದ್ದು, ಬಲವುಳ್ಳದ್ದು, ಯಾವ ಇಬ್ಬಾಯಿ ಕತ್ತಿಗಿಂತಲೂ ಹದವಾದದ್ದು ಆಗಿದೆ. ಆ ವಾಕ್ಯವು ಅವನ ಹೃದಯದ ಕಾಠಿಣ್ಯವನ್ನು ಕೊಯ್ದು ಹಾಕಿತ್ತು. ಅವನು ತನ್ನ ಪಾಪಗಳನ್ನು ಒಪ್ಪಿಕೊಂಡು ರಕ್ಷಕನನ್ನು ಅಂಗೀಕರಿಸಿ ತನ್ನ ಜೀವನವನ್ನು ಆತನಿಗೆ ಸಮರ್ಪಿಸಿ ತಾನು ಅಸ್ವಸ್ಥನಾಗಿದ್ದರೂ ಕ್ರಿಸ್ತನನ್ನು ಸೇವಿಸಲಿಕ್ಕೆ ಪ್ರಾರಂಭಿಸಿದನು. ಸ್ವಲ್ಪ ವೇಳೆಯಾದ ನಂತರ ಅವನು ಸತ್ತು ತಾನು ಹೊಸದಾಗಿ ನಂಬಿದ ತನ್ನ ರಕ್ಷಕನ ಕಡೆಗೆ ಹೋದನು. ಅವನಿಗೆ ಸಾಕ್ಷಿಕೊಡಲಿಕ್ಕೆ ಈ ಇಬ್ಬರು ಸಹೋದರರು ಸಿದ್ಧವಾದ ಕಾರಣ ಹೀಗೆ ಆಯಿತು. ಈಗಿನ ಕಾಲದಲ್ಲಿ ಕಮ್ಯುನಿಷ್ಟ ದೇಶಗಳಲ್ಲಿ ಅನೇಕ ಕ್ರೈಸ್ತರು ಈ ರೀತಿಯಲ್ಲಿ ಧೈರ್ಯದಿಂದ ಸಾಕ್ಷಿಕೊಡುವವರಾಗಿದ್ದಾರೆ.

ಈ ರೀತಿಯಲ್ಲಿ ಗುಪ್ತಸಭಿಕರು ಗುಪ್ತವಾದ ಕೂಟಗಳಲ್ಲಿ ಮಾತ್ರವಲ್ಲದೇ ಬಹಿರಂಗವಾಗಿ ಓಣಿಗಳಲ್ಲಿಯೂ ಕಮ್ಯುನಿಷ್ಟರ ನಾಯಕರಿಗೂ ಸುವಾರ್ತೆಯನ್ನು

ಸಾರುತ್ತಿದ್ದರು. ಈ ಕಾರಣದಿಂದ ಅವರು ಕಷ್ಟಕ್ಕೆ ಗುರಿಯಾದರು. ನಾವು ಆವಾಗ ಆ ಕಷ್ಟವನ್ನು ಸಹಿಸಲು ಸಿದ್ಧರಾಗಿದ್ದೆವು. ಈ ಹೊತ್ತು ಗುಪ್ತ ಸಭಿಕರು ಆ ಕಷ್ಟವನ್ನು ತಾಳಲು ಸಿದ್ಧರಾಗಿದ್ದಾರೆ.

ಗುಪ್ತ ಪೊಲೀಸರು ಗುಪ್ತ ಸಭೆಯನ್ನು ಬಹಳವಾಗಿ ಹಿಂಸಿಸುತ್ತಿದ್ದರು. ಯಾಕೆಂದರೆ ಕ್ರೈಸ್ತ ನಂಬಿಕೆಯು ಕಮ್ಯುನಿಷ್ಟರ ತತ್ವಕ್ಕೆ ವಿರುದ್ಧವಾಗಿವೆಯೆಂದು ತಿಳಿದುಕೊಂಡರು. ಇಂಥ ಆತ್ಮಿಯ ಬಲದಿಂದ ಅವರ ನಾಸ್ತಿಕತ್ವದ ಅಧಿಕಾರವು ಕೆಡಿಸಲ್ಪಡುವದೆಂದು ಅವರಿಗೆ ಗೊತ್ತಾಯಿತು. ಸೈತಾನನು ಗ್ರಹಿಸಿಕೊಳ್ಳುವ ಹಾಗೆ ವಿಶ್ವಾಸಿಗಳು ಅವರ ಕಾರ್ಯಕ್ಕೆ ವಿರುದ್ಧವಾಗಿದ್ದಾರೆಂದು ಆ ಗುಪ್ತ ಪೊಲೀಸರು ಗ್ರಹಿಸಿಕೊಂಡರು. ಕ್ರಿಸ್ತನಲ್ಲಿ ನಂಬಿಕೆಯಿಡುವವನು ಯೋಚನೆ ಮಾಡದೆ ಸುಮ್ಮನೆ ನಾಸ್ತಿಕತ್ವಕ್ಕೆ ಆಧೀನರಾಗುವದಿಲ್ಲವೆಂದು ಅವರಿಗೆ ಗೊತ್ತಾಯಿತು. ದೇವರಲ್ಲಿರುವ ನಂಬಿಕೆಯನ್ನು ಸೆರೆಮನೆಯಲ್ಲಿ ಹಾಕುವದು ಸಾಧ್ಯವಿಲ್ಲವೆಂದು ಅವರಿಗೆ ಗೊತ್ತಾಯಿತು. ಆದರೆ ಮನುಷ್ಯರನ್ನು ಹಾಕಲಿಕ್ಕೆ ಸಾಧ್ಯವಿತ್ತು. ಈ ರೀತಿಯಲ್ಲಿ ಅವರು ನಮ್ಮನ್ನು ವಿರೋಧಿಸುತ್ತಿದ್ದರು. ಆದರೆ ಗುಪ್ತ ಸಭೆಯ ಸದಸ್ಯರೂ ಸಹಾಯಕರೂ ಕಮ್ಯುನಿಷ್ಟರ ಸರಕಾರ ದಲ್ಲಿಯೂ ಗುಪ್ತ ಪೊಲೀಸಿನವರಲ್ಲಿಯೂ ಇದ್ದಾರೆ.

ನಮ್ಮ ಸೂಚನೆಯ ಪ್ರಕಾರವಾಗಿ ವಿಶ್ವಾಸಿಗಳು ಗುಪ್ತ ಪೊಲೀಸರಲ್ಲಿ ಸೇರಿ ದರು. ನಮ್ಮ ದೇಶದಲ್ಲಿ ಎಲ್ಲಕ್ಕಿಂತಲೂ ದ್ವೇಷಿಸಲ್ಪಟ್ಟ ಹಾಗೂ ಹೀನೈಯಿ ಸಲ್ಪಟ್ಟ ಸಮವಸ್ತ್ರವನ್ನು ಅವರು ಧರಿಸಿಕೊಂಡರು. ಯಾಕೆಂದರೆ ಈ ರೀತಿ ಯಲ್ಲಿ ಗುಪ್ತ ಪೊಲೀಸರ ಯೋಚನೆಗಳನ್ನು ಗುಪ್ತ ಸಭಿಕರಿಗೆ ತಿಳಿಸಲು ಅವರಿಗೆ ಸಾಧ್ಯವಿತ್ತು. ಕೆಲವು ಸಹೋದರರು ತಮ್ಮ ನಂಬಿಕೆಯನ್ನು ಮುಚ್ಚಿಟ್ಟು ಹಾಗೆ ಮಾಡಿದರು. ಅವರು ತಮ್ಮ ಸ್ವಂತ ಮನೆಯುವರಿಂದಲೂ ಸ್ನೇಹಿತ ರಿಂದಲೂ ತಂಚ್ಚವೆಂದೆಣಿಸಲ್ಪಟ್ಟರು. ಅವರಿಗೂ ತಮ್ಮ ನಿಜವಾದ ಉದ್ದೇಶ ವನ್ನು ಇಂಥವರು ತಿಳಿಸದೆ ಹೋದರು. ಆದರೆ ಕ್ರಿಸ್ತನನ್ನು ಪ್ರೀತಿಸಿ ಅವರು ಹಾಗೆ ಮಾಡಲು ಸಿದ್ಧರಾಗಿದ್ದರು.

ನಾನು ಓಣಿಯಲ್ಲಿ ಹಿಡಿಯಲ್ಪಟ್ಟ ನಂತರ ಕೆಲವು ವರ್ಷಗಳ ವರೆಗೆ ಅತಿ ಗುಪ್ತವಾದ ರೀತಿಯಲ್ಲಿ ಸೆರೆಮನೆಯಲ್ಲಿ ಇಡಲ್ಪಟ್ಟಿದ್ದೆನು. ನಾನು ಎಲ್ಲಿ ಇದ್ದೇ ನೆಂಬುದನ್ನು ತಿಳಿದುಕೊಳ್ಳುವಂತೆ ಒಬ್ಬ ಕ್ರೈಸ್ತ ಡಾಕ್ಟರನು ಗುಪ್ತ ಪೊಲೀಸಿನ ಸದಸ್ಯನಾದನು. ಈ ರೀತಿಯಲ್ಲಿ ಎಲ್ಲಾ ಕೈದಿಗಳ ಕೋಣೆಗಳಿಗೆ ಹೋಗಲು ಅವನಿಗೆ ಅನುಕೂಲವಿತ್ತು. ನನ್ನನ್ನು ಹುಡುಕುವದು ಅವನ ಉದ್ದೇಶವಾ ಗಿತ್ತು. ಅವನು ಕಮ್ಯುನಿಷ್ಟನಾಗಿದ್ದಾನೆಂದು ನಂಬಿ ಅವನ ಸ್ನೇಹಿತರೆಲ್ಲರೂ ಅವನನ್ನು ತ್ಯಜಿಸಿಬಿಟ್ಟರು. ಯಾಕೆಂದರೆ ಕೈದಿಯ ಸಮವಸ್ತ್ರವನ್ನು ಧರಿಸಿ ಕೊಳ್ಳುವದಕ್ಕಿಂತ ಕ್ರಿಸ್ತನಿಗಾಗಿ ಹಿಂಸಕರ ಸಮವಸ್ತ್ರವನ್ನು ಹಾಕಿಕೊಳ್ಳುವದು ಹೆಚ್ಚಿನ ತ್ಯಾಗವಾಗಿದೆ.

ಸೆರೆಮನೆಯ ಕೆಳಗಿನ ಭಾಗದಲ್ಲಿದ್ದ ಕತ್ತಲು ಕೋಣೆಯಲ್ಲಿ ನಾನು ಆ ಡಾಕ್ಟರಿಗೆ ಸಿಕ್ಕಿದೆನು. ನಾನು ಎಂಟುವರೆ ವರ್ಷ ಸೆರೆಮನೆಯಲ್ಲಿದ್ದಾಗ ನನ್ನನ್ನು ಭೆಟ್ಟಿಯಾದವರಲ್ಲಿ ಅವನು ಮೊದಲನೆಯ ಮಿತ್ರನಾಗಿದ್ದನು. ನಾನು ಇನ್ನೂ ಜೀವಂತನಾಗಿದ್ದೇನೆಂದು ಅವನು ಇತರ ವಿಶ್ವಾಸಿಗಳಿಗೆ ತಿಳಿಸಿದನು. ಈ ರೀತಿ ಯಲ್ಲಿ ನನ್ನ ವಿಷಯವಾಗಿ ಅನೇಕರಿಗೆ ಗೊತ್ತಾಯಿತು. 1956 ರಲ್ಲಿ ರಷ್ಯ ಮುಖ್ಯಮಂತ್ರಿಯಾದ ಕ್ರುಶ್ಚೆವ್‌ನಿಗೂ ಅಮೆರಿಕದ ಅಧ್ಯಕ್ಷನಾದ ಐಸನ್ ಹವರ ನಿಗೂ ಸ್ವಲ್ಪ ವೇಳೆಯ ವುಟ್ಟಿಗೆ ವಿರೋಧತ್ವ ಕಡಿಮೆಯಾಯಿತು. ಅನೇಕ ಕೈದಿಗಳಿಗೆ ಬಿಡುಗಡೆ ಸಿಕ್ಕಿತು. ನನಗೆ ಸಹ ಬಿಡುಗಡೆ ಸಿಕ್ಕುವಂತೆ ಕ್ರೈಸ್ತರು ವಿನಂತಿ ಮಾಡಿದರು. ಸ್ವಲ್ಪ ವೇಳೆಯ ವರೆಗೆ ನನಗೆ ಬಿಡುಗಡೆ ಸಿಕ್ಕಿತು. ನನ್ನನ್ನು ಹುಡುಕುವದಕ್ಕೋಸ್ಕರ ಈ ಕ್ರೈಸ್ತ ಡಾಕ್ಟರನು ಗುಪ್ತ ಪೊಲೀಸರಲ್ಲಿ ಸೇರದಿದ್ದರೆ ನನಗೆ ಬಿಡುಗಡೆ ಸಿಕ್ಕುತ್ತಿರಲಿಲ್ಲ. ಇಂದು ನಾನು ಸೆರೆಮನೆಯ ಲ್ಲಾಗಲಿ ಸಮಾಧಿಯಲ್ಲಾಗಲಿ ಇರುತ್ತಿದ್ದೆನು.

ಗುಪ್ತ ಪೊಲೀಸರಲ್ಲಿರುವ ಈ ಗುಪ್ತ ಸಭಿಕರು ಅನೇಕಾವರ್ತಿ ನಮಗೆ ಎಚ್ಚರಿಗೆ ಕೊಟ್ಟು, ಬಹಳ ಸಹಾಯವನ್ನು ನೀಡಿದರು. ಇಂದಿನ ವರೆಗೂ ಆ ಗುಪ್ತ ಸಭೆಯ ಕೆಲವು ಸದಸ್ಯರು ಗುಪ್ತ ಪೊಲೀಸರಲ್ಲಿ ಸೇವೆಮಾಡಿ ವಿಶ್ವಾಸಿ ಗಳನ್ನು ಕಾಯುತ್ತಾ ಎಚ್ಚರಿಸುತ್ತಾ ಇದ್ದಾರೆ. ಕೆಲವರು ಕಮ್ಯುನಿಷ್ಟರ ಪಕ್ಷ ದಲ್ಲಿ ಪ್ರಮುಖರಾಗಿದ್ದಾರೆ. ಅವರು ತಮ್ಮ ನಂಬಿಕೆಯನ್ನು ಮುಚ್ಚಿಟ್ಟು ವಿಶ್ವಾಸಿಗಳಿಗೆ ಬಹಳ ಸಹಾಯಮಾಡುತ್ತಿದ್ದಾರೆ. ಇಹಲೋಕದಲ್ಲಿ ಅವರು ಗುಪ್ತವಾಗಿ ಸೇವಿಸುವ ಕ್ರಿಸ್ತನನ್ನು ಪರಲೋಕದಲ್ಲಿ ಅವರು ಬಹಿರಂಗವಾಗಿ ಪ್ರಸಿದ್ಧಿಪಡಿಸುವರು.

ಆದಾಗ್ಯೂ ಅನೇಕ ಗುಪ್ತ ಸಭಿಕರು ಪೊಲೀಸರಿಗೆ ಸಿಕ್ಕು ಹಿಡಿಯಲ್ಪಟ್ಟರು. ಇಸ್ಕರಿಯೋತ ಯೂದನ ಹಾಗೆ ನಮ್ಮಲ್ಲಿ ಕೆಲವರು ದ್ರೋಹಿಗಳಾಗಿ ನಮ್ಮನ್ನು ಗುಪ್ತ ಪೊಲೀಸರ ಕೈಗೆ ಒಪ್ಪಿಸಿಕೊಟ್ಟರು. ಕಮ್ಯುನಿಷ್ಟರು ಕ್ರೈಸ್ತ ಸೇವಕರನ್ನೂ ಸಹೋದರರನ್ನೂ ಹೊಡೆಯುತ್ತಾ ಹಿಂಸಿಸುತ್ತಾ ಹೆದರಿಸುತ್ತಾ ಇರುವದರಿಂದ ಅವರ ಜೊತೆ ವಿಶ್ವಾಸಿಗಳ ಸಂಬಂಧವಾಗಿ ಸಮಾಚಾರವನ್ನು ಕೊಡುವ ಜನ ರನ್ನು ಹುಡುಕುತ್ತಿದ್ದರು.

# ಅಧ್ಯಾಯ—೨

ನಾನು ಹೊರಗಿನ ಹಾಗೂ ಗುಪ್ತವಾದ ರೀತಿಯಲ್ಲಿ ಫೆಬ್ರವರಿ 29, 1948 ವರೆಗೆ ಸೇವೆಮಾಡುತ್ತಿದ್ದೆನು. ಅದು ಸುಂದರವಾದ ರವಿವಾರವಾಗಿತ್ತು. ನಾನು ಸಭಾಸ್ಥಾನಕ್ಕೆ ಹೋಗುತ್ತಿರುವಾಗ ಓಣಿಯಲ್ಲಿ ಗುಪ್ತ ಪೊಲೀಸರಿಂದ ಹಿಡಿಯಲ್ಪಟ್ಟೆನು. ಕಮ್ಯುನಿಷ್ಟರು ಆ ಸಮಯದಲ್ಲಿ ಅನೇಕರನ್ನು ಅದೇ ರೀತಿಯಲ್ಲಿ ಹಿಡಿದರು. ಗುಪ್ತ ಪೊಲೀಸರ ಒಂದು ಮೋಟರ್ ವ್ಯಾನ್ ನನ್ನ ಮುಂದೆ ನಿಂತುಕೊಂಡಿತು. ನಾಲ್ವರು ಹೊರಗೆ ಬಂದು ನನ್ನನ್ನು ಹಿಡಿದು ವ್ಯಾನಿನಲ್ಲಿ ನೂಕಿದರು. ಅನೇಕ ವರ್ಷ ನಾನು ಕೈದಿಯಾದೆನು. ಎಂಟುವರ್ಷಗಳ ವರೆಗೆ ನಾನು ಜೀವಂತನಾಗಿದ್ದೆನೋ ಸತ್ತಿದ್ದೆನೋ ಎಂಬುದು ಯಾರಿಗೂ ಗೊತ್ತಿರಲಿಲ್ಲ. ಗುಪ್ತ ಪೊಲೀಸರು ನನ್ನ ಹೆಂಡತಿಯನ್ನು ಭೆಟ್ಟಿಯಾದರು. ತಾವು ಈಗ ಬಿಡುಗಡೆ ಹೊಂದಿದ ಕೈದಿಗಳಾಗಿದ್ದೇವೆಂದು ನಟಿಸಿದರು. ಅವರು ನನ್ನ ಉತ್ತರ ಕ್ರಿಯೆಗಳನ್ನು ನೋಡಿದ್ದೇವೆಂದು ಹೇಳಿದರು. ನನ್ನ ಹೆಂಡತಿಗೆ ಅತಿಶಯ ದುಃಖವಾಯಿತು.

ಆ ಸಮಯದಲ್ಲಿ ಎಲ್ಲಾ ಸಭೆಗಳಿಂದ ಸಾವಿರಾರು ಜನರು ಸೆರೆಮನೆಯಲ್ಲಿ ಹಾಕಲ್ಪಟ್ಟರು. ಉಪದೇಶಕರು ಮಾತ್ರವಲ್ಲದೇ ತಮ್ಮ ವಿಶ್ವಾಸದ ವಿಷಯವಾಗಿ ಸಾಕ್ಷಿಕೊಟ್ಟ ಬಡವರೂ ಯೌವನಸ್ಥರೂ ಹೆಣ್ಣು ಮಕ್ಕಳೂ ಸೆರೆಮನೆಯಲ್ಲಿ ಹಾಕಲ್ಪಟ್ಟರು. ಸೆರೆಮನೆಗಳು ತುಂಬಿಹೋದವು. ಉಳಿದ ಎಲ್ಲಾ ಕಮ್ಯುನಿಷ್ಟರ ದೇಶದ ಹಾಗೆ ರೂಮೇನಿಯಾ ದೇಶದಲ್ಲಿ ಸಹ ಸೆರೆಮನೆಯಲ್ಲಿರುವವರೆಲ್ಲರೂ ಹಿಂಸೆಯನ್ನು ತಾಳಬೇಕಾಯಿತು. ಕೆಲವು ಹಿಂಸೆಗಳು ಅತಿಭಯಂಕರವಾಗಿದ್ದವು. ನಾನು ತಾಳಿದ ಎಲ್ಲಾ ಹಿಂಸೆಗಳ ವಿಷಯವಾಗಿ ಮಾತನಾಡುವ ಮನಸ್ಸು ನನಗಿಲ್ಲ. ಯಾಕೆಂದರೆ ಹಾಗೆ ಮಾಡಿದರೆ ನನಗೆ ರಾತ್ರಿ ನಿದ್ರೆಬರುವದಿಲ್ಲ. ಇದು ಬಹಳ ಮನೋ ದುಃಖವನ್ನು ಕೊಡುತ್ತದೆ.

## ಅತಿ ಭಯಂಕರವಾದ ಹಿಂಸೆಗಳು

ಫ್ಲರೆಸ್ಕ್ಯೂ ಎಂಬ ಪಾಲಕನು ಅಂಥ ಹಿಂಸೆಯನ್ನು ತಾಳಿದನು. ಅವರು ಕಬ್ಬಿಣದ ಸಲಾಕೆಯನ್ನು ಬೆಂಕಿಯಲ್ಲಿ ಕಾಯಿಸಿ ಅದರಿಂದಲೂ ಕತ್ತಿಗಳಿಂದಲೂ ಅವನನ್ನು ಚುಚ್ಚಿದರು. ಅವನು ಚೆನ್ನಾಗಿ ಹೊಡೆಯಲ್ಪಟ್ಟನು. ಅನಂತರ ಒಂದು ನಳದಿಂದ ಹಸಿವೆಪಡುವ ಇಲಿಗಳು ಅವನ ಕೈದಿ ಕೋಣೆಯಲ್ಲಿ ಓಡಿಸಲ್ಪಟ್ಟವು. ಅವನಿಗೆ ನಿದ್ರೆ ಮಾಡಲಿಕ್ಕೆ ಸಾಧ್ಯವಿರಲಿಲ್ಲ. ಯಾಕೆಂದರೆ ಅವನು ಒಂದು ನಿಮಿಷವಾದರೂ ವಿಶ್ರಮಿಸಿಕೊಂಡರೆ ಆ ಇಲಿಗಳು ಅವನನ್ನು ಕಚ್ಚಲು ತೊಡಗುತ್ತಿದ್ದವು. ಎರಡು ವಾರ ಹಗಲಿರುಳು ಅವನು ನಿಂತುಕೊಳ್ಳಬೇಕಾಯಿತು. ಅವನು ಅವನ ಸಹೋದರರ ವಿಷಯವಾಗಿ ತಮಗೆ ಗುಪ್ತ ತಿಳುವಳಿಕೆಯನ್ನು

ಕೊಡಬೇಕೆಂದು ಕಮ್ಯುನಿಷ್ಟರು ಅಪೇಕ್ಷಿಸಿದರು. ಆದರೆ ಅವನು ಸ್ಥಿರವಾಗಿ ನಿಂತು ಅದಕ್ಕೆ ಒಪ್ಪಲಿಲ್ಲ.

ಕಡೆಯದಾಗಿ ಅವರು ಆ ಪಾಲಕನ ಹದಿನಾಲ್ಕು ವರ್ಷದ ಮಗನನ್ನು ತಂದು ಅವನ ಮುಂದೆ ಹೊಡೆಯಲಿಕ್ಕೆ ಪ್ರಾರಂಭಿಸಿದರು. ಅವರು ಅವನಿಗೆ— "ನೀನು ನಮಗೆ ಬೇಕಾಗುವ ತಿಳುವಳಿಕೆಯನ್ನು ಕೊಡುವ ತನಕ ನಾನು ನಿನ್ನ ಮಗನನ್ನು ಹೊಡೆಯುತ್ತಾ ಇರುವೆವು," ಎಂದು ಹೇಳಿದರು. ಆ ಮನುಷ್ಯ ದುಃಖದಿಂದ ಭ್ರಾಂತಿಗೊಂಡು ಸಾಧ್ಯವಾದಷ್ಟು ಅದನ್ನು ತಾಳಿದನು. ಕಡೆಯದಾಗಿ ಅವನು ತನ್ನ ಮಗನಿಗೆ—"ಅಲೆಕ್ಸಾಂಡರಾ, ಅವರಿಗೆ ಬೇಕಾದ ತಿಳುವಳಿಕೆಯನ್ನು ನಾನು ಕೊಡಲೇ ಬೇಕು. ನಿನ್ನನ್ನು ಹೊಡೆಯುವದನ್ನು ನೋಡುವದು ನನ್ನಿಂದಾಗದು," ಎಂದು ಹೇಳಿದನು. ಅವನ ಮಗನು—"ಅಪ್ಪಾ, ನನ್ನ ತಂದೆಯು ದ್ರೋಹಿಯಾಗುವ ಅಪಮಾನವು ನನಗೆ ಹಿಡಿಸಲಾರದು. ಸ್ಥಿರವಾಗಿ ನಿಂತುಕೋ. ಅವರು ನನ್ನನ್ನು ಕೊಂದುಹಾಕಿದರೆ ನಾನು ಯೇಸುವಿನ ಹೆಸರನ್ನು ನಮ್ಮ ಸ್ವದೇಶದ ಹೆಸರನ್ನೂ ಹೇಳಿಕೊಂಡು ಸಾಯುವೆನು," ಎಂದು ಉತ್ತರ ಕೊಟ್ಟನು. ಕಮ್ಯುನಿಷ್ಟರು ಸಿಟ್ಟಾಗಿ ಆ ಹುಡುಗನ ಮೇಲೆ ಬಿದ್ದು, ಅವನನ್ನು ಹೊಡೆದು ಕೊಂದುಹಾಕಿದರು. ಕೋಣೆಯ ಗೋಡೆಗಳ ಮೇಲೆ ಅವನ ರಕ್ತವು ಚಿಮ್ಮುತ್ತಿತ್ತು. ಆ ಹುಡುಗನು ದೇವರ ಸ್ತೋತ್ರಮಾಡಿ ಪ್ರಾಣಬಿಟ್ಟನು. ಆದರೆ ಈ ಭಯಂಕರವಾದ ನೋಟದಿಂದ ನಮ್ಮ ಪ್ರಿಯ ಸಹೋದರನಾದ ಫ್ಲರೆಸ್ಕ್ಯುವಿಗೆ ಶಾಶ್ವತವಾದ ಪರಿಣಾಮವಾಯಿತು.

ಅವರು ನಮ್ಮ ಮಣಿಕಟ್ಟುಗಳಿಗೆ (ಕೈಗಳಿಗೆ) ಬೇಡಿಗಳನ್ನು ಹಾಕಿದ್ದರು. ಅವುಗಳ ಒಳಬಾಗದಲ್ಲಿ ತೀಕ್ಷ್ಣವಾದ ಮೊಳೆಗಳಿದ್ದವು. ನಾವು ಸ್ವಲ್ಪವಾದರೂ ಚಲಿಸದೇ ನಿಂತರೆ ಆ ಮೊಳೆಗಳು ನಮಗೆ ಚುಚ್ಚುತ್ತಿರಲಿಲ್ಲ. ಆದರೆ ಚಳಿಯುಳ್ಳ ಕೋಣೆಗಳಲ್ಲಿ ನಾವು ಚಳಿಗಾಲದಲ್ಲಿ ನಡುಗುತ್ತಿದ್ದರೆ ನಮ್ಮ ಮಣಿಕಟ್ಟುಗಳು ಆ ಮೊಳೆಗಳಿಂದ ಗಾಯವಾಗುತ್ತಿದ್ದವು.

ಕೆಲವು ಕ್ರೈಸ್ತರು ಹಗ್ಗಗಳಿಂದ ತಲೆ ಕೆಳಗಾಗಿ ತೂಗುಹಾಕಲ್ಪಟ್ಟಿದ್ದರು. ಅವರ ದೇಹಗಳು ಹೊಯ್ದಾಡುವ ಹಾಗೆ ಅವರು ಚೆನ್ನಾಗಿ ಹೊಡೆಯಲ್ಪಟ್ಟರು. ಕೆಲವು ಕ್ರೈಸ್ತರು ರೆಫ್ರಿಜಿರೆಟರಿನ ಹಾಗಿರುವ ಕೋಣೆಗಳಲ್ಲಿ ಹಾಕಲ್ಪಟ್ಟರು. ಅವುಗಳ ಗೋಡೆಗಳ ಮೇಲೆ ಬರ್ಫವಿತ್ತು. ನಾನು ಅಲ್ಪ ಸ್ವಲ್ಪ ಬಟ್ಟೆಗಳನ್ನು ಧರಿಸಿಕೊಂಡವನಾಗಿ ಅಂಥ ಕೋಣೆಯಲ್ಲಿ ಹಾಕಲ್ಪಟ್ಟೆನು. ಸೆರೆಮನೆಯ ಡಾಕ್ಟರರು ಒಂದು ತೂತಿನಿಂದ ಒಳಗೆ ನೋಡುತ್ತಿದ್ದರು. ಯಾರಾದರೂ ಚಳಿಯಿಂದ ಸಾಯಬಹುದೆಂದು ಕಂಡುಬಂದರೆ ಡಾಕ್ಟರರು ಕಾವಲುಗಾರರಿಗೆ ಸೂಚನೆ ಕೊಡುತ್ತಿದ್ದರು. ಕಾವಲುಗಾರರು ಒಳಗೆ ಬಂದು ನಮ್ಮನ್ನು ಹೊರಗೆ ಕರೆದುಕೊಂಡು ನಮ್ಮನ್ನು ಕಾಯಿಸುತ್ತಿದ್ದರು. ನಮ್ಮ ಮೈಗಳು

ಬೆಚ್ಚಗಾದ ಕೂಡಲೇ ನಮ್ಮನ್ನು ತಿರಿಗಿ ಚಳಿಯುಳ್ಳ ಕೋಣೆಗಳಲ್ಲಿ ಹಾಕು ತ್ತಿದ್ದರು. ಇದು ಮೇಲಿಂದ ಮೇಲೆ ಆಗುತ್ತಿತ್ತು. ನಾವು ಸಾಯುವ ಅಪಾಯದಲ್ಲಿ ಇರುವಂತೆ ನಮ್ಮನ್ನು ಚಳಿಮಾಡಿದ ನಂತರ ತಿರಿಗಿ ಕಾಯಿಸಿ ತಿರಿಗಿ ಚಳಿಯುಳ್ಳ ಕೋಣೆಯಲ್ಲಿ ಹಾಕುತ್ತಿದ್ದರು. ಅಂತ್ಯ ಯಾವಾಗ ಬರುವ ದೆಂಬುದು ನಮಗೆ ಗೊತ್ತಿರಲಿಲ್ಲ. ಇಂದಿನ ವರೆಗೆ ರೆಫ್ರಿಜಿರೆಟರಿನ ಬಾಗಿಲು ತೆರೆಯಲು ನನಗೆ ಮನಸ್ಸಿಲ್ಲ.

ಕ್ರೈಸ್ತರಾದ ನಾವು ಕಟ್ಟಿಗೆಯ ಪೆಟ್ಟಿಗೆಗಳಲ್ಲಿ ಇಡಲ್ಪಟ್ಟೆವು. ಆ ಪೆಟ್ಟಿಗೆ ಗಳು ನಮಗಿಂತ ಸ್ವಲ್ಪಮಾತ್ರ ದೊಡ್ಡದಾಗಿದ್ದವು. ನಮ್ಮ ದೇಹಗಳನ್ನು ಅಲುಗಾಡಿಸಲೂ ನಮಗಾಗುತ್ತಿರಲಿಲ್ಲ. ನೂರಾರು ತೀಕ್ಷ್ಣವಾದ ಮೊಳೆಗಳು ಆ ಪೆಟ್ಟಿಗೆಯ ಪ್ರತಿಯೊಂದು ಭಾಗದಲ್ಲಿ ಹೊಡೆಯಲ್ಪಟ್ಟಿದ್ದವು. ನಾವು ಚಲನೆಯಿಲ್ಲದೇ ನಿಂತುಕೊಂಡರೆ ನಮಗೆ ಏನೂ ಕಷ್ಟವಿರಲಿಲ್ಲ. ಆದರೆ ನಾವು ಅನೇಕ ಗಂಟೆಗಳ ವರೆಗೆ ಅಂಥ ಪೆಟ್ಟಿಗೆಗಳಲ್ಲಿ ನಿಲ್ಲಬೇಕಾಯಿತು. ನಾವು ದಣಿದು ಹೋಗಿ ಸ್ವಲ್ಪ ಮಟ್ಟಿಗೆ ಅಲುಗಾಡಿದರೆ ಆ ಮೊಳೆಗಳು ನಮಗೆ ಚುಚ್ಚುತ್ತಿದ್ದವು.

ಕಮ್ಯುನಿಷ್ಟರು ಕ್ರೈಸ್ತರಿಗೆ ಮಾಡಿದ ಹಿಂಸೆಗಳ ವರ್ಣನೆಯನ್ನು ಗ್ರಹಿಸು ವದು ಮನುಷ್ಯರಿಗಾಗದು. ಕೆಲವು ಕಮ್ಯುನಿಷ್ಟರು ಕ್ರೈಸ್ತರನ್ನು ಹಿಂಸಿಸು ತ್ತಿದ್ದಾಗ ಅತ್ಯಾನಂದಪಟ್ಟು—"ನಾವೇ ಸೈತಾನರು," ಎಂದು ಉದ್ಗರಿಸು ತ್ತಿದ್ದರು. ನಾವು ಮನುಷ್ಯಮಾತ್ರದವರ ವಿರುದ್ಧವಾಗಿ ಯುದ್ಧ ಮಾಡದೇ ಆತ್ಮಿಕ ದುಷ್ಟತನದ ವಿರುದ್ಧವಾಗಿಯೂ ಹೋರಾಡುವವರಾಗಿದ್ದೇವೆ. ಕಮ್ಯು ನಿಷ್ಟತ್ವವು ಮನುಷ್ಯರಿಂದಲ್ಲದೇ ಸೈತಾನನಿಂದ ಬಂತೆಂದು ನಾವು ತಿಳಿದು ಕೊಂಡೆವು. ಇದು ಒಂದು ಆತ್ಮಿಯ ದುಷ್ಟತ್ವವಿರುವದರಿಂದ ಆತ್ಮಿಯ ಬಲ ದಿಂದ ವಿರೋಧಿಸಲ್ಪಡಬೇಕಾಯಿತು. ಪವಿತ್ರಾತ್ಮನ ಬಲದಿಂದಲೇ ನಾವು ಅದನ್ನು ವಿರೋಧಿಸಬೇಕಾಯಿತು.

ನಾನು ಅನೇಕಾವರ್ತಿ ಹಿಂಸಕರನ್ನು—"ನಿಮ್ಮ ಹೃದಯಗಳಲ್ಲಿ ಕರುಣೆ ಇಲ್ಲವೋ ?" ಎಂದು ಕೇಳಿದೆನು. ಅವರು ಸಾಧಾರಣವಾಗಿ ಲೆನಿನ್ನನು ಬರೆದ ಒಂದು ಮಾತನ್ನು ಪ್ರತ್ಯುತ್ತರವಾಗಿ ಕೊಟ್ಟರು. ಅದೇನೆಂದರೆ--"ಆಮುಲೇಟ್ ಮಾಡಬೇಕಾದರೆ ತತ್ತಿಗಳ ಕವಚವನ್ನು ಮುರಿಯಬೇಕು. ಕಟ್ಟಿಗೆಯನ್ನು ಕೊಯ್ಯಬೇಕಾದರೆ ತುಣುಕುಗಳು ಹಾರಿಹೋಗುವವು," ಎಂಬುದೇ. ನಾನು ಅವರಿಗೆ—"ಲೆನಿನ್ನರು ಇದನ್ನು ಬರೆದರೆಂದು ಗೊತ್ತಾಯಿತು. ಆದರೆ ಒಂದು ಹೆಚ್ಚುಕಡಿಮೆ ಇರುತ್ತದೆ. ನೀವು ಕಟ್ಟಿಗೆಯನ್ನು ಕೊಯ್ಯುತ್ತಿರುವಾಗ ಅದಕ್ಕೆ ಏನೂ ಗೊತ್ತಿಲ್ಲ. ಆದರೆ ನೀವು ಮನುಷ್ಯರಲ್ಲಿ ಈ ಕಾರ್ಯವನ್ನು ಮಾಡು ತ್ತೀರಿ. ನೀವು ಅವರನ್ನು ಹೊಡೆಯುತ್ತಿರುವಾಗ ಅವರಿಗೆ ನೋವಾಗುತ್ತದೆ. ತಾಯಿಗಳು ಕಣ್ಣೀರನ್ನು ಸುರಿಸುತ್ತಾರೆ," ಎಂದು ಹೇಳಿದೆನು. ಇದೆಲ್ಲಾ ವ್ಯರ್ಥ

ವಾಯಿತು. ಮನುಷ್ಯನಿಗೆ ಆತ್ಮ ಪ್ರಾಣವಿಲ್ಲವೆಂದು ಅವರು ನಂಬಿದರು. ಅವರ ದೃಷ್ಟಿಯಲ್ಲಿ ಮನುಷ್ಯರು ಕಟ್ಟಿಗೆಯ ಅಥವಾ ಮೊಟ್ಟೆಯ ಕವಚದ ಹಾಗಿದ್ದಾರೆ.

ನಾಸ್ತಿಕತ್ವದ ಕ್ರೂರತನ ನಂಬುವದು ಕಠಿಣವಾಗಿದೆ. ಒಳ್ಳೇತನಕ್ಕೆ ಬಹುಮಾನವೂ ಕೆಟ್ಟತನಕ್ಕೆ ಶಿಕ್ಷೆಯೂ ಇರುವದಿಲ್ಲವೆಂದು ಒಬ್ಬನು ನಂಬಿದರೆ ಮಾನವರಾಗಿ ಜೀವಿಸಲು ಕಾರಣವಿಲ್ಲ. ತನ್ನಲ್ಲಿರುವ ಕೆಟ್ಟತನಕ್ಕೆ ಮಿಾರಿ ಮಾಡುವದು ಕಾರಣವಿಲ್ಲವೆಂದು ಒಬ್ಬನು ಯೋಚಿಸುತ್ತಾನೆ. ಕಮ್ಯುನಿಷ್ಟ ಹಿಂಸಕರು ಅನೇಕಾವರ್ತಿ ನಮಗೆ—"ದೇವರು ಇಲ್ಲ, ಪರಲೋಕವೂ ಇಲ್ಲ. ದುಷ್ಟತನಕ್ಕೆ ಶಿಕ್ಷೆಯಿಲ್ಲ. ನಾವು ನಮ್ಮಿಚ್ಛೆಯ ಪ್ರಕಾರವಾಗಿ ಮಾಡಬಲ್ಲೆವು," ಎಂದು ಹೇಳಿದರು. ಒಬ್ಬ ಹಿಂಸಕನು ಒಂದು ದಿವಸ—"ನಾನು ನನ್ನ ಹೃದಯ ದಲ್ಲಿರುವ ಎಲ್ಲಾ ದುಷ್ಟತನವನ್ನು ಪ್ರಕಟಿಸುವಂತೆ ನಾನು ಈ ದಿನದ ವರೆಗೆ ಜೀವಿಸಿದ ಕಾರಣ ಯಾವ ದೇವರಲ್ಲಿ ನನಗೆ ನಂಬಿಕೆಯಿಲ್ಲವೋ ಆ ದೇವ ರಿಗೆ ಉಪಕಾರಸ್ತುತಿಯನ್ನು ಸಲ್ಲಿಸುತ್ತೇನೆ" ಎಂದು ಹೇಳಿದನು. ಆ ಮನುಷ್ಯ ಕೈದಿಗಳನ್ನು ಅತಿ ಕ್ರೂರವಾದ ರೀತಿಯಲ್ಲಿ ಹಿಂಸಿಸುತ್ತಿದ್ದನು.

ಒಂದು ಮೊಸಳೆ ಒಬ್ಬ ಮನುಷ್ಯನನ್ನು ತಿಂದರೆ ನನಗೆ ಬಹಳ ದುಃಖ ವಾಗುತ್ತದೆ. ಆದರೆ ಮೊಸಳೆಯನ್ನು ಗದರಿಸುವದು ನನ್ನಿಂದಾಗದು. ಯಾಕೆಂದರೆ ಅದು ಮೊಸಳೆಯಾಗಿದೆ. ಅದು ನೈತಿಕ ಪ್ರಾಣಿಯಲ್ಲ. ಅದೇ ರೀತಿಯಲ್ಲಿ ನಾವು ಕಮ್ಯುನಿಷ್ಟರನ್ನು ಗದರಿಸಲಾರೆವು. ಕಮ್ಯುನಿಷ್ಟತ್ವವು ಅವರಲ್ಲಿರುವ ನೈತಿಕ ವಿಚಾರಗಳನ್ನು ಕೆಡವಿಬಿಟ್ಟಿದೆ. ತಮ್ಮ ಹೃದಯಗಳಲ್ಲಿ ಕರುಣೆಯಿಲ್ಲವೆಂದು ಅವರು ಗರ್ವದಿಂದ ಹೆಚ್ಚಳಪಟ್ಟರು.

ನಾನು ಅವರಿಂದ ಒಂದು ಪಾಠ ಕಲಿತುಕೊಂಡೆ. ಯಾವ ರೀತಿಯಲ್ಲಿ ಅವರು ತಮ್ಮ ಹೃದಯದಲ್ಲಿ ದೇವರಿಗೆ ಯಾವ ಸ್ಥಾನವನ್ನು ಕೊಡಲಿಲ್ಲವೋ ಅದೇ ರೀತಿಯಲ್ಲಿ ನಾನು ನನ್ನ ಹೃದಯದಲ್ಲಿ ಸೈತಾನನಿಗೆ ಸ್ವಲ್ಪ ಸ್ಥಳವನ್ನಾ ದರೂ ಕೊಡುವದಿಲ್ಲವೆಂದು ನಿಶ್ಚಯಿಸಿಕೊಂಡೆನು.

ನಾನು ಭಯಂಕರವಾದ ನೋಟಗಳನ್ನು ನೋಡಿದ್ದೇನೆ. ಕೆಲವು ಕ್ರೈಸ್ತರು ನಾಲ್ಕು ದಿವಸ ಹಗಲಿರುಳು ಶಿಲುಬೆಗಳಿಗೆ ಕಟ್ಟಲ್ಪಟ್ಟಿದ್ದರು. ಆ ಶಿಲುಬೆ ಗಳನ್ನು ನೆಲದ ಮೇಲೆ ಮಲಗಿಸಿದ್ದರು. ನೂರಾರು ಕೈದಿಗಳು ಶಿಲುಬೆಗೆ ಕಟ್ಟ ಲ್ಪಟ್ಟ ಜನರ ಮುಖ ಮೈಗಳ ಮೇಲೆ ಮಲಮೂತ್ರವನ್ನು ಮಾಡುತ್ತಿದ್ದರು. ಅನಂತರ ಶಿಲುಬೆಗಳನ್ನು ನಿಲ್ಲಿಸಿ ಕಮ್ಯುನಿಷ್ಟರು—"ನಿಮ್ಮ ಕ್ರಿಸ್ತನನ್ನು ನೋಡಿರಿ. ಅವನು ಎಷ್ಟು ಸುಂದರವಾಗಿ ಕಾಣಿಸುತ್ತಾನೆ! ಪರಲೋಕದಿಂದ ಎಷ್ಟು ಸುವಾಸನೆಯನ್ನು ತರುತ್ತಾನೆ," ಎಂದು ಅಪಹಾಸ್ಯ ಮಾಡುತ್ತಿದ್ದರು.

ಒಬ್ಬ ಪಾದ್ರಿಗೆ ಭಯಂಕರವಾದ ಹಿಂಸೆಗಳಾಗಿರುವದರಿಂದ ಅವನು ಅರೆ ಹುಚ್ಚನಾದನು. ಅವನು ಮಲಮೂತ್ರಗಳನ್ನು ಉಪಯೋಗಿಸಿ ಕರ್ತನ ಭೋಜನ ಸಂಸ್ಕಾರವನ್ನು ನಡೆಸಬೇಕಾಯಿತು. ಇದು ಪಿಟೆಸ್ಟಾ ಎಂಬ ಊರಿನಲ್ಲಿರುವ ಸೆರೆಮನೆಯಲ್ಲಾಯಿತು. ಅನಂತರ ನಾನು ಆ ಪಾದ್ರಿಗೆ—"ನೀವು ಇಂಥ ಅಪಹಾಸ್ಯದಲ್ಲಿ ಭಾಗ ತೆಗೆದುಕೊಳ್ಳುವದಕ್ಕಿಂತ ಸಾಯುವದು ಲೇಸೆಂದು ಎಣಿಸಲಿಲ್ಲವೋ ?" ಎಂಬ ಪ್ರಶ್ನೆ ಮಾಡಿದನು. ಅವನು ನನಗೆ—"ದಯಮಾಡಿ ನನ್ನನ್ನು ಗದರಿಸಬಾರದು. ನಾನು ಕ್ರಿಸ್ತನಿಗಿಂತ ಹೆಚ್ಚಾಗಿ ಕಷ್ಟಪಟ್ಟಿದ್ದೇನೆ." ಎಂದು ಉತ್ತರಿಸಿದನು. ಸತ್ಯವೇದದಲ್ಲಿಯೂ ಕವಿತೆಗಳಲ್ಲಿಯೂ ನರಕದ ಶಿಕ್ಷೆಯ ವರ್ಣನೆಗಳಿಗಿಂತ ಕಮ್ಯುನಿಷ್ಟರ ಸೆರೆಮನೆಗಳಲ್ಲಿರುವ ಹಿಂಸೆಗಳು ದೊಡ್ಡವು.

ಒಂದು ಭಾನುವಾರ ಈ ಸಂಗತಿಗಿಂತ ಹೆಚ್ಚಿನ ನೀಚಕಾರ್ಯಗಳು ಆದವು. ಬೇರೆ ಭಾನುವಾರಗಳಲ್ಲಿ ಇಂಥ ಅಪಮಾನದ ಸಂಗತಿಗಳಾದವು. ಕೆಲವು ವಿಷಯಗಳನ್ನು ಹೇಳಲಿಕ್ಕೆ ನನಗಾಗುವದಿಲ್ಲ. ಅವುಗಳನ್ನು ಮೇಲಿಂದ ಮೇಲೆ ಹೇಳಿದರೆ ನನ್ನ ಹೃದಯವು ಕುಗ್ಗಿ ಹೋಗುವದು. ಇಂಥ ಭಯಂಕರವಾದ ಹಾಗೂ ನಾಚಿಕೆಯುಳ್ಳ ವಿಷಯಗಳನ್ನು ಬರೆಯುವದು ನನ್ನಿಂದಾಗದು. ಆದರೆ ಕ್ರಿಸ್ತನಲ್ಲಿರುವ ನಿಮ್ಮ ಸಹೋದರರು ಇಂಥ ಕಾರ್ಯಗಳನ್ನು ತಾಳುತ್ತಿದ್ದರು. ಇನ್ನೂ ತಾಳುತ್ತಿರುತ್ತಾರೆ.

ಮಿಲನ್ ಹೈಮಾವಕಿ ಎಂಬ ಪಾಲಕನು ವಿಶ್ವಾಸದ ಮಹಾ ವೀರರಲ್ಲಿ ಒಬ್ಬನು. ಸೆರೆಮನೆಗಳಲ್ಲಿ ಮಿತಿಮೀರಿ ಕೈದಿಗಳಿದ್ದರು. ಪ್ರತಿಯೊಬ್ಬ ಕೈದಿಯ ಹೆಸರು ಕಾವಲುಗಾರರಿಗೆ ಗೊತ್ತಿರಲಿಲ್ಲ. ಯಾವದೊಂದು ಸೆರೆಮನೆಯ ಅಪ್ಪಣೆಯನ್ನು ಮೀರಿದವರ ಹೆಸರುಗಳನ್ನು ಕರೆದಾಗ ಆ ವ್ಯಕ್ತಿಗಳಿಗೆ ಕೊರಡೆಗಳಿಂದ 25 ಪೆಟ್ಟುಗಳು ಸಿಕ್ಕುವವೆಂದು ಗೊತ್ತಾಯಿತು. ಅನೇಕಾವರ್ತಿ ಮಿಲನ್ ಹೈಮಾವಕಿ ಬೇರೆಯವರ ಶಿಕ್ಷೆಯನ್ನು ತಾಳಲು ಮುಂದೆ ಹೋಗುತ್ತಿದ್ದನು. ಈ ರೀತಿಯಲ್ಲಿ ಉಳಿದ ಕೈದಿಗಳು ಅವನಿಗೆ ಮಾನಕೊಟ್ಟು ಮಾತ್ರವಲ್ಲದೇ ಅವನು ಸೇವಿಸುತ್ತಾ ಕ್ರಿಸ್ತನಿಗೂ ಮಾನವನ್ನು ಕೊಡುತ್ತಿದ್ದನು.

ಕಮ್ಯುನಿಷ್ಟರು ಮಾಡಿದ ನೀಚ ಕೃತ್ಯಗಳ ವಿಷಯವಾಗಿಯೂ ಕ್ರೈಸ್ತರು ತೋರಿಸಿದ ಸ್ವತ್ಯಾಗದ ವಿಷಯವಾಗಿಯೂ ಎಲ್ಲವನ್ನೂ ಹೇಳಲು ಪ್ರಯತ್ನಿಸಿದರೆ ಮುಗಿಸಲಿಕ್ಕೆ ನನಗಾಗುವುದಿಲ್ಲ. ಹಿಂಸೆಗಳ ಮಧ್ಯದಲ್ಲಿ ಧೈರ್ಯವುಳ್ಳ ಕಾರ್ಯಗಳು ಕಂಡುಬಂದವು. ಸೆರೆಮನೆಯಲ್ಲಿದ್ದ ಸಹೋದರರ ಧೈರ್ಯದಿಂದ ಹೊರಗೆ ಇದ್ದ ಸಹೋದರರಿಗೆ ಉತ್ತೇಜನ ಸಿಕ್ಕಿತು.

ನಮ್ಮ ಕೆಲಸದವರಲ್ಲಿ ಒಬ್ಬ ತರುಣಿಯಿದ್ದಳು. ಆಕೆಯು ಗುಪ್ತ ಸಭೆಯಲ್ಲಿ ಸೇವೆಮಾಡಿ ಸುವಾರ್ತಾ ಪುಸ್ತಕಗಳನ್ನು ಗುಪ್ತವಾಗಿ ಹಂಚುತ್ತಾ ಕ್ರಿಸ್ತನ

ವಿಷಯವಾಗಿ ಮಕ್ಕಳಿಗೆ ಬೋಧಿಸುತ್ತಾ ಇದ್ದಳು. ಇದನ್ನು ತಿಳಿದುಕೊಂಡು ಆಕೆಯನ್ನು ಹಿಡಿಯಲು ಕಮ್ಯುನಿಷ್ಟರ ಪೊಲೀಸರು ನಿಶ್ಚಯಿಸಿಕೊಂಡರು. ಆದರೆ ಆಕೆಯ ದುಃಖ ಹೆಚ್ಚಾಗಿ ಮಾಡುವಂತೆ ಆಕೆಯ ಮದುವೆಯ ದಿನದ ವರೆಗೆ ಕೆಲವು ವಾರ ತಡಮಾಡಬೇಕೆಂದು ತೀರ್ಮಾನಿಸಿದರು. ಮದುವೆಯ ದಿನದಲ್ಲಿ ವಧುವಿನ ಬಿಳಿ ವಸ್ತ್ರಗಳನ್ನು ಧರಿಸಿಕೊಂಡಿದ್ದಳು. ಆ ದಿನವು ತರುಣಿಯ ಜೀವನದಲ್ಲಿ ಅತಿ ಸಂತೋಷವುಳ್ಳ ದಿನವಾಗಿದೆ. ಅಕಸ್ಮಾತ್ತಾಗಿ ಬಾಗಿಲನ್ನು ತೆರೆದು ಗುಪ್ತ ಪೊಲೀಸರು ಒಳಗೆ ನುಗ್ಗಿದರು. ವಧುವು ಗುಪ್ತ ಪೊಲೀಸರನ್ನು ನೋಡಿ ಬೇಡಿಗಳನ್ನು ಹೊಂದಲು ತನ್ನ ಕೈಗಳನ್ನು ಮುಂದೆ ಚಾಚಿದಳು. ಪೊಲೀಸರು ಅವುಗಳನ್ನು ಹಾಕಿಬಿಟ್ಟರು. ಆಕೆಯು ವರನ ಕಡೆಗೆ ನೋಡಿ ಆ ಬೇಡಿಗಳನ್ನು ಮುದ್ದಿಟ್ಟು—"ನನ್ನ ಮದುವೆಯ ದಿನದಲ್ಲಿ ನನ್ನ ಸ್ವರ್ಗೀಯ ಮದಲಿಂಗನು ನನಗೆ ಕೊಟ್ಟ ಈ ರತ್ನಕ್ಕಾಗಿ ನಾನು ಆತನಿಗೆ ಉಪಕಾರ ಸ್ತುತಿ ಸಲ್ಲಿಸುತ್ತೇನೆ. ಆತನಿಗಾಗಿ ನಾನು ಕಷ್ಟವನ್ನು ತಾಳಲು ಯೋಗ್ಯಳಾಗಿರುವ ಕಾರಣ ನಾನು ಆತನನ್ನು ಸ್ತುತಿಸುತ್ತೇನೆ," ಎಂದು ಹೇಳಿದಳು. ಆಕೆಯು ಹೊರಗೆ ಎಳೆಯಲ್ಪಟ್ಟಾಗ ಆಕೆಯ ಮದಲಿಂಗನೂ ಉಳಿದ ಕ್ರೈಸ್ತ ಸ್ನೇಹಿತರೂ ಕಣ್ಣೀರು ಸುರಿಸಿದರು. ಯಾಕೆಂದರೆ ಕಮ್ಯುನಿಷ್ಟರ ಕಾವಲುಗಾರರ ಕೈಯಿಂದ ಕ್ರೈಸ್ತ ಹೆಣ್ಣುಮಕ್ಕಳು ತಾಳಬೇಕಾದ ಅನುಭವಗಳು ಅವರಿಗೆ ಗೊತ್ತಾಗಿದ್ದವು. ಐದು ವರ್ಷಗಳಾದ ನಂತರ ಆಕೆಯು ಕೆಡಿಸಲ್ಪಟ್ಟ ಹೆಂಗಸಾಗಿ ಸೆರೆಮನೆಯಿಂದ ಬಿಡಿಸಲ್ಪಟ್ಟಳು. ಆಗ ಆಕೆಯು ಮುದುಕಿಯ ಹಾಗೆ ಕಾಣುತ್ತಿದ್ದಳು. ಮದಲಿಂಗನು ಆಕೆಯ ದಾರಿಯನ್ನು ಇನ್ನೂ ಕಾಯುತ್ತಿದ್ದನು. ಕ್ರಿಸ್ತನಿಗಾಗಿ ಇದನ್ನೆಲ್ಲ ತಾಳಲು ಆಕೆಯು ಸಿದ್ಧವಾಗಿದ್ದಳು. ಗುಪ್ತ ಸಭೆಯಲ್ಲಿ ಇಂಥ ಸುಂದರವಾದ ಕ್ರೈಸ್ತರಿದ್ದಾರೆ.

## ಮನ ತೊಳೆಯುವ (Brain washing) ವಿಧಾನವೇನು ?

ಕೊರಿಯಾ ಹಾಗೂ ವ್ಹಿಯೆಟ್‌ನಾಮುಗಳಲ್ಲಿ ಯುದ್ಧ ಕಾಲದಲ್ಲಿ ಈ ವಿಧಾನವು ಉಪಯೋಗಿಸಲ್ಪಟ್ಟಿತು. ಇದು ಅತಿ ಭಯಂಕರವಾದ ಹಿಂಸೆಯಾಗಿದೆ. ನಾವು ದಿನಾಲು ಹದಿನೇಳು ಗಂಟೆ ಈ ಮಾತುಗಳನ್ನು ಕೇಳುತ್ತಾ ಕೇಳುತ್ತಾ ಕೆಲವು ವರ್ಷಗಳು ಕಳೆದೆವು.

ಕಮ್ಯುನಿಷ್ಟತ್ವವು ಒಳ್ಳೇದು
ಕಮ್ಯುನಿಷ್ಟತ್ವವು ಒಳ್ಳೇದು
ಕಮ್ಯುನಿಷ್ಟತ್ವವು ಒಳ್ಳೇದು
ಕ್ರೈಸ್ತತ್ವವು ಮೂರ್ಖತನ
ಕ್ರೈಸ್ತತ್ವವು ಮೂರ್ಖತನ
ಕ್ರೈಸ್ತತ್ವವು ಮೂರ್ಖತನ

ಅದನ್ನು ಬಿಟ್ಟುಬಿಡು
ಅದನ್ನು ಬಿಟ್ಟುಬಿಡು
ಅದನ್ನು ಬಿಟ್ಟುಬಿಡು
ಅದನ್ನು ಬಿಟ್ಟುಬಿಡು

ದಿನಾಲು ಹದಿನೇಳು ಗಂಟೆ ನಾವು ಕೆಲವು ವರ್ಷಗಳ ವರೆಗೆ ಇದನ್ನು ಕೇಳುತ್ತಾ ಕೇಳುತ್ತಾ ಕೇಳುತ್ತಾ ಇದ್ದೆವು.

"ಇದನ್ನು ತಾಳಲಿಕ್ಕೆ ನಿಮಗೆ ಹೇಗೆ ಸಾಧ್ಯ ?" ಎಂದು ಅನೇಕರು ನನ್ನನ್ನು ಕೇಳಿದ್ದಾರೆ. ಮನ ತೊಳೆಯುವದನ್ನು ವಿರೋಧಿಸಲು ಒಂದೇ ಒಂದು ಮಾರ್ಗವಿದೆ. ಅದೇನೆಂದರೆ ಹೃದಯ ತೊಳೆಯುವದು. ಹೃದಯವು ಯೇಸು ಕ್ರಿಸ್ತನ ಪ್ರೀತಿಯಿಂದ ಶುದ್ಧಿಸಲ್ಪಟ್ಟಿದ್ದರೆ ಮತ್ತು ನೀವು ಆತನನ್ನು ಹೃದಯ ಪೂರ್ವಕವಾಗಿ ಪ್ರೀತಿಸುತ್ತಿದ್ದರೆ ಎಲ್ಲಾ ಹಿಂಸೆಯನ್ನು ತಾಳುವದು ಸಾಧ್ಯವಾಗಿದೆ. ಪ್ರೀತಿಯುಳ್ಳ ವಧುವು ಪ್ರೀತಿಯುಳ್ಳ ವರನಿಗೋಸ್ಕರ ಎಲ್ಲವನ್ನೂ ಮಾಡಲು ಸಿದ್ಧಳಾಗಿದ್ದಾಳೆ. ಪ್ರೀತಿಯುಳ್ಳ ತಾಯಿಯು ತನ್ನ ಮಗನಿಗೋಸ್ಕರ ಎಲ್ಲ ವನ್ನೂ ಮಾಡಲು ಸಿದ್ಧಳಾಗಿದ್ದಾಳೆ. ಯಾವ ರೀತಿಯಲ್ಲಿ ಮರಿಯಳು ತಾನು ಕೈಯಲ್ಲಿ ಎತ್ತಿಕೊಂಡ ತನ್ನ ಮಗನಾದ ಕ್ರಿಸ್ತನನ್ನು ಪ್ರೀತಿಸಿದಳೋ ಅಥವಾ ಯಾವ ರೀತಿಯಲ್ಲಿ ವಧುವು ವರನನ್ನು ಪ್ರೀತಿಸುತ್ತಾಳೋ ಆ ರೀತಿಯಲ್ಲಿ ನೀವು ಕ್ರಿಸ್ತನನ್ನು ಪ್ರೀತಿಸುತ್ತಿದ್ದರೆ ನೀವು ಇಂಥ ಹಿಂಸೆಯನ್ನು ತಾಳಬಲ್ಲವ ರಾಗುವಿರಿ.

ದೇವರು ನಮ್ಮ ತಾಳ್ಮೆಯ ದೆಸೆಯಿಂದಲ್ಲದೇ ನಮ್ಮ ಪ್ರೀತಿಯ ದೆಸೆ ಯಿಂದಲೇ ನಮಗೆ ನ್ಯಾಯವನ್ನು ತೀರಿಸುವನು. ಕಮ್ಯುನಿಷ್ಟರ ಸೆರೆಮನೆಗಳ ಲ್ಲಿರುವ ಕ್ರೈಸ್ತರು ಪ್ರೀತಿಸುವವರಾಗಿದ್ದರೆಂದು ನನಗೆ ಸಾಕ್ಷಿ ಕೊಡಲು ಸಾಧ್ಯ ವಾಗಿದೆ. ಅವರು ದೇವರನ್ನೂ ಮನುಷ್ಯರನ್ನೂ ಪ್ರೀತಿಸುತ್ತಿದ್ದರು.

ಎಡೆಬಿಡದೆ ಹಿಂಸೆಯೂ ಕಷ್ಟವೂ ಮುಂದೆ ಹೋಗುತ್ತಿತ್ತು. ನಾನು ಬೆಶುದ್ಧನಾದಾಗ ನನ್ನ ಹಿಂಸಕರು ನನ್ನನ್ನು ತಿರಿಗಿ ನನ್ನ ಕೋಣೆಯಲ್ಲಿ ಇಡು ತ್ತಿದ್ದರು. ಯಾಕೆಂದರೆ ಇಂಥ ಸ್ಥಿತಿಯಲ್ಲಿ ಅವರಿಗೆ ಏನಾದರೂ ಹೇಳಲಿಕ್ಕಾಗು ವದಿಲ್ಲವೆಂದು ಅವರಿಗೆ ಗೊತ್ತಾಯಿತು. ಯಾರೂ ನನಗೆ ಉಪಚಾರ ಮಾಡ ಲಿಲ್ಲ. ಸ್ವಲ್ಪ ಶಕ್ತಿ ತಿರಿಗಿ ಬಂದ ನಂತರ ಅವರು ತಿರಿಗಿ ಹಿಂಸೆಯನ್ನು ಪ್ರಾರಂ ಭಿಸುತ್ತಿದ್ದರು. ಇಂಥ ಸ್ಥಿತಿಯಲ್ಲಿ ಅನೇಕರು ಸತ್ತರು. ಆದರೆ ಹೇಗೋ ನನ್ನ ಬಲವು ಯಾವಾಗಲೂ ತಿರಿಗಿ ಬರುತ್ತಿತ್ತು. ನನ್ನ ಮೈಯಲ್ಲಿದ್ದ ಅನೇಕ ಎಲುಬುಗಳು ಮುರಿಯಲ್ಪಟ್ಟವು. ನನಗೆ ಅನೇಕ ಗಾಯುಗಳಾದವು.

ಇದು ಮಾತ್ರವಲ್ಲದೆ ನನಗೆ ಕ್ಷಯರೋಗವಿತ್ತು. ನಾನು ಬಿಡುಗಡೆ ಹೊಂದಿದ ನಂತರ ಓಸ್ಲೋ ಎಂಬ ಪಟ್ಟಣದಲ್ಲಿದ್ದ ಡಾಕ್ಟರರು ನನ್ನನ್ನು ಪರೀಕ್ಷಿ

ಸಿದರು. ಅವರು ನನಗೆ—"ನೀವು ಇನ್ನೂ ಜೀವಿಸುವದು ಆಶ್ಚರ್ಯಕರವಾದ ಸಂಗತಿ. ನೀವು ಅನೇಕ ವರ್ಷಗಳ ಹಿಂದೆ ಸತ್ತಿದ್ದರೂ ಸ್ವಾಭಾವಿಕ," ಎಂದು ತಿಳಿಸಿದರು. ಇದು ಮಹತ್ಕಾರ್ಯವೆಂದು ನನಗೆ ಗೊತ್ತಾಯಿತು. ಆದರೆ ನಮ್ಮ ದೇವರು ಮಹತ್ಕಾರ್ಯಗಳನ್ನು ಮಾಡುವ ದೇವರಾಗಿದ್ದಾನೆ.

ಕಮ್ಯುನಿಷ್ಟರ ದೇಶಗಳಲ್ಲಿರುವ ಗುಪ್ತ ಸಭೆಯ ಪರವಾಗಿ ನಾನು ಮಾತನಾಡುವ ಹಾಗೆ ದೇವರು ಈ ಮಹತ್ಕಾರ್ಯವನ್ನು ಮಾಡಿದ್ದಾನೆಂದು ನನಗೆ ನಿಶ್ಚಯತ್ವವಿದೆ. ಹಿಂಸೆಯನ್ನು ತಾಳುವಂಥ ನಿಮ್ಮ ನಂಬಿಗಸ್ತರಾದ ಸಹೋದರರಿಂದ ನಿಮಗೆ ಸಂದೇಶವನ್ನು ಕೊಡುವಂತೆ ಆತನು ನನ್ನನ್ನು ಉಳಿಸಿದ್ದಾನೆ.

## ತಾತ್ಕಾಲಿಕ ಸ್ವಾತಂತ್ರ್ಯ—ಪುನರ್ಬಂಧನ

1956 ಇಸ್ವಿ ಬಂದಿತ್ತು. ನಾನು ಎಂಟುವರೆ ವರ್ಷಗಳಿಂದ ಸೆರೆಮನೆಯಲ್ಲಿದ್ದನು. ನನ್ನ ತೂಕ ಕಡಿಮೆಯಾಗಿತ್ತು. ನಾನು ತಾಳಿದ ಅನೇಕ ಗಾಯಗಳ ಗುರುತುಗಳು ನನ್ನ ಮೈಮೇಲಿದ್ದವು. ನಾನು ಹಸಿವೆಪಟ್ಟಿದ್ದೆನು. ನನ್ನ ವೈರಿಗಳು ನನ್ನನ್ನು ಹಾಸ್ಯಮಾಡಿ ಅನೇಕಾವರ್ತಿ ನನಗೆ ಪ್ರಶ್ನೆಗಳನ್ನು ಹಾಕಿ ಪೀಡಿಸುತ್ತಿದ್ದರು. ಆದರೆ ಅವರಿಗೆ ಬೇಕಾದ ಪರಿಣಾಮಗಳು ನನ್ನಲ್ಲಿ ಕಂಡು ಬರಲಿಲ್ಲ. ಅವರು ನಿರಾಶರಾಗಿ ನನ್ನನ್ನು ಹೊರಗೆ ಬಿಟ್ಟರು. ಇದು ಮಾತ್ರವಲ್ಲದೇ ನನ್ನನ್ನು ಬಿಡಿಸಬೇಕೆಂದು ಅನೇಕರು ಸರಕಾರಕ್ಕೆ ವಿನಂತಿಗಳನ್ನು ಮಾಡುತ್ತಿದ್ದರು.

ಒಂದು ವಾರದ ವರೆಗೆ ನನ್ನ ಹಳೆಯ ಸ್ಥಳಕ್ಕೆ ಹೋಗುವ ಅನುಕೂಲ ನನಗೆ ಸಿಕ್ಕಿತು. ನಾನು ಎರಡು ಸಲ ಪ್ರಸಂಗಿಸಿದೆ. ಪೊಲೀಸರು ನನ್ನನ್ನು ಕರೆದು—"ಇನ್ನು ಮುಂದೆ ನೀನು ಉಪದೇಶ ಮಾಡಬಾರದು. ಹಾಗೂ ಯಾವದೊಂದು ಧಾರ್ಮಿಕ ಕೆಲಸವನ್ನೂ ಮಾಡಬಾರದು," ಎಂದು ಹೇಳಿದರು. ನಾನು ಏನು ಹೇಳಿದೆನು ? ನಾನು ನನ್ನ ಸಭಿಕರಿಗೆ—"ನಿಮಗೆ ತಾಳ್ಮೆ ಬೇಕು. ಹೆಚ್ಚೆಚ್ಚಾಗಿ ತಾಳ್ಮೆ ಬೇಕು," ಎಂದು ಹೇಳಿದೆನು. ಕಮ್ಯುನಿಷ್ಟರು ನನಗೆ—"ಇದರ ಅರ್ಥವೇನೆಂದರೆ –ನೀವು ತಾಳ್ಮೆಯುಳ್ಳವರಾಗಿದ್ದರೆ ಅಮೆರಿಕ ದೇಶದವರು ಬಂದು ನಿಮ್ಮನ್ನು ಬಿಡಿಸುವರು ಎಂಬುದೇ," ಎಂದು ಪೊಲೀಸಿನವರು ಕೂಗಿದರು. ಇದು ಮಾತ್ರವಲ್ಲದೇ ನಾನು—"ಚಕ್ರವು ತಿರುಗುವ ಹಾಗೆ ಕಾಲಾಂತರವು ಬಂದೇ ಬರುವದು," ಎಂದು ಹೇಳಿದೆನು. ಅದಕ್ಕವರು—"ಕಮ್ಯುನಿಷ್ಟರು ಶಾಶ್ವತವಾಗಿ ಆಳುವದಿಲ್ಲವೆಂಬ ಸುಳ್ಳನ್ನು ನೀನು ಹೇಳುತ್ತೀ," ಎಂದು ಒದರಿದರು. ಈ ರೀತಿಯಲ್ಲಿ ಬಹಿರಂಗವಾದ ನನ್ನ ಕ್ರೈಸ್ತ ಸೇವೆ ಅಂತ್ಯಕ್ಕೆ ಬಂತು.

ನಾನು ಅವರಿಗೆ ಅಂಜಿ ತಿರಿಗಿ ಗುಪ್ತ ಸುವಾರ್ತಾ ಸೇವೆಯನ್ನು ಮಾಡುವದಿಲ್ಲವೆಂದು ಅಧಿಕಾರಿಗಳು ಬಹುತರವಾಗಿ ನಂಬಿದರು. ಆದರೆ ಇದರಲ್ಲಿ

ಅವರು ತಪ್ಪುಮಾಡಿದರು. ನಾನು ಗುಪ್ತವಾಗಿ ಅದೇ ಸೇವೆಯನ್ನು ತಿರಿಗಿ ಪ್ರಾರಂಭಿಸಿದೆನು. ನನ್ನ ಮನೆಯವರು ನನಗೆ ಸಹಾಯ ಮಾಡಿದರು. ನಾನು ವಿಶ್ವಾಸಿಗಳ ಗುಪ್ತ ಗುಂಪುಗಳಲ್ಲಿ ಸಾಕ್ಷಿ ಕೊಡುತ್ತಿದ್ದೆನು. ನಂಬಿಗಸ್ತರಾದ ಜನರ ಸಹಾಯದಿಂದ ನಾನು ಈ ಸೇವೆಯನ್ನು ಮಾಡುತ್ತಿದ್ದೆ. ನಾಸ್ತಿಕತ್ವದ ದುಷ್ಟತನವನ್ನು ತೋರ್ಪಡಿಸುವ ಹಾಗೆ ನನ್ನ ಮೈಯಲ್ಲಿ ಗಾಯದ ಗುರುತುಗಳಿದ್ದವು. ಸಂದೇಹಪಟ್ಟ ಆತ್ಮಗಳಿಗೆ ನಾನು—"ದೇವರಲ್ಲಿ ನಂಬಿಕೆಯಿಟ್ಟು ಧೈರ್ಯವುಳ್ಳವರಾಗಿರ್ರಿ," ಎಂದು ಅನುಭವದಿಂದ ಉಪದೇಶಿಸಬಲ್ಲವನಾಗಿದ್ದೆನು. ಗುಪ್ತವಾಗಿ ಸುವಾರ್ತೆಯನ್ನು ಸಾರುವವರ ಒಂದು ಗುಂಪಿನಲ್ಲಿ ನಾನು ಮುಂದಾಳಾಗಿದ್ದೆನು. ದೇವರ ಸಹಾಯದಿಂದ ಅನೇಕ ದಿವಸ ಕಮ್ಯುನಿಷ್ಟರು ಇದನ್ನು ಕಂಡುಹಿಡಿಯಲಾರದೆ ಹೋದರು. ದೇವರ ಕೈಕೆಲಸ ನೋಡಲಿಕ್ಕೆ ಒಬ್ಬ ಮನುಷ್ಯ ಆತ್ಮೀಯ ರೀತಿಯಲ್ಲಿ ಕುರುಡನಾಗಿದ್ದರೆ ಸುವಾರ್ತಿಕನ ಕೆಲಸವನ್ನು ಸಹ ನೋಡಲಾರದೇ ಹೋಗಬಹುದು.

ಆದರೆ ಪೊಲೀಸರು ನನ್ನ ಕೆಲಸದ ವಿಷಯವಾಗಿ ಯಾವಾಗಲೂ ಶೋಧಿಸುತ್ತಿದ್ದರು. ನನ್ನ ಕೆಲಸದ ವಿಷಯವಾಗಿ ತಿಳಿದು ಅವರು ನನ್ನನ್ನು ತಿರಿಗಿ ಬಂಧಿಸಿ ಸೆರೆಮನೆಯಲ್ಲಿ ಹಾಕಿದರು. ಆದರೆ ಆವಾಗ ಯಾವದೊಂದು ಕಾರಣದಿಂದ ನನ್ನ ಕುಟುಂಬದವರನ್ನು ಸೆರೆಮನೆಯಲ್ಲಿ ಹಾಕಲಿಲ್ಲ. ಅನೇಕರಿಗೆ ನನ್ನ ವಿಷಯವಾಗಿ ಗೊತ್ತಾಗಿದ್ದ ಕಾರಣ ಒಂದು ವೇಳೆ ಹಾಗಾಗಿರಬಹುದು. ನಾನು ಮೊದಲನೆಯ ಸಾರೆ ಎಂಟುವರೆ ವರ್ಷ ಸೆರೆಮನೆಯಲ್ಲಿದ್ದೆ. ಅನಂತರ ಮೂರು ವರ್ಷಗಳ ವರೆಗೆ ಬಿಡಿಸಲ್ಪಟ್ಟೆನು. ಈಗಲಾದರೋ ನಾನು ಐದುವರೆ ವರ್ಷ ತಿರಿಗಿ ಸೆರೆಮನೆಯಲ್ಲಿರಬೇಕಾಯಿತು. ನನ್ನ ಎರಡನೆಯ ಬಂಧನವು ಅನೇಕ ರೀತಿಗಳಲ್ಲಿ ಮೊದಲನೆಯ ಬಂಧನಕ್ಕಿಂತ ಕಠಿಣವಾಗಿತ್ತು. ನನಗೆ ಏನಾಗುವದೆಂಬುದು ನನಗೆ ಚೆನ್ನಾಗಿ ಗೊತ್ತಾಯಿತು. ಸೆರೆಮನೆಯಲ್ಲಿ ಹೋದ ಕೂಡಲೇ ನನ್ನ ದೇಹಸ್ಥಿತಿ ಕೆಟ್ಟದಾಯಿತು. ಆದರೆ ಗುಪ್ತ ಸಭೆಯು ಗುಪ್ತ ಸೇವೆಯನ್ನು ಕಮ್ಯುನಿಷ್ಟರ ಗುಪ್ತ ಸೆರೆಮನೆಗಳಲ್ಲಿ ನಾವು ಮುನ್ನಡಿಸುತ್ತಿದ್ದೆವು.

## ನಾವು ಮಾಡಿದ ವ್ಯವಸ್ಥೆ—ನಾವು ಉಪದೇಶಿಸಿದೆವು: ಅವರು ನಮ್ಮನ್ನು ಹೊಡೆದರು

ಬೇರೆ ಕೈದಿಗಳಿಗೆ ಉಪದೇಶ ಮಾಡಬಾರದೆಂಬ ಸ್ಥಿರವಾದ ಆಜ್ಞೆ ಇತ್ತು. ಉಪದೇಶ ಮಾಡುವವರೆಲ್ಲರೂ ಚೆನ್ನಾಗಿ ಹೊಡೆಯಲ್ಪಡುವರೆಂಬ ಪದ್ಧತಿಯಿತ್ತು. ಆದರೆ ಉಪದೇಶ ಮಾಡುವ ಹಕ್ಕು ನಮ್ಮಲ್ಲಿ ಕೆಲವರಿಗೆ ಬೇಕಾದದ್ದರಿಂದ ಈ ಕ್ರಯವನ್ನು ಕೊಡಲು ಸಿದ್ಧರಾಗಿದ್ದೆವು. ಇದು ಒಂದು ವ್ಯವಸ್ಥೆಯು ಹಾಗಿತ್ತು. ನಾವು ಉಪದೇಶ ಮಾಡಿದೆವು—ಅವರು ನಮ್ಮನ್ನು ಹೊಡೆದರು. ಉಪದೇಶ ಮಾಡುವದರಿಂದ ನಮಗೆ ಸಂತೋಷವಾಯಿತು.

ನಮ್ಮನ್ನು ಹೊಡೆಯುವದರಿಂದ ಅವರಿಗೆ ಸಂತೋಷವಾಯಿತು. ಈ ರೀತಿಯಲ್ಲಿ ಎಲ್ಲರಿಗೂ ಸಂತೋಷವಾಯಿತು.

ಇಂಥ ನೋಟಗಳು ಅನೇಕಾನೇಕ ವೇಳೆ ಆದವು. ಒಬ್ಬ ಸಹೋದರನು ಇತರ ಕೈದಿಗಳಿಗೆ ಉಪದೇಶ ಮಾಡುತ್ತಿರುವಾಗ ಕಾವಲುಗಾರರು ಅಕಸ್ಮಾತ್ತಾಗಿ ಒಳಗೆ ಬಂದು ಅವರನ್ನು ಹಿಡಿದು ಹಿಂಸೆಯ ಕೋಣೆಗೆ ಎಳೆಯುತ್ತಿದ್ದರು. ಬಹುಕಾಲದ ವರೆಗೆ ಅವನನ್ನು ಚೆನ್ನಾಗಿ ಹೊಡೆದು ತಿರಿಗಿ ಕರೆದುಕೊಂಡು ಬಂದು ಸೆರೆಮನೆಯ ನೆಲದ ಮೇಲೆ ನೂಕುತ್ತಿದ್ದರು. ಅವನ ಮೈಯಲ್ಲಿ ಪೆಟ್ಟುಗಳೂ ಅವನ ಬಟ್ಟೆಯ ಮೇಲೆ ರಕ್ತವೂ ಇದ್ದವು. ಸಾವಕಾಶವಾಗಿ ನಿಂತುಕೊಂಡು ತನ್ನ ಬಟ್ಟೆಗಳನ್ನು ಸರಿಪಡಿಸಿ ಅವನು—"ಸಹೋದರರೇ, ನಾನು ಹೋಗಬೇಕಾದಾಗ ಎಲ್ಲಿಯ ವರೆಗೆ ಬಂದಿದ್ದೆ ?" ಎಂದು ಕೇಳಿದನು. ಈ ರೀತಿಯಲ್ಲಿ ಅವನು ತನ್ನ ಉಪದೇಶವನ್ನು ಮುನ್ನಡಿಸುತ್ತಿದ್ದನು.

ನಾನು ಅತಿ ಸುಂದರವಾದ ಸಂಗತಿಗಳನ್ನು ನೋಡಿದ್ದೇನೆ. ಕೆಲವು ಉಪದೇಶಕರು ಸಾಧಾರಣ ಕ್ರೈಸ್ತರಾಗಿದ್ದರು. ಆದರೆ ಪವಿತ್ರಾತ್ಮನ ಸಹಾಯದಿಂದ ಅವಿದ್ಯಾವಂತರಾದ ಈ ಮನುಷ್ಯರು ಅತಿ ಸುಂದರವಾದ ರೀತಿಯಲ್ಲಿ ಪ್ರಸಂಗಿಸುತ್ತಿದ್ದರು. ಅವರು ಹೃದಯಪೂರ್ವಕವಾಗಿ ಉಪದೇಶಿಸುತ್ತಿದ್ದರು. ಯಾಕೆಂದರೆ ಉಪದೇಶ ಮಾಡುವದರಿಂದ ತಾವು ಹಿಂಸೆಗೆ ಗುರಿಯಾಗುವದರಿಂದ ಸುಮ್ಮನೆ ಮಾತನಾಡುತ್ತಿರಲಿಲ್ಲ. ಯಾಕೆಂದರೆ ಕಾವಲುಗಾರರು ಬಂದು ಇಂಥವರನ್ನು ಮೂರ್ಛೆಹೋಗುವ ವರೆಗೆ ಹೊಡೆಯುತ್ತಿದ್ದರು.

ಘೆರ್ಲಾ ಎಂಬ ಪಟ್ಟಣದ ಸೆರೆಮನೆಯಲ್ಲಿ ಗರೆಕೂ ಎಂಬ ಕ್ರೈಸ್ತ ವಿಶ್ವಾಸಿಯು ಸಾಯುವ ವರೆಗೆ ಹೊಡೆಯಲ್ಪಡುವ ಶಿಕ್ಷೆಗೆ ಪಾತ್ರನಾದನು. ಇದನ್ನು ಮಾಡಲು ಕೆಲವು ವಾರ ಬೇಕಾಯಿತು. ಅವರು ಸಾವಕಾಶವಾಗಿ ಅವನನ್ನು ಹೊಡೆಯುತ್ತಿದ್ದರು. ಅವರು ರಬ್ಬರಿನ ದೊಣ್ಣೆಯಿಂದ ಒಂದೇ ಸಾರೆ ಅಂಗಾಲಿನ ಮೇಲೆ ಹೊಡೆದರು. ಕೆಲವು ನಿಮಿಷಗಳಾದ ನಂತರ ಮತ್ತೊಂದು ಇನ್ನೂ ಕೆಲವು ನಿಮಿಷಗಳಾದ ನಂತರ ಮತ್ತೊಂದು ಪೆಟ್ಟು ಹೊಡೆಯಲಾಯಿತು. ತರಡು ಬೀಜಗಳ ಮೇಲೆ ಕೂಡ ಹೊಡೆಯಲ್ಪಟ್ಟನು. ಅನಂತರ ಒಬ್ಬ ಡಾಕ್ಟರನು ಚುಚ್ಚುಮದ್ದನ್ನು (injection) ಕೊಟ್ಟನು. ಅವನು ಶಕ್ತಿ ಹೊಂದಲು ಅತ್ಯುತ್ತಮವಾದ ಆಹಾರವನ್ನು ಪಡೆದನು. ಅನಂತರ ಅವನು ತಿರಿಗಿ ಸಾಯುವ ವರೆಗೆ ಹೊಡೆಯಲ್ಪಟ್ಟನು. ಈ ಹಿಂಸೆಯ ಮುಂದಾಳುಗಳಲ್ಲಿ ಕಮ್ಯುನಿಷ್ಟ ಪಕ್ಷದ ಕೇಂದ್ರ ಸಮಿತಿಯ ಸದಸ್ಯನಾದ ರೆಕ್ ಎಂಬವನು ಇದ್ದನು.

ಅನೇಕ ಕಮ್ಯುನಿಷ್ಟರ ಹಾಗೆ ರೆಕ್‌ನು ಒಂದು ಮಾತನ್ನು ವಿಶ್ವಾಸಿಗಳಿಗೆ ಹೇಳುವದರಲ್ಲಿ ಸಂತೋಷಪಟ್ಟನು. ಒಂದೊಂದು ಸಮಯದಲ್ಲಿ ಅವನು

—"ನೋಡು, ನಾನೇ ದೇವರಾಗಿದ್ದೇನೆ. ನಿನ್ನ ಜೀವವನ್ನು ಉಳಿಸುವದಕ್ಕೂ ತೆಗೆಯುವದಕ್ಕೂ ನನಗೆ ಅಧಿಕಾರವಿದೆ. ಪರಲೋಕದಲ್ಲಿರುವವನು ನಿನ್ನನ್ನು ಜೀವಿತನನ್ನಾಗಿ ಉಳಿಸಲಾರನು. ಎಲ್ಲವೂ ನನ್ನ ಕೈಯಲ್ಲಿದೆ. ನನಗೆ ಮನಸ್ಸಿದ್ದರೆ ನೀನು ಜೀವಿಸುತ್ತೀ. ನನಗೆ ಮನಸ್ಸಾದರೆ ನೀನು ಕೊಲ್ಲಲ್ಪಡುವಿ. ನಾನೇ ದೇವರಾಗಿದ್ದೇನೆ," ಎಂದು ಹೇಳಿ ಕ್ರೈಸ್ತರನ್ನು ಹಾಸ್ಯಮಾಡುತ್ತಿದ್ದನು.

ಈ ಭಯಂಕರವಾದ ಸ್ಥಿತಿಯಲ್ಲಿ ಸಹೋದರನಾದ ಗರೆಕೂ ಗಮನಿಸ ತಕ್ಕ ಉತ್ತರವನ್ನು ಕೊಟ್ಟನು. ಅನಂತರ ರೆಕ್‌ನು ಸ್ವತಃ ಇದನ್ನು ನನಗೆ ತಿಳಿಸಿದನು. ಗರೆಕೂ ಅವನಿಗೆ—"ನೀವು ಹೇಳಿದ ಮಾತುಗಳ ಅಗಾಧವಾದ ಅರ್ಥ ನಿಮಗೆ ಗೊತ್ತಿಲ್ಲ. ನೀವು ನಿಜವಾಗಿ ದೇವರಾಗಿದ್ದೀರಿ. ಕಂಬಳಿ ಹುಳುವು ಸರಿಯಾಗಿ ಬೆಳೆದರೆ ಬಣ್ಣದ ಚಿಟ್ಟೆಯಾಗುತ್ತದೆ. ನೀವು ಹಿಂಸಕರೂ ಕೊಲೆಗಾರರೂ ಆಗುವಂತೆ ಸೃಷ್ಟಿಸಲ್ಪಡಲಿಲ್ಲ. ನೀವು ದೇವರ ಹಾಗಾಗುವಂತೆ ಸೃಷ್ಟಿಸಲ್ಪಟ್ಟಿರಿ. ತಮ್ಮ ಕಾಲದಲ್ಲಿ ಜೀವಿಸುವ ಯೆಹೂದ್ಯರಿಗೆ—"ನೀವು ದೇವರುಗಳಾಗಿದ್ದೀರಿ," ಎಂದು ಯೇಸು ಸ್ವಾಮಿ ಹೇಳಿದ್ದಾನೆ. ನಿಮ್ಮ ಹೃದಯದಲ್ಲಿ ದಿವ್ಯ ಜೀವವಿದೆ. ಅನೇಕರು ನಿಮ್ಮ ಹಾಗೆ ಹಿಂಸಕರಾಗಿದ್ದಾರೆ. ಅಂಥವರಲ್ಲಿ ಅನೇಕರು ಅಪೊಸ್ತಲನಾದ ಪೌಲನ ಹಾಗೆ—ಈ ಪ್ರಕಾರ ಮಾಡುವದು ನಾಚಿಕೆಯುಳ್ಳ ಸಂಗತಿಯಾಗಿದೆಯೆಂದು ತಿಳಿದುಕೊಂಡಿದ್ದಾರೆ. ಯಾಕೆಂದರೆ ಅವುಗಳಿಗಿಂತ ಶ್ರೇಷ್ಠಕಾರ್ಯಗಳನ್ನು ಮಾಡುವದು ಮನುಷ್ಯರಿಗೆ ಸಾಧ್ಯವಾಗಿದೆ. ಅವರು ದೇವರ ಕಡೆಗೆ ತಿರುಗಿಕೊಂಡು ಆತನ ಸ್ವಭಾವದಲ್ಲಿ ಪಾಲುಗಾರರಾಗಿದ್ದಾರೆ. ರೆಕ್ ಸಾಹೇಬರೇ, ನೀವು ದೇವರ ಹಾಗೆ ಆಗುವಂತೆ ಸೃಷ್ಟಿಸಲ್ಪಟ್ಟಿರಿ. ನೀವು ಹಿಂಸಕರಾಗುವದು ಯೋಗ್ಯವಲ್ಲ," ಎಂದು ಹೇಳಿದನು.

ಆ ಸಮಯದಲ್ಲಿ ರೆಕ್‌ನು ತನ್ನ ಹಿಂಸೆಯನ್ನು ತಾಳುವವನ ಮಾತುಗಳಿಗೆ ವಿಶೇಷವಾದ ಲಕ್ಷ್ಯಕೊಡಲಿಲ್ಲ. ಅದೇ ರೀತಿಯಲ್ಲಿ ಪೌಲನು ತನ್ನ ಪ್ರತ್ಯಕ್ಷತೆಯಲ್ಲಿ ಕೊಲ್ಲಲ್ಪಡುತ್ತಿರುವ ಸ್ತೆಫನನ ಸುಂದರವಾದ ಸಾಕ್ಷಿಗೆ ಗಮನ ಕೊಟ್ಟಿರಲಿಲ್ಲ. ಆದರೆ ಆ ಮಾತುಗಳು ಅವನ ಹೃದಯದಲ್ಲಿ ಕಾರ್ಯಸಾಧಿಸಿದವು. ಅನಂತರ ರೆಕ್‌ನು ತನ್ನ ನಿಜವಾದ ಸ್ಥಿತಿಯನ್ನು ಗ್ರಹಿಸಿಕೊಂಡನು.

ಕಮ್ಯುನಿಷ್ಟರ ಹೊಡೆಯುವಿಕೆಯಿಂದಲೂ ಹಿಂಸೆಯಿಂದಲೂ ಹತ್ಯದಿಂದಲೂ ಒಂದೇ ದೊಡ್ಡ ಪಾಠ ಕಾಣಿಸಿಕೊಂಡಿತು. ಅದೇನೆಂದರೆ ಆತ್ಮವು ದೇಹಕ್ಕೆ ಯಜಮಾನನಾಗಿದೆ. ನಾವು ಹಿಂಸಿಸಲ್ಪಡುತ್ತಿರುವಾಗ ಅನೇಕ ವೇಳೆ ಆ ಹಿಂಸೆಯು ನಮ್ಮ ಆತ್ಮದಿಂದ ದೂರದ್ದೆಂದೆನಿಸುತ್ತಿತ್ತು. ನಾವು ಆತ್ಮಪೂರ್ವಕವಾಗಿ ಕ್ರಿಸ್ತನ ಪ್ರತ್ಯಕ್ಷತೆಯ ಮಹಿಮೆಯನ್ನು ಅನುಭವಿಸುತ್ತಿದ್ದೆವು.

ವಾರಕ್ಕೊಮ್ಮೆ ನಮಗೆ ಸ್ವಲ್ಪ ರೊಟ್ಟಿ ಸಿಕ್ಕುತ್ತಿತ್ತು. ದಿನಾಲು ಯಾವದೊಂದು ತರದ ಹೊಲಸಾದ ರಸ ಸಿಕ್ಕುತ್ತಿತ್ತು. ಆದರೆ ನಾವು ಈ ಅಲ್ಪ

ಆಹಾರದಿಂದ ಒಂದು ದಶಾಂಶವನ್ನು ಅಶಕ್ತರಾದ ನಮ್ಮ ಸಹೋದರರಿಗೆ ಕೊಡುತ್ತಿದ್ದೆವು.

ಒಬ್ಬ ಕ್ರೈಸ್ತ ವಿಶ್ವಾಸಿಗೆ ಮರಣದಂಡನೆ ನೇಮಿಸಲ್ಪಟ್ಟಿತು. ಕೊಲ್ಲಲ್ಪಡುವದಕ್ಕಿಂತ ಮೊದಲು ಸೆರೆಮನೆಯಲ್ಲಿ ತನ್ನ ಹೆಂಡತಿಯನ್ನು ಭೆಟ್ಟಿಯಾಗಲು ಅವನಿಗೆ ಅನುಕೂಲವಿತ್ತು. ಅವನು ತನ್ನ ಹೆಂಡತಿಗೆ ಹೇಳಿದ ಕಡೆಯ ಮಾತುಗಳಾವುವೆಂದರೆ—"ನನ್ನನ್ನು ಕೊಲ್ಲುವವರನ್ನು ಪ್ರೀತಿಸುತ್ತಾ ಸಾಯುತ್ತೇನೆಂದು ತಿಳಿದುಕೋ. ತಾವು ಏನು ಮಾಡುತ್ತೇವೆಂದು ಅವರಿಗೆ ಗೊತ್ತಿಲ್ಲ. ನಿನಗೆ ನನ್ನ ಕಡೆಯ ವಿನಂತಿಯಾವುದೆಂದರೆ ನೀನು ಸಹ ಅವರನ್ನು ಪ್ರೀತಿಸು. ನಿನ್ನ ಪ್ರಿಯನಾದ ನನ್ನನ್ನು ಅವರು ಕೊಂದುಹಾಕುವದರಿಂದ ಅವರನ್ನು ಹಗೆಮಾಡಬಾರದು. ನಾವು ಪರಲೋಕದಲ್ಲಿ ತಿರಿಗಿ ಭೆಟ್ಟಿಯಾಗುವೆವು," ಎಂಬುದೇ. ಈ ಸಂಭಾಷಣೆಯನ್ನು ಕೇಳಿದ ಗುಪ್ತ ಪೊಲೀಸರ ಅಧಿಕಾರಿಯು ಅವುಗಳಿಗೆ ಆಶ್ಚರ್ಯಪಟ್ಟನು. ಅನಂತರ ಅವನು ವಿಶ್ವಾಸಿಯಾಗಿ ಸೆರೆಮನೆಯಲ್ಲಿ ಹಾಕಲ್ಪಟ್ಟನು. ಅಲ್ಲಿ ಅವನು ಈ ವಿಷಯವನ್ನು ತಿಳಿಸಿದನು.

ತೀಗರ್ಜು ಆಖ್ನಾ ಎಂಬ ಸೆರೆಮನೆಯಲ್ಲಿ ಮೆಟ್ಟೆವಿಕಿ ಎಂಬ ಯೌವನಸ್ಥ ಕೈದಿಯಿದ್ದನು. ಅವನು ಹದಿನೆಂಟು ವರ್ಷದ ಯೌವನಸ್ಥನಾಗಿದ್ದಾಗ ಸೆರೆಮನೆಯಲ್ಲಿ ಹಾಕಲ್ಪಟ್ಟನು. ಅವನು ಹಿಂಸೆಯಿಂದ ಅಶಕ್ತನಾಗಿ ಕ್ಷಯರೋಗಿಯಾದನು. ಅವನು ಬಹಳ ಅಸ್ವಸ್ಥನಾಗಿದ್ದಾನೆಂದು ಕೇಳಿ ಅವನ ಮನೆಯವರು ಅವನ ಚಿಕಿತ್ಸೆಗಾಗಿ ೧೦೦ ಬಾಟ್ಲಿ ಸ್ಟ್ರೆಪ್ಟೊಮೈಸೆನ್ ಸೆರೆಮನೆಗೆ ಕಳುಹಿಸಿದರು. ಈ ಇಂಜೆಕ್ಷನ್‌ಗಳಿಂದ ಗುಣ ಹೊಂದುವ ಆಶೆಯಿತ್ತು. ಸೆರೆಮನೆಯ ಅಧಿಕಾರಿಗಳಲ್ಲಿ ಒಬ್ಬನು ಅವನನ್ನು ಕರೆದು ಆ ಔಷಧದ ಪ್ಯಾಕನ್ನು ಅವನಿಗೆ ತೋರಿಸಿ—"ಈ ಔಷಧದಿಂದ ನಿನ್ನ ಜೀವನವನ್ನು ಉಳಿಸುವದು ಸಾಧ್ಯ. ಆದರೆ ನಿಮ್ಮ ಮನೆಯವರಿಂದ ಪೊಟ್ಟಣಗಳನ್ನು ಹೊಂದಲು ನಿನಗಾಗುವದಿಲ್ಲ. ನಿನಗೆ ಸಹಾಯಮಾಡಲು ನನಗೆ ಮನಸ್ಸಿದೆ. ನೀನು ಯೌವನಸ್ಥನಾಗಿರುತ್ತೀ. ನೀನು ಸೆರೆಮನೆಯಲ್ಲಿ ಸಾಯುವದು ಯೋಗ್ಯವಲ್ಲ, ನಿನಗೆ ಸಹಾಯಮಾಡಲು ನನಗೆ ಸಹಾಯಮಾಡು. ನಿನ್ನ ಜೊತೆ ಕೈದಿಗಳ ವಿಷಯವಾಗಿ ನನಗೆ ತಿಳುವಳಿಕೆ ಕೊಡು ನೀನು ಹಾಗೆ ಮಾಡಿದರೆ ನಾನು ಈ ಔಷಧವನ್ನು ನಿನಗೆ ಕೊಡುತ್ತೇನೆ. ಹಾಗೂ ಅದರ ಕಾರಣವನ್ನು ನನ್ನ ಮೇಲಾಧಿಕಾರಿಗಳಿಗೆ ತಿಳಿಸುತ್ತೇನೆ," ಎಂದು ಹೇಳಿದನು. ಕೂಡಲೇ ಮೆಟ್ಟೆವಿಕಿ—"ನನ್ನ ಪ್ರಾಣವನ್ನು ಉಳಿಸಿ ಕನ್ನಡಿಯಲ್ಲಿ ನೋಡಿ ದ್ರೋಹಿಯ ಮುಖವನ್ನು ಕಂಡು ನಾಚಿಕೆಪಡಲು ನನಗೆ ಇಷ್ಟವಿಲ್ಲ. ನಿಮ್ಮ ಯೋಜನೆಗೆ ನಾನು ಒಪ್ಪಲಾರೆ. ಅದಕ್ಕಿಂತ ಸಾಯುವದು ನನಗೆ ಲೇಸು," ಎಂದು ಉತ್ತರ ಕೊಟ್ಟನು.

ಗುಪ್ತ ಪೊಲೀಸರ ಅಧಿಕಾರಿಯು ಅವನ ಕೈಹಿಡಿದು—"ಶಹಭಾಷ್ ! ನೀನು ಹೀಗೆ ಉತ್ತರ ಕೊಡುವಿಯೆಂದು ನನಗೆ ನಿಶ್ಚಯತ್ವವಿತ್ತು. ಆದರೆ

ಮತ್ತೊಂದು ಸೂಚನೆ ಕೊಡಲು ನನಗೆ ಇಚ್ಛೆಯಿದೆ. ಕೈದಿಗಳಲ್ಲಿ ಕೆಲವರು ನಮಗೆ ತಿಳುವಳಿಕೆ ಕೊಡುತ್ತಾರೆ. ತಾವು ಕಮ್ಯುನಿಷ್ಟರೆಂದು ಹೇಳಿ ನಿನ್ನನ್ನು ದೂಷಿಸುತ್ತಾರೆ. ಆದರೆ ಅವರು ಎರಡು ಮನಸ್ಸುಳ್ಳವರಾಗಿದ್ದಾರೆ. ಅವರಲ್ಲಿ ನನಗೆ ಭರವಸವಿಲ್ಲ. ಅವರು ಎಷ್ಟರ ಮಟ್ಟಿಗೆ ಯಥಾರ್ಥರೆಂದು ತಿಳಿಯುವ ಮನಸ್ಸು ನಮಗಿದೆ. ಅವರು ನಿನ್ನ ವಿಷಯವಾಗಿ ದ್ರೋಹಿಗಳಾಗಿದ್ದಾರೆ. ಅವರು ನಿನ್ನ ಮಾತುಗಳನ್ನೂ ಕೃತ್ಯಗಳನ್ನೂ ಕುರಿತು ನಮಗೆ ತಿಳಿಸಿ ನಿನಗೆ ಬಹಳ ಕೇಡನ್ನು ಮಾಡುತ್ತಾರೆ. ನಿಮ್ಮ ಸ್ನೇಹಿತರ ವಿಷಯವಾಗಿ ಮಾತನಾಡಲು ನಿನಗೆ ಮನಸ್ಸಿಲ್ಲವೆಂದು ನನಗೆ ತಿಳಿಯಿತು. ಆದರೆ ನಿನ್ನ ಪ್ರಾಣವನ್ನುಳಿಸಲಿಕ್ಕೆ ನಿನಗೆ ಮನಸ್ಸಿದ್ದರೆ ನಿನ್ನ ವೈರಿಗಳ ವಿಷಯವಾಗಿ ನಮಗೆ ತಿಳುವಳಿಕೆ ಕೊಡು," ಎಂದು ಹೇಳಿದನು. ಈತನು ಮೊದಲನೆಯ ಸಾರೆ ಉತ್ತರ ಕೊಟ್ಟ ಹಾಗೆ ಮೆಟ್ಟೆವಿಕಿ ಕೂಡಲೇ—"ನಾನು ಕ್ರಿಸ್ತನ ಶಿಷ್ಯನಾಗಿದ್ದೇನೆ. ನಾವು ನಮ್ಮ ವೈರಿಗಳನ್ನು ಪ್ರೀತಿಸಬೇಕೆಂದು ಆತನು ಬೋಧಿಸಿದ್ದಾನೆ. ಈ ದ್ರೋಹಿಗಳು ನಮಗೆ ಬಹಳ ಕೇಡನ್ನು ಮಾಡುತ್ತಾರೆ. ಆದರೆ ನಾನು ಅಪಕಾರಕ್ಕೆ ಅಪಕಾರ ಮಾಡಲಾರೆ. ಅವರ ವಿರುದ್ಧವಾಗಿ ನಾನು ತಿಳುವಳಿಕೆ ಕೊಡುವದಿಲ್ಲ. ನಾನು ಅವರನ್ನು ಕರುಣಿಸುತ್ತೇನೆ. ನಾನು ಅವರಿಗಾಗಿ ಪ್ರಾರ್ಥಿಸುತ್ತೇನೆ. ಕಮ್ಯುನಿಷ್ಟರೊಡನೆ ಒಡನಾಟ ಮಾಡಲು ನನಗೆ ಮನಸ್ಸಿಲ್ಲ," ಎಂದು ಉತ್ತರಿಸಿದನು. ಈ ಸಂಭಾಷಣೆಯಾದ ನಂತರ ಅವನೂ ನಾನೂ ಸೆರೆಮನೆಯಲ್ಲಿದ್ದ ಒಂದೇ ಕೋಣೆಯಲ್ಲಿದ್ದೆವು. ಅವನು ಸತ್ತಾಗ ನಾನು ಅಲ್ಲಿ ಇದ್ದೆನು. ಅವನು ದೇವರನ್ನು ಸ್ತುತಿಸುತ್ತಾ ಇದ್ದನು. ಪ್ರೀತಿಯಿಂದ ಜೀವಿಸುವ ಸ್ವಾಭಾವಿಕವಾದ ಇಚ್ಛೆಯು ಜಯಿಸಲ್ಪಟ್ಟಿತು.

ಒಬ್ಬ ಬಡವನು ಸಂಗೀತಗಳನ್ನು ಪ್ರೀತಿಸುವವನಾಗಿದ್ದರೆ ಅವನು ಭಜನೆ ಕೇಳಲು ಹಣ ಕೊಡಲು ಸಿದ್ಧನಾಗುತ್ತಾನೆ. ಅವನಲ್ಲಿ ಹಣ ಕಡಿಮೆಯಿದ್ದರೂ ಅವನಿಗೆ ದುಃಖವಿಲ್ಲ. ಯಾಕೆಂದರೆ ಅವನು ಸುಂದರವಾದ ವಿಷಯಗಳನ್ನು ಕೇಳಿದ್ದಾನೆ.

ನಾನು ಅನೇಕ ವರ್ಷ ಸೆರೆಮನೆಯಲ್ಲಿ ಇದ್ದ ಕಾರಣ ನನಗೆ ಬೇಸರವಿರಲಿಲ್ಲ. ನಾನು ಅತಿ ಸುಂದರವಾದ ಸಂಗತಿಗಳನ್ನು ನೋಡಿದ್ದೇನೆ. ನಾನು ಸೆರೆಮನೆಯಲ್ಲಿದ್ದ ಜನರಲ್ಲಿ ಅಶಕ್ತನೂ ಅಲ್ಪನೂ ಆಗಿದ್ದೆನು. ಆದರೆ ಅನೇಕಾವರ್ತಿ ಅದೇ ಸೆರೆಮನೆಗಳಲ್ಲಿ ದೊಡ್ಡ ದೇವಭಕ್ತರಿದ್ದರು. ಅವರು ನಂಬಿಕೆಯಲ್ಲಿ ಪ್ರವೀಣರೂ ಮೊದಲನೆಯ ಶತಮಾನದಲ್ಲಿದ್ದ ವಿಶ್ವಾಸಿಗಳಿಗೆ ಸರಿಸಮಾನರೂ ಇದ್ದರು. ಅವರು ಸಂತೋಷದಿಂದ ಕ್ರಿಸ್ತನಿಗಾಗಿ ಸತ್ತರು. ಇಂಥ ದೇವಭಕ್ತರ ಹಾಗೂ ವಿಶ್ವಾಸ ವೀರರ ಆತ್ಮಿಯ ಸೌಂದರ್ಯವನ್ನು ವರ್ಣಿಸುವದು ಸಾಧ್ಯವಿಲ್ಲ.

ಈ ಸಂಗತಿಗಳು ಅಸಾಧಾರಣವಲ್ಲ. ಗುಪ್ತ ಸಭೆಯಲ್ಲಿದ್ದ ವಿಶ್ವಾಸಿಗಳಲ್ಲಿ ಆಶ್ಚರ್ಯಕರವಾದ ಸಂಗತಿಗಳು ಸ್ವಾಭಾವಿಕವಾಗಿ ನಡೆಯುತ್ತವೆ. ಗುಪ್ತ ಸಭೆಯವರು ಪ್ರಾರಂಭದಲ್ಲಿ ಪ್ರೀತಿಸಿದ ಹಾಗೆ ಈಗಲೂ ಕರ್ತನನ್ನು ಪ್ರೀತಿಸುತ್ತಿದ್ದಾರೆ.

ನಾನು ಸೆರೆಮನೆಯಲ್ಲಿ ಸೇರುವದಕ್ಕಿಂತ ಮೊದಲು ನಾನು ಕ್ರಿಸ್ತನನ್ನು ಬಹಳವಾಗಿ ಪ್ರೀತಿಸುತ್ತಿದ್ದೆನು. ಈಗ ಸೆರೆಮನೆಯಲ್ಲಿದ್ದು ಆತನ ವಧುವನ್ನು ಅಂದರೆ ಆತನ ಆತ್ಮಿಯ ದೇಹವನ್ನು ನೋಡಿ ನಾನು ಕ್ರಿಸ್ತನನ್ನು ಪ್ರೀತಿಸುವ ಹಾಗೆ ಗುಪ್ತ ಸಭೆಯನ್ನೂ ಪ್ರೀತಿಸುತ್ತೇನೆ. ಯಾಕೆಂದರೆ ನಾನು ಆ ಸಭೆಯ ಸೌಂದರ್ಯವನ್ನೂ ತ್ಯಾಗವನ್ನೂ ನೋಡಿದ್ದೇನೆ.

## ನನ್ನ ಹೆಂಡತಿಯ ಮತ್ತು ಹುಡುಗನ ಅನುಭವಗಳು

ನಾನು ನನ್ನ ಹೆಂಡತಿಯಿಂದ ವಿಭಾಗಿಸಲ್ಪಟ್ಟೆನು. ಆ ಮೇಲೆ ಆಕೆಗೆ ಏನಾಯಿತೆಂದು ನನಗೆ ಅನೇಕ ವರ್ಷಗಳ ವರೆಗೆ ಗೊತ್ತಾಗಲಿಲ್ಲ. ಆದರೆ ಆಕೆಯೂ ಸಹ ಸೆರೆಮನೆಯಲ್ಲಿ ಹಾಕಲ್ಪಟ್ಟಳೆಂದು ನಾನು ಕೇಳಿದ್ದೇನೆ. ಪುರುಷರಿಗಿಂತ ಕ್ರೈಸ್ತ ಸ್ತ್ರೀಯರಿಗೆ ಸೆರೆಮನೆಯಲ್ಲಿ ಹೆಚ್ಚಿನ ಹಿಂಸೆಯಾಗುತ್ತಿತ್ತು. ಕ್ರೂರವಾದ ಕಾವಲುಗಾರರು ಆ ಕ್ರೈಸ್ತ ತರುಣಿಯರನ್ನು ಬಲಾತ್ಕಾರದಿಂದ ಕೆಡಿಸಿದ್ದಾರೆ. ಹಾಸ್ಯವೂ ನೀಚಕಾರ್ಯಗಳೂ ಹೆಚ್ಚಾಗಿವೆ. ಹೆಂಗಸರು ಒಂದು ಕಾಲುವೆಯನ್ನು ಕಟ್ಟುವ ಕೆಲಸದಲ್ಲಿ ಸಹಾಯಮಾಡಬೇಕಾಯಿತು. ಅವರು ಗಂಡಸರ ಹಾಗೆ ಕಠಿಣವಾದ ಕೆಲಸ ಮಾಡಬೇಕಾಯಿತು. ಚಳಿಗಾಲದಲ್ಲಿ ಮಣ್ಣು ಅಗಿಯಬೇಕಾಯಿತು. ಸೂಳೆಯರು ಮೇಲ್ವಿಚಾರಕಿಯರಾಗಿ ನೇಮಿಸಲ್ಪಟ್ಟಿದ್ದರು. ಅವರು ವಿಶ್ವಾಸಿಗಳನ್ನು ಅಪಹಾಸ್ಯಮಾಡುವದರಲ್ಲಿ ಸಂತೋಷಿಸುತ್ತಿದ್ದರು. ತನ್ನ ಪ್ರಾಣವನ್ನುಳಿಸಲು ನನ್ನ ಹೆಂಡತಿಯು ದನಗಳ ಹಾಗೆ ಹುಲ್ಲನ್ನು ತಿನ್ನಬೇಕಾಯಿತು. ಹಸಿವೆಪಡುತ್ತಿದ್ದ ಈ ಕೈದಿಗಳು ಕಾಲುವೆ ಕಾರ್ಯವನ್ನು ಮಾಡುತ್ತಿರುವಾಗ ಇಲಿಗಳನ್ನೂ ಹಾವುಗಳನ್ನೂ ತಿನ್ನುತ್ತಿದ್ದರು. ಭಾನುವಾರ ದಿವಸ ತಮ್ಮ ಮನೋರಂಜನೆಗಾಗಿ ಕಾವಲುಗಾರರು ಹೆಂಗಸರನ್ನು ದಾನ್ಯೂಬ್ ನದಿಯಲ್ಲಿ ನೂಕುತ್ತಿದ್ದರು. ಅವರನ್ನು ಹೊರಗೆಳೆದು ಹಸಿಯಾದ ಅವರ ದೇಹಗಳನ್ನು ನೋಡಿ ಅಪಹಾಸ್ಯಮಾಡಿ ಅವರನ್ನು ತಿರಿಗಿ ನದಿಯಲ್ಲಿ ನೂಕುತ್ತಿದ್ದರು. ನನ್ನ ಹೆಂಡತಿಗೆ ಈ ಅನುಭವವಾಯಿತು.

ತನ್ನ ತಂದೆತಾಯಿಗಳು ಸೆರೆಮನೆಯಲ್ಲಿ ಹಾಕಲ್ಪಟ್ಟ ನಂತರ ನನ್ನ ಮಗನು ಓಣಿಗಳಲ್ಲಿ ತಿರುಗಾಡುತ್ತಿದ್ದನು. ಬಾಲ್ಯದಿಂದ ಮಿಹಾಯ ಬಹಳ ಧಾರ್ಮಿಕ ಹುಡುಗನಾಗಿ ವಿಶ್ವಾಸದ ಸಂಬಂಧವಾಗಿ ಚೆನ್ನಾಗಿ ಲಕ್ಷ್ಯಕೊಡುತ್ತಿದ್ದನು. ಆದರೆ ಅವನು ಒಂಭತ್ತು ವರ್ಷದವನಾಗಿದ್ದಾಗ ಅವನ ತಂದೆತಾಯಿಗಳು ಅವನಿಂದ ಅಗಲಿಸಲ್ಪಟ್ಟರು. ಅವನ ಕ್ರೈಸ್ತ ಜೀವನದಲ್ಲಿ ಸಂಶಯಪಡುವ

ಸಂದರ್ಭ ಬಂತು. ತನ್ನ ಕಠಿಣವಾದ ಅನುಭವದಿಂದ ಅವನು ತನ್ನ ನಂಬಿಕೆಯ ವಿಷಯವಾಗಿ ಪ್ರಶ್ನೆಗಳನ್ನು ಹಾಕಲು ಪ್ರಾರಂಭಿಸಿದನು. ಇಂಥ ಚಿಕ್ಕ ವಯಸ್ಸಿನಲ್ಲಿ ಬೇರೆ ಮಕ್ಕಳಿಗಿಲ್ಲದ ಸಮಸ್ಯೆಗಳು ಅವನಿಗಾದವು. ಅವನು ತನ್ನ ಹೊಟ್ಟೆಯನ್ನು ತುಂಬಿಸುವ ವಿಚಾರವನ್ನು ಮಾಡಬೇಕಾಯಿತು.

ತಮ್ಮ ವಿಶ್ವಾಸಕ್ಕಾಗಿ ಸೆರೆಮನೆಯಲ್ಲಿ ಹಾಕಲ್ಪಟ್ಟ ಅಥವಾ ಕೊಲ್ಲಲ್ಪಟ್ಟ ಜನರ ಕುಟುಂಬಗಳಿಗೆ ಸಹಾಯಮಾಡುವದು ನೇಮದ ವಿರುದ್ಧವಾಗಿತ್ತು. ಇಬ್ಬರು ಹೆಂಗಸರು ನಮ್ಮ ಮಗನಿಗೆ ಸಹಾಯಮಾಡಿದರು. ಅವರು ಹಿಡಿಯಲ್ಪಟ್ಟು ಹೊಡೆಯಲ್ಪಟ್ಟರು. ಅದು ಹದಿನೈದು ವರ್ಷಗಳ ಹಿಂದೆ ಆಯಿತು. ಅವರು ಇನ್ನೂ ಕುಂಟರಾಗಿದ್ದಾರೆ. ಮತ್ತೊಬ್ಬ ಹೆಂಗಸು ತನ್ನ ಪ್ರಾಣವನ್ನು ಅಪಾಯದಲ್ಲಿಟ್ಟು ಮೀಹಾಯನ್ನು ತನ್ನ ಮನೆಯಲ್ಲಿ ಸೇರಿಸಿಕೊಂಡಳು. ಈ ದುಷ್ಟಕಾರ್ಯಕ್ಕಾಗಿ ಆಕೆಯು ಎಂಟು ವರ್ಷ ಸೆರೆಮನೆಯಲ್ಲಿರಬೇಕಾಯಿತು. ಯಾಕೆಂದರೆ ಆಕೆಯು ಕೈದಿಗಳ ಕುಟುಂಬಗಳಿಗೆ ಸಹಾಯಮಾಡಿದಳು. ಆಕೆಯ ಎಲ್ಲಾ ಹಲ್ಲುಗಳು ಕಾವಲುಗಾರರ ಕಾಲುಗಳಿಂದ ಮುರಿಯಲ್ಪಟ್ಟವು. ಆಕೆಯ ಎಲುಬುಗಳು ಮುರಿಯಲ್ಪಟ್ಟವು. ಕೆಲಸ ಮಾಡಲು ಆಕೆಗಾಗುವದಿಲ್ಲ. ಯಾಕೆಂದರೆ ಆಕೆ ಸಹ ಜೀವಮಾನವೆಲ್ಲಾ ಕುಂಟಳಾಗಿರುವಳು.

## "ಮೀಹಾಯ, ಯೇಸುವಿನಲ್ಲಿ ನಂಬಿಕೆಯಿಡು"

ಮೀಹಾಯ ಹನ್ನೆರಡು ವರ್ಷದವನಾಗಿ ಕ್ರಮವಾಗಿ ಕೆಲಸಮಾಡಲು ಪ್ರಾರಂಭಿಸಿದನು. ಅವನು ತಾಳಿದ ಕಷ್ಟಗಳ ಮೂಲಕ ಅವನ ನಂಬಿಕೆ ಚಂಚಲವಾಗಿತ್ತು. ಆದರೆ ನನ್ನ ಹೆಂಡತಿ ಸೆರೆಮನೆಯಲ್ಲಿ ಎರಡು ವರ್ಷಗಳನ್ನು ಕಳೆದ ನಂತರ ಆಕೆಯನ್ನು ನೋಡಲು ಅವನಿಗೆ ಅನುಕೂಲ ಸಿಕ್ಕಿತು. ಅವನು ಕಮ್ಯುನಿಷ್ಟರ ಸೆರೆಮನೆಗೆ ಹೋಗಿ ಸಳಿಗಳಿಂದ ಮಾಡಲ್ಪಟ್ಟ ಬಾಗಿಲಿನ ಆಚೆಗಿರುವ ತನ್ನ ತಾಯಿಯನ್ನು ನೋಡಿದನು ಆಕೆಯ ದೇಹವು ಅಶಕ್ತ ಹಾಗೂ ಹೊಲಸಾಗಿತ್ತು. ಆಕೆಯ ಕೈ ಹೊರಟಾಗಿತ್ತು. ಆಕೆಯ ಮೈ ಮೇಲೆ ಕೈದಿಯ ಬಟ್ಟೆಗಳಿದ್ದವು. ಆಕೆಯ ಗುರುತು ಹಿಡಿಯಲು ಮೀಹಾಯಗೆ ಕಷ್ಟವಾಯಿತು. ಆದರೆ ಆಕೆಯು ಅವನನ್ನು ನೋಡಿ—"ಮೀಹಾಯ, ಯೇಸುವಿನಲ್ಲಿ ನಂಬಿಕೆಯಿಡು," ಎಂದು ಕೂಗಿದಳು. ಕಾವಲುಗಾರರು ಕೋಪೋದ್ರೇಕವುಳ್ಳವರಾಗಿ ಆಕೆಯನ್ನು ಹಿಡಿದು ಹೊರಗೆಳೆದರು. ಇದನ್ನು ನೋಡಿ ಮೀಹಾಯ ಅತ್ತನು. ಆ ಕ್ಷಣದಲ್ಲಿ ಅವನು ದೇವರ ಕಡೆಗೆ ತಿರುಗಿಕೊಂಡನು. ಅಂಥ ಪರಿಸ್ಥಿತಿಯಲ್ಲಿ ಕ್ರಿಸ್ತನನ್ನು ಪ್ರೀತಿಸುವದು ಸಾಧ್ಯವಿದ್ದರೆ ಆತನು ಖಂಡಿತವಾಗಿ ನಿಜವಾದ ರಕ್ಷಕನಾಗಿದ್ದಾನೆಂದು ಅವನಿಗೆ ಗೊತ್ತಾಯಿತು. "ನನ್ನ ತಾಯಿಯು ಕ್ರೈಸ್ತತ್ವವನ್ನು ನಂಬುತ್ತಾಳೆ. ಅದರ ಸತ್ಯತೆಯನ್ನು ಸಿದ್ಧಾಂತಪಡಿಸಲು ಬೇರೆ ಕಾರಣಗಳಿಲ್ಲದಿದ್ದರೂ ಈ ಒಂದೇ ವಿಷಯ ಸಾಕು," ಎಂದು ಅವನು ಅನಂತರ ಸಾಕ್ಷಿ

ಕೊಟ್ಟನು. ಆ ದಿನದಲ್ಲಿ ಅವನು ಕ್ರಿಸ್ತನನ್ನು ಸಂಪೂರ್ಣವಾಗಿ ಅಂಗೀಕರಿಸಿದನು.

ಶಾಲೆಯಲ್ಲಿ ಉಳಿಯಬೇಕೆಂದು ಅವನು ದಿನಾಲು ಹೋರಾಡಬೇಕಾಯಿತು. ಅವನು ಒಳ್ಳೇ ವಿದ್ಯಾರ್ಥಿಯಾಗಿದ್ದನು. ಅವನಿಗೆ ಬಹುಮಾನವಾಗಿ ಒಂದು ಕೆಂಪು ಟೈ ಕೊಡಲ್ಪಟ್ಟಿತು. ಇದು ಕಮ್ಯುನಿಷ್ಟರ 'ತರುಣ ಸಂಘ'ದ ಗುರುತಾಗಿತ್ತು. ಅದಕ್ಕವನು —"ನನ್ನ ತಂದೆತಾಯಿಗಳನ್ನು ಸೆರೆಮನೆಯಲ್ಲಿ ಹಾಕಿದವರ ಟೈಯನ್ನು ನಾನೆಂದಿಗೂ ಧರಿಸಿಕೊಳ್ಳಲಾರೆ," ಎಂದು ಹೇಳಿದನು. ಅವನು ಶಾಲೆಯಿಂದ ಹೊರಗೆ ಹಾಕಲ್ಪಟ್ಟನು ಒಂದು ವರ್ಷವಾದ ನಂತರ ತಾನು ಕ್ರೈಸ್ತ ಕೈದಿಯ ಮಗನಾಗಿದ್ದೇನೆಂಬುದನ್ನು ಮರೆಮಾಡಿಕೊಂಡು ತಿರಿಗಿ ಶಾಲೆಯಲ್ಲಿ ಸೇರಿಕೊಂಡನು.

ಅವನು ಸತ್ಯವೇದದ ವಿರುದ್ಧವಾಗಿ ಒಂದು ಲೇಖನವನ್ನು ಬರೆಯಬೇಕಾಯಿತು. ಇದರಲ್ಲಿ ಅವನು —"ಸತ್ಯವೇದದ ವಿರುದ್ಧವಾಗಿ ಉಪಯೋಗಿಸಲ್ಪಟ್ಟ ವಾದವಿವಾದಗಳು ಯೋಗ್ಯವಲ್ಲ. ಪ್ರೊಫೆಸರರು ಸತ್ಯವೇದವನ್ನು ಓದಲಿಲ್ಲವೆಂದು ಸ್ಪಷ್ಟವಾಗಿ ಕಾಣುತ್ತದೆ. ಸತ್ಯವೇದವು ವಿಜ್ಞಾನಶಾಸ್ತ್ರದ ವಿರುದ್ಧವಲ್ಲ," ಎಂದು ಬರೆದನು. ಅವನು ತಿರಿಗಿ ಶಾಲೆಯಿಂದ ಹೊರಗ ಹಾಕಲ್ಪಟ್ಟನು. ಆವಾಗ ಅವನು ಎರಡು ವರ್ಷಗಳ ವರೆಗೆ ಶಾಲೆಗೆ ಹೋಗಲಾರದೆ ಇದ್ದನು.

ಕಡೆಯಲ್ಲಿ ಸತ್ಯವೇದ ಶಾಲೆಗೆ ಹೋಗಲು ಅವನಿಗೆ ಅನುಕೂಲ ಸಿಕ್ಕಿತು. ಅಲ್ಲಿ ದೇವರ ವಿಷಯವಾದ ಸಂಗತಿಗಳು ಮಾರ್ಕ್ಸನ ತತ್ವಗಳುಸಾರವಾಗಿ ಬೋಧಿಸಲ್ಪಡುತ್ತಿದ್ದವು. ಮೀಹಾಯ ವರ್ಗದಲ್ಲಿ ನಿಂತುಕೊಂಡು ಅದಕ್ಕೆ ಒಪ್ಪಗೆ ಕೊಡಲಿಲ್ಲ. ಬೇರೆ ವಿದ್ಯಾರ್ಥಿಗಳು ಅವನ ಪಕ್ಷಕ್ಕೆ ನಿಂತುಕೊಂಡರು. ಇದರ ಪರಿಣಾಮವಾಗಿ ಅವನು ಶಾಲೆಯಿಂದ ಹೊರಗೆ ಹಾಕಲ್ಪಟ್ಟನು. ಅವನು ತನ್ನ ಅಭ್ಯಾಸವನ್ನು ಮುಗಿಸದೆ ಹೋದನು.

ಒಮ್ಮೆ ಒಂದು ಶಾಲೆಯಲ್ಲಿ ಒಬ್ಬ ಪ್ರೊಫೆಸರರು ನಾಸ್ತಿಕತ್ವದ ವಿಷಯವಾಗಿ ಭಾಷಣಮಾಡಿದನು. ಮೀಹಾಯ ನಿಂತುಕೊಂಡು ಅವನಿಗೆ—"ನೀವು ಈ ರೀತಿ ಅನೇಕ ಯೌವನಸ್ಥರನ್ನು ತಪ್ಪಾದ ಮಾರ್ಗಕ್ಕೆ ನಡೆಸುವದು ಭಯಂಕರವಾದ ವಿಷಯವಾಗಿದೆ," ಎಂದು ಹೇಳಿದನು. ಎಲ್ಲಾ ವಿದ್ಯಾರ್ಥಿಗಳು ಅದಕ್ಕೆ ಒಪ್ಪಿದರು. ಆದರೆ ಈ ರೀತಿಯಲ್ಲಿ ಎಲ್ಲರ ಮುಂದೆ ಮಾತನಾಡಲು ಬಹಳ ಧೈರ್ಯವಿರಬೇಕಿತ್ತು. ಶಿಕ್ಷಣವನ್ನು ಹೊಂದಲು ತಾನು ಕೈದಿಯಾದ ವರ್ಮಬ್ರೆಂಡನ ಮಗನಾಗಿದ್ದೇನೆಂದು ಮರೆಮಾಡುವದು ಅಗತ್ಯವಾಗಿತ್ತು. ಆದರೆ ಇದು ಗೊತ್ತಾದ ಕೂಡಲೇ ಅವನು ಹೆಡ್‌ಮಾಸ್ತರರ ಕೋಣೆಗೆ ಕರೆಯಲ್ಪಟ್ಟು ಶಾಲೆಯಿಂದ ಹೊರಗೆ ಹಾಕಲ್ಪಡುತ್ತಿದ್ದನು.

ಮೀಹಾಯುಗೆ ಬಹಳ ಹಸಿವೆಯಾಗಿತ್ತು. ಸೆರೆಮನೆಯಲ್ಲಿ ಹಾಕಲ್ಪಟ್ಟ ಕ್ರೈಸ್ತ ಕುಟುಂಬಗಳಿಗೆ ಅನೇಕಾವರ್ತಿ ಹಸಿವೆಯು ಸಂಕಟವಿತ್ತು. ಯಾಕೆಂದರೆ ಅವರಿಗೆ ಸಹಾಯ ಮಾಡುವದು ಆ ದೇಶದ ನಿಯಮದ ವಿರುದ್ಧವಾಗಿದೆ. ನನಗೆ ಸ್ವತಃ ಗೊತ್ತಾದ ಒಂದು ಕುಟುಂಬದ ಕಷ್ಟಗಳ ವಿಷಯವಾಗಿ ತಿಳಿಸುತ್ತೇನೆ. ತಾನು ಗುಪ್ತ ಸಭೆಯಲ್ಲಿ ಮಾಡಿದ ಸೇವೆಯು ದೆಸೆಯಿಂದ ಸೆರೆಮನೆಯಲ್ಲಿ ಹಾಕಲ್ಪಟ್ಟನು. ಅವನಿಗೆ ಹೆಂಡತಿಯೂ ಆರು ಜನ ಮಕ್ಕಳೂ ಇದ್ದರು. ಹದಿನೇಳು, ಹತ್ತೊಂಭತ್ತು ವಯಸ್ಸಿನ ಅವನ ದೊಡ್ಡ ಹೆಣ್ಣು ಮಕ್ಕಳಿಗೆ ಕೆಲಸ ಸಿಕ್ಕಲಿಲ್ಲ. ಯಾಕೆಂದರೆ ಕಮ್ಯುನಿಷ್ಟ ದೇಶಗಳಲ್ಲಿ ಸರಕಾರವು ಎಲ್ಲಾ ಕೆಲಸಗಳನ್ನು ಜನರಿಗೆ ಹಂಚಿಕೊಡುತ್ತದೆ. ಅಪರಾಧಿಗಳಾದ ಕ್ರೈಸ್ತರ ಮಕ್ಕಳಿಗೆ ಅದು ಕೆಲಸವನ್ನು ನೇಮಿಸುವದಿಲ್ಲ. ನೈತಿಕ ರೀತಿಯಿಂದ ಇದರ ವಿಷಯವಾಗಿ ತೀರ್ಮಾನ ಮಾಡಬೇಡಿರಿ. ನಿಜವಾದ ಸ್ಥಿತಿಯನ್ನು ತಿಳಿದುಕೊಳ್ಳಿರಿ. ಈ ಕಷ್ಟಪಟ್ಟ ಕ್ರೈಸ್ತನ ಇಬ್ಬರು ಹೆಣ್ಣು ಮಕ್ಕಳು ಅಸ್ವಸ್ಥಳಾಗಿದ್ದ ತಮ್ಮ ತಾಯಿಯನ್ನೂ ತಮ್ಮ ಚಿಕ್ಕ ತಮ್ಮಂದಿರನ್ನೂ ಪೋಷಿಸುವಂತೆ ಸೂಳೆಯರಾದರು. ಇದನ್ನು ನೋಡಿದ ಹದಿನಾಲ್ಕು ವರ್ಷದ ಅವರ ತಮ್ಮನನ್ನು ಮೂರ್ಖನಾಗಿ ಆಸ್ಪತ್ರೆಯಲ್ಲಿ ಇಡಲ್ಪಡಬೇಕಾಯಿತು. ಸೆರೆಮನೆಯಿಂದ ಬಿಡುಗಡೆ ಹೊಂದಿದ ನಂತರ ಅವರ ತಂದೆಯು ಇದನ್ನು ನೋಡಿ —"ದೇವರೇ, ನನ್ನನ್ನು ತಿರಿಗಿ ಸೆರೆಮನೆಯಲ್ಲಿಡು. ಇದನ್ನು ನೋಡಲು ನನಗಾಗದು," ಎಂದು ಪ್ರಾರ್ಥನೆ ಮಾಡಿದನು. ದೇವರು ಅವನ ಪ್ರಾರ್ಥನೆಯನ್ನು ಕೇಳಿದನು. ಅವನು ಮಕ್ಕಳಿಗೆ ಸಾಕ್ಷಿಯನ್ನು ಕೊಟ್ಟಿದ್ದ ಕಾರಣ ತಿರಿಗಿ ಸೆರೆಮನೆಯಲ್ಲಿದ್ದಾನೆ. ಅವನ ಹೆಣ್ಣು ಮಕ್ಕಳು ಈಗ ಸೂಳೆಯರಾಗಿಲ್ಲ. ಅವರು ಗುಪ್ತ ಪೊಲೀಸರ ಆಧೀನರಾಗಿ ಅವರಿಗೆ ತಿಳುವಳಿಕೆಯನ್ನು ಕೊಡುವವರಾಗಿದ್ದಾರೆ. ಅವರ ತಂದೆಯು ತನ್ನ ನಂಬಿಕೆಗಾಗಿ ಸೆರೆಮನೆಯಲ್ಲಿದ್ದ ಕಾರಣ ಅವರು ಅನೇಕರ ಮನೆಗಳಲ್ಲಿ ಸ್ವಾಗತಿಸಲ್ಪಡುತ್ತಾರೆ. ಆ ಮನೆಗಳಲ್ಲಿ ಅವರು ಕೇಳುತ್ತಿರುವ ಎಲ್ಲ ವಿಷಯಗಳನ್ನು ಗುಪ್ತ ಪೊಲೀಸರಿಗೆ ತಿಳಿಸುತ್ತಾರೆ. ಇದೆಲ್ಲ ನಿಜವಾಗಿ ಅನೀತಿಯುಳ್ಳದ್ದೂ ಅಯೋಗ್ಯವೂ ಆಗಿದೆ. ಆದರೆ ಬೇರೆ ವಿಶ್ವಾಸಿಗಳಿಂದ ಇಂಥವರಿಗೆ ಸಹಾಯ ಸಿಕ್ಕದ ಕಾರಣ ಇಂಥ ಅತಿ ಭಯಂಕರ ಸಂಗತಿಗಳಾಗುತ್ತವೆ.

# ಅಧ್ಯಾಯ—4

ನಾನು ಹದಿನಾಲ್ಕು ವರುಷ ಸೆರೆಮನೆಯಲ್ಲಿ ಕಳೆದೆನು. ಆ ಕಾಲವೆಲ್ಲಾ ನಾನು ಸತ್ಯವೇದವನ್ನಾಗಲಿ ಬೇರೊಂದು ಪುಸ್ತಕವನ್ನಾಗಲಿ ನೋಡಲಿಲ್ಲ. ಬರೆಯುವ ರೀತಿಯನ್ನೂ ನಾನು ಮರೆತುಬಿಟ್ಟೆ. ನಾನು ತಾಳಿದ ಹಸಿವೆ ಹಿಂಸೆಗಳ ಮೂಲಕವಾಗಿ ಸತ್ಯವೇದವನ್ನು ಮರೆತಿದ್ದೆನು. ಆದರೆ ನಾನು ಹದಿನಾಲ್ಕು ವರುಷದ ವೇಳೆಯನ್ನು ಕಳೆದ ದಿನದಲ್ಲಿ ಹೇಗೋ ನನ್ನ ಜ್ಞಾಪಕಕ್ಕೆ ಸತ್ಯವೇದದ ಒಂದು ವಚನವು ಬಂತು. ಅದೇನೆಂದರೆ—"ಯಾಕೋಬನು ರಾಹೇಲಳಿಗೋಸ್ಕರ ಹದಿನಾಲ್ಕು ವರುಷ ಸೇವೆ ಮಾಡಿದನು; ಆದರೂ ಆಕೆಯಲ್ಲಿ ಬಹಳ ಪ್ರೀತಿಯನ್ನಿಟ್ಟಿದ್ದರಿಂದ ಅದು ಅವನಿಗೆ ಸ್ವಲ್ಪ ದಿವಸದಂತೆ ಕಾಣಿಸಿತು," ಎಂಬುದೇ.

ಸ್ವಲ್ಪ ದಿವಸಗಳಾದ ನಂತರ ಅಮೆರಿಕದಲ್ಲಿ ಬಹು ಜನರ ಅಭಿಪ್ರಾಯದ ಪ್ರಭಾವದಿಂದ ನಮ್ಮ ದೇಶದಲ್ಲಿ ಅನೇಕರಿಗೆ ಸೆರೆಮನೆಯಿಂದ ಬಿಡುಗಡೆ ಸಿಕ್ಕಿತು. ಅವರಲ್ಲಿ ನಾನೂ ಒಬ್ಬನಿದ್ದೆನು ನಾನು ತಿರಿಗಿ ನನ್ನ ಹೆಂಡತಿಯನ್ನು ನೋಡಿದೆನು. ಆಕೆಯು ನಂಬಿಗಸ್ತಳಾಗಿ ನನಗಾಗಿ ಹದಿನಾಲ್ಕು ವರುಷ ಕಾಯುತ್ತಾ ಬಂದಿದ್ದಳು. ನಾವು ಬಹು ಬಡವರಾಗಿ ತಿರಿಗಿ ಜೀವಿಸಲಿಕ್ಕೆ ಪ್ರಾರಂಭಿಸಿದೆವು. ಯಾಕೆಂದರೆ ಒಬ್ಬರು ಪೊಲೀಸರಿಂದ ಹಿಡಿಯಲ್ಪಡುವಾಗ ಅವನ ಎಲ್ಲಾ ಸೊತ್ತು ತೆಗೆಯಲ್ಪಡುತ್ತದೆ.

ಬಿಡುಗಡೆ ಹೊಂದಿದ ಪಾದ್ರಿಗಳಿಗೆ ಚಿಕ್ಕ ಚಿಕ್ಕ ಸಭೆಗಳು ಸಿಕ್ಕುವದು ಸಾಧ್ಯವಾಗಿತ್ತು. ಆರ್‌ಸೋವಾ ಎಂಬ ಊರಿನಲ್ಲಿ ನನಗೆ ಒಂದು ಸಭೆ ನೇಮಕವಾಗಿತ್ತು. ಅದರಲ್ಲಿ ಮೂವತ್ತೈದು ಸದಸ್ಯರಿದ್ದರು ಅದರಲ್ಲಿ ಮೂವತ್ತಾರು ಜನರು ಎಂದಿಗೂ ಇರಬಾರದೆಂದು ಕಮ್ಯುನಿಷ್ಟರ ಧರ್ಮ ವಿಭಾಗವು ನನಗೆ ತಿಳಿಸಿತು. ಅವರು ನನಗೆ—"ನೀನು ನಮಗೆ ಪ್ರತಿನಿಧಿಯಾಗಿರಬೇಕು. ಪ್ರತಿಯೊಬ್ಬ ಸದಸ್ಯನ ವಿಷಯವಾಗಿ ನೀನು ಗುಪ್ತ ಪೊಲೀಸರಿಗೆ ತಿಳುವಳಿಕೆ ಕೊಡಬೇಕು. ಯೌವನಸ್ಥರು ಸಭೆಗೆ ಬರದಂತೆ ಗಮನಕೊಡಬೇಕು," ಎಂದು ಆಜ್ಞಾಪಿಸಿದರು. ಈ ರೀತಿಯಲ್ಲಿ ಕಮ್ಯುನಿಷ್ಟರು ಸಭೆಗಳನ್ನು ತಮ್ಮ ಸಾಧನಗಳನ್ನಾಗಿ ಉಪಯೋಗಿಸುತ್ತಾರೆ.

ನಾನು ಉಪದೇಶಿಸಲು ಪ್ರಯತ್ನಿಸಿದರೆ ಅನೇಕರು ಕೇಳಲು ಬರುವರೆಂದು ತಿಳಿದುಕೊಂಡೆನು. ಆದಕಾರಣ ಹೊರಗಿನ ಸಭೆಗಳಲ್ಲಿ ಸೇವೆ ಮಾಡಲು ನಾನು ಪ್ರಾರಂಭಿಸಲಿಲ್ಲ. ನಾನು ಗುಪ್ತ ಸಭೆಯಲ್ಲಿ ಸೇವೆಮಾಡುತ್ತಾ ಅದರ ಸೌಂದರ್ಯಗಳಲ್ಲಿಯೂ ಸಂಕಟಗಳಲ್ಲಿಯೂ ಪಾಲುಗಾರನಾಗಿದ್ದೆನು.

ನಾನು ಸೆರೆಮನೆಯಲ್ಲಿದ್ದಾಗ ದೇವರು ಆಶ್ಚರ್ಯಕರವಾದ ರೀತಿಯಲ್ಲಿ ತನ್ನ ಕಾರ್ಯವನ್ನು ಸಾಧಿಸುತ್ತಾ ಬಂದಿದ್ದನು. ಬೇರೆ ವಿಶ್ವಾಸಿಗಳು ಗುಪ್ತ ಸಭೆಯನ್ನು ಜ್ಞಾಪಕಮಾಡಿ ನಮಗೆ ಸಹಾಯಮಾಡಲು ಪ್ರಯತ್ನಿಸುತ್ತಿದ್ದರು.

ಒಂದು ದಿವಸ ಮಧ್ಯಾಹ್ನ ನಾನು ಸಣ್ಣ ಊರಿನಲ್ಲಿರುವ ಒಬ್ಬ ಸಹೋದರನ ಮನೆಯಲ್ಲಿ ನಿದ್ರೆ ಮಾಡುತ್ತಿದ್ದೆನು. ಅವನು ನನ್ನನ್ನು ಎಬ್ಬಿಸಿ—"ಪರದೇಶದಿಂದ ಸಹೋದರರು ಬಂದಿದ್ದಾರೆಂದು" ತಿಳಿಸಿದನು. ಈ ಸಹೋದರರು ಕ್ರಿಸ್ತನಿಗಾಗಿ ಹಿಂಸೆ ಪಡುತ್ತಿರುವ ಸಹೋದರರ ಕುಟುಂಬಗಳಿಗೆ ಗುಪ್ತವಾದ ರೀತಿಯಲ್ಲಿ ಸಹಾಯವನ್ನು ನೀಡುತ್ತಿದ್ದರು. ಇದು ಮಾತ್ರವಲ್ಲದೇ ಅವರು ಕ್ರೈಸ್ತ ಸಾಹಿತ್ಯವನ್ನೂ ಸಹ ಗುಪ್ತವಾದ ರೀತಿಯಲ್ಲಿ ಕಳುಹಿಸುತ್ತಿದ್ದರು. ಈ ಕೆಲಸಕ್ಕಾಗಿ ಬಂದಿದ್ದ ಆರು ಜನ ಸಹೋದರರನ್ನು ನಾನು ಸಂದರ್ಶಿಸಿದೆನು. ಅವರು ಬಹಳ ವೇಳೆಯ ವರೆಗೆ ನನ್ನ ಕೂಡ ಸಂಭಾಷಿಸಿದರು. ಅನಂತರ ಅವರು—"ಈ ವಿಳಾಸದಲ್ಲಿ ಸೆರೆಮನೆಯಲ್ಲಿ ಹದಿನಾಲ್ಕು ವರುಷ ಕಳೆದ ಒಬ್ಬ ಮನುಷ್ಯನು ನಮಗೆ ಸಿಕ್ಕುವನೆಂದು ನಾವು ಕೇಳಿದ್ದೇವೆ. ಅವನನ್ನು ನೋಡಲು ನಾವು ಇಚ್ಛೈಸುತ್ತೇವೆ," ಎಂದು ಹೇಳಿದರು. "ನಾನೇ ಆ ಮನುಷ್ಯನು," ಎಂದು ನಾನು ಉತ್ತರವಿತ್ತೆ. ಅವರು ಆಶ್ಚರ್ಯಪಟ್ಟು—"ನಾವು ದುಃಖದಿಂದ ತುಂಬಿದ ಒಬ್ಬ ಮನುಷ್ಯನನ್ನು ನೋಡುವೆವೆಂದು ಕಲ್ಪಿಸಿದ್ದೆವು. ಆದರೆ ನೀವು ಸಂತೋಷಭರಿತರಾಗಿದ್ದೀರಿ. ನೀವು ಆ ವ್ಯಕ್ತಿಯಾಗಿರಲಾರಿರಿ," ಎಂದು ಹೇಳಿದರು. ನಾನು ಅವರಿಗೆ—"ನಾನು ನಿಜವಾಗಿ ಹದಿನಾಲ್ಕು ವರುಷ ಸೆರೆಮನೆಯಲ್ಲಿದ್ದೆನು. ಆದರೆ ನೀವು ನಮ್ಮನ್ನು ಮರೆಯದೇ ಭೆಟ್ಟಿಯಾಗಲು ಬಂದದ್ದರಿಂದ ನಾನು ಸಂತೋಷಭರಿತನಾಗಿದ್ದೇನೆ," ಎಂದು ಉತ್ತರ ಕೊಟ್ಟೆನು. ಅನಂತರ ಸಹಾಯವು ನಮಗೆ ಕ್ರಮವಾಗಿ ಸಿಕ್ಕುತ್ತಿತ್ತು. ಗುಪ್ತವಾದ ಮಾರ್ಗಗಳಿಂದ ನಮಗೆ ಸತ್ಯವೇದಗಳೂ ಬೇರೆ ಕ್ರೈಸ್ತ ಸಾಹಿತ್ಯಗಳೂ ಸಿಕ್ಕಿದವು. ಇದು ಮಾತ್ರವಲ್ಲದೇ ರಕ್ತ ಸಾಕ್ಷಿಗಳ ಹಾಗೂ ಸೆರೆಮನೆಯಲ್ಲಿ ಹಾಕಲ್ಪಟ್ಟವರ ಕುಟುಂಬಗಳಿಗಾಗಿ ಸಹಾಯ ಸಿಕ್ಕುತ್ತಿತ್ತು. ಈ ಸಹಾಯದಿಂದ ಗುಪ್ತ ಸಭೆಯ ಕೆಲಸ ಹೆಚ್ಚಾಗಿ ಮುಂದುವರಿಯಿತು. ಯಾಕೆಂದರೆ ದೇವರ ವಾಕ್ಯವನ್ನು ನಮಗೆ ಕೊಟ್ಟದ್ದು ಮಾತ್ರವಲ್ಲದೇ ಅವರು ನಮ್ಮನ್ನು ಪ್ರೀತಿಸುತ್ತಿದ್ದರೆಂದು ತಿಳಿದುಕೊಂಡೆವು. ಇದರಿಂದ ನಮಗೆ ಸಂತೈಸುವಿಕೆ ಸಿಕ್ಕಿತು.

ಮನ ತೊಳೆಯುವ (**Brain Washing**) ವಿಧಾನವು ನಡೆಯುತ್ತಿರುವಾಗ ನಮ್ಮ ಹಿಂಸಕರು ನಮಗೆ—"ಯಾರೂ ನಿನ್ನನ್ನು ಇನ್ನೂ ಪ್ರೀತಿಸುವದಿಲ್ಲ; ಯಾರೂ ನಿನ್ನನ್ನು ಇನ್ನೂ ಪ್ರೀತಿಸುವದಿಲ್ಲ; ಯಾರೂ ನಿನ್ನನ್ನು ಇನ್ನೂ ಪ್ರೀತಿಸುವದಿಲ್ಲ," ಎಂದು ಮೇಲಿಂದ ಮೇಲೆ ಹೇಳುತ್ತಿದ್ದರು. ಆದರೆ ಈ ಪರದೇಶಿಯ ವಿಶ್ವಾಸಿಗಳು ನಮಗೆ ತಮ್ಮ ಪ್ರೀತಿಯನ್ನು ತೋರ್ಪಡಿಸಲು ತಮ್ಮ ಪ್ರಾಣಗಳನ್ನು ಅಪಾಯದಲ್ಲಿಟ್ಟರು. ನಮ್ಮ ಮಾರ್ಗದರ್ಶನದ

ಪ್ರಕಾರ ಅವರು ತಮ್ಮ ಗುಪ್ತ ಕಾರ್ಯವನ್ನು ಮಾಡುತ್ತಿದ್ದರು. ಅವರು ಗುಪ್ತ ಪೊಲೀಸರಿಂದ ಕಾಯುತ್ತಿದ್ದ ಮನೆಗಳಲ್ಲಿ ಗುಪ್ತವಾಗಿ ನುಗ್ಗಿದರು. ಭಾರತದಲ್ಲಿ ಎಲ್ಲರೂ ಸುಲಭವಾಗಿ ಸತ್ಯವೇದದ ಪ್ರತಿಗಳನ್ನು ಕೊಂಡುಕೊಳ್ಳಬಹುದು. ಆದರೆ ನಮಗೆ ಸಿಕ್ಕ ಈ ಸತ್ಯವೇದಗಳು ನಿಜವಾಗಿ ಅತ್ಯಮೂಲ್ಯವಾಗಿದ್ದವು.

ಈ ಸಹಾಯವಿಲ್ಲದೆ ನನ್ನ ಕುಟುಂಬವೂ ನಾನೂ ಉಳಿಯುವದು ಸಾಧ್ಯವಿರಲಿಲ್ಲ. ಬೇರೆ ಕಮ್ಯುನಿಷ್ಟ ದೇಶಗಳಲ್ಲಿ ಜೀವಿಸುತ್ತಿದ್ದ ಗುಪ್ತ ಸಭೆಯ ಪಾಲಕರಿಗೆ ಅದೇ ಅನುಭವವಾಯಿತು. ಬ್ರಿಟನ್‌ದಲ್ಲಿದ್ದ ಯುರೋಪಿಯನ್ ಕ್ರಿಶ್ಚನ್ ಮಿಶನ್ ಎಂಬ ಸಂಘದಿಂದ ನಮಗೆ ಆಸ್ತಿಕ ಹಾಗೂ ಆತ್ಮಿಕ ಸಹಾಯ ದೊರೆಯುತ್ತಿತ್ತು. ಅವರ ಪ್ರತಿನಿಧಿಗಳು ನಮಗೆ ದೇವದೂತರ ಹಾಗಿದ್ದರು.

ಗುಪ್ತ ಸಭೆಯ ಸೇವೆ ಹೆಚ್ಚಾಗಿ ನಡೆಯುತ್ತಿದ್ದರಿಂದ ನಾನು ತಿರಿಗಿ ಹಿಡಿಯಲ್ಪಡುವ ಅಪಾಯದಲ್ಲಿದ್ದೆನು. ಆದರೆ ನಾನು ಸ್ವದೇಶವನ್ನು ಬಿಡುವ ಅಪ್ಪಣೆಯನ್ನು ಹೊಂದುವ ಹಾಗೆ ಎರಡು ಕ್ರೈಸ್ತ ಸಂಸ್ಥಾನಗಳು ನನಗಾಗಿ ಸುಮಾರು 50 ಸಾವಿರ ರೂಪಾಯಿ ಈಡು ಕೊಟ್ಟರು. ರೂಮೆನಿಯಾ ದೇಶವನ್ನು ಬಿಟ್ಟು ಬಿಡಲು ನನಗೆ ಸಾಧ್ಯವಿತ್ತು.

## ನಾನು ರೂಮೆನಿಯವೆಂಬ ಕಮ್ಯುನಿಷ್ಟರ ದೇಶವನ್ನು ಬಿಟ್ಟ ಕಾರಣ

ನನಗೆ ಅಪಾಯುಗಳಿದ್ದರೂ ಗುಪ್ತ ಸಭೆಯ ನಾಯಕರು ನಮಗೆ ಅಪ್ಪಣೆ ಕೊಡದಿದ್ದರೆ ನನ್ನ ದೇಶವನ್ನು ಬಿಟ್ಟು ನಾನು ಹೋಗುತ್ತಿರಲಿಲ್ಲ. ಆದರೆ ಅವರು ನನಗೆ—"ನೀವು ಈ ಅನುಕೂಲವನ್ನು ಗ್ರಹಿಸಿಕೊಳ್ಳಿರಿ. ಸ್ವಾತಂತ್ರ್ಯವುಳ್ಳ ದೇಶಗಳಲ್ಲಿ ನೀವು ಗುಪ್ತ ಸಭೆಯ ವಾಣಿಯಾಗುವಿರಿ. ನಮ್ಮ ಕಷ್ಟ ಕೊರತೆಗಳ ವಿಷಯವಾಗಿ ಪಶ್ಚಿಮ ದೇಶಗಳಲ್ಲಿರುವ ಜನರಿಗೆ ತಿಳಿಸಿರಿ," ಎಂದು ಆಜ್ಞಾಪಿಸಿದರು. ನಾನು ಪಶ್ಚಿಮ ದೇಶಗಳಿಗೆ ಬಂದಿದ್ದರೂ ನನ್ನ ಹೃದಯವು ಅಲ್ಲಿಯೇ ಅವರೊಂದಿಗಿತ್ತು. ಗುಪ್ತ ಸಭೆಯ ಕಷ್ಟದ ಮತ್ತು ಧೈರ್ಯವುಳ್ಳ ಸೇವೆಯ ವಿಷಯವಾಗಿ ಕೇಳಲು ನಿಮಗೆ ಅತ್ಯಗತ್ಯವಿಲ್ಲದಿದ್ದರೆ ನಾನು ರೂಮೆನಿಯಾ ದೇಶವನ್ನು ಬಿಡುತ್ತಿರಲಿಲ್ಲ. ಈ ಉದ್ದೇಶದಿಂದಲೇ ಬಂದಿದ್ದೇನೆ.

ನಾನು ರೂಮೆನಿಯಾ ದೇಶವನ್ನು ಬಿಡುವದಕ್ಕಿಂತ ಮೊದಲು ಎರಡು ಸಾರೆ ಗುಪ್ತ ಪೊಲೀಸರ ಕಡೆಗೆ ಕರೆಯಲ್ಪಟ್ಟೆನು. ನನ್ನನ್ನು ಬಿಡುವಂತೆ ತಾವು ಹಣವನ್ನು ಹೊಂದಿದ್ದೇವೆಂದು ತಿಳಿಸಿದರು. (ಕಮ್ಯುನಿಷ್ಟ ತತ್ವದಿಂದ ರೂಮೆನಿಯಾ ದೇಶಕ್ಕೆ ಆರ್ಥಿಕ ಕಷ್ಟ ಮೇಲಿಂದ ಮೇಲೆ ಬರುತ್ತದೆ. ಆದಕಾರಣ ಸರಕಾರವು ನಾಗರಿಕರನ್ನು ಹಣಕ್ಕಾಗಿ ಮಾರಲು ಸಿದ್ಧರಾಗಿದ್ದಾರೆ.) ಅವರು ನನಗೆ—"ಪಶ್ಚಿಮ ದೇಶಗಳಿಗೆ ಹೋಗಿ ನಿನ್ನ ಇಚ್ಛಾನುಸಾರವಾಗಿ ಕ್ರಿಸ್ತನ ವಿಷಯವಾಗಿ ಉಪದೇಶಮಾಡು; ಆದರೆ ನಮ್ಮ ವಿಷಯವಾಗಿ

ಏನೂ ಹೇಳಬಾರದು. ನಮ್ಮ ವಿರುದ್ಧವಾಗಿ ಒಂದು ಮಾತನ್ನೂ ಆಡಬಾರದು.
ನಿಮ್ಮ ಅನುಭವಗಳ ವಿಷಯವಾಗಿ ನೀನು ತಿಳಿಸಿದರೆ ನಾವು ಏನಾದರೂ ಒಂದು
ಯುಕ್ತಿಯನ್ನು ಮಾಡುತ್ತೇವೆ. ನಾವು ಯಾವನೊಬ್ಬ ಕೊಲೆಗಾರನಿಗೆ ಹತ್ತು
ಸಾವಿರ ರೂಪಾಯಿ ಕೊಟ್ಟರೆ ಅವನು ನಿನ್ನನ್ನು ಕೊಂದುಹಾಕುವನು. ಇಲ್ಲ
ವಾದರೆ ನಮ್ಮ ಪ್ರತಿನಿಧಿಗಳಿಂದ ಎಲ್ಲಿಯಾದರೂ ನಿನ್ನನ್ನು ಹಿಡಿದು ತಿರಿಗಿ
ತರುವದು ನಮಗೆ ಸಾಧ್ಯ," ಎಂದು ಹೇಳಿದರು. (ನಾನು ಸ್ವತಃ ಲ್ಯಾನೆಲಿ
ಲ್ಯೂಯೆಲ್ ಎಂಬ ಆರ್ಥೋಡೊಕ್ಸ್ ಸಭೆಯ ಬಿಷಪನ ಸಂಗಡ ಸೆರೆಯಲ್ಲಿ
ಒಂದೇ ಕೋಣೆಯಲ್ಲಿದ್ದೆನು. ಗುಪ್ತ ಪೊಲೀಸರ ಪ್ರತಿನಿಧಿಗಳು ಆಸ್ಟ್ರೀಯಾ
ದೇಶದಲ್ಲಿ ಅವನನ್ನು ಹಿಡಿದು ರೂಮೆನಿಯಾ ದೇಶಕ್ಕೆ ತಂದಿದ್ದರು. ಅವನ
ಎಲ್ಲ ಉಗುರುಗಳನ್ನು ಕಿತ್ತುಹಾಕಿದ್ದರು. ಬೇರೆ ಕೈದಿಗಳು ಜರ್ಮನ್ ದೇಶ
ದಲ್ಲಿ ಅದೇ ರೀತಿಯಲ್ಲಿ ಗುಪ್ತವಾಗಿ ಹಿಡಿಯಲ್ಪಟ್ಟಿದ್ದರು. ಅನಂತರ ಇಂಥವರು
ಇಟಲಿ ಹಾಗೂ ಫ್ರಾನ್ಸ್ ದೇಶಗಳಿಂದ ಬಲತ್ಕಾರದಿಂದ ರೂಮೆನಿಯಾ ದೇಶಕ್ಕೆ
ಒಯ್ಯಲ್ಪಟ್ಟಿದ್ದರು.) ಇದು ಮಾತ್ರವಲ್ಲದೆ ಅವರು ನನಗೆ – "ನಮಗೆ
ಮತ್ತೊಂದು ಕುಯುಕ್ತಿಯಿದೆ. ನೀನು ಯಾವನೊಬ್ಬ ಹುಡುಗಿಯನ್ನು ಕೆಡಿಸಿದೆ
ಯೆಂತಲೂ ಕಳ್ಳತನ ಮಾಡಿದೆಯೆಂತಲೂ ಬೇರೊಂದು ತಪ್ಪನ್ನು ಮಾಡಿದ್ದೀ
ಯೆಂತಲೂ ಜನರಲ್ಲಿ ಸುಳ್ಳು ಹಂತೆಯನ್ನು ಹಬ್ಬಿಸಿ ನಿನ್ನ ಪ್ರಭಾವವನ್ನು ಕೆಡಿಸ
ಬಲ್ಲೆವು. ಪಶ್ಚಿಮ ದೇಶದಲ್ಲಿರುವ ಜನರನ್ನು ವಿಶೇಷವಾಗಿ ಅಮೆರಿಕ ದೇಶ
ದವರನ್ನು ಮೋಸಗೊಳಿಸುವದು ಅತಿ ಸುಲಭ," ಎಂದು ಹೇಳಿದರು.

ಈ ರೀತಿಯ ಎಚ್ಚರಿಕೆಯ ಮಾತುಗಳನ್ನು ಕೊಟ್ಟನಂತರ ಪಶ್ಚಿಮ
ದೇಶಗಳಿಗೆ ಹೋಗಲು ನನಗೆ ಅಪ್ಪಣೆ ಸಿಕ್ಕಿತು. ನಾನು ತಾಳಿದ ಮನೋ
ತೊಳಲುವಿಕೆಯಲ್ಲಿ ಅವರಿಗೆ ಬಹಳ ಭರವಸವಿತ್ತು. ನಾನು ತಾಳಿದ ಕಷ್ಟ
ಗಳನ್ನು ತಾಳಿದ ಇನ್ನೂ ಅನೇಕ ಜನರು ಪಶ್ಚಿಮ ದೇಶಗಳಲ್ಲಿದ್ದಾರೆ. ಅವರು
ಈಗ ಈ ವಿಷಯಗಳ ಸಂಬಂಧವಾಗಿ ಮೌನವಾಗಿದ್ದಾರೆ. ಕೆಲವರು ಕಮ್ಯು
ನಿಷ್ಟರಿಂದ ಹಿಂಸೆ ತಾಳಿದಾಗ್ಯೂ ಈಗ ಅದರ ತತ್ವಗಳನ್ನು ಸ್ತುತಿಸುತ್ತಾರೆ.
ನಾನು ಸಹ ಮೌನನಾಗಿರುವೆನೆಂದು ಅವರಿಗೆ ನಿಶ್ಚಯತ್ವವಿತ್ತು. ಈ ರೀತಿಯಲ್ಲಿ
ಡಿಸೆಂಬರ್ 1965 ರಲ್ಲಿ ನಾನು ನನ್ನ ಕುಟುಂಬ ಸಹಿತ ರೂಮೆನಿಯಾ ದೇಶ
ವನ್ನು ಬಿಟ್ಟು ಬಿಟ್ಟೆ.

ಬಿಡುವದಕ್ಕಿಂತ ಮುಂಚಿತವಾಗಿ ನನ್ನ ಕಡೆಯ ಕಾರ್ಯ ಯಾವುದೆಂದರೆ
— ನನ್ನನ್ನು ಹಿಡಿದು ಅನೇಕ ವರ್ಷಗಳ ವರೆಗೆ ಹಿಂಸೆ ಕೊಡಬೇಕೆಂದು ಆಜ್ಞಾ
ಪಿಸಿದ್ದ ಅಧಿಕಾರಿಯ ಸಮಾಧಿಗೆ ನಾನು ಹೋದೆನು. ಆ ಸಮಾಧಿಯ ಮೇಲೆ
ನಾನೊಂದು ಹೂ ಇಟ್ಟೆನು. ಈ ರೀತಿಯಲ್ಲಿ ಆತ್ಮಿಯ ದೃಷ್ಟಿಯಲ್ಲಿ ಬರಿ
ದಾದ ಕಮ್ಯುನಿಷ್ಟರ ಕಡೆಗೆ ಕ್ರಿಸ್ತನಲ್ಲಿ ತನಗಿರುವ ಆನಂದವನ್ನು ತರುವಂತೆ
ನಾನು ನನ್ನನ್ನು ಪ್ರತ್ಯೇಕಿಸಿಕೊಂಡೆನು.

ನಾನು ಕಮ್ಯುನಿಷ್ಟತ್ವವನ್ನು ಹಗೆ ಮಾಡುತ್ತೇನೆ. ಆದರೆ ನಾನು ಕಮ್ಯುನಿಷ್ಟರನ್ನು ಪ್ರೀತಿಸುತ್ತೇನೆ. ನಾನು ಪಾಪವನ್ನು ಹಗೆಮಾಡುತ್ತೇನೆ. ಆದರೆ ಪಾಪಿಯನ್ನು ಪ್ರೀತಿಸುತ್ತೇನೆ. ನಾನು ಹೃದಯಪೂರ್ವಕವಾಗಿ ಕಮ್ಯುನಿಷ್ಟರನ್ನು ಪ್ರೀತಿಸುತ್ತೇನೆ. ಕಮ್ಯುನಿಷ್ಟರು ಕ್ರೈಸ್ತರನ್ನು ಕೊಲ್ಲಬಹುದು. ಆದರೆ ಕ್ರೈಸ್ತರು ತಮ್ಮನ್ನು ಕೊಲ್ಲುವವರನ್ನಾದರೂ ಪ್ರೀತಿಸುತ್ತಾರೆ. ಆ ಪ್ರೀತಿಯನ್ನು ಕೊಲ್ಲುವದು ಕಮ್ಯುನಿಷ್ಟರಿಗಾಗದು. ಕಮ್ಯುನಿಷ್ಟರ ವಿರುದ್ಧವಾಗಿಯೂ ನನ್ನ ಹಿಂಸಕರ ವಿರುದ್ಧವಾಗಿಯೂ ನನ್ನಲ್ಲಿ ಕಾಠಿಣ್ಯವು ಇಲ್ಲವೇ ಇಲ್ಲ.

# ಅಧ್ಯಾಯ—೪

ಯೆಹೂದ್ಯರಿಗೆ ಒಂದು ಪುರಾಣವಿದೆ. ಅವರ ಪೂರ್ವಿಕರು ಐಗುಪ್ತ ದೇಶದಿಂದ ಹೊರಟು ಬಂದಾಗ ಐಗುಪ್ತ್ಯರು ಕೆಂಪು ಸಮುದ್ರದಲ್ಲಿ ಮುಳುಗಿ ನಾಶವಾದರು. ಇಸ್ರಾಯೇಲ್ಯರು ಜಯಗೀತವನ್ನು ಹಾಡಿದರು. ದೇವ ದೂತರು ಸಹ ಇದರಲ್ಲಿ ಪಾಲುಗಾರರಾಗಿದ್ದರು. ಆದರೆ ದೇವರು ದೇವ ದೂತರಿಗೆ—"ಯೆಹೂದ್ಯರು ಮನುಷ್ಯರಾಗಿದ್ದಾರೆ. ಅವರು ತಪ್ಪಿಸಿಕೊಂಡದ್ದಕ್ಕಾಗಿ ಅವರಿಗೆ ಸಂತೋಷವಾಗುವದು. ಆದರೆ ದೇವದೂತರಾದ ನಿಮ್ಮಲ್ಲಿ ಹೆಚ್ಚಿನ ಜ್ಞಾನ ಇರತಕ್ಕದ್ದು. ಐಗುಪ್ತ್ಯರು ಸಹ ನನ್ನ ಕೈಯಿಂದ ಸೃಷ್ಟಿಸಲ್ಪಡಲಿಲ್ಲವೋ ? ನಾನು ಅವರನ್ನು ಪ್ರೀತಿಸುವದಿಲ್ಲವೋ ? ಅವರ ಭಯಂಕರವಾದ ಗತಿಯ ವಿಷಯವಾಗಿ ನನಗಿರುವ ದುಃಖವನ್ನು ನೀವು ಗ್ರಹಿಸುವದಿಲ್ಲವೋ ?" ಎಂದು ಪ್ರಶ್ನಿಸಿದನು.

ಯೆಹೋಶುವನು ಯೆರಿಕೋವಿನ ಹತ್ತಿರದಲ್ಲಿದ್ದಾಗ ಒಂದಾನೊಂದು ದಿನ ಕಣ್ಣೆತ್ತಿ ನೋಡಲು ಒಬ್ಬ ಮನುಷ್ಯನು ಹಿರಿದ ಕತ್ತಿಯನ್ನು ಕೈಯಲ್ಲಿ ಹಿಡಿದು ತನ್ನೆದುರಿನಲ್ಲಿ ನಿಂತಿರುವದನ್ನು ಕಂಡನು. ಯೆಹೋಶುವನು ಅವನ ಬಳಿಗೆ ಹೋಗಿ—"ನೀನು ನಮ್ಮವನೋ ಅಥವಾ ಶತ್ರುಪಕ್ಷದವನೋ ?" ಎಂದು ಕೇಳಿದನು.

ಯೆಹೋಶುವನು ಸಂದರ್ಶಿಸಿದ ಆ ವ್ಯಕ್ತಿಯು ಕೇವಲ ಮನುಷ್ಯನಾಗಿದ್ದರೆ ಅವನು—"ನಾನು ನಿನ್ನ ಪಕ್ಷದವನು" ಅಥವಾ "ನಾನು ಶತ್ರುಪಕ್ಷದವನು" ಅಥವಾ "ನಾನು ಯಾವ ಪಕ್ಷದವನೂ ಇಲ್ಲ," ಎಂದು ಉತ್ತರ ಕೊಡುತ್ತಿದ್ದನು. ಮನುಷ್ಯನು ಕೊಡುವ ಉತ್ತರಗಳು ಇವೇ. ಆದರೆ ಯೆಹೋಶುವನು ಭೆಟ್ಟಿಯಾದ ವ್ಯಕ್ತಿಯು ಮನುಷ್ಯನಾಗಿರಲಿಲ್ಲ. ಆತನು—"ನಾನು ಅಂಥವನಲ್ಲ," ಎಂದು ಉತ್ತರ ಕೊಟ್ಟನು. ಈ ಆಶ್ಚರ್ಯಕರವಾದ ಉತ್ತರದ ಅರ್ಥವನ್ನು ಗ್ರಹಿಸುವದು ಕಠಿಣ. "ನಾನು ಅಂಥವನಲ್ಲ" ಅಂದರೇನು ?

ಆತನು ಎಂಥ ವ್ಯಕ್ತಿಯಾಗಿದ್ದನು ? ಆತನು ಮಾನವರಲ್ಲಿರುವ ಬೇರೆ ಬೇರೆ ಪಕ್ಷಗಳಲ್ಲಿ ಒಂದೊಂದು ಪಕ್ಷವನ್ನು ಹಿಡಿಯುವವನಲ್ಲ, ಆತನು ಎಲ್ಲವನ್ನೂ ಗ್ರಹಿಸಿಕೊಂಡು ಎಲ್ಲರನ್ನೂ ಕರುಣೆಯಿಂದಲೂ ಪ್ರೀತಿಯಿಂದಲೂ ನೋಡುವವನಾಗಿದ್ದಾನೆ.

ಮಾನವನ ದೃಷ್ಟಿಯಿಂದ ನಾವು ಕಮ್ಯುನಿಷ್ಟತ್ವವನ್ನೂ ಕಮ್ಯುನಿಷ್ಟರನ್ನೂ ವಿರೋಧಿಸುವವರಾಗಿರಬೇಕು. ಆದರೆ ಕ್ರೈಸ್ತ ವಿಶ್ವಾಸಿಗಳು ಸಾಧಾರಣ ಮನುಷ್ಯರಿಗಿಂತ ಶ್ರೇಷ್ಠರಾಗಿದ್ದಾರೆ. ಅವರು ದೇವರ ಮಕ್ಕಳಾಗಿ ದೇವರ

ಸ್ವಭಾವದಲ್ಲಿ ಪಾಲುಗಾರರಾಗಿದ್ದಾರೆ. ನಾನು ಕಮ್ಯುನಿಷ್ಟರ ಸೆರೆಮನೆಗಳಲ್ಲಿ ತಾಳಿದ ಹಿಂಸೆಗಳ ಕಾರಣ ಕಮ್ಯುನಿಷ್ಟರನ್ನು ಹಗೆ ಮಾಡುವದಿಲ್ಲ. ಅವರು ದೇವರ ಸೃಷ್ಟಿಗಳಾಗಿದ್ದಾರೆ. ಅವರನ್ನು ಹಗೆ ಮಾಡುವದು ಹೇಗೆ ಸಾಧ್ಯ? ಆದರೆ ನಾನು ಅವರಿಗೆ ಸ್ನೇಹಿತನಾಗಿರಲಾರೆನು. ನಿಜವಾದ ಮಿತ್ರರಿಗೆ ಎರಡು ದೇಹಗಳಲ್ಲಿ ಒಂದೇ ಪ್ರಾಣವಿದೆ ನಾನು ಕಮ್ಯುನಿಷ್ಟರ ಸಂಗಡ ಒಂದೇ ಪ್ರಾಣವುಳ್ಳವನಲ್ಲ. ಅವರು ದೇವರ ವಿಷಯವನ್ನು ಹಗೆ ಮಾಡುತ್ತಾರೆ. ಆದರೆ ನಾನು ದೇವರನ್ನು ಪ್ರೀತಿಸುತ್ತೇನೆ.

ಯಾರಾದರೂ ನನಗೆ—"ನೀವು ಕಮ್ಯುನಿಷ್ಟರ ಪಕ್ಷದವನೋ? ಅವರ ವಿರೋಧಿಯೋ?" ಎಂಬ ಪ್ರಶ್ನೆಯನ್ನು ಮಾಡಿದರೆ ಸರಳವಾದ ಉತ್ತರ ಕೊಡಲು ನನಗಾಗುವದಿಲ್ಲ. ಕಮ್ಯುನಿಷ್ಟತ್ವವು ಮಾನವ ಜಾತಿಯ ದೊಡ್ಡ ಕೇಡಾಗಿದೆ. ನಾನು ಆ ತತ್ವವನ್ನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ಅದು ನಾಶವಾಗುವ ತನಕ ಅದನ್ನು ವಿರೋಧಿಸಲು ನನಗೆ ಇಷ್ಟವಿದೆ. ಆದರೆ ಆತ್ಮಿಯ ರೀತಿಯಲ್ಲಿ ನಾನು ಯೇಸುವಿನೊಡನೆ ಪರಲೋಕದೊಳಗೆ ಕೂತು ಕೊಳ್ಳುತ್ತೇನೆ. ಆತನು "ಅಂಥವನಲ್ಲ" ಕಮ್ಯುನಿಷ್ಟರು ಎಷ್ಟೋ ಪಾಪ ಗಳನ್ನು ಮಾಡಿದ್ದಾಗ್ಯೂ ಆತನು ಅವರನ್ನು ಪ್ರೀತಿಸುತ್ತಾನೆ. ಅವರು ಕ್ರಿಸ್ತನ ಕಡೆಗೆ ತಿರುಗಿಕೊಂಡು ಆತನ ಹಾಗೆ ಆಗುವಂತೆ ದೇವರಿಗೆ ಇಷ್ಟವಿದೆ. ಆದ ಕಾರಣ ನಿತ್ಯಜೀವದ ಸಂಬಂಧವಿರುವ ಸುವಾರ್ತೆಯನ್ನು ಕಮ್ಯುನಿಷ್ಟರಿಗೆ ತಿಳಿಸ ಬೇಕೆಂದು ನನ್ನ ಇಷ್ಟವಿದೆ.

ನನ್ನ ಒಡೆಯನಾದ ಕ್ರಿಸ್ತನು ಕಮ್ಯುನಿಷ್ಟರನ್ನು ಪ್ರೀತಿಸುತ್ತಾನೆ. ತಾನು ಎಲ್ಲರನ್ನೂ ಪ್ರೀತಿಸುತ್ತೇನೆಂದು ಸ್ವತಃ ಹೇಳಿದ್ದಾನೆ. ತಾನು ಒಳ್ಳೇ ಕುರುಬ ನಾಗಿ ತಪ್ಪಿ ಹೋಗಿರುವದನ್ನು ಹುಡುಕಿ ರಕ್ಷಿಸಬೇಕೆಂದು ಬಂದನು. ಆತನ ಅಪೊಸ್ತಲರೂ ಎಲ್ಲಾ ಮಹಾ ಕ್ರೈಸ್ತ ಬೋಧಕರೂ ಸಾರ್ವಜನರಿಗಾಗಿರುವ ಈ ಪ್ರೀತಿಯನ್ನು ಪ್ರಚಾರ ಮಾಡಿದ್ದಾರೆ. ಸಂತ ಮಕರಿಯು—"ಒಬ್ಬ ಮನು ಷ್ಯನು—'ಈ ಒಬ್ಬ ವ್ಯಕ್ತಿಯನ್ನು ಬಿಟ್ಟು ನಾನು ಎಲ್ಲರನ್ನೂ ಹೃದಯ ಪೂರ್ವಕವಾಗಿ ಪ್ರೀತಿಸುತ್ತೇನೆ,' ಎಂದು ಹೇಳಿದರೆ ಆ ವ್ಯಕ್ತಿ ನಿಜವಾಗಿ ಕ್ರೈಸ್ತ ನಲ್ಲ. ಯಾಕೆಂದರೆ ಅವನು ಎಲ್ಲರನ್ನೂ ಪ್ರೀತಿಸುವದಿಲ್ಲ." ಎಂದು ಹೇಳಿದನು. ಸಂತ ಆಗಸ್ಟೀನ—"ಒಬ್ಬ ವ್ಯಕ್ತಿಯನ್ನು ಬಿಟ್ಟು ನರಜಾತಿಯವರೆಲ್ಲರೂ ನೀತಿವಂತ ರಾಗಿದ್ದರೆ, ಆ ಒಬ್ಬ ಮನುಷ್ಯನಿಗಾಗಿ ಕ್ರಿಸ್ತನು ಅದೇ ಶಿಲುಬೆಯನ್ನು ತಾಳಲು ಬರುತ್ತಿದ್ದನು. ಯಾಕೆಂದರೆ ಆತನು ಪ್ರತಿಯೊಬ್ಬ ವ್ಯಕ್ತಿಯನ್ನೂ ಪ್ರೀತಿಸು ತ್ತಾನೆ," ಎಂದು ಬೋಧಿಸಿದನು. ಕ್ರೈಸ್ತ ಬೋಧನೆ ಅತಿ ಸ್ಪಷ್ಟವಾಗಿದೆ. ಕಮ್ಯು ನಿಷ್ಟರು ಮನುಷ್ಯರಾಗಿದ್ದಾರೆ. ಕ್ರಿಸ್ತನು ಅವರನ್ನೂ ಪ್ರೀತಿಸುತ್ತಾನೆ. ಯಾರಲ್ಲಿ ಕ್ರಿಸ್ತನ ಮನಸ್ಸು ಇದೆಯೋ ಅವರು ಸಹ ಪ್ರೀತಿಸುತ್ತಾರೆ. ನಾವು ಪಾಪ ವನ್ನು ಹಗೆ ಮಾಡುವವರಾಗಿದ್ದಾಗ್ಯೂ ಪಾಪಿಯನ್ನು ಪ್ರೀತಿಸುತ್ತೇವೆ. ನಾವು

ಕಮ್ಯುನಿಷ್ಟರಿಗೆ ತೋರಿಸಿದ ಪ್ರೀತಿಯ ಮೂಲಕವಾಗಿ ಕ್ರಿಸ್ತನು ಅವರಿಗೆ ತೋರಿಸಿದ ಪ್ರೀತಿಯನ್ನು ನಾವು ಗ್ರಹಿಸಿಕೊಂಡಿದ್ದೇವೆ. ಕಮ್ಯುನಿಷ್ಟ ಸೆರೆಮನೆಗಳಲ್ಲಿ ಕ್ರೈಸ್ತರ ಕಾಲುಗಳ ಮೇಲೆ 20 ಕಿಲೋ ಸರಪಳಿಗಳನ್ನು ಕಟ್ಟಲಾಗಿತ್ತು. ಅವರು ಕಾಯಿಸಿದ ಭರ್ಜಿಗಳಿಂದ ಚುಚ್ಚಲ್ಪಟ್ಟರು. ಅವರ ಬಾಯಿಗಳಲ್ಲಿ ಉಪ್ಪು ಇಡಲ್ಪಟ್ಟಿತ್ತು. ಆದರೆ ಇದರಿಂದ ತೀವ್ರವಾದ ನೀರಡಿಕೆಯಾದಾಗ ನೀರು ಸಿಕ್ಕಲಿಲ್ಲ. ಅವರು ಹಸಿವೆಪಡುತ್ತಾ ಹೊಡೆಯಲ್ಪಡುತ್ತಾ ಚಳಿ ಸಹಿಸುತ್ತಾ ಇದ್ದರು. ಆದರೆ ಅವರು ಆಗ್ರಹದಿಂದ ಕಮ್ಯುನಿಷ್ಟರಿಗಾಗಿ ಪ್ರಾರ್ಥನೆ ಮಾಡುತ್ತಿದ್ದರು. ಮಾನವ ದೃಷ್ಟಿಯಿಂದ ಇದನ್ನು ವಿವರಿಸಲು ಆಗುವದಿಲ್ಲ. ಆದರೆ ಕ್ರಿಸ್ತನ ಪ್ರೀತಿ ರಸವು ನಮ್ಮ ಹೃದಯಗಳಲ್ಲಿ ಧಾರಾಳವಾಗಿ ಸುರಿಸಲ್ಪಟ್ಟಿತು.

ಅನಂತರ ನಮಗೆ ಹಿಂಸೆ ಕೊಡುತ್ತಿದ್ದ ಕಮ್ಯುನಿಷ್ಟರು ಸ್ವತಃ ಸೆರೆಮನೆಯಲ್ಲಿ ಹಾಕಲ್ಪಟ್ಟರು. ಕಮ್ಯುನಿಷ್ಟ ದೇಶಗಳಲ್ಲಿ ಕಮ್ಯುನಿಷ್ಟರೂ ಕಮ್ಯುನಿಷ್ಟ ನಾಯಕರೂ ಅನೇಕಾವರ್ತಿ ಸೆರೆಮನೆಯಲ್ಲಿ ಹಾಕಲ್ಪಡುತ್ತಾರೆ. ಈಗ ಹಿಂಸೆ ಕೊಟ್ಟವರೂ, ಪಟ್ಟವರೂ ಒಂದೇ ಕೋಣೆಯಲ್ಲಿದ್ದರು. ಕ್ರೈಸ್ತರಲ್ಲದ ಕೈದಿಗಳು ಅವರನ್ನು ಹಗೆಮಾಡಿ ಹೊಡೆಯುತ್ತಿದ್ದರು. ಆದರೆ ಕ್ರೈಸ್ತರು ಅವರನ್ನು ಕಾಪಾಡಲು ಪ್ರಯತ್ನಿಸುತ್ತಿದ್ದರು. ಕೆಲವು ಸಾರೆ ಅವರು ಸ್ವತಃ ಕಮ್ಯುನಿಷ್ಟರ ಸಹಾಯಕರಾಗಿ ಹೊಡೆಯಲ್ಪಟ್ಟರು. ಒಂದು ಸಮಯದಲ್ಲಿ ನಮಗೆ ವಾರಕ್ಕೊಮ್ಮೆ ಅಲ್ಪಸ್ವಲ್ಪ ರೊಟ್ಟಿ ಸಿಕ್ಕುತ್ತಿತ್ತು. ಆದರೆ ವಿಶ್ವಾಸಿಗಳು ಈ ರೊಟ್ಟಿಯ ತುಂಡನ್ನೂ ಸ್ವಂತ ಪ್ರಾಣವನ್ನು ಉಳಿಸಬಹುದಾದ ಔಷಧವನ್ನೂ ಅಶಕ್ತರಾದ ಹಿಂಸಕರಿಗೆ ಕೊಡುವದನ್ನು ನೋಡಿದ್ದೇನೆ.

ಯೂಲಿಯೂ ಮನೆಯೂ ರೂಮೆನಿಯಾ ದೇಶದ ಕ್ರೈಸ್ತ ಮುಖ್ಯಮಂತ್ರಿಯಾಗಿದ್ದನು. ಅವನು ಸೆರೆಮನೆಯಲ್ಲಿ ಹಾಕಲ್ಪಟ್ಟು ಅಲ್ಲಿ ಸತ್ತನು. ಅವನು ಹೇಳಿದ ಕಡೆಯ ಮಾತುಗಳಾವುವೆಂದರೆ —"ನಮ್ಮ ದೇಶದಲ್ಲಿ ಕಮ್ಯುನಿಷ್ಟರಿಗೆ ಅಪಜಯವಾದರೆ ಪ್ರತಿಯೊಬ್ಬ ಕ್ರೈಸ್ತನಿಗೆ ವಿಶೇಷವಾದ ಕರ್ತವ್ಯವಿರುವದು. ಅವರು ಓಣಿಗಳಲ್ಲಿ ಹೋಗಿ ತಮ್ಮ ಪ್ರಾಣದ ಅಪಾಯದಲ್ಲೂ ಜನರ ಕೋಪದಿಂದ ಕಮ್ಯುನಿಷ್ಟರನ್ನು ಕಾಯಬೇಕಾಗುತ್ತದೆ. ಯಾಕೆಂದರೆ ಅವರು ಹಿಂಸಿಸುತ್ತಿದ್ದ ಜನರ ನೀತಿಗನುಸಾರವಾಗಿ ಅವರ ವಿರುದ್ಧವಾಗಿ ಖಂಡಿತವಾಗಿ ಏಳುವರು," ಎಂಬುದೇ.

ನಾನು ಹೊಸದಾಗಿ ದೇವರ ಕಡೆಗೆ ತಿರುಗಿಕೊಂಡ ನಂತರ ಹೆಚ್ಚು ದಿವಸ ಬದುಕಲಾರೆನೆಂದು ಯೋಚಿಸುತ್ತಿದ್ದೆನು. ಜನರನ್ನು ನೋಡಿ ನನ್ನ ಹೃದಯದಲ್ಲಿ ದುಃಖವಾಗುತ್ತಿತ್ತು. ಆ ಮನುಷ್ಯ ವಿಶ್ವಾಸಿಯೋ ಅಲ್ಲವೋ ? ಎಂಬ ಪ್ರಶ್ನೆ ಬೆಂಕಿಯ ಹಾಗೆ ನನ್ನಲ್ಲಿ ಉರಿಯುತ್ತಿತ್ತು. ನನ್ನ ಸಭೆಯಲ್ಲಿ ಯಾರಾದರೂ ಪಾಪ ಮಾಡಿದರೆ ಅನೇಕ ಗಂಟೆಗಳ ವರೆಗೆ ಅಳುತ್ತಿದ್ದೆನು. ಎಲ್ಲರೂ

ರಕ್ಷಣೆ ಹೊಂದುವ ಅಪೇಕ್ಷೆ ನನ್ನ ಹೃದಯದಲ್ಲಿದೆ. ಆದರಲ್ಲಿ ಕಮ್ಯುನಿಷ್ಟರ ರಕ್ಷಣೆಗಾಗಿ ನನ್ನ ಇಷ್ಟವಿದೆ.

ನಾವು ಕೈದಿಗಳಾಗಿದ್ದಾಗ ಪೂರ್ವದಲ್ಲಿ ಪ್ರಾರ್ಥನೆ ಮಾಡಿದ ಹಾಗೆ ಪ್ರಾರ್ಥನೆ ಮಾಡಲಾರದಾದೆವು. ನಮಗೆ ಹಸಿವೆಯಿತ್ತು. ನಾವು ಅರ್ಧ ಮೂರ್ಛೆ ಹೊಂದಿದ್ದೆವು. ನಾವು ಶಕ್ತಿಹೀನರಾಗಿದ್ದೆವು. ಕರ್ತನ ಪ್ರಾರ್ಥನೆ ಯನ್ನು ಹೇಳಲು ನಮಗಾಗಲಿಲ್ಲ. ಅದರ ಮೇಲೆ ಮನಸ್ಸಿಡಲಾಗಲಿಲ್ಲ. ಆದರೆ ನಾನು ಮೇಲಿಂದ ಮೇಲೆ—"ಯೇಸುವೇ, ನಾನು ನಿನ್ನನ್ನು ಪ್ರೀತಿಸು ತ್ತೇನೆ," ಎಂದು ಹೇಳುತ್ತಿದ್ದೆನು.

ಮಹಿಮೆಯುಳ್ಳ ಒಂದು ದಿವಸ ಯೇಸುವಿನಿಂದ ನನಗೊಂದು ಉತ್ತರ ಸಿಕ್ಕಿತು. "ನೀನು ನನ್ನನ್ನು ಪ್ರೀತಿಸುತ್ತೀಯೋ ? ನಾನು ನಿನ್ನನ್ನು ಪ್ರೀತಿ ಸುವ ವಿಧಾನವನ್ನು ನಿನಗೆ ತೋರಿಸುತ್ತೇನೆ," ಎಂದು ಕರ್ತನು ಹೇಳಿದನು. ಕೂಡಲೇ ಸೂರ್ಯನ ಕಿರಣಗಳ ಹಾಗೆ ನನ್ನ ಹೃದಯದಲ್ಲಿ ಅಗ್ನಿಯು ಪ್ರಕಾಶಿ ಸಿತು. ಎಮ್ಮಾಹು ಊರಿಗೆ ಯೆರೂಸಲೇಮಿನಿಂದ ತಿರುಗಿ ಹೋಗುವಂಥ ಶಿಷ್ಯರು—"ಆತನು ದಾರಿಯಲ್ಲಿ ಮಾತಾಡಿದ್ದಾಗ ನಮ್ಮ ಹೃದಯವು ನಮ್ಮಲ್ಲಿ ಕುದಿಯಿತಲ್ಲವೇ ?" ಎಂದು ಮಾತನಾಡಿಕೊಂಡರು. ಅದೇ ಅನುಭವ ನನಗಾ ಯಿತು. ನಮ್ಮೆಲ್ಲರಿಗಾಗಿ ಶಿಲುಬೆಯ ಮೇಲೆ ತನ್ನ ಪ್ರಾಣ ಕೊಟ್ಟಾತನ ಪ್ರೀತಿ ಯನ್ನು ನಾನು ಗ್ರಹಿಸಿಕೊಂಡೆನು. ಕಮ್ಯುನಿಷ್ಟರು ಎಷ್ಟೋ ಭಯಂಕರವಾದ ಪಾಪಗಳನ್ನು ಮಾಡಿದಾಗ್ಯೂ ದೇವರು ಅವರನ್ನು ಪ್ರೀತಿಸುತ್ತಾನೆ.

ಕಮ್ಯುನಿಷ್ಟರು ಭಯಂಕರವಾದ ಕಾರ್ಯಗಳನ್ನು ಮಾಡಿದ್ದಾರೆ. ಮತ್ತು ಇನ್ನೂ ಮಾಡುತ್ತಾ ಇದ್ದಾರೆ. ಆದರೆ ಜಲದ ರಾಶಿಗಳು ಪ್ರೀತಿಯನ್ನು ನಂದಿಸಲಾರವು. ಪ್ರವಾಹಗಳಿಗೂ ಅದನ್ನು ಮುಳುಗಿಸುವ ಶಕ್ತಿಯಿಲ್ಲ. ಪ್ರೀತಿಯು ಮರಣದಷ್ಟು ಬಲವಾಗಿದೆ. ಯಾವ ರೀತಿಯಲ್ಲಿ ಸಮಾಧಿಯು ಬಡವರನ್ನೂ ಶ್ರೀಮಂತರನ್ನೂ ಯೌವನಸ್ಥರನ್ನೂ ವೃದ್ಧರನ್ನೂ ಎಲ್ಲ ಜನಾಂಗ ಗಳವರನ್ನೂ ಎಲ್ಲಾ ರಾಷ್ಟ್ರೀಯ ಪಕ್ಷದವರನ್ನೂ ದೇವಭಕ್ತರನ್ನೂ ಅಪರಾಧಿ ಗಳನ್ನೂ ನುಂಗುತ್ತದೋ, ಅದೇ ರೀತಿಯಲ್ಲಿ ದೇವರ ಪ್ರೀತಿಯು ಎಲ್ಲರನ್ನೂ ಅಪ್ಪುತ್ತದೆ. ಕಮ್ಯುನಿಷ್ಟರು ತನ್ನ ಕಡೆಗೆ ಬರುವ ವರೆಗೆ ಪ್ರೀತಿಸ್ವರೂಪನಾದ ಕ್ರಿಸ್ತನು ಸಂತೃಪ್ತಿಪಡುವದಿಲ್ಲ.

ಕರ್ತನ ಸೇವಕನೊಬ್ಬನು ನನ್ನ ಕೋಣೆಯಲ್ಲಿ ಹಾಕಲ್ಪಟ್ಟನು. ಅವನು ಭಯಂಕರವಾದ ಸ್ಥಿತಿಯಲ್ಲಿದ್ದನು. ಮುಖದಿಂದಲೂ ಮೈಯಿಂದಲೂ ರಕ್ತವು ಸೋರುತ್ತಿತ್ತು. ಅವನು ಕ್ರೂರವಾದ ರೀತಿಯಲ್ಲಿ ಹೊಡೆಯಲ್ಪಟ್ಟನು. ನಾವು ಅವನ ಗಾಯಗಳನ್ನು ತೊಳೆದೆವು. ಕೆಲವು ಕೈದಿಗಳು ಕಮ್ಯುನಿಷ್ಟರನ್ನು ಶಪಿಸಿದರು. ಅವನು ನಿಟ್ಟುಸುರು ಬಿಟ್ಟು ನಮಗೆ—"ದಯಮಾಡಿ ಅವರನ್ನು

ಶಪಿಸಬೇಡಿ ; ಸುಮ್ಮನಿರಿ. ಅವರಿಗಾಗಿ ಪ್ರಾರ್ಥನೆ ಮಾಡಲು ನನಗೆ ಮನಸ್ಸಿದೆ," ಎಂದು ಹೇಳಿದನು.

## ಸೆರೆಮನೆಯಲ್ಲಿದ್ದರೂ ನಾವು ಸಂತೋಷವುಳ್ಳವರಾಗಿದ್ದೆವು

ನಾನು ಹದಿನಾಲ್ಕು ವರ್ಷ ಸೆರೆಮನೆಯಲ್ಲಿದ್ದೆನು. ಇದನ್ನು ಜ್ಞಾಪಕ ಮಾಡುತ್ತಿರುವಾಗ ಅನೇಕಾವರ್ತಿ ಅದು ಸುಖವುಳ್ಳದ್ದೆಂದು ನನಗೆ ಕಂಡುಬರುತ್ತದೆ. ಅತಿ ಭಯಂಕರವಾದ ಪರಿಸ್ಥಿತಿಗಳಲ್ಲಿ ಕ್ರೈಸ್ತರು ಸಂತೋಷವುಳ್ಳವರಾಗಿರುವದು ಹೇಗೆ ಸಾಧ್ಯವೆಂದು ಯೋಚಿಸಿ ಬೇರೆ ಕೈದಿಗಳೂ ಕಾವಲುಗಾರರೂ ಆಶ್ಚರ್ಯಪಡುತ್ತಿದ್ದರು. ನಾವು ಹಾಡಿದರೆ ಹೊಡೆಯಲ್ಪಡುತ್ತಿದ್ದೆವು. ಆದರೂ ನಾವು ಹಾಡುತ್ತಿದ್ದೆವು. ತಾವು ಹಾಡಿದ ನಂತರ ಕೊಲ್ಲಲ್ಪಡುವೆವೆಂದು ಪಕ್ಷಿಗಳಿಗೆ ಗೊತ್ತಾಗಿದ್ದರೂ ಅವು ಹಾಡುವವೆಂದು ನನಗನ್ನಿಸುತ್ತದೆ. ಸೆರೆಮನೆಯಲ್ಲಿದ್ದ ಕ್ರೈಸ್ತರು ಆನಂದದಿಂದ ಕುಣಿದಾಡಿದರು. ಇಂಥ ಭಯಂಕರವಾದ ಸ್ಥಿತಿಯಲ್ಲಿ ಸಂತೋಷಪಡುವದು ಹೇಗೆ ಸಾಧ್ಯ ? ನಾನು ಸೆರೆಮನೆಯಲ್ಲಿದ್ದಾಗ ಯೇಸು ತನ್ನ ಶಿಷ್ಯರಿಗೆ ಹೇಳಿದ ಮಾತುಗಳ ವಿಷಯವಾಗಿ ಧ್ಯಾನ ಮಾಡುತ್ತಿದ್ದೆನು. ಆತನು ಅವರಿಗೆ—"ನೀವು ನೋಡುತ್ತಿರುವ ಸಂಗತಿಗಳನ್ನು ನೋಡುವವರು ಧನ್ಯರು," ಎಂದು ಹೇಳಿದನು. ಆವಾಗ ಶಿಷ್ಯರು ಇಸ್ರಾಯೇಲ್ ದೇಶದಲ್ಲಿ ಸಂಚಾರ ಮಾಡಿ ತಿರಿಗಿ ಬಂದಿದ್ದರು. ಅವರು ಭಯಂಕರವಾದ ಸಂಗತಿಗಳನ್ನು ನೋಡಿದರು. ರೋಮಾ ಸರಕಾರವು ಜನರನ್ನು ಬಲತ್ಕಾರದಿಂದ ಆಳುತ್ತಿತ್ತು. ಜನರಿಗೆ ಅನೇಕ ದುಃಖ ಕಷ್ಟಗಳಿದ್ದವು. ಶಿಷ್ಯರು ರೋಗಗಳನ್ನೂ ಹಸಿವೆಯನ್ನೂ ಕ್ಲೇಶವನ್ನೂ ನೋಡಿದರು. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುವವರಲ್ಲಿ ಅನೇಕರು ಸೆರೆಮನೆಗೆ ಒಯ್ಯಲ್ಪಟ್ಟಿದ್ದರು. ಮನೆಯಲ್ಲಿ ಬಿಡಲ್ಪಟ್ಟು ಅಳುತ್ತಿರುವ ಅವರ ತಂದೆತಾಯಿಗಳನ್ನೂ ಹೆಂಡಂದಿರನ್ನೂ ಶಿಷ್ಯರು ಭೆಟ್ಟಿಯಾಗಿದ್ದರು. ಅಂಥ ಲೋಕವನ್ನು ನೋಡುವದು ರಮ್ಯವಾದ ವಿಷಯವಾಗಿರಲಿಲ್ಲ.

ಆದರೂ ಯೇಸು ಅವರಿಗೆ—"ನೀವು ನೋಡುತ್ತಿರುವ ಸಂಗತಿಗಳನ್ನು ನೋಡುವವರು ಧನ್ಯರು," ಎಂದು ಹೇಳಿದನು. ಯಾಕೆಂದರೆ ಅವರು ಕೇವಲ ಕಷ್ಟವನ್ನು ನೋಡಲಿಲ್ಲ. ಅವರು ಎಲ್ಲಾ ಜನರ ರಕ್ಷಕನನ್ನು ನೋಡಿದ್ದರು. ಆತನು ಮಾನವನ ಒಳ್ಳೇತನವನ್ನು ಸಿದ್ಧಿಗೆ ತರುವಾತನನ್ನು ನೋಡಿದ್ದರು. ಅವರು ಮಾನವನ ಗುರಿಯನ್ನು ತಿಳಿದುಕೊಂಡಿದ್ದರು. ಒಂದು ದೃಷ್ಟಾಂತವನ್ನು ನೋಡೋಣ. ಕೆಲವು ಕಂಬಳಿ ಹುಳುಗಳು ಎಲೆಗಳನ್ನು ತಿನ್ನುತ್ತಿದ್ದವು. ತಾವು ಕುರೂಪಿಗಳಾಗಿದ್ದೇವೆಂದು ತಿಳಿದುಕೊಂಡಿದ್ದವು. ಆದರೂ ಅವುಗಳಿಗೆ ಆಶ್ಚರ್ಯಕರವಾದ ಸತ್ಯತೆ ಪ್ರಕಟವಾಗಿತ್ತು. ಅದೇನಂದರೆ—"ಈ ಅಲ್ಪವಾದ ಜೀವನ ಮುಗಿದ ನಂತರ ಬಣ್ಣದ ಚಿಟ್ಟೆಗಳಾಗುತ್ತೇವೆ. ನಾವು ಸಂತೋಷದಿಂದ

ಒಂದು ಹೂವಿನಿಂದ ಮತ್ತೊಂದು ಹೂವಿಗೆ ಹಾರಿ ಹೋಗುತ್ತೇವೆ," ಎಂಬುದೇ. ಈ ಆನಂದವು ನಮ್ಮದಾಗಿತ್ತು.

ನನ್ನ ಸುತ್ತುಮುತ್ತಲೂ ಯೋಬನ ಹಾಗಿರುವ ಅನೇಕ ಪುರುಷರಿದ್ದರು. ಅವರಲ್ಲಿ ಅನೇಕರು ಯೋಬನಿಗಿಂತ ಹೆಚ್ಚಾದ ಕಷ್ಟವನ್ನು ಅನುಭವಿಸಿದರು. ಆದರೆ ಯೋಬನ ಇತಿಹಾಸದ ಅಂತ್ಯ ನನಗೆ ಗೊತ್ತಾಯಿತು. ಮೊದಲಿಗಿಂತ ಅವನಿಗೆ ಎರಡರಷ್ಟು ಸಿಕ್ಕಿತು. ನನ್ನ ಸುತ್ತುಮುತ್ತಲೂ ಅನೇಕ ಪುರುಷರು ಬಡ ಲಾಜರನ ಹಾಗಿದ್ದರು. ಅವರು ಹಸಿವೆಪಡುತ್ತಾ ಮೈತುಂಬ ಹುಣ್ಣಿದ್ದವರಿದ್ದರು. ಆದರೆ ದೇವದೂತರು ಅವರನ್ನು ಕರೆದುಕೊಂಡು ಅಬ್ರಹಾಮನ ಎದೆಗೆ ಒರಗಿಸುವರೆಂದು ನನಗೆ ಗೊತ್ತಾಯಿತು. ಭವಿಷ್ಯಕಾಲದಲ್ಲಿ ಅವರಿಗಿರುವ ಸ್ಥಿತಿಯಲ್ಲಿ ಅವರನ್ನು ನೋಡಿದೆನು. ನನ್ನ ಸುತ್ತುಮುತ್ತಲೂ ಹೊಲಸಾದ ಹಾಗೂ ಅಶಕ್ತನಾದವನು ರಕ್ತಸಾಕ್ಷಿಯಲ್ಲಿ ನಾಳೆ ಮಹಿಮಾ ಕಿರೀಟ ಹೊಂದುವ ದೇವಭಕ್ತನಾಗಿ ಕಾಣಸುತ್ತಿದ್ದನು.

ಅಂದರೆ ಅವರಿಗೆ ಈದಿನ ಸ್ಥಿತಿಯಲ್ಲಿ ಜನರನ್ನು ನೋಡದೇ ಭವಿಷ್ಯ ಕಾಲದಲ್ಲಿ ಇರುವಂಥ ಸ್ಥಿತಿಯಲ್ಲಿ ಮುನ್ನೋಡುವದರಿಂದ ತಾರ್ಸಿನ ಸೌಲನ ಹಾಗಿರುವ ಹಿಂಸಕರಲ್ಲಿ ಅವನ ಹಾಗೆ ಬದಲಾವಣೆ ಹೊಂದಿ ಅಪೊಸ್ತಲನಾದ ಪೌಲನ ಹಾಗೆ ಆಗುವಂಥ ದೇವಭಕ್ತರನ್ನು ನಾನು ನೋಡಿದೆನು. ಕೆಲವರು ಹಾಗೆಯೇ ಆದರು. ನಾವು ಗುಪ್ತ ಪೊಲೀಸರ ಅನೇಕ ಅಧಿಕಾರಿಗಳಿಗೆ ಸಾಕ್ಷಿಕೊಟ್ಟೆವು. ಅವರಲ್ಲಿ ಕೆಲವರು ಸ್ವತಃ ವಿಶ್ವಾಸಿಗಳಾಗಿ ನಮ್ಮ ಹಾಗೆ ಸೆರೆಮನೆಗಳಲ್ಲಿ ಕ್ರಿಸ್ತನಿಗಾಗಿ ಕಷ್ಟಪಟ್ಟರು. ಕೈದಿಯ ಯಜಮಾನರಲ್ಲಿ ಅನೇಕರು ನಮ್ಮನ್ನು ಹೊಡೆದರು. ಮೊದಲು ಪೌಲನನ್ನು ಹೊಡೆದು ಅನಂತರ ಕ್ರಿಸ್ತನ ಮೇಲೆ ನಂಬಿಕೆಯಿಟ್ಟ ಫಿಲಿಪ್ಪಿ ಎಂಬ ಪಟ್ಟಣದ ಸೆರೆಮನೆಯ ಯಜಮಾನನನ್ನು ಜ್ಞಾಪಕ ಮಾಡಿ ನಮ್ಮನ್ನು ಹೊಡೆದವರು ಅದೇ ರೀತಿಯಲ್ಲಿ ಕ್ರಿಸ್ತನ ಕಡೆಗೆ ತಿರುಗುವರೆಂದು ಆಶಿಸುತ್ತಿದ್ದೆವು. ಅವರು ನಮ್ಮನ್ನು—"ರಕ್ಷಣೆ ಹೊಂದಲು ನಾನು ಏನು ಮಾಡಬೇಕು ?" ಎಂದು ಕೇಳುವ ವೇಳೆಯ ವಿಷಯವಾಗಿ ನಾವು ನಮ್ಮ ಸ್ವಪ್ನಗಳಲ್ಲಿ ನೋಡಿದ್ದೆವು. ಕ್ರೈಸ್ತರು ಮಲಮೂತ್ರದಿಂದ ಹೊಲಸು ಮಾಡಲ್ಪಟ್ಟು ಶಿಲುಬೆಗಳಿಗೆ ಕಟ್ಟಲ್ಪಟ್ಟಿದ್ದರು. ಕಾವಲುಗಾರರು ಇದನ್ನು ನೋಡಿ ಹಾಸ್ಯಮಾಡುತ್ತಿದ್ದರು. ನಮ್ಮ ಕರ್ತನು ತನ್ನ ಶಿಲುಬೆಯನ್ನು ಹೊತ್ತುಕೊಂಡು ಗೊಲ್ಗೊಥ ಎಂಬ ಸ್ಥಳಕ್ಕೆ ಹೊರಟಾಗ ಹೆಂಗಸರು ಎದೆಯನ್ನು ಹೊಡೆದುಕೊಂಡು ಗೋಳಾಡುತ್ತಿದ್ದರು. ಈ ಜನರು ಅದೇ ರೀತಿಯಲ್ಲಿ ಪಶ್ಚಾತ್ತಾಪ ಪಡುವಂತೆ ನಾವು ಪ್ರಾರ್ಥಿಸುತ್ತಿದ್ದೆವು.

ಕಮ್ಯುನಿಸ್ಟರಿಗೆ ರಕ್ಷಣೆ ಸಿಕ್ಕುವದು ಸಾಧ್ಯವೆಂಬ ಆಶೆ ಸೆರೆಮನೆಯಲ್ಲಿ ನಮಗೆ ಸಿಕ್ಕಿತು. ಅವರಿಗಾಗಿರುವ ನಮ್ಮ ಜವಾಬ್ದಾರಿಕೆಯನ್ನು ನಾವು ಅಲ್ಲಿ

ಗ್ರಹಿಸಿಕೊಂಡೆವು. ಅವರು ನಮ್ಮನ್ನು ಹಿಂಸಿಸುತ್ತಿದ್ದಾಗ ನಾವು ಅವರನ್ನು ಪ್ರೀತಿಸಬೇಕೆಂಬುದನ್ನು ಕಲಿತುಕೊಂಡೆವು.

ನಮ್ಮ ಮನೆಯವರಲ್ಲಿ ಅನೇಕರು ಕೊಲ್ಲಲ್ಪಟ್ಟರು, ನನ್ನ ಮನೆಯಲ್ಲಿ ಅವರ ಕೊಲೆಗಾರನು ಕ್ರಿಸ್ತನ ಕಡೆಗೆ ತಿರುಗಿಕೊಂಡನು. ಇದು ಅದಕ್ಕೆ ಯೋಗ್ಯವಾದ ಸ್ಥಳವಾಗಿತ್ತು. ಅದೇ ರೀತಿಯಲ್ಲಿ ಕಮ್ಯುನಿಷ್ಟರ ಸೆರೆಮನೆಗಳಲ್ಲಿ ಕಮ್ಯುನಿಷ್ಟರಿಗೆ ಸುವಾರ್ತೆಯನ್ನು ಸಾರುವ ಯೋಚನೆ ಉಂಟಾಯಿತು.

ಯಾವ ಪ್ರಕಾರವಾಗಿ ಇರುವೆ ನೋಡುವ ರೀತಿಯಲ್ಲಿ ಮನುಷ್ಯನು ನೋಡುವದಿಲ್ಲವೋ ಅದೇ ಪ್ರಕಾರವಾಗಿ ಮಾನವನು ನೋಡುವ ರೀತಿಯಲ್ಲಿ ದೇವರು ನೋಡುವದಿಲ್ಲ. ಮಾನವನ ದೃಷ್ಟಿಯಲ್ಲಿ ಮಲಮೂತ್ರದಿಂದ ಹೊಲಸು ಮಾಡಲ್ಪಟ್ಟು ಶಿಲುಬೆಗಳಿಗೆ ಕಟ್ಟಲ್ಪಡುವದು ಅತಿ ಭಯಂಕರವಾದ ಸಂಗತಿಯಾಗಿದೆ. ಆದರೆ ಸತ್ಯವೇದದಲ್ಲಿ ವಿಶ್ವಾಸಿಗಳ ಕಷ್ಟವು ಅಲ್ಪವೆಂದು ವರ್ಣಿಸಲ್ಪಟ್ಟಿದೆ. ಸೆರೆಮನೆಯಲ್ಲಿ ಹದಿನಾಲ್ಕು ವರ್ಷ ಕಳೆಯುವದು ನಮಗೆ ಬಹಳವಾದ ವೇಳೆಯಾಗಿತ್ತು. ಆದರೆ ಸತ್ಯವೇದದಲ್ಲಿ "ಕ್ಷಣಮಾತ್ರವಿರುವ ನಮ್ಮ ಹಗುರವಾದ ಸಂಕಟವು ಅತ್ಯಂತಧಿಕವಾದ ಪ್ರತಿಫಲವನ್ನು ಉಂಟು ಮಾಡಿ ನಮಗೆ ನಿರಂತರವಾಗಿರುವ ಗೌರವವಾದ ಪ್ರಭಾವವನ್ನು ದೊರೆಕಿಸುತ್ತದೆ," ಎಂದು ಬರೆದಿದೆ. ಇದರಿಂದ ಒಂದು ಸಂಗತಿ ನಮಗೆ ಕಾಣಿಸುತ್ತದೆ. ಕಮ್ಯುನಿಷ್ಟರ ದುಷ್ಕೃತ್ಯಗಳು ನಮ್ಮ ದೃಷ್ಟಿಯಲ್ಲಿ ಭಯಂಕರವಾಗಿವೆ. ಅವುಗಳಿಗಾಗಿ ನೆವಗಳನ್ನು ಕಲ್ಪಿಸಿಕೊಳ್ಳುವದು ನಮಗಾಗುವದಿಲ್ಲ. ಆದರೆ ಒಂದು ವೇಳೆ ದೇವರ ದೃಷ್ಟಿಯಲ್ಲಿ ಅವು ಅಷ್ಟೊಂದು ಭಯಂಕರವಲ್ಲ. ನಾವು ಕಮ್ಯುನಿಷ್ಟತ್ವವನ್ನು ವಿರೋಧಿಸಲಿಕ್ಕೆ ಬೇಕು. ಅವುಗಳು ನೀತಿಗೆ ವಿರುದ್ಧವಾಗಿವೆ. 50 ವರ್ಷಗಳಿಂದ ಬೇರೆ ಬೇರೆ ದೇಶಗಳಲ್ಲಿ ಜನರು ಕಮ್ಯುನಿಷ್ಟರ ದುಷ್ಟಧಿಕಾರವನ್ನು ತಾಳಿದ್ದಾರೆ. ಆದರೆ ದೇವರ ದೃಷ್ಟಿಯಲ್ಲಿ ಒಂದು ಸಾವಿರ ವರ್ಷಗಳು ಒಂದು ದಿನದಂತಿದೆ. ಆತನ ದೃಷ್ಟಿಯಲ್ಲಿ ಅವರ ಕಾರ್ಯಗಳು ತಾತ್ಕಾಲಿಕ ತಪ್ಪುಗಳಂತೆ ಕಾಣಬಹುದು. ಅವರಿಗೆ ರಕ್ಷಣೆ ಸಿಕ್ಕುವದು ಸಾಧ್ಯವಾಗಿದೆ.

ಸ್ವರ್ಗೀಯ ಯೆರೂಸಲೇಮ್ ತಾಯಿಯಾಗಿ ಪ್ರೀತಿಸುತ್ತದೆ. ಕಮ್ಯುನಿಷ್ಟರು ಒಳಗೆ ಸೇರಬಾರದೆಂದು ದೇವರು ಸ್ವರ್ಗದ ಬಾಗಿಲುಗಳನ್ನು ಮುಚ್ಚಿಲ್ಲ. ಉಳಿದವರೆಲ್ಲರ ಹಾಗೆ ಅವರು ಮಾನಸಾಂತರ ಪಡಬಹುದು. ಅವರು ದೇವರ ಕಡೆಗೆ ತಿರುಗಿಕೊಳ್ಳುವಂತೆ ನಾವು ಅವರನ್ನು ಕರೆಯಬೇಕು.

ಪ್ರೀತಿಯಿಂದ ಮಾತ್ರ ಕಮ್ಯುನಿಷ್ಟರಿಗೆ ಬದಲಾವಣೆಯಾಗುವದು. ನಾವು ಕಮ್ಯುನಿಷ್ಟತ್ವಕ್ಕೆ ಒಪ್ಪಲಾರೆವು. ಕೆಲವು ಧರ್ಮನಾಯಕರು ಹಾಗೆ ಮಾಡುತ್ತಾರೆ. ದ್ವೇಷವು ನಮ್ಮನ್ನು ಕುರುಡರನ್ನಾಗಿ ಮಾಡುತ್ತದೆ. ಹಿಟ್ಲರನು ಕಮ್ಯುನಿಷ್ಟತ್ವವನ್ನು ಮಾತ್ರವಲ್ಲದೇ ಕಮ್ಯುನಿಷ್ಟರನ್ನೂ ದ್ವೇಷಿಸು

ತ್ತಿದ್ದನು. ಆದರೆ ಹಿಟ್ಲರನು ಅವರನ್ನು ಜಯಿಸದೇ ಹೋದನು. ಆದರೆ ಅವನು ಪ್ರಾರಂಭಿಸಿದ ಯುದ್ಧದ ಫಲವಾಗಿ ಕಮ್ಯುನಿಷ್ಟರು ಲೋಕದ ⅓ ಭಾಗ ವನ್ನು ಸ್ವಾಧೀನಮಾಡಿಕೊಂಡರು. ನಾವು ಸೆರೆಮನೆಯಲ್ಲಿದ್ದಾಗ ಕಮ್ಯುನಿಷ್ಟ ರಿಗೆ ಸುವಾರ್ತೆಯನ್ನು ಸಾರಲು ಯೋಚನೆ ಮಾಡಿದೆವು. ನಾವು ಪ್ರಥಮತಃ ಕಮ್ಯುನಿಷ್ಟರ ನಾಯಕರ ವಿಷಯವಾಗಿ ಯೋಚಿಸಿದೆವು.

ಸುವಾರ್ತಾ ಪ್ರಚಾರದಲ್ಲಿ ಕೆಲವು ಮುಂದಾಳುಗಳು ಸಭೆಯ ಇತಿಹಾಸ ವನ್ನು ಸ್ವಲ್ಪ ಮಟ್ಟಿಗೆ ಮಾತ್ರ ಅಭ್ಯಾಸಿಸಿದರೆಂದು ಕಂಡುಬರುತ್ತದೆ. ನೋರ್ವೆ ದೇಶದ ಜನರು ಯಾವಾಗ ಕ್ರಿಸ್ತನ ಕಡೆಗೆ ತಿರುಗಿಕೊಂಡರು ? ತಮ್ಮ ಅರಸ ನಾದ ಒಲಫ್ ನಂಬಿದಾಗ ಅವರು ಆತನ ಮಾದರಿಯನ್ನು ಅನುಸರಿಸಿದರು. ಅದೇ ರೀತಿಯಲ್ಲಿ ರಷ್ಯ ದೇಶದ ಅರಸನಾದ ವ್ಲಾಡಿಮೀರ್ ಧರ್ಮಾಂತರ ಹೊಂದಿದ ನಂತರ ಆ ದೇಶದಲ್ಲಿ ಸುವಾರ್ತೆಯು ಹಬ್ಬಿತು. ಹಂಗೇರಿ ದೇಶ ದಲ್ಲಿ ಅರಸನಾದ ಸ್ತೆಫನನು ನಂಬಿದಾಗ, ಆ ದೇಶದವರು ಕ್ರೈಸ್ತರಾದರು. ಪೋಲಂಡ ದೇಶದಲ್ಲಿಯೂ ಹಾಗೆಯೇ ಆಯಿತು. ಆಫ್ರಿಕ ಖಂಡದಲ್ಲಿ ಅನೇಕ ಸ್ಥಳಗಳಲ್ಲಿ ಒಂದು ಕುಲಿದ ನಾಯಕನು ಕ್ರಿಸ್ತನ ಕಡೆಗೆ ತಿರುಗಿಕೊಂಡ ನಂತರ ಅವನ ಕುಲದವರು ಅವನನ್ನು ಹಿಂಬಾಲಿಸಿದರು. ಸಾಧಾರಣ ಜನರು ಒಳ್ಳೇ ವಿಶ್ವಾಸಿಗಳಾಗಬಹುದು. ಆದರೆ ಅವರ ಪ್ರಭಾವದಿಂದ ಸಮಾಜದಲ್ಲಿ ಹೆಚ್ಚಿನ ಬದಲಾವಣೆಯಾಗುವದಿಲ್ಲ.

ನಾವು ನಾಯಕರನ್ನೂ ಮುಂದಾಳುಗಳನ್ನೂ ಕ್ರಿಸ್ತನ ಕಡೆಗೆ ತರಬೇಕು. ಅವರು ರಾಜಕೀಯ, ಆರ್ಥಿಕ, ವೈಜ್ಞಾನಿಕ ಅಥವಾ ಬೇರೆ ವಿಷಯಗಳಲ್ಲಿ ಮುಖ್ಯಸ್ಥರಾಗಿರಬಹುದು. ಇಂಥವರ ಪ್ರಭಾವ ಜನರ ಮೇಲೆ ಹೆಚ್ಚಿದೆ. ಅಂಥವರು ಕ್ರಿಸ್ತನ ಕಡೆಗೆ ತಿರುಗಿಕೊಳ್ಳುವಾಗ ಅವರ ಪ್ರಭಾವದಿಂದ ನಡೆ ಸಲ್ಪಟ್ಟ ಜನರೂ ಸಹ ಕ್ರಿಸ್ತನ ಕಡೆಗೆ ತಿರುಗಿಕೊಳ್ಳಬಹುದು. ಸುವಾರ್ತೆ ಸಾರೋಣಕ್ಕಾಗಿ ಕಮ್ಯುನಿಷ್ಟ ಸಮಾಜಿಕ ಕ್ರಮ ಒಂದು ರೀತಿಯಲ್ಲಿ ಒಳ್ಳೇದಾ ಗಿದೆ. ಯಾಕಂದರೆ ಅಲ್ಲಿ ಹೆಚ್ಚಿನ ಅಧಿಕಾರವು ಕೆಲವು ಜನರ ಕೈಯಲ್ಲಿ ಮಾತ್ರ ಇದೆ. ಅಮೇರಿಕ ದೇಶದ ಪ್ರೆಸಿಡೆಂಟರು ಬೇರೆ ಧರ್ಮವನ್ನು ಅಂಗೀಕಾರ ಮಾಡಿದರೆ ಅಮೆರಿಕ ದೇಶದವರೆಲ್ಲರೂ ಅದನ್ನು ಅನುಸರಿಸುವದಿಲ್ಲ. ಆದರೆ ಯಾವನೊಬ್ಬ ಕಮ್ಯುನಿಷ್ಟ ದೇಶದ ಮುಖ್ಯಾಧಿಕಾರಿಯು ಕ್ರಿಸ್ತನ ಕಡೆಗೆ ತಿರುಗಿ ಕೊಂಡರೆ ಆ ದೇಶಕ್ಕೆಲ್ಲಾ ಸುವಾರ್ತೆ ಸಾರುವ ಅನುಕೂಲತೆ ಬಹುತರವಾಗಿ ಸಿಕ್ಕುವದು. ಯಾಕಂದರೆ ಅವರ ನಾಯಕರಿಗೆ ಬಹಳ ಪ್ರಭಾವ ಹಾಗೂ ಅಧಿ ಕಾರವಿದೆ.

ಆದರೆ ಕಮ್ಯುನಿಷ್ಟ ನಾಯಕನು ಕ್ರಿಸ್ತನ ಕಡೆಗೆ ತಿರುಗಿಕೊಳ್ಳುವದು ಸಾಧ್ಯವೋ ? ಅದು ಖಂಡಿತವಾಗಿ ಸಾಧ್ಯ. ಕಮ್ಯುನಿಷ್ಟರಿಗೆ ಸುಖವೂ ಸಂತೃಪ್ತಿಯೂ ಇಲ್ಲ. ರಷ್ಯ ದೇಶದ ಹೆಚ್ಚು ಮಂದಿ ಕಮ್ಯುನಿಷ್ಟ ಮುಂದಾ

ಳುಗಳು ಸೆರೆಮನೆಯಲ್ಲಿ ಹಾಕಲ್ಪಟ್ಟು ಕೊಲ್ಲಲ್ಪಟ್ಟಿದ್ದಾರೆ. ಚೀನ ದೇಶದಲ್ಲಿಯೂ ಆಗೆಯೇ ಆಯಿತು. ಕೆಲವು ಗೃಹ ಮಂತ್ರಿಗಳೂ ಕ್ರಾಂತಿಕಾರರ ಹಾಗೆ ಬಂದೂಕಿನಿಂದ ಕೊಲ್ಲಲ್ಪಟ್ಟರು. ರಷ್ಯದ ಗೃಹ ಮಂತ್ರಿಯಾದ ಶೆಫೆಲಿನ್ ಹಾಗೂ ಯುಗೋಸ್ಲೋವಿಯಾದ ರಂಕೋವಿಕ್ ಹೊಲಸಾದ ಬಟ್ಟೆಗಳಂತೆ ಬೀಸಾಡಲ್ಪಟ್ಟಿದ್ದರು.

## ಕಮ್ಯುನಿಷ್ಟತ್ವವನ್ನು ಆತ್ಮಿಯ ರೀತಿಯಲ್ಲಿ ವಿರೋಧಿಸುವ ವಿಧಾನ

ಕಮ್ಯುನಿಷ್ಟ್ ಸರ್ಕಾರದಿಂದ ಯಾರಿಗೂ ಸಂತೋಷವಿಲ್ಲ. ಅದರಿಂದ ಲಾಭ ಹೊಂದುವವರೂ ಸಹ ಪ್ರತಿ ರಾತ್ರಿ ನಡುಗುತ್ತಾರೆ. ಯಾಕೆಂದರೆ ಕಮ್ಯುನಿಷ್ಟ ಪಕ್ಷದ ನಿಯಮಗಳಲ್ಲಿ ಬದಲಾವಣೆಗಳಾಗಿದ್ದರೆ ಗುಪ್ತ ಪೊಲೀಸರು ಬಂದು ಅವರನ್ನು ಸೆರೆಮನೆಗೆ ಒಯ್ಯಬಹುದು. ನಾನು ಅನೇಕ ಕಮ್ಯುನಿಷ್ಟ ನಾಯಕರನ್ನು ವೈಯಕ್ತಿಕ ರೀತಿಯಲ್ಲಿ ಭೆಟ್ಟಿಯಾಗಿದ್ದೇನೆ. ಅವರು ಭಾರ ಹೊರುವವರಾಗಿದ್ದಾರೆ. ಕರ್ತನಾದ ಯೇಸು ಮಾತ್ರ ಅವರಿಗೆ ವಿಶ್ರಾಂತಿ ಕೊಡುವವನಾಗಿದ್ದಾನೆ.

ನಾವು ಕಮ್ಯುನಿಷ್ಟರ ನಾಯಕರನ್ನು ಕ್ರಿಸ್ತನ ಕಡೆಗೆ ತಿರುಗಿಸಿಕೊಂಡರೆ ನಾವು ಅಣುಬಾಂಬುಗಳ ನಾಶನದಿಂದ ಲೋಕವನ್ನು ರಕ್ಷಿಸಬಹುದು. ಈಗಿನ ಕಾಲದಲ್ಲಿ ಅನೇಕ ದೇಶಗಳು ಆಯುಧಗಳನ್ನು ಸಿದ್ಧಮಾಡುವಂತೆ ಬಹಳ ಹಣವನ್ನು ವೆಚ್ಚಮಾಡುತ್ತಿದ್ದಾರೆ. ದೇಶಗಳ ಮಧ್ಯದಲ್ಲಿರುವ ಈ ಹಗೆತನವು ಕಡಿಮೆಯಾದರೆ ಈ ಎಲ್ಲಾ ಹಣವು ಆಹಾರವನ್ನು ಹೆಚ್ಚಾಗಿ ಬೆಳೆಸುವ ಹಾಗೆ ಉಪಯೋಗಿಸಲ್ಪಡಬಹುದು. ಕಮ್ಯುನಿಷ್ಟರ ನಾಯಕರು ಕ್ರಿಸ್ತನ ಕಡೆಗೆ ತಿರುಗಿಕೊಂಡರೆ ಕ್ರಿಸ್ತನಿಗೂ ದೇವದೂತರಿಗೂ ಅತ್ಯಾನಂದವಾಗುವದು. ಸಭೆಗೆ ವಿಜಯು ಸಿಕ್ಕುವದು. ಬೇರೆ ದೇಶಗಳಲ್ಲಿ ಸುವಾರ್ತೆಯ ಸಾರೋಣಕ್ಕಾಗಿ ಪ್ರೋತ್ಸಾಹ ಸಿಕ್ಕುವದು. ನಾನು ಸ್ವತಃ ಕ್ರಿಸ್ತನ ಕಡೆಗೆ ತಿರುಗಿಕೊಂಡ ಕಮ್ಯುನಿಷ್ಟರ ಗುರುತನ್ನು ಮಾಡಿಕೊಂಡಿದ್ದೇನೆ. ನಾನು ಸ್ವತಃ ಯೌವನದಲ್ಲಿ ನಾಸ್ತಿಕನೂ ನಾಸ್ತಿಕತ್ವವನ್ನು ಪ್ರಚಾರ ಮಾಡುವವನೂ ಆಗಿದ್ದೆನು. ತಾವು ಬಹಳವಾಗಿ ಪಾಪ ಮಾಡಿದ್ದರಿಂದ ಕ್ರಿಸ್ತನ ಕಡೆಗೆ ತಿರುಗಿಕೊಂಡ ಕಮ್ಯುನಿಷ್ಟರು ಆತನನ್ನು ಬಹಳವಾಗಿ ಪ್ರೀತಿಸುತ್ತಾರೆ. ಸುವಾರ್ತೆಯನ್ನು ಸಾರುವ ವಿಧಾನಕ್ಕಾಗಿ ನಾವು ಚೆನ್ನಾಗಿ ಗಮನ ಕೊಡಬೇಕು.

ನಿಜವಾಗಿ ಎಲ್ಲರಿಗೂ ರಕ್ಷಣೆ ಬೇಕು. ಆದರೆ ಬೇರೆಯುವರ ಮೇಲೆ ಎಲ್ಲರ ಪ್ರಭಾವವು ಸರಿಸಮಾನವಲ್ಲ. ಪ್ರಭಾವವುಳ್ಳ ನಾಯಕರನ್ನು ನಾಯಕನನ್ನು ಕ್ರಿಸ್ತನ ಕಡೆಗೆ ಎಳೆಯುವದು ವಿಶೇಷವಾಗಿದೆ. ಯಾಕೆಂದರೆ ಅಂಥವನ ಸಹಾಯದಿಂದ ಇನ್ನೂ ಅನೇಕರು ಕ್ರಿಸ್ತನ ಕಡೆಗೆ ತಿರುಗಿಕೊಳ್ಳಬಹುದು. ನಮ್ಮ ಕರ್ತನ ಸೇವೆಯ ಅಂತ್ಯ ಒಂದು ಚಿಕ್ಕ ಹಳ್ಳಿಯಲ್ಲಿ ಆಗಲಿಲ್ಲ. ಆತನು

ಲೋಕದ ಆತ್ಮಿಯ ಕೇಂದ್ರಸ್ಥಾನವಾದ ಯೆರೂಸಲೇಮಿನಲ್ಲಿ ತನ್ನ ಸೇವೆಯನ್ನು ಮುಗಿಸಿದನು. ಅದೇ ಕಾರಣದಿಂದ ಶ್ರೀ ಪೌಲನು ರೋಮಾ ಪಟ್ಟಣದಲ್ಲಿ ಸಾಕ್ಷಿ ಕೊಡಲು ಅಪೇಕ್ಷಿಸಿದನು. ಸತ್ಯವೇದದಲ್ಲಿ —"ಸ್ತ್ರೀಯ ಸಂತಾನವು ಸರ್ಪದ ತಲೆಯನ್ನು ಜಜ್ಜುವದು," ಎಂದು ಬರೆದಿದೆ. ನಾವು ಸರ್ಪದ ಹೊಟ್ಟೆಯನ್ನು ಕುಟಗುಳಿಸಿ ಅದನ್ನು ನಗಿಸುತ್ತೇವೆ. ಈಗಿನ ಕಾಲದಲ್ಲಿ ಅದರ ತಲೆ ಕಮ್ಯುನಿಷ್ಟರ ದೇಶಗಳಲ್ಲಿದೆ. ಆ ದೇಶಗಳಲ್ಲಿರುವ ನಾಯಕರಿಗೂ ಜನರಿಗೂ ಸುವಾರ್ತೆಯನ್ನು ತಿಳಿಸುವದು ನಮ್ಮ ಮುಖ್ಯವಾದ ಉದ್ದೇಶವಾಗಿರಬೇಕು.

ನಾವು ಸುಮ್ಮನೆ ಕರ್ತನ ಸೇವೆ ಮಾಡಬಾರದು. "ಯೆಹೋವನು ನೇಮಿಸಿದ ಕೆಲಸದಲ್ಲಿ ಆಲಸ್ಯಗಾರನು ಶಾಪಗ್ರಸ್ತನಾಗಲಿ," ಎಂದು ಸತ್ಯ ವೇದದಲ್ಲಿ ಬರೆದಿದೆ. ನಾವು ಆತ್ಮಿಯ ಆಯುಧಗಳನ್ನುಪಯೋಗಿಸಿ ಕಮ್ಯು ನಿಷ್ಟತ್ವವನ್ನು ವಿರೋಧಿಸಬೇಕು. ಈ ಆತ್ಮಿಯ ಯುದ್ಧದಲ್ಲಿ ನಾವು ಮುಂದೆ ಹೋಗಬೇಕು. ನಾವು ಯಾವಾಗಲೂ ಹಿಂಜರಿದು ಹೋಗುವದ ರಿಂದ ಅನೇಕ ದೇಶಗಳು ಕಮ್ಯುನಿಷ್ಟರ ಕೈಗೆ ಸಿಕ್ಕಿಬಿದ್ದವು. "ದೇವರು ಕಬ್ಬಿ ಣದ ಅಗುಳಿಗಳನ್ನು ಮುರಿದುಬಿಟ್ಟಿದ್ದಾನೆ," ಎಂದು ಕೀರ್ತನೆಗಳಲ್ಲಿ ಬರೆದಿದೆ. ಆತನ ದೃಷ್ಟಿಯಲ್ಲಿ ಕಬ್ಬಿಣದ ತೆರೆ ಅಲ್ಪವಾಗಿದೆ.

ವಿಜಯ ಸಿಕ್ಕುವ ವರೆಗೆ ಆದಿ ಕ್ರೈಸ್ತರು ಗುಪ್ತವಾಗಿ ಸೇವೆಯನ್ನು ಮಾಡುತ್ತಿದ್ದರು. ನಾವು ಅದೇ ರೀತಿಯಲ್ಲಿ ಕೆಲಸ ಮಾಡಲು ಕಲಿತುಕೊಳ್ಳ ಬೇಕು. ಕಮ್ಯುನಿಷ್ಟರ ಆಳ್ವಿಕೆ ಬರುವದಕ್ಕಿಂತ ಮೊದಲು ಹೊಸ ಒಡಂಬಡಿಕೆ ಯಲ್ಲಿರುವ ಕೆಲವು ವಿಷಯಗಳ ಅರ್ಥ ನನಗೆ ಗೊತ್ತಿರಲಿಲ್ಲ. ಉದಾಹರಣೆ ಯಾಗಿ ಹೊಸ ಒಡಂಬಡಿಕೆಯಲ್ಲಿ ಅನೇಕರಿಗೆ ನಲಿಗೆಯ ಹೆಸರುಗಳಿದ್ದವು. ಕಮ್ಯುನಿಷ್ಟ ದೇಶಗಳಲ್ಲಿ ನಮ್ಮ ಸೇವೆಯಲ್ಲಿ ನಾವೂ ಸಹ ಗುಪ್ತವಾದ ಹೆಸರು ಗಳನ್ನು ಉಪಯೋಗಿಸುತ್ತೇವೆ. ಕಡೆಯ ಭೋಜನಕ್ಕಾಗಿ ವ್ಯವಸ್ಥೆ ಮಾಡು ವಂಥ ಶಿಷ್ಯರಿಗೆ ನಮ್ಮ ಕರ್ತನು ವಿಳಾಸ ಕೊಡಲಿಲ್ಲ. ಆತನು ಅವರಿಗೆ— "ನೀವು ಪಟ್ಟಣದೊಳಗೆ ಹೋಗಿರಿ ; ಅಲ್ಲಿ ಒಬ್ಬ ಮನುಷ್ಯನು ತುಂಬಿದ ಕೊಡ ವನ್ನು ಹೊತ್ತುಕೊಂಡು ನಿಮ್ಮೆದುರಿಗೆ ಬರುವನು," ಎಂದು ಹೇಳಿದನು. ಈಗ ನನಗೆ ಗೊತ್ತಾಯಿತು. ಗುಪ್ತ ಸಭೆಯಲ್ಲಿ ನಾವು ಇಂಥ ಗುರುತುಗಳನ್ನು ಉಪಯೋಗಿಸುತ್ತೇವೆ. ಆದಿ ಕ್ರೈಸ್ತರು ಸೇವೆ ಮಾಡಿದ ರೀತಿಯಲ್ಲಿ ಕ್ರಿಸ್ತ ನನ್ನು ಸೇವಿಸಲು ನಾವು ಸಿದ್ಧರಾಗಿದ್ದರೆ ನಾವು ಯಶವುಳ್ಳವರಾಗಿ ಕ್ರಿಸ್ತನಿಗಾಗಿ ಕಮ್ಯುನಿಷ್ಟ ದೇಶಗಳಲ್ಲಿ ಸೇವೆ ಮಾಡಬಲ್ಲೆವು.

ನಾನು ಪಶ್ಚಿಮ ದೇಶಗಳಲ್ಲಿರುವ ಕೆಲವು ಕ್ರೈಸ್ತ ಧರ್ಮನಾಯಕರನ್ನು ಭೆಟ್ಟಿಯಾದಾಗ ನನಗೆ ಬಹಳ ದುಃಖವಾಯಿತು. ಕಮ್ಯುನಿಷ್ಟರ ಮೇಲೆ ಅವ ರಿಗೆ ಪ್ರೀತಿಯಿರಲಿಲ್ಲ. ಅವರಿಗೆ ಸುವಾರ್ತೆಯನ್ನು ಸಾರುವ ಯೋಚನೆಯನ್ನು ಅವರು ಮಾಡಿರಲಿಲ್ಲ. ಅವರಿಗೆ ಇಂಥವರ ಮೇಲೆ ನಿಜವಾದ ಕರುಣೆಯಿರ

ಲಿಲ್ಲ. ನಾವು ಏನಾದರೂ ನಂಬುತ್ತೇವೆಂದು ಹೇಳಬಹುದು. ಆದರೆ ಇದಕ್ಕಾಗಿ ನಮ್ಮ ಪ್ರಾಣವನ್ನು ಕೊಡಲು ಸಿದ್ಧರಾಗಿದ್ದೇವೋ ?

ಗುಪ್ತ ಸಭೆಯುಲ್ಲಿರುವ ವಿಶ್ವಾಸಿಗಳು ತಮ್ಮ ವಿಶ್ವಾಸಕ್ಕಾಗಿ ತಮ್ಮ ಪ್ರಾಣಗಳನ್ನರ್ಪಿಸಲು ಸಿದ್ಧರಾಗಿದ್ದಾರೆ. ನನ್ನ ಸೇವೆಯು ದೆಸೆಯಿಂದ ಕಮ್ಯುನಿಷ್ಟ ದೇಶದ ಸೆರೆಮನೆಯಲ್ಲಿ ಸಿಕ್ಕುವದು ನನಗೆ ಸಾಧ್ಯ. ಯಾಕೆಂದರೆ ಅಲ್ಲಿದ್ದ ಗುಪ್ತ ಸೇವೆಯಲ್ಲಿ ನಾನು ಮುಂದಾಳಾಗಿದ್ದೇನೆ. ನಾನು ಬರೆದಂಥ ಮಾತುಗಳನ್ನು ನಂಬುತ್ತೇನೆ.

ನಾನು ಒಂದು ಪ್ರಶ್ನೆ ಹಾಕುತ್ತೇನೆ. ಅಮೆರಿಕ ದೇಶದಲ್ಲಿದ್ದ ಅನೇಕ ಸಭೆಯು ನಾಯಕರು ಕಮ್ಯುನಿಷ್ಟರಿಗೆ ಸ್ನೇಹಿತರಾಗಿದ್ದಾರೆ. ಅವರು ತಮ್ಮ ವಿಶ್ವಾಸಕ್ಕಾಗಿ ಸಾಯಲು ಸಿದ್ಧರಾಗಿದ್ದಾರೋ ? ಅಮೆರಿಕ ದೇಶವನ್ನು ಬಿಟ್ಟು ಕಮ್ಯುನಿಷ್ಟರ ದೇಶಗಳಿಗೆ ಹೋಗಿ ಅಲ್ಲಿ ಸಭಾ ಪಾಲಕರಾಗಿ ಕಮ್ಯುನಿಷ್ಟರ ಸಂಗಡ ಸಹಕಾರಿಗಳಾಗಲು ಅವರು ಸಿದ್ಧರಾಗಿದ್ದಾರೋ ? ಯಾರೂ ಇನ್ನೂ ಹಾಗೆ ಮಾಡಿಲ್ಲ.

ಒಬ್ಬೊಬ್ಬರ ಅರ್ಥವನ್ನು ಗ್ರಹಿಸಿಕೊಳ್ಳುವಂತೆ ಮನುಷ್ಯರು ಮಾತುಗಳನ್ನು ಕಲ್ಪಿಸಿಕೊಂಡರು. ಯಾಕೆಂದರೆ ಜೀವನಕ್ಕಾಗಿ ಬೇಕಾಗುವ ಪದಾರ್ಥಗಳನ್ನು ನಾವು ಸಹಕಾರದಿಂದ ತಯಾರಿಸುತ್ತೇವೆ. ಇದು ಮಾತ್ರವಲ್ಲದೇ ಒಬ್ಬರಿಗೊಬ್ಬರು ನಮ್ಮ ಮನೋಭಾವನೆಗಳನ್ನು ತಿಳಿಸುವಂತೆ ಮಾತುಗಳು ಅಗತ್ಯವಾಗಿವೆ. ಆದರೆ ದೇವರ ರಹಸ್ಯಗಳನ್ನೂ ಆತ್ಮಿಯ ಜೀವನದ ಸಂತೋಷಗಳನ್ನೂ ವರ್ಣಿಸುವದಕ್ಕೆ ಮಾನವನ ಮಾತುಗಳು ಸಾಲವು. ಅದೇ ರೀತಿಯಲ್ಲಿ ಸೈತಾನನ ಕ್ರೂರತನವನ್ನು ಸಂಪೂರ್ಣವಾಗಿ ವರ್ಣಿಸುವದಕ್ಕೆ ಮಾನವನ ಮಾತುಗಳಿಂದಾಗದು. ನಾಝಿಗಳು ಮನುಷ್ಯರನ್ನೂ ಅವರ ಮಕ್ಕಳನ್ನೂ ಬೆಂಕಿಯಲ್ಲಿ ಹಾಕುತ್ತಿದ್ದಾಗ ಅವರು ಏನು ಯೋಚಿಸುತ್ತಿದ್ದರು ? ಅದೇ ರೀತಿಯಲ್ಲಿ ಕಮ್ಯುನಿಷ್ಟರ ಕೈಯಿಂದ ಕ್ರೈಸ್ತರು ತಾಳಿದ ಹಾಗೂ ತಾಳುತ್ತಿರುವ ಕಷ್ಟಗಳನ್ನು ವರ್ಣಿಸುವದು ನಮಗಾಗುವದಿಲ್ಲ.

ನಾನು ಲುಕ್ರೇಟಿಯು ಪತ್ರಸ್ಕಾನು ಎಂಬವನ ಸಂಗಡ ಸೆರೆಮನೆಯಲ್ಲಿದ್ದೆನು. ಈ ಮನುಷ್ಯನ ಕಾರ್ಯದಿಂದ ಕಮ್ಯುನಿಷ್ಟರು ರೂಮೆನಿಯಾ ದೇಶದಲ್ಲಿ ರಾಜ್ಯಾಧಿಕಾರವನ್ನು ಹೊಂದಿದರು. ಅವನ ಜೊತೆಗಾರರು ಅವನನ್ನು ಸೆರೆಮನೆಯಲ್ಲಿ ಹಾಕಿಬಿಟ್ಟರು. ಅವನಿಗೆ ಸ್ವಸ್ಥ ಬುದ್ಧಿಯಿದ್ದರೂ ಅವನಿಗೆ ಹುಚ್ಚು ಹಿಡಿಯುವ ತನಕ ಹುಚ್ಚಾಸ್ಪತ್ರೆಯಲ್ಲಿಟ್ಟರು. ಅಧಿಕಾರಿಣಿಯಾದ ಆನ್ನಾ ಪೋಕರ ಎಂಬಾಕೆಗೆ ಅದೇ ಅನುಭವವಾಯಿತು. ಕ್ರೈಸ್ತರಿಗೆ ಅನೇಕಾವರ್ತಿ ಇಂಥ ಅನುಭವಗಳಾಗುತ್ತವೆ. ಅವರು ಹುಚ್ಚರಂತೆ ಚಿಕಿತ್ಸೆ ಹೊಂದುತ್ತಾರೆ.

ಚೀನ ದೇಶದಲ್ಲಿ ಕೆಂಪು ಕಾವಲುಗಾರರು (Red Guards) ಮಾಡಿದ ಹಿಂಸೆಗಳಿಂದ ಲೋಕದಲ್ಲಿರುವ ಅನೇಕರಿಗೆ ಅತ್ಯಾಶ್ಚರ್ಯವಾಯಿತು. ಆದರೆ ಈ ಸಂಗತಿಗಳು ಎಲ್ಲರ ದೃಷ್ಟಿಯಲ್ಲಾದವು. ಗುಪ್ತವಾಗಿ ಚೀನ ದೇಶದಲ್ಲಿರುವ ಸೆರೆಮನೆಗಳಲ್ಲಿ ನಡೆದ ಸಂಗತಿಗಳ ವಿಷಯವಾಗಿ ಕಲ್ಪನೆಮಾಡಿರಿ. ಒಬ್ಬ ಪ್ರಸಿದ್ಧ ಲೇಖಕನೂ ಬೇರೆ ಕ್ರೈಸ್ತರೂ ತಮ್ಮ ವಿಶ್ವಾಸವನ್ನು ನಿರಾಕರಿಸಲು ಒಪ್ಪದೇ ಹೋದಾಗ ಹಿಂಸಕರು ಅವರ ಕಿವಿಗಳನ್ನೂ, ನಾಲಿಗೆಗಳನ್ನೂ, ಕಾಲುಗಳನ್ನೂ ಕತ್ತರಿಸಿದರು.

ಆದರೆ ಕಮ್ಯುನಿಷ್ಟರು ಮಾನವನ ದೇಹಗಳಿಗೆ ಮಾಡುವ ಹಿಂಸೆ ಹಾಗೂ ಹತ್ಯೆ ಅವರ ಅತಿ ಭಯಂಕರವಾದ ಕೆಲಸಗಳಲ್ಲ. ಅವರು ಮಾನವನ ಯೋಜನೆಗಳನ್ನು ಕೆಡಿಸುತ್ತಾರೆ. ಅವರು ಮಕ್ಕಳ ಮತ್ತು ಯೌವನಸ್ಥರ ಮನಸ್ಸುಗಳಲ್ಲಿ ವಿಷವುಳ್ಳ ವಿಚಾರಗಳನ್ನು ಹುಟ್ಟಿಸುತ್ತಾರೆ. ಸಭೆಗಳು ನಾಶವಾಗುವ ಹಾಗೆ ಅವರು ತಮ್ಮ ಸ್ವಂತ ಪ್ರತಿನಿಧಿಗಳನ್ನು ಸಭೆಗಳ ಮುಂದಾಳುಗಳನ್ನಾಗಿ ನೇಮಿಸಿದ್ದಾರೆ. ದೇವರಲ್ಲಿಯೂ ಕ್ರಿಸ್ತನಲ್ಲಿಯೂ ನಂಬಿಕೆ ಇಡಬಾರದೆಂದು ಮಾತ್ರವಲ್ಲದೆ ಆ ಹೆಸರುಗಳನ್ನು ದ್ವೇಷಿಸಬೇಕೆಂದು ಅವರು ಯೌವನಸ್ಥರಿಗೆ ಬೋಧಿಸುತ್ತಾರೆ. ಅನೇಕ ವರ್ಷಗಳಿಂದ ಸೆರೆಮನೆಯಲ್ಲಿ ಹಿಂಸೆಪಟ್ಟ ಕ್ರೈಸ್ತ ವಿಶ್ವಾಸಿಗಳು ಮನೆಗೆ ಬರುತ್ತಿರುವಾಗ ಅವರ ಸ್ವಂತ ಮಕ್ಕಳು ಅನೇಕಾವರ್ತಿ ಅವರನ್ನು ಹಾಸ್ಯ ಮಾಡುತ್ತಾರೆ. ಯಾಕೆಂದರೆ ಅಷ್ಟರೊಳಗೆ ಅವರ ಮಕ್ಕಳು ನಿಷ್ಠೆಯುಳ್ಳ ನಾಸ್ತಿಕರಾಗಿರುತ್ತಾರೆ. ನಾನು ಮಸಿಯಿಂದಲ್ಲದೇ ದುಃಖಪಟ್ಟವರ ರಕ್ತದಿಂದ ಈ ಪುಸ್ತಕವನ್ನು ಬರೆದಿದ್ದೇನೆ.

ದಾನಿಯೇಲನ ಕಾಲದಲ್ಲಿ ಮೂವರು ಯೌವನಸ್ಥರು ಧಗಧಗನೆ ಉರಿಯುವ ಆವಿಗೆಯೊಳಗೆ ಹಾಕಲ್ಪಟ್ಟರು. ಅವರು ಹೊರಗೆ ಬಂದಾಗ ಬೆಂಕಿಯ ವಾಸನೆಯೇ ಅವರನ್ನು ಮುಟ್ಟಲಿಲ್ಲವೆಂದು ಕಂಡುಬಂದಿತು. ಅದೇ ರೀತಿಯಲ್ಲಿ ಕಮ್ಯುನಿಷ್ಟರ ಸೆರೆಮನೆಗಳಿಂದ ಬಿಡುಗಡೆ ಹೊಂದಿದ ಕ್ರೈಸ್ತರ ಹೃದಯಗಳಲ್ಲಿ ಕಮ್ಯುನಿಷ್ಟರ ವಿರುದ್ಧವಾಗಿ ಕಹಿಯಾಗಿ ಯೋಚನೆಗಳಿಲ್ಲ.

ನೀವು ಒಂದು ಹೂವನ್ನು ಕಾಲಿನ ಕೆಳಗೆ ತುಳಿದರೆ ಅದರ ಸುವಾಸನೆ ನಿಮಗೆ ಹತ್ತುತ್ತದೆ. ಅದೇ ರೀತಿಯಲ್ಲಿ ಕಮ್ಯುನಿಷ್ಟರಿಂದ ಹಿಂಸಿಸಲ್ಪಟ್ಟ ವಿಶ್ವಾಸಿಗಳು ಅವರನ್ನು ಪ್ರತಿಯಾಗಿ ಪ್ರೀತಿಸುತ್ತಿದ್ದರು. ನಾವು ನಮ್ಮ ಕಾವಲುಗಾರರಲ್ಲಿ ಅನೇಕರನ್ನು ಕ್ರಿಸ್ತನ ಕಡೆಗೆ ಕರೆದೆವು. ಯಾಕೆಂದರೆ ನಾವು ಒಂದೇ ಉದ್ದೇಶದಿಂದ ಆಳಲ್ಪಟ್ಟೆವು. ಅದೇನೆಂದರೆ ನಮಗೆ ಹಿಂಸೆಯನ್ನು ಕೊಟ್ಟ ಕಮ್ಯುನಿಷ್ಟರಿಗೆ ನಮಗಿರುವ ಶ್ರೇಷ್ಠವಾದ ದಾನವನ್ನು ಕೊಡಬೇಕೆಂಬುದೇ. ಆ ದಾನವೇನೆಂದರೆ ನಮ್ಮ ಕರ್ತನಾದ ಯೇಸು ಕ್ರಿಸ್ತನಿಂದ ಬಂದಂಥ ರಕ್ಷಣೆಯೇ. ವಿಶ್ವಾಸದಲ್ಲಿದ್ದ ನನ್ನ ಅನೇಕ ಸಹೋದರರ ಹಾಗೆ ರಕ್ತ ಸಾಕ್ಷಿಯಾಗಿ ಸಾಯುವ ಪದವಿ ನನಗೆ ಸಿಕ್ಕಲಿಲ್ಲ. ನಾನು ಬಿಡುಗಡೆ

ಹೊಂದಿ ರೂಮೆನಿಯಾ ದೇಶದಿಂದ ಪಶ್ಚಿಮ ದೇಶಗಳಿಗೆ ಹೋಗುವ ಅನುಕೂಲತೆ ಹೊಂದಿದೆನು.

ಪಶ್ಚಿಮ ದೇಶಗಳಲ್ಲಿ ನನಗೆ ಕ್ರೈಸ್ತ ಮುಂದಾಳುಗಳಲ್ಲಿ ದುಃಖಕರವಾದ ವಿಷಯ ಸಿಕ್ಕಿತು. ಗುಪ್ತ ಸಭಿಕರು ಕಮ್ಯುನಿಷ್ಟರನ್ನು ಪ್ರೀತಿಸುವ ಹಾಗೆ ಈ ಕ್ರೈಸ್ತರು ಅವರನ್ನು ಪ್ರೀತಿಸುವದಿಲ್ಲ. ಆದಕಾರಣ ಅವರ ರಕ್ಷಣೆಗಾಗಿ ಅವರು ಏನೂ ಮಾಡುವದಿಲ್ಲ. ಬೇರೆ ಧರ್ಮಗಳನ್ನು ಅನುಸರಿಸುವವರಿಗೆ ಸುವಾರ್ತೆಯನ್ನು ತಿಳಿಸಲು ಅವರು ಯೋಚನೆಗಳನ್ನು ಮಾಡಿದ್ದಾರೆ. ಆದರೆ ಕಮ್ಯುನಿಷ್ಟರಿಗೆ ಹಾಗೆ ಮಾಡಲು ಆವಾಗ ಅವರು ಏನೂ ಪ್ರಯತ್ನ ಮಾಡಲಿಲ್ಲ. ಆದಕಾರಣ ಅವರಿಗೆ ನಿಜವಾಗಿ ಕಮ್ಯುನಿಷ್ಟರ ಮೇಲೆ ಪ್ರೀತಿಯಿಲ್ಲವೆಂದು ಸ್ಪಷ್ಟವಾಗಿ ಕಂಡುಬರುತ್ತದೆ.

ಇದು ಮಾತ್ರವಲ್ಲದೆ ಕೆಲವರು ಆಲಸ್ಯತನದಿಂದಲೂ ಅಲಕ್ಷ್ಯದಿಂದಲೂ ನಿಜವಾಗಿ ಕಮ್ಯುನಿಷ್ಟರಿಗೆ ಸಹಾಯ ಮಾಡುತ್ತಾರೆ. ಪಶ್ಚಿಮ ದೇಶಗಳಲ್ಲಿ ಕಮ್ಯುನಿಷ್ಟರು ಸಭೆಗಳಲ್ಲಿ ಪ್ರವೇಶಿಸಿ ಮುಂದಾಳುಗಳಾಗುವಂತೆ ಅವರು ಅನುಕೂಲತೆ ಕೊಡುತ್ತಾರೆ. ಕಮ್ಯುನಿಷ್ಟತ್ವದಿಂದ ಬರುವ ಅಪಾಯಗಳನ್ನು ಅಲಕ್ಷ್ಯ ಮಾಡುವಂತೆ ಅವರು ಬೇರೆ ಕ್ರೈಸ್ತರಿಗೆ ಉತ್ತೇಜನ ಕೊಡುತ್ತಾರೆ. ನಿಜವಾದ-ಸ್ಥಿತಿಯೇನೆಂದರೆ ಅವರು ಕಮ್ಯುನಿಷ್ಟರನ್ನು ಪ್ರೀತಿಸದೇ ಅವರನ್ನು ಕ್ರಿಸ್ತನ ಕಡೆಗೆ ಎಳೆಯಲು ಪ್ರಯತ್ನಿಸದೆ ಇದ್ದದ್ದರಿಂದ ತಾವು ನಡೆಸುವ ಸಭಿಕರನ್ನು ಸಹ ನಿಜವಾಗಿ ಪ್ರೀತಿಸುವದಿಲ್ಲ. ಸುವಾರ್ತೆಯನ್ನು ಸಾರಲು ಆದಿ ಕ್ರೈಸ್ತರು ಚಕ್ರವರ್ತಿಯಾದ ನೇರೋನಿಂದ ಅಪ್ಪಣೆಯನ್ನು ಕೇಳಿಕೊಳ್ಳಲಿಲ್ಲ. ಅದೇ ರೀತಿಯಲ್ಲಿ ಸುವಾರ್ತೆಯನ್ನು ಸಾರಲು ಕಮ್ಯುನಿಷ್ಟರ ಅಪ್ಪಣೆಯನ್ನು ಹೊಂದುವದು ಅಗತ್ಯವಿಲ್ಲ. ನಾವು ಕಮ್ಯುನಿಷ್ಟರನ್ನು ಕ್ರಿಸ್ತನ ಕಡೆಗೆ ಎಳೆಯದಿದ್ದರೆ ಅವರ ಪ್ರಭಾವವೂ ಅಧಿಕಾರವೂ ಹೆಚ್ಚೆಚ್ಚಾಗಿ ಬೆಳೆಯುವದು.

## ನಾವು ಇತಿಹಾಸದ ಪಾಠಗಳನ್ನು ಅಲಕ್ಷ್ಯಿಸಬಾರದು

ಕ್ರಿಸ್ತ ಶಕದ ಮೊದಲನೆಯ ಶತಮಾನಗಳಲ್ಲಿ ಉತ್ತರ ಆಫ್ರಿಕ ದೇಶದಲ್ಲಿ ಕ್ರೈಸ್ತ ಸಭೆಯು ಅಭಿವೃದ್ಧಿಯಾಯಿತು. ಆ ಭಾಗದಿಂದಲೇ ಸಂತ ಆಗಸ್ಟೀನನೂ ಸಂತ ಸೆಫ್ರಿಯನೂ ಅಥಾನೇರಿಯಸನೂ ತರ್ತಲೆಯನೂ ಬಂದರು. ಆದರೆ ಮುಸಲ್ಮಾನರು ಆ ಭಾಗವನ್ನು ಸ್ವಾಧೀನಮಾಡಿಕೊಂಡಾಗ ಅವರನ್ನು ಕ್ರಿಸ್ತನ ಕಡೆಗೆ ಎಳೆಯುವ ತಮ್ಮ ಜವಾಬ್ದಾರಿಕೆಯನ್ನು ಕ್ರೈಸ್ತರು ಅಲಕ್ಷ್ಯ ಮಾಡಿದರು. ಅದರ ಪರಿಣಾಮವಾಗಿ ಅನೇಕ ಶತಮಾನಗಳ ವರೆಗೆ ಅಲ್ಲಿ ಕ್ರೈಸ್ತತ್ವವು ಇಲ್ಲದಂತಾಯಿತು. ಈಗಿನ ಕಾಲದಲ್ಲಿ ಅಂಥವರನ್ನು ಕ್ರಿಸ್ತನ ಕಡೆಗೆ ತಿರುಗಿಸುವದು ಅತಿ ಕಠಿಣ. ಇತಿಹಾಸದ ಪಾಠಗಳನ್ನು ಕಲಿತುಕೊಳ್ಳೋಣ.

ಧರ್ಮಕ್ರಾಂತಿ (Reformation) ಕಾಲದಲ್ಲಿ ಹಸ್ ಲೂಥರ್ ಹಾಗೂ ಕಾಲ್ವಿನ್‌ರು ಪೋಪನ ಅಧಿಕಾರದಿಂದ ಸಭೆಗಳನ್ನು ಬಿಡಿಸಬೇಕೆಂದು ಹೋರಾಡುತ್ತಿದ್ದರು. ಆದರೆ ಸಭೆಯು ಮೇಲೆ ಮಾತ್ರವಲ್ಲದೇ ದೇಶಗಳ ಮೇಲೆ ಅವರ ರಾಜಕೀಯ ಹಾಗೂ ಆರ್ಥಿಕ ಅಧಿಕಾರ ಜನರ ಹಿತಕ್ಕೆ ವಿರುದ್ಧವಾಗಿತ್ತು. ಅದೇ ರೀತಿಯಲ್ಲಿ ಸುವಾರ್ತೆಯು ಕಮ್ಯುನಿಷ್ಟರ ಕಡೆಗೆ ಸಾರುವದು ಎಲ್ಲರಿಗೂ ಹಿತಕರವಾಗಿದೆ. ಯಾಕೆಂದರೆ ತಮ್ಮ ಸ್ವಾತಂತ್ರ್ಯವನ್ನು ಉಳಿಸಲು ಸ್ವತಂತ್ರರಾದ ಎಲ್ಲರಿಗೆ ಅತಿ ವಿಶೇಷವಾಗಿದೆ.

ರಾಜಕೀಯ ಬಲದಿಂದ ನಾವು ಕಮ್ಯುನಿಷ್ಟತ್ವವನ್ನು ಜಯಿಸಲಾರೆವು. ಸೈನ್ಯಗಳ ಸಂಗಡ ಕಮ್ಯುನಿಷ್ಟರನ್ನು ವಿರೋಧಿಸುವದರಿಂದ ಹೊಸ ಮಹಾ ಯುದ್ಧ ನಿಜವಾಗಿ ಪ್ರಾರಂಭವಾಗುವದು. ಲಕ್ಷ ಲಕ್ಷಾಂತರ ಜನರು ಮಾಯವಾಗುವರು. ಆದರೆ ಪಶ್ಚಿಮ ದೇಶಗಳಲ್ಲಿರುವ ಅನೇಕ ನಾಯಕರಿಗೆ ಒಂದು ತರದ ಮನೊ ತೊಳಲುವಿಕೆಯಾಯಿತು. ಕಮ್ಯುನಿಷ್ಟ ನಾಯಕರನ್ನು ಜಯಿಸಲಿಕ್ಕೆ ಅಫು ಮುಂತಾದ ಮಾದಕ ಪದಾರ್ಥಗಳನ್ನು ತಿನ್ನುವ ಪದ್ಧತಿಯನ್ನೂ ದಂಗೆಮಾಡುವದನ್ನೂ ಕ್ಯಾನ್ಸರ್ ಹಾಗೂ ಕ್ಷಯ ರೋಗಗಳನ್ನು ಹೋಗಲಾಡಿಸುವ ಇಚ್ಛೆ ಅವರೆಲ್ಲರಿಗಿದೆ. ಆದರೆ ಅವುಗಳೆಲ್ಲಕ್ಕಿಂತ ಹೆಚ್ಚಾದ ಜನರನ್ನು ನಾಶಮಾಡದ ಕಮ್ಯುನಿಷ್ಟತ್ವವನ್ನು ಇಲ್ಲದಂತಾಗಿ ಮಾಡಲು ಅವರಿಗೆ ಇಷ್ಟವಿಲ್ಲ.

ರಷ್ಯ ದೇಶದವರಾದ ಇಲ್ಯ ಎಹರನ್ ಬರ್ಗ ಒಬ್ಬ ಕಮ್ಯುನಿಷ್ಟ ಲೇಖಕರಾಗಿದ್ದರು. ಅವರು ಬರೆದದ್ದೇನೆಂದರೆ—"ಸ್ಟ್ಯಾಲಿನ್‌ನು ಕೊಂದುಹಾಕಿದ ನಿರ್ದೋಷಿ ಜನರ ಹೆಸರುಗಳ ಟಿಪ್ಪಣಿಯನ್ನು ಬರೆಯಲು ಪ್ರಾರಂಭಿಸಿದರೆ ಅವನ ಜೀವನದಲ್ಲೆಲ್ಲಾ ಅದನ್ನು ಮುಗಿಸಲು ಅವನಿಗೆ ಸಾಧ್ಯವಿರಲಿಲ್ಲ," ಎಂಬುದೇ. ಕಮ್ಯುನಿಷ್ಟ ಪಕ್ಷದ ಮಹಾ ಸಮೂಹದಲ್ಲಿ ಕ್ರೂಶ್ಚೆವನು—"ಸ್ಟ್ಯಾಲಿನ್‌ನು ಸಾವಿರಾರು ಪ್ರಾಮಾಣಿಕ ನಿರ್ದೋಷಿಗಳಾದ ಕಮ್ಯುನಿಷ್ಟರನ್ನು ಕೊಲ್ಲಿಸಿದ್ದಾನೆ. ನಮ್ಮ ಹದಿನೇಳನೆಯ ಮಹಾ ಸಮೂಹದಲ್ಲಿ 139 ಸದಸ್ಯರು ಕೇಂದ್ರ ಸಮಿತಿಗೆ ನೇಮಿಸಲ್ಪಟ್ಟರು. ಅವರಲ್ಲಿ 98 ಹಿಡಿಯಲ್ಪಟ್ಟು ಗುಂಡಿನಿಂದ ಕೊಲ್ಲಲ್ಪಟ್ಟರು," ಎಂದು ಹೇಳಿದನು. ಕಮ್ಯುನಿಷ್ಟರಿಗೆ ಇಂಥ ಕಷ್ಟ ಕೊಟ್ಟ ನಂತರ ಅವನು ಕ್ರೈಸ್ತರಿಗೆ ಮಾಡಿದ ಹಿಂಸೆಯನ್ನೂ ವರ್ಣಿಸುವದು ಸಾಧವಿಲ್ಲ. ಕ್ರೂಶ್ಚೆವನು ಸ್ಟ್ಯಾಲಿನ್‌ನನ್ನು ನಿರಾಕರಿಸಿದ್ದರೂ ಅದೇ ರೀತಿಯಲ್ಲಿ ನಡೆದುಕೊಂಡನು. ಹೋದ ಹತ್ತು ವರ್ಷಗಳಲ್ಲಿ ರಷ್ಯದಲ್ಲಿದ್ದ ಇನ್ನೂ ಉಪಯೋಗಿಸಲ್ಪಟ್ಟಿದ್ದ ಕ್ರೈಸ್ತ ಸಭಾ ಸ್ಥಾನಗಳು ಮುಚ್ಚಲ್ಪಟ್ಟಿದ್ದವು. ಚೀನ ದೇಶದಲ್ಲಿ ಎಲ್ಲಾ ಕ್ರೈಸ್ತ ಸಭಾ ಸ್ಥಾನಗಳು ಮುಚ್ಚಲ್ಪಟ್ಟವೆ. ರಷ್ಯ ಹಾಗೂ ರೂಮೆನಿಯಾ ದೇಶಗಳಲ್ಲಿ ಅನೇಕ ಕ್ರೈಸ್ತರು ಹಿಡಿಯಲ್ಪಟ್ಟು ಸೆರೆಮನೆಯಲ್ಲಿ ಹಾಕಲ್ಪಟ್ಟಿದ್ದಾರೆ. ಯೌವನಸ್ಥರ ಶಿಕ್ಷಣದ ಮುಖ್ಯ ಉದ್ದೇಶವೇನೆಂದರೆ—"ಅವರು

ಪಶ್ಚಿಮ ದೇಶಗಳ ವಿಷಯುಗಳನ್ನೂ ವಿಶೇಷವಾಗಿ ಕ್ರೈಸ್ತತ್ವವನ್ನೂ ಹಗೆ ಮಾಡುತ್ತಾ ಬೆಳೆಯುಬೇಕೆಂಬುದೇ." ರಷ್ಯ ದೇಶದಲ್ಲಿ ಅನೇಕಾವರ್ತಿ ಸ್ಥಾನಿಕ ಅಧಿಕಾರಿಗಳು ಸಭಾ ಸ್ಥಾನಗಳ ಮುಂದೆ ನಿಂತುಕೊಂಡು ಸಭೆಗಳಿಗೆ ಹೋಗುವ ಜನರನ್ನು ಗಮನಿಸುತ್ತಾರೆ. ಅವರಲ್ಲಿ ಮಕ್ಕಳಿದ್ದರೆ ಆ ಅಧಿಕಾರಿಗಳು ಅವರನ್ನು ಹೊಡೆದು ಹೊರಗೆ ಹಾಕುತ್ತಾರೆ. ಮುಂದಿನ ಕಾಲದಲ್ಲಿ ಈ ಮಕ್ಕಳು ಪಶ್ಚಿಮ ದೇಶಗಳಲ್ಲಿರುವ ಕ್ರೈಸ್ತತ್ವವು ಇಲ್ಲದಂತಾಗಿ ಮಾಡುವಂತೆ ಅವರು ಅವರ ಶಿಕ್ಷಣಕ್ಕೆ ಅತಿ ಗಮನ ಕೊಡುತ್ತಾರೆ.

ಕೇವಲ ಒಂದೇ ಬಲದಿಂದ ನಾವು ಕಮ್ಯುನಿಷ್ಟತ್ವವನ್ನು ಜಯಿಸಬಲ್ಲೆವು. ಆ ಬಲದಿಂದ ರೋಮ್ ಸಾಮ್ರಾಜ್ಯದ ಬದಲಾಗಿ ಕ್ರೈಸ್ತ ಸಂಸ್ಥಾನಗಳು ಉಂಟಾದವು. ಆ ಬಲದಿಂದ ಕ್ರೂರರಾದ ಟ್ಯೂಟೋನ್‌ರೂ ವೈಕಿಂಗರೂ ಕ್ರೈಸ್ತರಾದರು. ಈ ಬಲದಿಂದ ಅನೇಕ ದೇಶಗಳು ಸ್ವತಂತ್ರವಾದವು. ಆ ಬಲವು ಸುವಾರ್ತೆಯ ಬಲವಾಗಿದೆ. ಎಲ್ಲಾ ಕಮ್ಯುನಿಷ್ಟ ದೇಶಗಳಲ್ಲಿರುವ ಗುಪ್ತ ಸಭಿಕರು ಈ ಸುವಾರ್ತೆಯನ್ನು ಸಾರುವವರಾಗಿದ್ದಾರೆ. ಈ ಸಭೆಗೆ ಸಹಾಯ ಮಾಡುವದರಿಂದ ನಾವು ಕಷ್ಟಪಡುತ್ತಿರುವ ನಮ್ಮ ಸಹೋದರರ ಸಂಗಡವಿರುವ ಅನ್ಯೋನ್ಯತೆಯನ್ನು ತೋರ್ಪಡಿಸುತ್ತೇವೆ. ಇದು ಮಾತ್ರವಲ್ಲದೇ ಅದರಿಂದ ನಮ್ಮ ಸಭೆಗಳಿಗೂ ನಮ್ಮ ದೇಶಗಳಿಗೂ ಲಾಭ ಸಿಕ್ಕುವದು. ಸ್ವಾತಂತ್ರವಿರುವವರೆಲ್ಲರೂ ಸ್ವಾತಂತ್ರ್ಯವಿಲ್ಲದವರಿಗೆ ಸ್ವಾತಂತ್ರ್ಯ ಸಿಕ್ಕುವ ಹಾಗೆ ಸಹಾಯ ಮಾಡುವದು ಯೋಗ್ಯವಾಗಿದೆ.

ಗುಪ್ತ ಸಭೆಯು ಕೆಲವು ಕಮ್ಯುನಿಷ್ಟ ನಾಯಕರನ್ನು ಕ್ರಿಸ್ತನ ಕಡೆಗೆ ಎಳೆದಿದೆ. ಜೊರ್ಜು ಡೇಸ್ ರೂಮೆನಿಯಾ ದೇಶದ ಮುಖ್ಯಮಂತ್ರಿಯಾಗಿದ್ದನು. ಅವನು ತನ್ನ ಪಾಪವನ್ನು ಒಪ್ಪಿಕೊಂಡು ಬಿಟ್ಟುಬಿಟ್ಟು ಕ್ರಿಸ್ತನ ಕಡೆಗೆ ತಿರುಗಿಕೊಂಡವನಾಗಿ ಸತ್ತನು. ಕಮ್ಯುನಿಷ್ಟ ಸರಕಾರಗಳಲ್ಲಿ ಕೆಲವು ಗುಪ್ತ ವಿಶ್ವಾಸಿಗಳಾಗಿದ್ದಾರೆ. ಹೆಚ್ಚು ಮಂದಿ ಕ್ರಿಸ್ತನ ಕಡೆಗೆ ತಿರುಗಿಕೊಂಡರೆ ಕಮ್ಯುನಿಷ್ಟ ಸರಕಾರಗಳಲ್ಲಿ ನಿಜವಾಗಿ ಬದಲಾವಣೆಗಳಾಗುವವು. ಇಂಥ ಬದಲಾವಣೆಗಳಿಂದ ಕ್ರೈಸ್ತತ್ವಕ್ಕೂ ಸ್ವಾತಂತ್ರ್ಯಕ್ಕೂ ಅನುಕೂಲವಾಗುವದು.

ಕೆಲವು ದೇಶಗಳ ನಾಯಕರಲ್ಲಿ ಬದಲಾವಣೆಯಾಗಿದ್ದರೂ ಕ್ರೂರವಾದ ನಾಸ್ತಿಕರು ಇನ್ನೂ ಆಳುತ್ತಿದ್ದಾರೆ. ಈಗಿನ ಕಾಲದಲ್ಲಿ ಸುವಾರ್ತೆಯ ಅಭಿವೃದ್ಧಿಗಾಗಿ ಒಳ್ಳೇ ಅನುಕೂಲತೆಯಿದೆ.

ಅನೇಕ ಕಮ್ಯುನಿಷ್ಟರು ಯಥಾರ್ಥವುಳ್ಳ ಜನರಾಗಿದ್ದಾರೆ. ಕಮ್ಯುನಿಷ್ಟತ್ವದ ಮೇಲೆ ಅವರಿಗೆ ನಿಜವಾದ ನಂಬಿಕೆಯಿದೆ. ಆದರೆ ಈಗ ಅವರ ಮನಸ್ಸುಗಳಲ್ಲಿ ದೊಡ್ಡ ಸಂಶಯ ಉಂಟಾಗಿದೆ. ಕಮ್ಯುನಿಷ್ಟತ್ವದಿಂದ ಬೇರೆ ಬೇರೆ ಜನಾಂಗಗಳವರು ಒಬ್ಬೊಬ್ಬರ ಸಂಗಡ ಪ್ರೀತಿಯಿಂದ ಜೀವಿಸುವರೆಂದು

ಅವರು ನಿಜವಾಗಿ ನಂಬಿದ್ದರು. ಈಗಲಾದರೋ ಅದೇ ಕಮ್ಯುನಿಷ್ಟ ರಾಷ್ಟ್ರಗಳವರು ನಾಯಿಗಳಂತೆ ಜಗಳವಾಡುತ್ತಿದ್ದಾರೆ. ಕಮ್ಯುನಿಷ್ಟತ್ವದಿಂದ ಭೂಲೋಕದಲ್ಲಿ ನಿಜವಾದ ಸುಖ ಸಂತೋಷ ಸಿಕ್ಕುವದೆಂದು ಅವರು ನಂಬಿದ್ದರು. ಪರಲೋಕದ ಸುಖ ಅವರಿಗೆ ಕಲ್ಪನೆಯಾಗಿ ಕಾಣಿಸುತ್ತಿತ್ತು. ಆದರೆ ಇದು ನಿಜವಾದ ಸುಖವಾಗುವದೆಂದು ಅವರು ನಂಬಿದ್ದರು. ಈಗಲಾದರೋ ಆ ಜನರಿಗೆ ಹಸಿವೆಯಾಗಿದೆ. ಅವರು ಪಶ್ಚಿಮ ದೇಶಗಳಿಂದ ಗೋದಿಯನ್ನು ಆಯಾತಮಾಡಿಕೊಳ್ಳುತ್ತಾರೆ. ಕಮ್ಯುನಿಷ್ಟರು ತಮ್ಮ ನಾಯಕರ ಮಾತುಗಳ ಮೇಲೆ ನಂಬಿಕೆಯಿಟ್ಟಿದ್ದರು. ಈಗಲಾದರೋ ಸ್ವಂತ ವರ್ತಮಾನ ಪತ್ರಿಕೆಗಳಲ್ಲಿ ಆಶ್ಚರ್ಯಕರವಾದ ವಿಷಯಗಳನ್ನು ಓದುತ್ತಾರೆ. ಸ್ಟ್ಯಾಲಿನ್‌ನು ಅನೇಕರ ಕೊಲೆಗಾರನಾಗಿದ್ದನು. ಕ್ರೂಶ್ಚೆವ್ ಬುದ್ಧಿಹೀನನಾಗಿದ್ದನು. ಅದೇ ರೀತಿಯಲ್ಲಿ ಕಾಬೋಶಿ, ಗರೋ, ಅನ್ನಾ ಪೋಕರ್, ರಂಕೋವಿಕಿ ಮುಂತಾದ ರಾಷ್ಟ್ರೀಯ ನಾಯಕರ ತಪ್ಪುಗಳು ಎಲ್ಲೆಲ್ಲಿಯೂ ಪ್ರಕಟವಾಗಿವೆ. ತಮ್ಮ ನಾಯಕರು ತಪ್ಪುಗಳನ್ನು ಮಾಡಲಾರರೆಂದು ಇನ್ನೂ ನಂಬುವದಿಲ್ಲ. ಅವರು ಪೋಪನಿಲ್ಲದ ಕ್ಯಾಥೊಲಿಕ್‌ರ ಹಾಗಿದ್ದಾರೆ.

ಕಮ್ಯುನಿಷ್ಟರ ಹೃದಯಗಳಲ್ಲಿ ಬರಿದಾದ ಭಾಗವಿದೆ. ಕ್ರಿಸ್ತನೊಬ್ಬನೇ ಅದನ್ನು ತುಂಬಬಲ್ಲನು. ಮಾನವನ ಹೃದಯವು ಸ್ವಾಭಾವಿಕವಾಗಿ ದೇವರನ್ನು ಹುಡುಕುತ್ತದೆ. ಕ್ರಿಸ್ತನೊಬ್ಬನೇ ಪ್ರತಿಯೊಬ್ಬನ ಕೊರತೆಯನ್ನು ನೀಗಿಸಬಲ್ಲನು. ಇದು ಕಮ್ಯುನಿಷ್ಟರ ವಿಷಯವಾಗಿಯೂ ಸತ್ಯವಾಗಿದೆ. ಸುವಾರ್ತೆಯಲ್ಲಿಯ ಪ್ರೀತಿಯ ಬಲವು ಅವರನ್ನೂ ಎಳೆಯುತ್ತದೆ. ನಾನು ಇದನ್ನು ಸ್ವತಃ ನೋಡಿದ್ದೇನೆ. ಇದು ಸಾಧ್ಯವೆಂದು ನನಗೆ ಸ್ವತಃ ಅನುಭವದಿಂದ ಗೊತ್ತಾಯಿತು.

ಕಮ್ಯುನಿಷ್ಟರಿಂದ ಹಾಸ್ಯ, ಹಿಂಸೆಗಳನ್ನು ತಾಳಿದ ಕ್ರೈಸ್ತರು ತಮಗೂ ತಮ್ಮ ಕುಟುಂಬಗಳಿಗೂ ಮಾಡಲ್ಪಟ್ಟ ಕಷ್ಟಗಳನ್ನು ಮರೆತುಬಿಟ್ಟು ಅವರ ಹಿಂಸಕರನ್ನು ಕ್ಷಮಿಸಿಬಿಟ್ಟಿದ್ದಾರೆ. ಕಮ್ಯುನಿಷ್ಟರು ಕ್ರಿಸ್ತನ ಕಡೆಗೆ ಬರುವ ಹಾಗೆ ಅವರು ಸಹಾಯಮಾಡಲು ಸಿದ್ಧರಾಗಿದ್ದಾರೆ. ಆ ಕೆಲಸಕ್ಕಾಗಿ ನಮ್ಮ ಸಹಾಯ ಅವರಿಗೆ ಬೇಕು. ಇದು ಮಾತ್ರವಲ್ಲದೇ ಕ್ರೈಸ್ತ ಪ್ರೀತಿ ಯಾವಾಗಲೂ ಸಾರ್ವಜನಿಕವಾಗಿದೆ. ಕ್ರೈಸ್ತರಲ್ಲಿ ಯಾವಾಗಲೂ ಪಕ್ಷಪಾತವಿಲ್ಲ. ದೇವರು ಉಂಟುಮಾಡಿದ ಸೂರ್ಯನು ಒಳ್ಳೆಯವರ ಹಾಗೂ ಕೆಟ್ಟವರ ಮೇಲೆ ಪ್ರಕಾಶಿಸುತ್ತಾನೆ. ಕ್ರೈಸ್ತ ಪ್ರೀತಿಯು ಹಾಗೆಯೇ ಇದೆ. ನಾವು ನಮ್ಮ ವೈರಿಗಳನ್ನು ಪ್ರೀತಿಸಬೇಕೆಂದು ಕರ್ತನಾದ ಯೇಸು ಬೋಧಿಸಿದನು. ಈ ಮಾತನ್ನು ನಂಬಿ ಪಶ್ಚಿಮ ದೇಶಗಳಲ್ಲಿರುವ ಅನೇಕ ಕ್ರೈಸ್ತ ನಾಯಕರು ಕಮ್ಯುನಿಷ್ಟರಿಗೆ ಸ್ನೇಹವನ್ನು ತೋರಿಸುತ್ತಾರೆ. ಆದರೆ ನಾವು ನಮ್ಮ ವೈರಿಗಳನ್ನು ಮಾತ್ರ ಪ್ರೀತಿಸಬೇಕೆಂದು ನಮ್ಮ ಕರ್ತನು ಬೋಧಿಸಲಿಲ್ಲ. ನಾವು ನಮ್ಮ ಸಹೋದರರನ್ನು

ನಿಜವಾಗಿ ಪ್ರೀತಿಸಬೇಕು. ಈ ಕ್ರೈಸ್ತ ನಾಯಕರು ಕಮ್ಯುನಿಷ್ಟರ ಸಂಗಡ ಊಟ ಮಾಡುತ್ತಿರುವಾಗ ಅವರಿಗೆ ಸುವಾರ್ತೆಯನ್ನು ಸಾರುವದಿಲ್ಲ. ಆ ಕಮ್ಯುನಿಷ್ಟರು ಅನೇಕ ವಿಶ್ವಾಸಿಗಳನ್ನು ಕೊಲ್ಲಿಸಿದರೆಂದು ಅವರು ಮರೆತುಬಿಡುತ್ತಾರೆ. ಕಮ್ಯುನಿಷ್ಟರಿಂದ ಹಿಂಸಿಸಲ್ಪಟ್ಟ ವಿಶ್ವಾಸಿಗಳನ್ನು ಅವರು ಮರೆತು ಬಿಡುತ್ತಾರೆ. ಅವರು ಅವರನ್ನು ಪ್ರೀತಿಸುವದಿಲ್ಲ.

ಪಶ್ಚಿಮ ದೇಶಗಳಲ್ಲಿರುವ ಸಭೆಗಳು ಹಸಿವೆಯುಳ್ಳ ಜನರಿಗಾಗಿ ಬಹಳ ಸಹಾಯ ನೀಡಿದ್ದಾರೆ. ಆದರೆ ಅನೇಕಾವರ್ತಿ ಇದು ಎಲ್ಲರಿಗಿಂತ ಹಸಿವೆಯುಳ್ಳ ಜನರಿಗೆ ತಲುಪುವದಿಲ್ಲ. ಅವರು ಯಾರೆಂದರೆ—"ಕ್ರಿಸ್ತನಿಗಾಗಿ ಹಿಂಸಿಸಲ್ಪಟ್ಟ ದೇವಭಕ್ತರ ಕುಟುಂಬದವರೇ." ನನಗೆ ಬಿಡುಗಡೆ ಸಿಕ್ಕುವ ಹಾಗೆ ಕ್ರೈಸ್ತ ಸಂಸ್ಥಾನದವರು ಈಡನ್ನು ಕೊಟ್ಟರು. ಇತರರನ್ನು ಬಿಡಿಸುವ ಹಾಗೆ ಈಡನ್ನು ಕೊಡುವದು ಸಾಧ್ಯ. ಆದರೆ ನಾನೊಬ್ಬನೇ ನನ್ನ ದೇಶದಲ್ಲಿ ಈ ರೀತಿ ಬಿಡಿಸಲ್ಪಟ್ಟಿದ್ದೇನೆ.

ಆದಿ ಕ್ರೈಸ್ತರಲ್ಲಿ ಒಂದು ಮುಖ್ಯವಾದ ಪ್ರಶ್ನೆಯಿತ್ತು. ಅದೇನೆಂದರೆ—"ಸುವಾರ್ತೆಯು ಯೆಹೂದ್ಯರಿಗಾಗಿ ಮಾತ್ರ ಇತ್ತೋ ? ಅಥವಾ ಅನ್ಯ ಜನರಿಗಾಗಿಯೂ ಇತ್ತೋ ?" ಆ ಪ್ರಶ್ನೆಗೆ ಸದುತ್ತರ ಸಿಕ್ಕಿತು. ಇಪ್ಪತ್ತನೆಯ ಶತಮಾನದಲ್ಲಿ ಅದೇ ಪ್ರಶ್ನೆ ಹೊಸ ರೂಪದಲ್ಲಿ ಕಂಡುಬರುತ್ತದೆ. ಕ್ರಿಸ್ತನು ಕೇವಲ ಪಶ್ಚಿಮ ದೇಶದವರಿಗೋಸ್ಕರ ಸಾಯಲಿಲ್ಲ. ಆತನು ಶಿಲುಬೆಯ ಮೇಲೆ ಸತ್ತಾಗ ಒಂದು ಕೈ ಪೂರ್ವ ದಿಕ್ಕಿಗೂ ಎರಡನೆಯದು ಪಶ್ಚಿಮ ದಿಕ್ಕಿಗೂ ಚಾಚಲ್ಪಟ್ಟಿದ್ದವು. ಆತನು ಯೆಹೂದ್ಯರಿಗೆ ಮಾತ್ರವಲ್ಲದೇ ಅನ್ಯ ಜನರಿಗೂ ಅರಸನಾಗಿದ್ದಾನೆ. ಅದೇ ರೀತಿಯಲ್ಲಿ ಆತನು ಪಶ್ಚಿಮ ದೇಶದವರಿಗಾಗಿ ಮಾತ್ರವಲ್ಲದೆ ಕಮ್ಯುನಿಷ್ಟರಿಗೂ ರಕ್ಷಕನೂ ಕರ್ತನೂ ಆಗಿದ್ದಾನೆ. ಆತನು ತನ್ನ ಶಿಷ್ಯರಿಗೆ—"ನೀವು ಹೊರಟು ಹೋಗಿ, ಎಲ್ಲಾ ದೇಶದವರನ್ನು ನನ್ನ ಶಿಷ್ಯರನ್ನಾಗಿ ಮಾಡಿರಿ," ಎಂದು ಆಜ್ಞಾಪಿಸಿದನು. ಆತನು ಎಲ್ಲರಿಗೋಸ್ಕರ ತನ್ನ ರಕ್ತವನ್ನು ಸುರಿಸಿದನು. ಎಲ್ಲರೂ ಆತನ ಸುವಾರ್ತೆಯನ್ನು ಕೇಳಿ ನಂಬುವಂತೆ ಆತನು ಇಷ್ಟಪಡುತ್ತಾನೆ.

ಕಮ್ಯುನಿಷ್ಟ ದೇಶಗಳಲ್ಲಿ ಸುವಾರ್ತೆಯನ್ನು ಸಾರುವ ಹಾಗೆ ನಮಗೆ ಉತ್ತೇಜನವಿದೆ. ಅಲ್ಲಿ ನಂಬುವವರೆಲ್ಲರೂ ಪ್ರೀತಿಯಿಂದಲೂ ಉತ್ತೇಜನದಿಂದಲೂ ತುಂಬಿದವರಾಗಿದ್ದಾರೆ. ಉಗುರು ಬೆಚ್ಚಗಿನ ಯಾವ ವಿಶ್ವಾಸಿಯನ್ನೂ ನಾನು ಭೆಟ್ಟಿಯಾಗಲಿಲ್ಲ. ಮೊದಲು ಕಮ್ಯುನಿಷ್ಟರಾದವರು ಕ್ರಿಸ್ತನ ನಿಷ್ಠೆಯುಳ್ಳ ಶಿಷ್ಯರಾಗಬಲ್ಲರು. ಕ್ರಿಸ್ತನು ಎಲ್ಲಾ ಪಾಪಿಗಳನ್ನು ಪ್ರೀತಿಸಿ ಅವರನ್ನು ಪಾಪದಿಂದ ಬಿಡಿಸಬೇಕೆಂದು ಅಪೇಕ್ಷಿಸುವ ಹಾಗೆ ಕಮ್ಯುನಿಷ್ಟನನ್ನೂ ಪ್ರೀತಿಸಿ ಅವರನ್ನು ಕಮ್ಯುನಿಷ್ಟತ್ವದಿಂದ ಬಿಡಿಸಬೇಕೆಂದು ಅಪೇಕ್ಷಿಸುತ್ತಾನೆ. ಆದರೆ ಪಶ್ಚಿಮ

ಸಭೆಗಳಲ್ಲಿರುವ ಕೆಲವು ಧರ್ಮನಾಯಕರು ಅವರನ್ನು ಅಲಕ್ಷ್ಯಮಾಡುತ್ತಾರೆ. ಈ ರೀತಿಯಲ್ಲಿ ಕಮ್ಯುನಿಷ್ಟರ ವಿಜಯಕ್ಕೆ ಸಹಾಯ ಮಾಡುತ್ತಾರೆ. ಅವರಿಗೂ ಅವರಿಂದ ಹಿಂಸಿಸಲ್ಪಟ್ಟವರಿಗೂ ರಕ್ಷಣೆಯಾಗದಂತೆ ಅವರು ಅಡ್ಡಿ ಮಾಡುತ್ತಾರೆ.

## ಬಿಡುಗಡೆಯಾದ ನಂತರದ ನನ್ನ ಅನುಭವಗಳು

ಸೆರೆಮನೆಯಿಂದ ಬಿಡುಗಡೆ ಹೊಂದಿದ ನಂತರ ನಾನು ತಿರಿಗಿ ನನ್ನ ಕುಟುಂಬದ ಸಂಗಡ ಜೀವಿಸುತ್ತಿದ್ದೆನು. ನನ್ನ ಹೆಂಡತಿ ನನ್ನನ್ನು—"ನೀವು ಮುಂದಿನ ಕಾಲದಲ್ಲಿ ಏನು ಮಾಡಬೇಕೆಂದಿದ್ದೀರಿ ?" ಎಂದು ಕೇಳಿದಳು. ನಾನು ಆಕೆಗೆ—"ನಾನು ಧಾರ್ಮಿಕ ಸಾಧುವಾಗಿ ಜೀವಿಸುವದು ಒಳ್ಳೇದೆಂದು ಕಾಣುತ್ತದೆ," ಎಂದು ಉತ್ತರ ಕೊಟ್ಟೆನು. ಆಕೆಯ ಮನಸ್ಸಿನಲ್ಲಿ ಅದೇ ವಿಚಾರವಿತ್ತು.

ನಾನು ಯೌವನದಲ್ಲಿ ಬಹಳ ಉತ್ತೇಜನದಿಂದ ಕಾರ್ಯವನ್ನು ಸಾಧಿಸುವವನಾಗಿದ್ದೆನು. ಆದರೆ ಸೆರೆಮನೆಯಲ್ಲಿದ್ದಾಗ ರೂಪಾಂತರವಾಯಿತು. ಅನೇಕ ವರ್ಷ ನಾನು ಏಕಾಂತವಾಗಿ ಒಂದೇ ಕೋಣೆಯಲ್ಲಿದ್ದೆನು. ಆವಾಗ ನಾನು ಬಹಳ ವಿಚಾರ ಮಾಡುತ್ತಿದ್ದೆನು. ನನ್ನ ಹೃದಯದಲ್ಲಿರುವ ಬಿರುಗಾಳಿಗಳೆಲ್ಲಾ ಶಾಂತವಾಗಿದ್ದವು. ಕಮ್ಯುನಿಷ್ಟತ್ವದಿಂದ ನನಗೆ ಮನೋ ದುಃಖವಾಗಲಿಲ್ಲ. ಅದು ನನ್ನ ಲಕ್ಷ್ಯಕ್ಕೂ ಬರಲಿಲ್ಲ. ನಾನು ನನ್ನ ಸ್ವರ್ಗೀಯ ಮದಲಿಂಗನಾದ ಕ್ರಿಸ್ತನ ಅನ್ಯೋನ್ಯದಲ್ಲಿದ್ದೆನು. ನಮ್ಮನ್ನು ಹಿಂಸಿಸುವವರಿಗಾಗಿ ನಾನು ಪ್ರಾರ್ಥನೆ ಮಾಡುತ್ತಿದ್ದೆನು. ನಾನು ಅವರನ್ನು ಹೃದಯಪೂರ್ವಕವಾಗಿ ಪ್ರೀತಿಸುತ್ತಿದ್ದೆನು.

ನನಗೆ ಬಿಡುಗಡೆ ಸಿಕ್ಕುವದೆಂಬ ಆಶೆ ಅಲ್ಪಸ್ವಲ್ಪವಾಗಿತ್ತು. ಆದರೆ ನನಗೆ ಬಿಡುಗಡೆ ಸಿಕ್ಕಿದರೆ ನಾನು ಏನು ಮಾಡಬಹುದೆಂಬ ವಿಷಯದ ಸಂಬಂಧವಾಗಿ ಆಗಾಗ ಯೋಚಿಸುತ್ತಿದ್ದೆನು. ನಾನು ಯಾವದೊಂದು ಶಾಂತವಾದ ಸ್ಥಳಕ್ಕೆ ಹೋಗಿ ಅರಣ್ಯದಲ್ಲಿರುವ ಸಾಧುಗಳ ಹಾಗೆ ನನ್ನ ಕರ್ತನ ಮೇಲೆ ಧ್ಯಾನ ಮಾಡುತ್ತಾ ಜೀವಿಸುವದು ಒಳ್ಳೇದೆಂದು ಯೋಚಿಸಿದೆನು.

ದೇವರು ಸತ್ಯ ಸ್ವರೂಪನಾಗಿದ್ದಾನೆ. ಸತ್ಯವೇದದಲ್ಲಿ ಆ ಸತ್ಯ ಸ್ವರೂಪನ ವಿಷಯವಾದ ಸತ್ಯತೆ ಬರೆಯಲ್ಪಟ್ಟಿದೆ. ಕ್ರೈಸ್ತ ಬೋಧನೆಯು ಸತ್ಯವೇದದ ಸತ್ಯದ ಸಂಬಂಧವಾಗಿದೆ. ಅನೇಕರು ಈ ಸತ್ಯತೆಗಳಿಗೆ ಗಮನ ಕೊಟ್ಟು ಸತ್ಯ ಸ್ವರೂಪನಾದ ದೇವರನ್ನು ಅಲಕ್ಷ್ಯಮಾಡುತ್ತಾರೆ. ನಾವು ಹಸಿವೆಪಟ್ಟು ಹೊಡೆಯಲ್ಪಟ್ಟು ಅರ್ಧ ಬೇಶುದ್ಧರಾಗಿ ಸತ್ಯವೇದದ ವಿಷಯವಾಗಿದ್ದ ಅನೇಕ ಸತ್ಯತೆಗಳನ್ನು ಮರೆತುಬಿಟ್ಟಿದ್ದೆವು. ಆದರೆ ನಾವು ಸತ್ಯ ಸ್ವರೂಪನಲ್ಲಿ ಜೀವಿಸುತ್ತಿದ್ದೆವು. ಸರಿಯಾಗಿ ಯೋಚಿಸಲು ನಮಗೆ ಸಾಧ್ಯವಿರಲಿಲ್ಲ. ಆದರೆ ನಾವು

ಹಿಂಸೆಪಡುತ್ತಿರುವ ಕಾರ್ಗತ್ತಲಿನ ಸಮಯದಲ್ಲಿ ಮನುಷ್ಯಕುಮಾರನಾದ ಕ್ರಿಸ್ತನು ತನ್ನನ್ನು ನಮಗೆ ಪ್ರಕಟಿಸಿಕೊಂಡನು. ಸೆರೆಮನೆಯ ಗೋಡೆಗಳು ರತ್ನಗಳ ಹಾಗೆ ಥಳಥಳಿಸುತ್ತಿದ್ದವು. ದಿವ್ಯ ಪ್ರಕಾಶವು ನಮ್ಮ ಕೋಣೆಗಳನ್ನು ತುಂಬಿತ್ತು. ದೈಹಿಕ ರೀತಿಯಲ್ಲಿ ನಾವು ಹಿಂಸಿಸಲ್ಪಟ್ಟಿದ್ದೆವು. ಆದರೆ ಆತ್ಮಿಕ ರೀತಿಯಲ್ಲಿ ಕರ್ತನಲ್ಲಿ ಸಂತೋಷಿಸುತ್ತಿದ್ದೆವು. ಇಂಥ ಸಂತೋಷದ ಬದಲಾಗಿ ಅರಮನೆಯಲ್ಲಿ ವಾಸಿಸುವದು ನಮಗೆ ಅಲ್ಪವೆಂದು ಕಂಡುಬಂದಿತು.

ಸೆರೆಮನೆಯನ್ನು ಬಿಟ್ಟ ನಂತರ ಹೋರಾಡಬೇಕೆಂದು ನನ್ನ ಮನಸ್ಸಿನಲ್ಲಿ ಯೋಚನೆಯೂ ಇರಲಿಲ್ಲ. ನೀತಿಗಾಗಿ ಯುದ್ಧಮಾಡಲು ನನಗೆ ಇಷ್ಟವಿರಲಿಲ್ಲ. ಕ್ರಿಸ್ತನಿಗಾಗಿ ಜೀವವುಳ್ಳ ಗುಡಿಗಳನ್ನು ಕಟ್ಟಿಸುವ ಇಚ್ಛೆ ನನಗಿತ್ತು. ನಾನು ಸೆರೆಮನೆಯನ್ನು ಬಿಟ್ಟ ನಂತರ ಅನೇಕ ವರ್ಷಗಳ ವರೆಗೆ ಶಾಂತವಾಗಿ ಕ್ರಿಸ್ತನ ವಿಷಯವಾಗಿ ಧ್ಯಾನಮಾಡುವ ಆಶೆ ನನಗಿತ್ತು.

ಆದರೆ ನಾನು ಬಿಡುಗಡೆ ಹೊಂದಿದ ಮೂರನೆಯ ದಿನದಿಂದ ಕಮ್ಯುನಿಷ್ಟತ್ವದ ಕುರೂಪವು ಬೇರೆ ರೀತಿಗಳಲ್ಲಿ ನನಗೆ ಕಂಡುಬಂದಿತು. ಅದು ನಮ್ಮ ಹಿಂಸೆಗೆ ಸರಿಸಮಾನವಾಗಿತ್ತು. ನಾನು ಬೇರೆ ಬೇರೆ ಸಭೆಗಳ ಉಪದೇಶಕರನ್ನೂ ಪಾಲಕರನ್ನೂ ಅಧ್ಯಕ್ಷರನ್ನೂ ಭೆಟ್ಟಿಯಾದೆನು. ಅವರೆಲ್ಲರೂ ಬಹಳ ದುಃಖದಿಂದ ನನಗೆ—"ನಾವು ನಮ್ಮ ಸ್ವಂತ ಸಭಿಕರ ವಿರುದ್ಧವಾಗಿ ಗುಪ್ತ ಪೊಲೀಸರಿಗೆ ತಿಳುವಳಿಕೆ ಕೊಡಲೇ ಬೇಕು," ಎಂದು ತಿಳಿಸಿದರು. ನಾನು ಅವರನ್ನು—"ನೀವು ಸೆರೆಮನೆಯಲ್ಲಿ ಹೋಗಬೇಕಾದರೂ ಈ ನೀಚವಾದ ಕಾರ್ಯವನ್ನು ಬಿಡುವದಿಲ್ಲವೋ ?" ಎಂದು ಕೇಳಿದೆನು. ಪ್ರತ್ಯುತ್ತರವಾಗಿ ಅವರೆಲ್ಲರೂ ನನಗೆ—"ನಾವು ಇದನ್ನು ಬಿಟ್ಟು ಬಿಡಲಾರೆವು. ನಮ್ಮ ಸ್ವಂತ ಸಂರಕ್ಷಣೆಗಾಗಿ ನಾವು ಚಿಂತಿಸುವದಿಲ್ಲ. ಆದರೆ ನಾವು ತಿಳುವಳಿಕೆಯನ್ನು ಈ ರೀತಿಯಲ್ಲಿ ಕೊಡದಿದ್ದರೆ ನಮ್ಮ ಸಭಾ ಸ್ಥಾನಗಳು ಮುಚ್ಚಲ್ಪಡುವವೆಂದು ನಮಗೆ ಗೊತ್ತಾಗಿದೆ," ಎಂದು ತಿಳಿಸಿದರು. ನಾನು ಸೆರೆಮನೆಯಲ್ಲಿದ್ದಾಗ ಒಂದು ಹೊಸ ವ್ಯವಸ್ಥೆ ಪ್ರಸಿದ್ಧಿಗೆ ಬಂದಿತ್ತು. ಪ್ರತಿಯೊಂದು ಊರಿನಲ್ಲಿ ಸರಕಾರದ ಒಬ್ಬ ಪ್ರತಿನಿಧಿ ಇದ್ದನು. ಅವನು ಗುಪ್ತ ಕಮ್ಯುನಿಷ್ಟ ಪೊಲೀಸಿನವನಾಗಿ ಧರ್ಮಗಳನ್ನು ಸರಿಪಡಿಸುವವನಾಗಿದ್ದನು. ತನ್ನ ಇಚ್ಛಾನುಸಾರವಾಗಿ ಅವನು ಯಾವನೊಬ್ಬ ಸಭಾ ಪಾಲಕನನ್ನು ಕರೆದು ಅವನನ್ನು—"ಈ ವಾರ ಯಾರು ಸಭೆಗೆ ಬಂದರು ? ಯಾರು ಕ್ರಮವಾಗಿ ಕರ್ತನ ಭೋಜನವನ್ನು ತಿನ್ನುತ್ತಾರೆ ? ಯಾರು ಧರ್ಮ ವಿಚಾರಕ್ಕಾಗಿ ಆತುರರಾಗಿದ್ದಾರೆ ? ಯಾರು ಇತರರನ್ನು ಸಭೆಗೆ ಕರೆದುಕೊಂಡು ಬರುತ್ತಾರೆ ? ಯಾವ ಜನರು ವೈಯಕ್ತಿಕವಾದ ರೀತಿಯಲ್ಲಿ ನಿನ್ನನ್ನು ಭೆಟ್ಟಿಯಾಗಲು ಬರುತ್ತಾರೆ ?" ಎಂದು ಕೇಳುತ್ತಾನೆ. ಆ ಒಬ್ಬನು ಉತ್ತರವನ್ನು ಕೊಡದಿದ್ದರೆ ಅವನು ತನ್ನ ಉದ್ಯೋಗದಿಂದ ಕಡಿಮೆ ಮಾಡಲ್ಪಡುತ್ತಿದ್ದನು. ಸರಿಯಾದ ರೀತಿಯಲ್ಲಿ ಈ ಅಧಿಕಾರಿಗೆ ಸಹಕಾರವನ್ನು

ತೋರಿಸುವವನು ಅವನ ಬದಲಾಗಿ ನೇಮಿಸಲ್ಪಡುತ್ತಿದ್ದನು. ಆದರೆ ಅಂಥ ವ್ಯಕ್ತಿ ಇಲ್ಲದಿದ್ದರೆ ಆ ಪ್ರತಿನಿಧಿಯು ಸಭಾ ಸ್ಥಾನವನ್ನು ಮುಚ್ಚಿಬಿಡುತ್ತಿದ್ದನು. ಹೆಚ್ಚು ಮಂದಿ ಸಭಾ ಪಾಲಕರು ಗುಪ್ತ ಪೊಲೀಸರಿಗೆ ತಿಳುವಳಿಕೆಯನ್ನು ಕೊಡುತ್ತಿದ್ದರು. ಕೆಲವರು ಅಲ್ಪಸ್ವಲ್ಪ ತಿಳುವಳಿಕೆ ಕೊಟ್ಟು ಕೆಲವು ವಿಷಯಗಳನ್ನು ಮುಚ್ಚಿಡಲು ಪ್ರಯತ್ನಿಸುತ್ತಿದ್ದರು. ಬೇರೆ ಕೆಲವರು ತಮ್ಮ ಮನಸ್ಸುಗಳನ್ನು ಕಠಿಣಮಾಡಿಕೊಂಡು ಎಲ್ಲವನ್ನೂ ತಿಳಿಸುತ್ತಿದ್ದರು. ಕೆಲವರು ಹೆಚ್ಚಾಗಿ ಮಾತನಾಡುತ್ತಿದ್ದರು.

ನಾನು ಒಂದು ಕ್ರೈಸ್ತ ಸಮ್ಮೇಲನಕ್ಕೆ ಹೋದೆನು. ಕಮ್ಯುನಿಷ್ಟರ ಕೆಂಪು ಧ್ವಜವು ಅದರ ಮೇಲೆ ಹಾರಾಡುತ್ತಿತ್ತು. ಅಲ್ಲಿ ಧರ್ಮನಾಯಕರು ಆರಿಸಲ್ಪಟ್ಟರು. ಆದರೆ ಅವರು ನಿಯಮಿಸಬೇಕಾದ ವ್ಯಕ್ತಿಗಳನ್ನು ಕಮ್ಯುನಿಷ್ಟರು ಮುಂಚಿತವಾಗಿ ನಿಯಮಿಸಿದ್ದರು. ಬಹಿರಂಗವಾದ ಸಭೆಗಳ ನಾಯಕರು ಕಮ್ಯುನಿಷ್ಟರಿಂದ ನೇಮಿಸಲ್ಪಟ್ಟರೆಂದು ನಾನು ತಿಳಿದುಕೊಂಡೆನು. ಎಲ್ಲಾ ಕಾಲಗಳಲ್ಲಿ ಒಳ್ಳೇ ಹಾಗೂ ಕೆಟ್ಟ ಪಾಲಕರೂ ಉಪದೇಶಕರೂ ಇರುತ್ತಾರೆ. ಆದರೆ ಕ್ರೈಸ್ತ ಇತಿಹಾಸದಲ್ಲಿ ಇದು ಒಂದು ಹೊಸ ಸಂಗತಿಯಾಗಿದೆ. ಕಮ್ಯುನಿಷ್ಟರು—ತಾವು ನಾಸ್ತಿಕರಾಗಿದ್ದೇವೆಂದು ಸ್ವತಃ ಪ್ರಕಟಿಸುತ್ತಾ ಧರ್ಮಗಳನ್ನು ನಿರ್ಮೂಲ ಮಾಡಬೇಕೆಂದು ತೀರ್ಮಾನಿಸುತ್ತಿದ್ದಾಗ್ಯೂ ಕ್ರೈಸ್ತ ಸಭೆಗಳ ನಾಯಕರನ್ನು ನೇಮಿಸುತ್ತಾರೆ. ಇದರ ಉದ್ದೇಶವೇನು ? ಈ ನಾಯಕರು ಧರ್ಮವನ್ನು ನಿರ್ಮೂಲ ಮಾಡಬೇಕೆಂದು ನೇಮಿಸಲ್ಪಟ್ಟಿದ್ದಾರೆ.

ಲೆನಿನ್ ಹೀಗೆ ಬರೆದನು—"ಪ್ರತಿಯೊಂದು ಧಾರ್ಮಿಕ ಯೋಜನೆಯೂ ದೇವರ ವಿಷಯವಾದ ಪ್ರತಿಯೊಂದು ವಿಚಾರವೂ ಒಂದು ವೇಳೆ ದೇವರು ಇರಬಹುದೆಂದು ಯೋಚಿಸುವದೂ ಅಪಾಯವುಳ್ಳ ಅತಿ ನೀಚವಾದ ವಿಷಯವಾಗಿದೆ. ಇದು ಅತಿ ಭಯಂಕರವಾದ ಅಂಟುರೋಗದ ಹಾಗಿದೆ. ಕೋಟ್ಯಾಂತರ ಪಾಪಗಳೂ ಅಶುದ್ಧವಾದ ಕಾರ್ಯಗಳೂ ಹಿಂಸಾ ಕಾರ್ಯಗಳೂ ದೈಹಿಕ ರೋಗಗಳೂ ಇವೆಲ್ಲವೂ ದೇವರು ಇರುತ್ತಾನೆಂಬ ಆತ್ಮಿಯ ಯೋಚನೆಗಿಂತ ಅತ್ಯಲ್ಪವಾಗಿವೆ." ಯೂರೋಪ್ ಖಂಡದಲ್ಲಿರುವ ಕಮ್ಯುನಿಷ್ಟ ಪಕ್ಷದವರೆಲ್ಲರೂ ಲೆನಿನ್‌ನ ಬೋಧನೆಯನ್ನು ಅನುಸರಿಸುತ್ತಾರೆ. ಅವರ ದೃಷ್ಟಿಯಲ್ಲಿ ಧರ್ಮವು ಕ್ಯಾನ್ಸರ್, ಕ್ಷಯ ರೋಗ, ಲೈಂಗಿಕ ರೋಗಗಳಿಗಿಂತಲೂ ಅತಿ ಭಯಂಕರವಾಗಿದೆ. ಅವರೇ ಸಭೆಯ ನಾಯಕರನ್ನು ನೇಮಿಸುತ್ತಾರೆ. ಆ ಸಭಾ ನಾಯಕರು ತಮ್ಮ ಸ್ವಂತ ತತ್ವಗಳ ವಿರುದ್ಧವಾಗಿ ಕಮ್ಯುನಿಷ್ಟರ ಸಂಗಡ ಸಹಕಾರ ಮಾಡಲೇ ಬೇಕು.

ಕಮ್ಯುನಿಷ್ಟರು ಮಕ್ಕಳಿಗೂ ಯೌವನಸ್ಥರಿಗೂ ನಾಸ್ತಿಕತ್ವವನ್ನು ಬೋಧಿಸುತ್ತಾರೆ. ಬಹಿರಂಗವಾದ ಸಭೆಗಳು ಅದರ ವಿರುದ್ಧವಾಗಿ ಏನೂ ಮಾಡ

ಲಾರವು. ಭಾನುವಾರ ಶಾಲೆಗಳನ್ನೂ ಯೌವನಸ್ಥರ ಸಭೆಗಳನ್ನೂ ನಡೆಸಲಿಕ್ಕೆ ಅವರಿಗೆ ಸಾಧ್ಯವಿಲ್ಲ. ಕ್ರೈಸ್ತರ ಮಕ್ಕಳು ದ್ವೇಷಿಸುವಂತೆ ಪ್ರೇರೇಪಿಸಲ್ಪಡು ತ್ತಾರೆ. ಇದನ್ನೆಲ್ಲಾ ನೋಡಿ ನಾನು ಹಿಂಸಿಸಲ್ಪಡುತ್ತಿರುವಾಗ ಕಮ್ಯುನಿಷ್ಟತ್ವ ವನ್ನು ದ್ವೇಷಿಸುವದಕ್ಕಿಂತ ಅದನ್ನು ಹೆಚ್ಚಾಗಿ ದ್ವೇಷಿಸಿದೆನು. ಅದು ನನಗೆ ಮಾಡಿದ ಕೇಡಿನ ದೆಸೆಯಿಂದಲ್ಲದೇ ಅದು ದೇವರ ಮಹಿಮೆಯ ವಿರುದ್ಧವಾ ಗಿಯೂ ಕ್ರಿಸ್ತನ ನಾಮದ ವಿರುದ್ಧವಾಗಿಯೂ ಕೋಟ್ಯಾಂತರ ಆತ್ಮಗಳ ವಿರುದ್ಧವಾಗಿಯೂ ಮಾಡಿದ ಕೇಡಿನ ದೆಸೆಯಿಂದ ಅದನ್ನು ದ್ವೇಷಿಸುತ್ತಿದ್ದೆನು.

ದೇಶದ ಎಲ್ಲಾ ಭಾಗಗಳಿಂದ ನಾನು ಒಕ್ಕಲಿಗರನ್ನು ಸಂದರ್ಶಿಸಿದೆನು. ಸರಕಾರದವರು ಅವರ ಹೊಲಗಳನ್ನು ಅವರಿಂದ ತೆಗೆದು ಅನೇಕ ಹೊಲಗಳನ್ನು ಒಂದೇ ಸಾಂಘಿಕವನ್ನಾಗಿ ಮಾಡಿದ್ದರು. ಯಾವ ಯಾವ ಭೂಮಿಯು ಮೊದಲು ಅವರ ಸ್ವಂತ ಹೊಲಗಳೂ ತೋಟಗಳೂ ಆಗಿದ್ದವೋ ಅದೇ ಭೂಮಿಯ ಮೇಲೆ ಅವರು ಹಸಿದಿದ್ದ ಗುಲಾಮರಾಗಿದ್ದರು. ಅವರಿಗೆ ರೊಟ್ಟಿಯಿರಲಿಲ್ಲ. ಅವರ ಮಕ್ಕಳಿಗೆ ಹಾಲೂ ಹಣ್ಣೂ ಇರಲಿಲ್ಲ. ನಿಜವಾಗಿ ನೋಡಬೇಕಾದರೆ ರೂಮೆನಿಯಾ ದೇಶದಲ್ಲಿ ಎಲ್ಲಾ ತರದ ಧಾನ್ಯಗಳು ಚೆನ್ನಾಗಿ ಬೆಳೆಯುತ್ತವೆ. ಸಹೋದರರು ನನಗೆ—"ಈ ಆಳ್ವಿಕೆಯಿಂದ ನಾವೆಲ್ಲರೂ ಕಳ್ಳರೂ ಸುಳ್ಳುಗಾ ರರೂ ಆಗಿದ್ದೇವೆ. ನಮ್ಮ ಹಸಿವೆಯನ್ನು ತೀರಿಸಲು ಮೊದಲು ನಮ್ಮ ಸ್ವಂತ ಭೂಮಿಯಿತ್ತು. ಆದರೆ ಈಗ ಸಾಂಘಿಕ ಭೂಮಿಗಳಿಂದ ನಾವು ದವಸವನ್ನು ಪಡೆಯಬೇಕಾಯಿತು. ಅನಂತರ ನಮ್ಮ ಕಳ್ಳತನವನ್ನು ಮುಚ್ಚಿಕೊಳ್ಳಲು ಸುಳ್ಳು ಹೇಳಬೇಕಾಯಿತು," ಎಂದು ಹೇಳಿದರು. ಕಾರಖಾನೆಗಳಲ್ಲಿ ಕೆಲಸ ಮಾಡುತ್ತಿದ್ದವರು ತಾವು ತಾಳಿದ ಕಷ್ಟಗಳನ್ನು ನನಗೆ ತಿಳಿಸಿದರು. ಅವರು ಗುಲಾಮರಾಗಿದ್ದರು. ಹರತಾಳಗಳನ್ನು ಮಾಡಲು ಅವರಿಗೆ ಹಕ್ಕಿರಲಿಲ್ಲ. ಉಪಾಧ್ಯಾಯರು ತಮ್ಮ ಸ್ವಂತ ನಂಬಿಕೆಯ ವಿರುದ್ಧವಾಗಿ ಬೋಧಿಸಬೇಕಾ ಯಿತು. ಸರಕಾರದವರು ತರುಣ ತರುಣಿಯರ ಮಿತ್ರರನ್ನು ಅವರಿಗಾಗಿ ಆರಿಸಿ ಕೊಳ್ಳುತ್ತಿದ್ದರು. ನಿಜವಾಗಿ ನೋಡಬೇಕಾದರೆ ಲೋಕದಲ್ಲಿರುವ 1/3 ಜನರ ಜೀವಿತವು ಅಸತ್ಯವಾಗಿದೆ. ಸಾಮಾಜಿಕ ಸ್ಥಿತಿಯು ಕುರೂಪವಾಗಿತ್ತು.

ಅನಂತರ ನಾನು ಗುಪ್ತ ಸಭಿಕ ರಣವೀರರನ್ನು ಭೆಟ್ಟಿಯಾದೆನು. ಅನೇಕ ವರ್ಷಗಳ ಮುಂಚಿತವಾಗಿ ನಾನು ಅವರೊಂದಿಗೆ ಹೋರಾಡುತ್ತಿದ್ದೆನು. ಅವ ರಲ್ಲಿ ಕೆಲವರು ಹಿಡಿಯಲ್ಪಟ್ಟಿರಲಿಲ್ಲ. ಇನ್ನೂ ಕೆಲವರು ಸೆರೆಮನೆಯಿಂದ ಬಿಡು ಗಡೆ ಹೊಂದಿ ತಿರಿಗಿ ಹೋರಾಡಲು ಪ್ರಾರಂಭಿಸಿದ್ದರು. ಅವರು ನನಗೆ— "ನೀವು ನಮ್ಮ ಸಂಗಡ ಹೋರಾಡಲೇ ಬೇಕು," ಎಂದು ಹೇಳಿದರು. ನಾನು ಅವರ ಗುಪ್ತ ಸಭೆಗಳಿಗೆ ಹೋದೆನು. ಅವರ ಸಂಗೀತ ಪುಸ್ತಕಗಳು ಕೈಯಿಂದ ಬರೆಯಲ್ಪಟ್ಟದ್ದವು.

ನಾನು ಮಹಾ ಭಕ್ತನಾದ ಸಂತ ಅಂತೋನಿಯನ್ನು ಜ್ಞಾಪಕ ಮಾಡಿದೆನು. ಅವನು ಸಾಧುವಾಗಿ ಅರಣ್ಯದಲ್ಲಿ 30 ವರ್ಷ ವಾಸಿಸಿದನು. ಅವನು ಮಾನವನ ಸಮಾಜದಿಂದ ದೂರವಾಗಿದ್ದು ತನ್ನ ಜೀವಮಾನದಲ್ಲೆಲ್ಲಾ ಉಪವಾಸವನ್ನೂ ಉಪಾಸನವನ್ನೂ ಮಾಡುತ್ತಿದ್ದನು. ಆದರೆ ಕ್ರಿಸ್ತನ ದೈವತ್ವದ ವಿಷಯವಾಗಿ ಸಂತ ಆಥಾನೇಷಿಯನಿಗೂ ಆಕಿಯನಿಗೂ ಹೋರಾಟವಿತ್ತೆಂದು ಅವನು ಕೇಳಿದಾಗ ಅವನು ಧ್ಯಾನಸಕ್ತವಾದ ತನ್ನ ಜೀವಿತವನ್ನು ಬಿಟ್ಟು ಬಿಟ್ಟು ಸತ್ಯಕ್ಕಾಗಿ ಹೋರಾಡಲು ಅಲೆಕ್ಸಾಂಡ್ರಿಯಾ ಪಟ್ಟಣಕ್ಕೆ ಬಂದನು.

ನಾನು ಸಂತ ಬರ್ನಾರ್ಡನನ್ನೂ ಸಹ ಜ್ಞಾಪಕ ಮಾಡಿದೆನು. ಅವನೂ ಸಹ ಬೆಟ್ಟಗಳ ಪ್ರದೇಶದಲ್ಲಿ ಸಾಧುವಿನ ಹಾಗೆ ಜೀವಿಸುತ್ತಿದ್ದನು. ಆದರೆ ಧರ್ಮಯುದ್ಧ (Crusades) ಗಳಲ್ಲಿ ಕ್ರೈಸ್ತರು ಅರಬ್ಯರನ್ನೂ ಯೆಹೂದ್ಯರನ್ನೂ ಮಾತ್ರವಲ್ಲದೆ ತಮ್ಮ ಸ್ವಂತ ಜೊತೆ ವಿಶ್ವಾಸಿಗಳನ್ನು ಕೊಲ್ಲುತ್ತಾರೆಂದು ಕೇಳಿ ಅವನು ಅಯೋಗ್ಯವಾದ ಈ ಹೋರಾಟದ ವಿರುದ್ಧವಾಗಿ ಉಪದೇಶ ಮಾಡಲು ತನ್ನ ಮತವನ್ನು ಬಿಟ್ಟು ಜನರ ಮಧ್ಯದಲ್ಲಿ ಬಂದನು.

ನಾನು ಉಳಿದ ಎಲ್ಲಾ ಕ್ರೈಸ್ತರ ಹಾಗೆ ಕ್ರಿಸ್ತನ ಮಾದರಿಯನ್ನೂ ಅಪೊಸ್ತಲನಾದ ಪೌಲನ ಮಾದರಿಯನ್ನೂ ಮಹಾ ದೇವಭಕ್ತರ ಮಾದರಿಯನ್ನೂ ಅನುಸರಿಸುವ ಹಂಗಿನಲ್ಲಿದ್ದೇನೆಂದು ನಿಶ್ಚಯಿಸಿಕೊಂಡೆನು. ನಾನು ಮನುಷ್ಯರಿಂದ ನನ್ನನ್ನು ಪ್ರತ್ಯೇಕಿಸಿಕೊಳ್ಳದೇ ಮಹಾ ಯುದ್ಧದಲ್ಲಿ ಹೋರಾಡಲು ಸಿದ್ಧನಾಗಿದ್ದೆನು. ಅದು ಎಂಥ ಹೋರಾಟವಾಗತಕ್ಕದ್ದು ! ಸೆರೆಮನೆಯಲ್ಲಿದ್ದ ಕ್ರೈಸ್ತ ವಿಶ್ವಾಸಿಗಳು ಯಾವಾಗಲೂ ತಮ್ಮ ಹಿಂಸಕರಿಗಾಗಿ ಪ್ರಾರ್ಥನೆ ಮಾಡುತ್ತಾ ಅವರಿಗೆ ಸಾಕ್ಷಿ ಕೊಡುತ್ತಾ ಇದ್ದರು. ಅವರಿಗೆ ರಕ್ಷಣೆಯಾಗುವಂತೆ ನಮ್ಮ ಹೃದಯದ ಅಪೇಕ್ಷೆಯಾಗಿತ್ತು. ಅವರಿಗೆ ರಕ್ಷಣೆಯಾದಾಗ ನಾವು ಸಂತೋಷವುಳ್ಳವರಾಗಿದ್ದೆವು. ಆದರೆ ನಾನು ಕಮ್ಯುನಿಷ್ಟತ್ವವನ್ನು ದ್ವೇಷಿಸುತ್ತಿದ್ದೆನು. ಸುವಾರ್ತೆಯ ಬಲದಿಂದ ಈ ಭಯಂಕರವಾದ ಆಳ್ವಿಕೆಯನ್ನು ಸೋಲಿಸಲು ಗುಪ್ತ ಸಭೆಗೆ ಮಾತ್ರ ಸಾಧ್ಯವಿತ್ತು. ಆ ಸಭೆಯನ್ನು ಬಲಪಡಿಸಲಿಕ್ಕೆ ನನಗೆ ಇಷ್ಟವಿತ್ತು. ನಾನು ರೂಮೇನಿಯಾ ದೇಶದ ವಿಷಯವಾಗಿ ಮಾತ್ರವಲ್ಲದೆ ಕಮ್ಯುನಿಷ್ಟ ಆಧೀನದಲ್ಲಿರುವ ಎಲ್ಲಾ ದೇಶಗಳ ವಿಷಯವಾಗಿ ಯೋಚಿಸುತ್ತಿದ್ದೆನು.

ಆದರೆ ಪಶ್ಚಿಮ ದೇಶಗಳಲ್ಲಿ ಅನೇಕರು ಇದರ ವಿಷಯವಾಗಿ ಚಿಂತಿಸುವದಿಲ್ಲ. ಸೆನಿಯಾವ್ಸ್ಕಿ ಹಾಗೂ ದಾನಿಯೇಲ ಎಂಬ ಇಬ್ಬರು ಕಮ್ಯುನಿಷ್ಟ ಲೇಖಕರು ಇತರ ಕಮ್ಯುನಿಷ್ಟರಿಂದ ಸೆರೆಮನೆಯಲ್ಲಿ ಹಾಕಲ್ಪಟ್ಟಾಗ ಲೋಕದಲ್ಲಿದ್ದ ಬೇರೆ ಲೇಖಕರು ಅದರ ವಿರುದ್ಧವಾಗಿ ತಕರಾರು ಮಾಡಿದರು. ಆದರೆ ಕ್ರೈಸ್ತ ವಿಶ್ವಾಸಿಗಳು ಸೆರೆಮನೆಯಲ್ಲಿ ಹಾಕಲ್ಪಡುವಾಗ ಕ್ರೈಸ್ತ ಸಭೆಗಳು ಏನೂ

ಹೇಳುವದಿಲ್ಲ. ಸಹೋದರನಾದ ಕಊರಿಶಿಕ್ ಕ್ರೈಸ್ತ ಸಾಹಿತ್ಯವನ್ನು ಹಂಚು ತ್ತಿದ್ದನು. ಅವುಗಳಲ್ಲಿ ತೊರೆಯ ಪುಸ್ತಕಗಳೂ ಸತ್ಯವೇದ ಭಾಗಗಳೂ ಇದ್ದವು. ಅವುಗಳಲ್ಲಿ "ಆತ್ಮೀಯ ವಿಷ" ಇದೆಯೆಂದು ಫಿರ್ಯಾದಿ ಮಾಡಿ ಕಮ್ಯು ನಿಷ್ಟರು ಅವರನ್ನು ಸೆರೆಮನೆಯಲ್ಲಿಟ್ಟರು. ಸಹೋದರನಾದ ಪ್ರೊಕೋಫಿ ಯವ್ಹ ಉಪದೇಶಗಳನ್ನು ಪಡೆದು ಜನರಿಗೆ ಹಂಚುತ್ತಿದ್ದನು. ಈ ದುಷ್ಟ ಕಾರ್ಯಕ್ಕಾಗಿ ಅವನು ಸೆರೆಮನೆಯಲ್ಲಿ ಹಾಕಲ್ಪಟ್ಟನು. ಇಬ್ರಿ ಕ್ರೈಸ್ತನಾದ ಗುರುನ್ವಾಲ್ ರಷ್ಯ ದೇಶದಲ್ಲಿ ಅದೇ ಕಾರಣದಿಂದ ಸೆರೆಮನೆಯಲ್ಲಿ ಹಾಕಲ್ಪ ಟ್ಟನು. ಕಮ್ಯುನಿಷ್ಟರು ಅವನ ಚಿಕ್ಕ ಹುಡುಗನನ್ನು ಖಾಯಂವಾಗಿ ಅವ ನಿಂದ ತೆಗೆದುಕೊಂಡರು. ನನ್ನ ಮಗನಾದ ಮೀಹಾಯ ನಮ್ಮಿಂದ ತೆಗೆಯಲ್ಪ ಟ್ಟಾಗ ನನಗಿದ್ದ ಮನೋ ದುಃಖ ನನಗೆ ಗೊತ್ತು. ಈ 20 ನೆಯ ಶತಮಾನ ದಲ್ಲಿ ಇಂಥ ದೇವಭಕ್ತರೂ ವಿಶ್ವಾಸ ವೀರರೂ ಅನೇಕರಿದ್ದಾರೆ. ನಾನು ಅವ ರೊಂದಿಗೆ ದುಃಖ ಪಡುತ್ತೇನೆ. ಅವರನ್ನು ಕಟ್ಟುವ ಬೇಡಿಗಳನ್ನು ಮುದ್ದಿ ಡಲು ನಾನು ಬಾಗುತ್ತೇನೆ. ಮೊದಲನೆಯ ಶತಮಾನದಲ್ಲಿ ವಿಶ್ವಾಸಿಗಳು ರಕ್ತ ಸಾಕ್ಷಿಗಳಾಗಿ ಸಿಂಹಗಳಿಗೆ ಹಾಕಲ್ಪಟ್ಟ ಜೊತೆ ವಿಶ್ವಾಸಿಗಳ ಸರಪಳಿಗಳಿಗೆ ಅದೇ ರೀತಿಯಲ್ಲಿ ಮುದ್ದಿಟ್ಟರು.

ಪಶ್ಚಿಮ ದೇಶಗಳ ಕೆಲವು ಸಭೆಗಳ ನಾಯಕರು ಈ ದೇವಭಕ್ತರ ವಿಷಯ ವಾಗಿ ಚಿಂತಿಸುವದಿಲ್ಲ. ಅವರು ಇವರಿಗಾಗಿ ಪ್ರಾರ್ಥಿಸುವದಿಲ್ಲ. ಅವರು ಬಹಿ ರಂಗವಾದ ಸಭೆಗಳ ನಾಯಕರಿಗೆ ಸನ್ಮಾನವನ್ನು ಕೊಡುತ್ತಾರೆ. ಆದರೆ ಅದೇ ಜನರು ನಿರಾಕರಿಸಿದ ಈ ವಿಶ್ವಾಸಿಗಳನ್ನು ಅಲಕ್ಷ್ಯಮಾಡುತ್ತಾರೆ. ಈ ಬಹಿರಂಗ ವಾದ ಸಭೆಗಳ ನಾಯಕರು ಪಶ್ಚಿಮ ದೇಶಗಳ ಸಭೆಗಳ ನಾಯಕರಿಗೆ—"ನಮ್ಮ ದೇಶಗಳಲ್ಲಿ ಸಂಪೂರ್ಣವಾದ ಧಾರ್ಮಿಕ ಸ್ವಾತಂತ್ರ್ಯವಿದೆ," ಎಂದು ಹೇಳು ತ್ತಾರೆ. ಇದನ್ನು ಕೇಳಿ ಮೋಸಗೊಳಿಸಿದ ಒಬ್ಬ ಸಭೆಯ ಮುಂದಾಳು ರಷ್ಯ ದೇಶದ ಒಬ್ಬ ಬಿಷಪ್‌ನನ್ನು ವಂದಿಸಿದನು. ಅವರು ಪ್ರಾಪಂಚಿಕ ಸಭೆಗಳ ಸಮ್ಮೇಲನದ ಹೆಸರಿನಲ್ಲಿ ಔತಣವನ್ನು ಮಾಡಿದಾಗ ಸೆರೆಮನೆಯಲ್ಲಿದ್ದ ದೇವ ಭಕ್ತರು ಕ್ಯಾಬೀಜಿನ ಎಲೆಗಳನ್ನೂ ಅಶುದ್ಧವಾದ ಕರುಳಗಳನ್ನೂ ತಿನ್ನುತ್ತಿದ್ದರು. ಸೆರೆಮನೆಯಲ್ಲಿ ಅದೇ ನನ್ನ ಆಹಾರವಾಗಿತ್ತು.

ಇಂಥ ಸ್ಥಿತಿ ಶಾಶ್ವತವಾಗಿರುವದು ಯೋಗ್ಯವಲ್ಲ. ಗುಪ್ತ ಸಭೆಯ ನಾಯಕರು ನನಗೆ—"ನಿಮಗೆ ಅನುಕೂಲ ಸಿಕ್ಕಿದರೆ ನಮ್ಮ ದೇಶವನ್ನು ಬಿಟ್ಟು ನಿಜವಾಗಿ ನಡೆಯುವ ಸಂಗತಿಗಳ ವಿಷಯವಾಗಿ ಪರದೇಶಗಳಲ್ಲಿರುವ ನಮ್ಮ ಸಹೋದರರಿಗೆ ತಿಳಿಸಿರಿ," ಎಂಬದಾಗಿ ತಮ್ಮ ನಿಶ್ಚಯವನ್ನು ತಿಳಿಸಿದರು. ನಾನು ಕಮ್ಯುನಿಷ್ಟರನ್ನು ಪ್ರೀತಿಸುತ್ತೇನೆ. ಆದರೆ ನಾನು ಕಮ್ಯುನಿಷ್ಟತ್ವವನ್ನು ದ್ವೇಷಿಸುತ್ತೇನೆ. ಕಮ್ಯುನಿಷ್ಟತ್ವವನ್ನು ವಿರೋಧಿಸದೇ ನಾನು ಸುವಾರ್ತೆಯನ್ನು

ಸಾರಲಾರೆನು. ಕೆಲವರು ನನಗೆ—"ಶುದ್ಧವಾದ ಸುವಾರ್ತೆಯನ್ನು ಮಾತ್ರ ಸಾರಬೇಕು," ಎಂದು ಹೇಳುತ್ತಾರೆ. ಅದೇ ರೀತಿಯಲ್ಲಿ ಕಮ್ಯುನಿಷ್ಟರ ಗುಪ್ತ ಪೊಲೀಸರು ನನಗೆ—"ನೀನು ಕ್ರಿಸ್ತನ ವಿಷಯವಾಗಿ ಉಪದೇಶ ಮಾಡಬಹುದು. ಆದರೆ ಕಮ್ಯುನಿಷ್ಟತ್ವದ ವಿಷಯವಾಗಿ ಏನೂ ಹೇಳಬೇಡ," ಎಂದು ಆಜ್ಞಾಪಿಸಿದರು. ಈ ಎರಡು ತರದ ಜನರು ಯಾಕೆ ಒಂದೇ ತರದ ಬುದ್ಧಿ ಮಾತುಗಳನ್ನು ಹೇಳುತ್ತಾರೆ ?

ಈ ಶುದ್ಧ ಸುವಾರ್ತೆ ಏನೆಂದು ನನಗೆ ಗೊತ್ತಿಲ್ಲ. ಸ್ನಾನಿಕನಾದ ಯೋಹಾನನು ಕೇವಲ ಸುವಾರ್ತೆಯನ್ನು ಸಾರಿದನೋ ? ಆತನು—"ದೇವರ ರಾಜ್ಯವು ಸಮೀಪವಾಗಿದೆ. ಆತನ ಕಡೆಗೆ ತಿರುಗಿಕೊಳ್ಳಿರಿ," ಎಂದು ಸಾರಿದ ನಂತರ, ಅರಸನಾದ ಹೆರೋದನಿಗೆ—"ನೀವು ಪಾಪ ಮಾಡಿದಿರಿ," ಎಂದು ಹೇಳಿದನು. ಈ ಕಾರಣದಿಂದ ಅವನು ಕೊಲ್ಲಲ್ಪಟ್ಟನು. ಯೇಸು ಸ್ವಾಮಿ ತಾನೇ ಪರ್ವತದ ಪ್ರಸಂಗವನ್ನು ಕೊಟ್ಟನಂತರ ತನ್ನ ಕಾಲದ ಧರ್ಮನಾಯಕರನ್ನು ಕಪಟಿಗಳೆಂಬದಾಗಿಯೂ ಸರ್ಪ ಜಾತಿಯವರೆಂಬುದಾಗಿಯೂ ಗದರಿಸಿದನು. ಇಂಥ "ಅಶುದ್ಧವಾದ" ಉಪದೇಶಗಳನ್ನು ಕೊಟ್ಟ ಕಾರಣ ಆತನು ಶಿಲುಬೆಗೆ ಹಾಕಲ್ಪಟ್ಟನು. ಫರಿಸಾಯರು ಪರ್ವತ ಪ್ರಸಂಗದ ವಿಷಯವಾಗಿ ಚಿಂತಿಸಲಿಲ್ಲ. ನಾವು ಪಾಪಕ್ಕೆ ಪಾಪವೆಂಬ ಹೆಸರು ಕೊಡಲೇ ಬೇಕು.

ಈಗಿನ ಕಾಲದಲ್ಲಿ ಕಮ್ಯುನಿಷ್ಟತ್ವವು ಅತಿ ಭಯಂಕರವಾದ ಪಾಪವಾಗಿದೆ. ಅದನ್ನು ವಿರೋಧಿಸದಿರುವ ಸುವಾರ್ತೆಯು ನಿಜವಾದ ಸುವಾರ್ತೆಯಲ್ಲ. ತಮ್ಮ ಸ್ವಾತಂತ್ರ್ಯವನ್ನೂ ಜೀವವನ್ನೂ ಅಪಾಯದಲ್ಲಿಟ್ಟು ಗುಪ್ತ ಸಭೆಯವರು ಕಮ್ಯುನಿಷ್ಟತ್ವವನ್ನು ವಿರೋಧಿಸುತ್ತಾರೆ. ನಾವು ಯಾಕೆ ಸುಮ್ಮನಿರಬೇಕು. ಆದರೆ ನಾನು ಕಮ್ಯುನಿಷ್ಟರನ್ನು ದ್ವೇಷಿಸುವದಿಲ್ಲ. ಹಿಟ್ಲರನು ಕಮ್ಯುನಿಷ್ಟ ರನ್ನು ಕಠಿಣವಾದ ರೀತಿಯಲ್ಲಿ ವಿರೋಧಿಸಿದನು. ಅವನ ಆಳಿಕೆ ಕಠಿಣವಾಗಿತ್ತು. ನಾವು ಪಾಪವನ್ನು ದ್ವೇಷಿಸುತ್ತಿರುವಾಗ ಪಾಪಿಯನ್ನು ಪ್ರೀತಿಸುತ್ತೇವೆ.

## ನಾನು ಪಶ್ಚಿಮ ದೇಶಗಳಲ್ಲಿ ದುಃಖಪಡುವ ಕಾರಣ

ನಾನು ಕಮ್ಯುನಿಷ್ಟ ದೇಶಗಳಲ್ಲಿ ದುಃಖಪಡುವದಕ್ಕಿಂತ ಹೆಚ್ಚಾಗಿ ಪಶ್ಚಿಮ ದೇಶಗಳಲ್ಲಿ ದುಃಖಪಡುತ್ತೇನೆ. ಗುಪ್ತ ಸಭಿಕರ ವರ್ಣಿಸಲಸಕ್ಯವಾದ ಸೌಂದರ್ಯ ವನ್ನು ತಿರಿಗಿ ನೋಡಬೇಕೆಂದು ನಾನು ಅಪೇಕ್ಷಿಸುತ್ತೇನೆ. ಆ ಸಭೆಯು ನಗ್ನವಾಗಿ ನಗ್ನವಾದ ಕ್ರಿಸ್ತನನ್ನು ಹಿಂಬಾಲಿಸುತ್ತದೆ. ಕಮ್ಯುನಿಷ್ಟ ದೇಶಗಳಲ್ಲಿ ಮನುಷ್ಯಕುಮಾರನಿಗೂ ಆತನ ಹಿಂಬಾಲಕರಿಗೂ ತಲೆ ಇಡುವಷ್ಟು ಸ್ಥಳವಿಲ್ಲ. ಅಲ್ಲಿರುವ ವಿಶ್ವಾಸಿಗಳು ತಮಗಾಗಿ ಮನೆಗಳನ್ನು ಕಟ್ಟಿಕೊಳ್ಳುವದಿಲ್ಲ. ಹಾಗೆ ಮಾಡಿದರೆ ಅವರು ಪೊಲೀಸರಿಂದ ಹಿಡಿಯಲ್ಪಡುವಾಗ ಅವರ ಮನೆ ಪೊಲೀಸರ

ವಶವಾಗುವದು. ಕಮ್ಯುನಿಷ್ಟರು ಹೊಸ ಮನೆಗಳನ್ನು ಹೊಂದಲು ಅಪೇಕ್ಷಿಸುವವರಾಗಿ ಅವುಗಳ ಯಜಮಾನರನ್ನು ಹಿಡಿಯಬೇಕೆಂದು ಹೆಚ್ಚಾಗಿ ಇಚ್ಛಿಸುವರು. ಕ್ರಿಸ್ತನನ್ನು ಹಿಂಬಾಲಿಸುವದಕ್ಕಿಂತ ಮೊದಲು ಅಲ್ಲಿದ್ದ ವಿಶ್ವಾಸಿಗಳು ತಮ್ಮ ತಂದೆಗೆ ಮಾನಕೊಟ್ಟು ತಮ್ಮ ತಾಯಿಗೆ ವಂದನೆ ಕೊಡುವದಿಲ್ಲ. ಕ್ರಿಸ್ತನ ಹಾಗೆ ಅವರು ದೇವರ ಚಿತ್ತದಂತೆ ನಡೆಯುವವರನ್ನು ತಾಯಿ, ಸಹೋದರ, ಸಹೋದರಿಯರ ಹಾಗೆಂದು ನೆನಸುತ್ತಾರೆ. ಸಂಬಂಧಿಕರು ಅನೇಕಾವರ್ತಿ ಬೇರೆ ಸಂಬಂಧಿಕರನ್ನು ಪೊಲೀಸರ ಕೈಗೆ ಒಪ್ಪಿಸಿ ಕೊಡುವಾಗ ಸ್ವಾಭಾವಿಕ ಸಂಬಂಧವು ಅವರಿಗೆ ವಿಶೇಷವೆಂದೆನಿಸುವದಿಲ್ಲ. ಗುಪ್ತ ಸಭೆಗೆ ಬಡತನವೂ ದುಃಖವೂ ಇರುತ್ತವೆ. ಆದರೆ ಅದರಲ್ಲಿದ್ದ ಪ್ರತಿಯೊಬ್ಬ ಸದಸ್ಯನು ಉತ್ತೇಜಿತನಾಗಿದ್ದಾನೆ.

ಗುಪ್ತ ಸಭೆಯ ಕೂಟಗಳು ಆದಿ ಸಭೆಯ ಕೂಟದ ಹಾಗಿವೆ. ಉಪದೇಶಕನಿಗೆ ವಿಶೇಷವಾದ ಶಿಕ್ಷಣವಿಲ್ಲ. ಉಪದೇಶದಲ್ಲಿದ್ದ ಕ್ರಮವು ಅಷ್ಟೊಂದು ಚೆನ್ನಾಗಿಲ್ಲ. ಅನೇಕ ಉಪದೇಶಕರ ಹತ್ತಿರ ಸತ್ಯವೇದದ ಪ್ರತಿಗಳು ಇಲ್ಲದ ಕಾರಣ ಅನೇಕ ವಚನಗಳನ್ನು ಕಂಠಪಾಠಮಾಡಲು ಅವರಿಗೆ ಸಾಧ್ಯವಿಲ್ಲ. ಬಹುಶಃ ಸತ್ಯವೇದವಿಲ್ಲದೇ ಕೈದಿಯು ಬಹು ದಿನಗಳ ವರೆಗೆ ಸೆರೆಮನೆಯಲ್ಲಿರಬೇಕಾಗುವದು. ಅಂಥವರು ಸುಮ್ಮನೆ ದೇವರಿಗೆ "ತಂದೆ" ಎಂಬ ಹೆಸರನ್ನು ಕೊಡುವದಿಲ್ಲ. ದಿನಾಲು ಸೆರೆಮನೆಯಲ್ಲಿ ಅವರು ಸರ್ವಶಕ್ತನಾದ ಈ ತಂದೆಯಿಂದ ರೊಟ್ಟಿಯನ್ನು ಬೇಡುತ್ತಾರೆ. ಅದರ ಬದಲಾಗಿ ಅವರಿಗೆ ಕ್ಯಾಬೀಜು ಅಸಹ್ಯವಾದ ಆಹಾರವೂ ಸಿಕ್ಕುತ್ತಿತ್ತು. ಆದರೂ ದೇವರು ಪ್ರೀತಿಸ್ವರೂಪನಾದ ತಂದೆಯಾಗಿದ್ದಾನೆಂದು ಅವರು ನಂಬುತ್ತಾರೆ. ಯೋಬನು ದೇವರ ವಿಷಯವಾಗಿ –"ಆತನು ನನ್ನನ್ನು ಕೊಂದರೂ ನಾನು ಆತನಲ್ಲಿ ಭರವಸವಿಡುವೆನು." ಎಂದು ಹೇಳಿದನು. ಯೇಸು ಒಬ್ಬಂಟಿಗನಾಗಿ ಶಿಲುಬೆಯ ಮೇಲೆ ತೂಗಾಡುತ್ತಿದ್ದಾಗ ತನ್ನನ್ನು ಕೈ ಬಿಟ್ಟ ದೇವರಿಗೆ 'ತಂದೆ' ಎಂಬ ಹೆಸರನ್ನು ಕೊಟ್ಟನು. ಗುಪ್ತ ಸಭೆಯು ಆತ್ಮೀಯ ಸೌಂದರ್ಯವನ್ನು ಅನುಭವಿಸಿದವರು ಕೆಲವು ಪಶ್ಚಿಮ ಸಭೆಗಳ ವ್ಯರ್ಥತೆಯಿಂದ ಸಂತೃಪ್ತಿಯನ್ನು ಹೊಂದಲಾರರು.

ಪಶ್ಚಿಮ ಸಂಸ್ಕೃತಿ ಸಾಯುವದನ್ನು ನೋಡಿ ನಾನು ಸೆರಮನೆಯಲ್ಲಿ ಇರುವದಕ್ಕಿಂತ ಈಗ ಪಶ್ಚಿಮ ದೇಶಗಳಲ್ಲಿ ಹೆಚ್ಚಾದ ದುಃಖವನ್ನು ಪಡುತ್ತೇನೆ. ನಾಲ್ವತ್ತೈದು ವರ್ಷಗಳ ಹಿಂದೆ ಒಬ್ಬ ಪ್ರಸಿದ್ಧ ತತ್ವಜ್ಞಾನಿಯು ಇದನ್ನು ಮುನ್ನೋಡಿದನು. ಪಶ್ಚಿಮ ದೇಶಗಳಲ್ಲಿ ಸಾಯುತ್ತಿರುವ ಸಂಸ್ಕೃತಿಯ ಗುರುತುಗಳು ಅವನಿಗೆ ಕಂಡುಬಂದವು. ಪೂರ್ವ ಕಾಲಗಳಲ್ಲಿ ನಶಿಸಿ ಹೋದ ಸಂಸ್ಕೃತಿಗಳಲ್ಲಿ ಅದೇ ಗುರುತುಗಳು ಕಂಡುಬಂದವು. ಕೆಲವರಿಗೆ ಹೆಚ್ಚಿ ಐಶ್ವರ್ಯವೂ ಅನೇಕರಿಗೆ ತೀವ್ರ ಬಡತನವೂ ಇದ್ದವು. ಯುದ್ಧಗಳೂ ಕ್ರಾಂತಿಗಳೂ ನಡೆದವು. ನಾಸ್ತಿಕತ್ವವೂ ನಿರಾಶೆಯೂ ಹೆಚ್ಚಾಗಿದ್ದವು. ಜನರು

ವ್ಯಭಿಚಾರ ಮಾಡಿ ಮದುವೆಯ ಸಂಬಂಧವನ್ನು ಅಲಕ್ಷಿಸುತ್ತಿದ್ದರು. ಇವು ಗಳೆಲ್ಲವೂ ಪಶ್ಚಿಮ ದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಹೋದ 45 ವರ್ಷಗಳಲ್ಲಿ ಅದು ಅರ್ಧ ಯುರೋಪಿನಲ್ಲಿ ಬಹುಮಟ್ಟಿಗೆ ನೆರವೇರಿಸಲ್ಪಟ್ಟಿದೆ. ಆದರೆ ಪಶ್ಚಿಮ ದೇಶಗಳಲ್ಲಿ ಅನೇಕರು ಎಚ್ಚರವಾಗಿಲ್ಲ.

ಆದರೆ ಕಮ್ಯುನಿಷ್ಟರು ಎಚ್ಚರವಾಗುತ್ತಾ ಇದ್ದಾರೆ. ಪೂರ್ವ ದೇಶ ಗಳಲ್ಲಿ ಅನೇಕ ಕಮ್ಯುನಿಷ್ಟರಿಗೆ ಆಶಾಭಂಗವಾಯಿತು. ಆದರೆ ಪಶ್ಚಿಮ ದೇಶ ಗಳಲ್ಲಿ ಕಮ್ಯುನಿಷ್ಟರು ವಿಶ್ರಾಂತಿ ತಕೊಳ್ಳದೇ ಉತ್ತೇಜನದಿಂದ ತಮ್ಮ ವಿಶ್ವಾ ಸವನ್ನು ಪ್ರಚಾರ ಮಾಡುತ್ತಾರೆ. ಕಮ್ಯುನಿಷ್ಟ ದೇಶಗಳಲ್ಲಿರುವ ಹಿಂಸೆ, ಕ್ಲೇಷಗಳ ವಿಷಯವಾಗಿ ಅವರು ನಂಬುವದಿಲ್ಲ. ಅವರು ವಿದ್ಯಾವಂತರ ಮಧ್ಯ ದಲ್ಲಿಯೂ, ಕಾಲೇಜುಗಳಲ್ಲಿಯೂ, ಬಡವರ ಮನೆಗಳಲ್ಲಿಯೂ ಕ್ರೈಸ್ತ ಸಭೆಗಳ ಲ್ಲಿಯೂ ತಮ್ಮ ಕಾರ್ಯವನ್ನು ಸಾಧಿಸುತ್ತಾರೆ. ಅನೇಕಾವರ್ತಿ ಕ್ರೈಸ್ತರಾದ ನಾವು ಸತ್ಯವನ್ನು ಅರ್ಧ ಮನಸ್ಸಿನಿಂದ ಪ್ರಚುರಪಡಿಸುತ್ತೇವೆ. ಆದರೆ ಕಮ್ಯು ನಿಷ್ಟರು ಪೂರ್ಣ ಮನಸ್ಸಿನಿಂದಲೇ ತಾವು ಕಲಿತುಕೊಂಡ ಸುಳ್ಳುಗಳನ್ನು ಪ್ರಚಾರ ಮಾಡುತ್ತಾರೆ.

ಅಷ್ಟರೊಳಗೆ ಪಶ್ಚಿಮ ಸಭೆಗಳ ವೈದಿಕರು ಅಲ್ಪವಾದ ವಿಷಯಗಳ ಸಂಬಂಧವಾಗಿ ವಾದ ವಿವಾದ ಮಾಡುತ್ತಾರೆ. 1493 ನೇ ಇಸ್ವಿಯಲ್ಲಿ ಮುಸಲ್ಮಾನರ ಸೈನ್ಯಗಳು ಕಾನ್‌ಸ್ಟಾಂಟಿನೋಪಲ್ ಪಟ್ಟಣಕ್ಕೆ ಮುತ್ತಿಗೆ ಹಾಕಿ ದವು. ಅದು ಇತಿಹಾಸದಲ್ಲಿ ಅತಿ ವಿಶೇಷವಾದ ಕಾರ್ಯವಾಗಿತ್ತು. ಬಾಲ್ಕನ್ ದೇಶಗಳು ಕ್ರೈಸ್ತರ ಅಥವಾ ಮುಸಲ್ಮಾನರ ಆಳಿಕೆಯಲ್ಲಿ ಉಳಿವವೋ ಏನೋ ಎಂಬ ಪ್ರಶ್ನೆಗೆ ಆವಾಗ ಉತ್ತರ ಸಿಕ್ಕಿತು. ತಮ್ಮ ವೈರಿಗಳು ತಮ್ಮ ಸುತ್ತ ಮುತ್ತಲೂ ಇರುವಾಗ ಸ್ಥಾನಿಕ ಸಭೆಗಳ ಸಮ್ಮೇಲನದವರು ಚರ್ಚೆ ಮಾಡುತ್ತಿ ದ್ದರು. ಅವರು ಈ ಕೆಳಗಿನ ಪ್ರಶ್ನೆಗಳ ವಿಷಯವಾಗಿ ಚರ್ಚಿಸುತ್ತಿದ್ದರು— 'ಯೇಸುವಿನ ತಾಯಿಯಾದ ಮೇರಿಯ ಕಣ್ಣುಗಳ ಬಣ್ಣವೇನು ? ದೇವದೂ ತರು ಪುರುಷರೋ ಅಥವಾ ಸ್ತ್ರೀಯರೋ ? ಒಂದು ನೊಣವು ಶುದ್ಧವಾದ ನೀರಿನಲ್ಲಿ ಬಿದ್ದರೆ ಏನಾಗುತ್ತದೆ ? ನೀರು ಅಶುದ್ಧವಾಗುತ್ತದೋ ಅಥವಾ ನೊಣವು ಶುದ್ಧವಾಗುತ್ತದೋ ?' ಇದು ಒಂದು ವೇಳೆ ಪುರಾಣದಂತಿದೆ. ಆದರೆ ಅನೇಕಾವರ್ತಿ ಕ್ರೈಸ್ತ ವಿಶ್ವಾಸಿಗಳು ಇಂಥ ಅಲ್ಪವಾದ ವಿಷಯಗಳ ಸಂಬಂಧವಾಗಿ ಚರ್ಚೆ ಮಾಡುತ್ತಾರೆ. ಕಮ್ಯುನಿಷ್ಟರಿಂದ ಉಂಟಾಗುವ ಅಪಾ ಯವು ಗುಪ್ತ ಸಭೆಯ ಕಷ್ಟವೂ ಅನೇಕಾವರ್ತಿ ಅವರ ಗಮನಕ್ಕೆ ಬರುವದಿಲ್ಲ. ಅಲ್ಪವಾದ ವೈದಿಕ ಪ್ರಶ್ನೆಗಳ ವಿಷಯವಾಗಿಯೂ ಸಭೆಗಳ ಸಂಸ್ಕಾರದ ರೀತಿ ಗಳ ವಿಷಯವಾಗಿಯೂ ಅಂದರೆ ವಿಶೇಷವಲ್ಲದ ವಿಷಯಗಳ ಸಂಬಂಧವಾಗಿ ಜನರು ವಾದ ವಿವಾದ ಮಾಡುತ್ತಾರೆ.

ಒಂದು ಮನೆಯಲ್ಲಿ ಕೆಲವು ಜನರು ಕೂಡಿಬಂದರು. ಒಬ್ಬನು ಉಳಿದವರನ್ನು—"ನೀವು ಒಂದು ಹಡಗಿನಲ್ಲಿದ್ದೀರೆಂದು ಕಲ್ಪಿಸಿರಿ. ಅದು ಮುಳುಗುವದಕ್ಕಿತ್ತು. ಹಡಗಿನ ವಾಚನಾಲಯದಿಂದ ಒಂದೇ ಪುಸ್ತಕವನ್ನು ತೆಗೆದುಕೊಳ್ಳಲು ನಿಮಗೆ ಅನುಕೂಲವಿದೆ. ನೀವು ಒಂದು ಚಿಕ್ಕ ದ್ವೀಪದಲ್ಲಿ ಒಬ್ಬಂಟಿಗನಾಗಿ ಇರಬಹುದೆಂದು ನಿಮಗೆ ಗೊತ್ತಾಗಿದೆ. ನೀವು ಯಾವ ಪುಸ್ತಕವನ್ನು ಆರಿಸಿಕೊಳ್ಳುತ್ತೀರಿ ?" ಎಂದು ಕೇಳಿದನು. ಒಬ್ಬನು—"ಸತ್ಯವೇದವು," ಎಂದು ಉತ್ತರಿಸಿದನು. ಎರಡನೆಯವನು—"ಶೆಕ್ಸ್‌ಪೀಯರನ ನಾಟಕಗಳು," ಎಂದು ಉತ್ತರ ಕೊಟ್ಟನು. ಆದರೆ ಒಬ್ಬ ಲೇಖಕನು ಸದುತ್ತರ ಕೊಟ್ಟನು. ಅವನು—"ನಾವೆಯನ್ನು ಮಾಡುವ ರೀತಿಯನ್ನು ವಿವರಿಸುವ ಒಂದು ಪುಸ್ತಕವನ್ನು ನಾನು ಆರಿಸಿಕೊಳ್ಳುವೆನು. ಈ ರೀತಿಯಲ್ಲಿ ನಾವೆ ಮಾಡಿ ಬೇಕಾಗುವ ದೇಶಕ್ಕೆ ಮುಟ್ಟಲು ನನಗೆ ಸಾಧ್ಯವಾಗುವದು. ಅಲ್ಲಿ ನನ್ನಿಚ್ಛಾನುಸಾರವಾಗಿ ಪುಸ್ತಕಗಳನ್ನು ಓದಲು ನನಗೆ ಸಾಧ್ಯವಾಗುವದು," ಎಂದು ಉತ್ತರ ಕೊಟ್ಟನು. ಎಲ್ಲಾ ಕ್ರೈಸ್ತರಿಗೆ ಸ್ವಾತಂತ್ರ್ಯ ಸಿಕ್ಕುವ ಹಾಗೆ ಹೋರಾಡುವದು ಕಮ್ಯುನಿಷ್ಟರ ಆಳಿಕೆಯಿಂದ ಅದು ಇಲ್ಲದಂತಾಗಿ ಹೋಗುವಾಗ ದುಃಖಪಡುವದು ಎಲ್ಲಾ ವಿಷಯಗಳಲ್ಲಿ ಎಲ್ಲರಿಗೂ ಒಂದೇ ಅಭಿಪ್ರಾಯ ಇರಬೇಕೆಂದು ಬಲತ್ಕಾರ ಮಾಡುವದಕ್ಕಿಂತ ವಿಶೇಷವಾಗಿದೆ. ಸತ್ಯದಿಂದ ನಮಗೆ ಬಿಡುಗಡೆ ಸಿಕ್ಕುವದೆಂದು ಯೇಸು ಸ್ವಾಮಿ ತಾನೇ ಬೋಧಿಸಿದನು ನಮಗೆ ಸ್ವಾತಂತ್ರ್ಯವಿರುವಾಗ ಸತ್ಯವನ್ನು ಗ್ರಹಿಸಿಕೊಳ್ಳಬಲ್ಲೆವು. ಅಲ್ಪವಾದ ವಿಷಯಗಳ ಸಂಬಂಧವಾಗಿ ವಾದವಿವಾದ ಮಾಡುವದಕ್ಕಿಂತ ಕಮ್ಯುನಿಷ್ಟರ ಗುಲಾಮತನದಿಂದ ಜನರಿಗೆ ಸ್ವಾತಂತ್ರ್ಯ ಸಿಕ್ಕುವ ಹಾಗೆ ಹೋರಾಡುವದು ಅತಿ ವಿಶೇಷವಾಗಿದೆ.

ಕಮ್ಯುನಿಷ್ಟ ದೇಶಗಳಲ್ಲಿರುವ ವಿಶ್ವಾಸಿಗಳ ಹಿಂಸೆ ಹೆಚ್ಚಾಗುತ್ತಿರುವದನ್ನು ತಿಳಿದುಕೊಂಡು ನಾನು ಅವರೊಡನೆ ದುಃಖಪಡುತ್ತೇನೆ. ನಾನು ಸ್ವತಃ ಅದೇ ಕಷ್ಟಗಳನ್ನು ತಾಳಿದ್ದ ಕಾರಣ ಅವುಗಳನ್ನು ಕಲ್ಪಿಸಿಕೊಳ್ಳುವದು ನನಗೆ ಸಾಧ್ಯವಾಗಿದೆ. ಕೇವಲ ನಾಲ್ಕು ವರ್ಷಗಳ ಹಿಂದೆ ರಷ್ಯ ವರ್ತಮಾನ ಪತ್ರಗಳಲ್ಲಿ ಈ ವಿಷಯವು ಪ್ರಕಟವಾಗಿತ್ತು—"ತಮ್ಮ ಪಾಪಗಳನ್ನು ನಿವಾರಣೆ ಮಾಡಬೇಕೆಂದು ಮಕ್ಕಳನ್ನು ಅರ್ಪಿಸಬೇಕೆಂದು ಕ್ರೈಸ್ತರು ಬೋಧಿಸುತ್ತಾರೆ," ಎಂಬುದೇ. ಅನೇಕ ವರ್ಷಗಳ ಹಿಂದೆ ಜನರು ಯೆಹೂದ್ಯರ ವಿಷಯವಾಗಿ ಅದೇ ಫಿರ್ಯಾದಿಯನ್ನು ಮಾಡುತ್ತಿದ್ದರು. ಇದರ ಪರಿಣಾಮಗಳು ನನಗೆ ಗೊತ್ತಾಗಿವೆ. 1959 ರಲ್ಲಿ ನಾನು ರೂಮೆನಿಯಾ ದೇಶದಲ್ಲಿದ್ದ ಲೂಜ ಎಂಬ ಊರಿನಲ್ಲಿದ್ದ ಸೆರೆಮನೆಯಲ್ಲಿದ್ದೆನು. ಅಲ್ಲಿ ಲಾಜರೊವ್ಹಿಕಿ ಎಂಬ ಒಬ್ಬ ಕೈದಿಯಿದ್ದನು. ಅವನು ಒಬ್ಬ ಹುಡುಗಿಯನ್ನು ಕೊಂದನೆಂಬ ಫಿರ್ಯಾದಿಯಿಂದ ಸೆರೆಮನೆಯಲ್ಲಿ ಹಾಕಲ್ಪಟ್ಟನು. ಅವನು ಕೇವಲ 30 ವರ್ಷದವನಾಗಿದ್ದನು. ಆದರೆ ಹಿಂಸೆ ತಾಳಿದ ನಂತರ ಒಂದೇ ರಾತ್ರಿಯಲ್ಲಿ ಅವನ ಕೂದಲು ಬೆಳ್ಳಗಾಗಿ

ದ್ದವು. ಅವನು ಮುದುಕನ ಹಾಗೆ ಕಾಣಹತ್ತಿದನು. ಅವನ ಉಗುರುಗಳು ಕಿತ್ತುಹಾಕಲ್ಪಟ್ಟಿದ್ದವು. ತಾನು ಮಾಡಿದ ದುಷ್ಕೃತ್ಯವನ್ನು ತಾನು ಮಾಡಿದ್ದೇನೆಂದು ಒಪ್ಪಿಕೊಳ್ಳುವ ಹಾಗೆ ಈ ಹಿಂಸೆಯನ್ನು ತಾಳಬೇಕಾಯಿತು. ಒಂದು ವರ್ಷದ ವರೆಗೆ ಅವನು ಹಿಂಸಿಸಲ್ಪಟ್ಟನು. ಅನಂತರ ಅವನು ನಿರ್ದೋಷಿಯೆಂದು ಕಾಣಿಸಿಕೊಂಡಾಗ ಬಿಡುಗಡೆ ಹೊಂದಿದನು. ಆದರೆ ಬಿಡುಗಡೆಯಲ್ಲಿ ಆನಂದಪಡಲು ಅವನಿಗೆ ಸಾಧ್ಯವಿರಲಿಲ್ಲ. ಅವನು ಮುರಿಯಲ್ಪಟ್ಟ ಮನುಷ್ಯನಾಗಿದ್ದನು. ಇತರರು ಸುದ್ದಿ ಪತ್ರಗಳಲ್ಲಿ ಇಂಥ ಬುದ್ಧಿಯಿಲ್ಲದ ಫಿರ್ಯಾದಿಗಳ ವಿಷಯವಾಗಿ ಓದಿ ನಗಬಹುದು. ಆದರೆ ಪ್ರತಿವಾದಿಯ ಸಂಬಂಧವಾಗಿರುವ ಪರಿಣಾಮಗಳು ನನಗೆ ಗೊತ್ತಾದ ಕಾರಣ ನಾನು ನಗಲಾರೆನು. ನಾನು ಪಶ್ಚಿಮ ದೇಶಗಳಲ್ಲಿರುವಾಗ ಈ ಭಯಂಕರವಾದ ವಿಷಯಗಳನ್ನು ಮೇಲಿಂದ ಮೇಲೆ ಜ್ಞಾಪಕ ಮಾಡುತ್ತೇನೆ.

ರಷ್ಯ ದೇಶದಲ್ಲಿದ್ದ ಆರ್ಥೊಡೊಕ್ಸ್ ಸಭೆಯ ಮುಖ್ಯವಾದ ಅಧಿಕಾರಿಗಳು ಸರಕಾರದ ಸಂಗಡ ಬಹಳವಾಗಿ ಸಹಕಾರ ತೋರಿಸುತ್ತಿದ್ದರು. ಇದನ್ನು ನೋಡಿ 8 ಜನ ಸಭಾಧ್ಯಕ್ಷರು ತಕರಾರು ಮಾಡಿದರು. ಅವರು ಸೆರೆಮನೆಯಲ್ಲಿ ಹಾಕಲ್ಪಟ್ಟರು. ನಾನು ರೂಮೆನಿಯಾದಲ್ಲಿದ್ದಾಗ ತಕರಾರು ಮಾಡಿದ ಸಭಾಧ್ಯಕ್ಷರು ನನ್ನ ಜೊತೆಯಲ್ಲಿ ಸೆರೆಮನೆಯಲ್ಲಿದ್ದು ಅಲ್ಲಿಯೇ ತೀರಿಕೊಂಡರು. ಇದನ್ನು ಜ್ಞಾಪಿಸಿ ನಾನು ಸ್ವಾಭಾವಿಕವಾಗಿ ದೇವಭಕ್ತರಾದ ಈ ಸಭಾಧ್ಯಕ್ಷರ ವಿಷಯವಾಗಿ ಚಿಂತಿಸುತ್ತೇನೆ. ಸಭೆಗಾಗಿ ಧಾರ್ಮಿಕ ಸ್ವಾತಂತ್ರ್ಯವನ್ನು ಬೇಡಿಕೊಂಡದ್ದರಿಂದ ಇಬ್ಬರು ಪಾಲಕರು ಮುಖ್ಯವಾದ ಸಭಾಧ್ಯಕ್ಷನಿಂದ ಕಡಿಮೆ ಮಾಡಲ್ಪಟ್ಟರು. ಇದು ಪಶ್ಚಿಮ ದೇಶಗಳಲ್ಲಿದ್ದ ಸಭೆಗಳವರಿಗೆ ಗೊತ್ತಾಯಿತು. ರೂಮೆನಿಯಾ ದೇಶದಲ್ಲಿ ಮತ್ತೊಬ್ಬ ಸಭಾಪಾಲಕನಿಗೆ ಅದೇ ಅನುಭವವಾವಾಯಿತು. ನಾನು ಅವನ ಸಂಗಡ ಸೆರೆಮನೆಯಲ್ಲಿದ್ದೆನು. ಅವನು ಸಭೆಯಿಂದ ಕಡಿಮೆ ಮಾಡಲ್ಪಟ್ಟ ನಂತರ ಗುಪ್ತ ಪೊಲೀಸರ ಕೈಯಿಂದ ಚೆನ್ನಾಗಿ ಹಿಂಸಿಸಲ್ಪಟ್ಟನು. ಯಾಕೆಂದರೆ ಈ ಬಹಿರಂಗವಾದ ಸಭೆಯ ಮುಂದಾಳುಗಳು ಗುಪ್ತ ಪೊಲೀಸರ ಸಂಗಡ ತಮ್ಮ ಕಾರ್ಯಗಳನ್ನು ನಡೆಸುತ್ತಾರೆ. ಕಮ್ಯುನಿಷ್ಟ ದೇಶಗಳಲ್ಲಿ ಹಿಂಸೆ ಪಡುತ್ತಿರುವ ಜನರ ದುಃಖಗಳ ವಿಷಯವಾಗಿ ಯೋಚಿಸಿ ನಾನು ನಡುಗುತ್ತೇನೆ. ಅವರ ಹಿಂಸಕರ ನಿತ್ಯಗತಿಯ ವಿಷಯವಾಗಿ ಯೋಚಿಸಿ ನಾನು ನಡುಗುತ್ತೇನೆ. ಹಿಂಸೆ ಹೊಂದುತ್ತಿರುವ ತಮ್ಮ ಸಹೋದರರ ಹಿತಚಿಂತೆ ಮಾಡದಿರುವ ವಿಶ್ವಾಸಿಗಳ ವಿಷಯವಾಗಿ ಚಿಂತಿಸಿ ನಾನು ನಡುಗುತ್ತೇನೆ.

ನಾನು ನನ್ನ ಸ್ವಂತ ಇಚ್ಛೆಯನ್ನು ನೆರವೇರಿಸುತ್ತಿದ್ದರೆ ಈ ಹೋರಾಟದಲ್ಲಿ ಪಾಲುಗಾರನಾಗುವದಿಲ್ಲ. ಶಾಂತವಾದ ಸ್ಥಳದಲ್ಲಿ ಧ್ಯಾನಮಾಡಲು ನನಗೆ ಇಷ್ಟವಿದೆ. ಆದರೆ ಅದು ಸಾಧ್ಯವಿಲ್ಲ. ಕಮ್ಯುನಿಷ್ಟರ ಅಪಾಯ ನಿಜವಾಗಿದೆ.

ಕಮ್ಯೂನಿಷ್ಟರು ತಿಬೇಟ್ ದೇಶದ ಮೇಲೆ ದಾಳಿ ಮಾಡಿದಾಗ ಅವರು ಧಾರ್ಮಿಕ ವಿಷಯಗಳಿಗೆ ಗಮನ ಕೊಡುವವರೆಲ್ಲರನ್ನೂ ನಿರ್ನಾಮ ಮಾಡಿದರು. ನಮ್ಮ ದೇಶದಲ್ಲಿಯೂ ಅವರು ಅದೇ ರೀತಿಯಲ್ಲಿ ದೇವಭಕ್ತರನ್ನು ಇಲ್ಲದಂತಾಗಿ ಮಾಡಲು ಪ್ರಯತ್ನಿಸಿದರು. ಅನೇಕ ಸಭಾ ಸ್ಥಾನಗಳು ಮುಚ್ಚಲ್ಪಟ್ಟವು. ಆದರೆ ರೂಮೆನಿಯಾ ದೇಶದಲ್ಲಿ ಧರ್ಮಸ್ವಾತಂತ್ರ್ಯವಿರುವದೆಂದು ಪರದೇಶ ದವರಿಗೆ ಕಾಣಿಸಿಕೊಳ್ಳುವಂತೆ ಅವರು ಕೆಲವು ಸಭೆಗಳನ್ನು ಹಾಗೆಯೇ ಉಳಿಸಿ ದ್ದಾರೆ. ನಾನು ಅಪೇಕ್ಷಿಸುವ ವಿಶ್ರಾಂತಿಯನ್ನು ತಕ್ಕೊಳ್ಳುತ್ತಿದ್ದರೆ ನಾನು ನಿಜವಾದ ಸ್ಥಿತಿಯನ್ನು ಅಲಕ್ಷ್ಯಮಾಡುವವನಾಗುವೆನು. ಇದರಿಂದ ನನ್ನ ಸ್ವಂತ ಆತ್ಮಕ್ಕೆ ಅಪಾಯವಾಗುವದು.

ಈ ಹೋರಾಟವನ್ನು ನಡೆಸುವದು ನನಗೆ ಕಠಿಣವಾಗಿದ್ದರೂ ಅದನ್ನು ಮಾಡಲೇ ಬೇಕು. ನಾನು ಮಾಯವಾದರೆ ಕಮ್ಯುನಿಷ್ಟರು ನನ್ನನ್ನು ಹಿಡಿದಿದ್ದಾ ರೆಂದು ನಿಮಗೆ ನಿಶ್ಚಯತ್ವವಿರುವದು. 1948 ರಲ್ಲಿ ನಾನು ಓಣಿಯಲ್ಲಿ ತಿರು ಗಾಡುತ್ತಿದ್ದಾಗ ಅವರು ನನ್ನನ್ನು ಹಿಡಿದರು. ನಾನು ಸೆರೆಮನೆಯಲ್ಲಿ ಹಾಕಲ್ಪ ಟ್ಟೆನು. ಅಲ್ಲಿ ನನಗೆ ಬೇರೆ ಹೆಸರು ಕೊಡಲ್ಪಟ್ಟಿತು. ಆವಾಗ ಅನ್ನಾ ಪೋಕರ ನಮ್ಮ ಸರಕಾರದಲ್ಲಿ ಒಬ್ಬ ಮುಖ್ಯಾಧಿಕಾರಿಣಿಯಾಗಿದ್ದಳು. ಆಕೆಯು ಸ್ವೀಡನ್ ದೇಶದ ಪ್ರತಿನಿಧಿಗೆ—"ವರ್ಮಬ್ರಾಂಡ್ ಈಗ ಡೆನ್ಮಾರ್ಕ ದೇಶದಲ್ಲಿ ದ್ದಾನೆ," ಎಂದು ಹೇಳಿದಳು. ಆದರೆ ಆ ಪ್ರತಿನಿಧಿಯ ಜೇಬಿನಲ್ಲಿ ನಾನು ಸೆರೆ ಮನೆಯಿಂದ ಗುಪ್ತವಾದ ರೀತಿಯಲ್ಲಿ ಹೊರಗೆ ಕಳಿಸಿದ ಪತ್ರವಿತ್ತು. ಆಕೆಯು ತನಗೆ ಸುಳ್ಳನ್ನು ಹೇಳಿದ್ದಾಳೆಂದು ಅವನು ತಿಳಿದುಕೊಂಡನು. ಅದೇ ಸಂಗತಿ ತಿರುಗಿಯಾಗಬಹುದು. ನಾನು ಕೊಲ್ಲಲ್ಪಟ್ಟಿದ್ದರೆ ಕೊಲೆಗಾರನು ಕಮ್ಯುನಿಷ್ಟ ರಿಂದ ನೇಮಿಸಲ್ಪಡುತ್ತಿದ್ದನು. ನನ್ನನ್ನು ಕೊಲ್ಲಬೇಕೆಂದು ಬೇರೆ ಯಾರಿಗೂ ಉದ್ದೇಶವಿಲ್ಲ. ನಾನು ಅನೀತಿವಂತನಾಗಲೀ ಕಳ್ಳನಾಗಲೀ ಪುರುಷಗಾಮಿಯಾ ಯಾಗಲೀ ವ್ಯಭಿಚಾರಿಯಾಗಲೀ ಸುಳ್ಳುಗಾರನಾಗಲೀ ಮುಂತಾದ ದುಷ್ಕರ್ಮಿ ಯಾಗಲೀ ಇದ್ದೆನೆಂದು ನೀವು ಕೇಳಿದ್ದರೆ ಗುಪ್ತ ಪೋಲೀಸರು ಈ ರೀತಿಯಲ್ಲಿ ನನ್ನ ಹೆಸರನ್ನು ಕೆಡಿಸಲು ಪ್ರಯತ್ನಿಸುತ್ತಿದ್ದಾರೆಂದು ನಿಮಗೆ ಗೊತ್ತಾಗುವದು. ಒಂದು ವೇಳೆ ರೂಮೆನಿಯಾ ದೇಶದಲ್ಲಿರುವ ನನ್ನ ಮಿತ್ರರಿಗೆ ಅವರು ಹಿಂಸೆ ಯನ್ನು ಕೊಡಬಹುದು. ಯಾಕೆಂದರೆ ನನ್ನನ್ನು ಮೌನವನ್ನಾಗಿ ಮಾಡಲು ಅವರು ಪ್ರಯತ್ನಿಸುವರು.

ಆದರೆ ನಾನು ಮೌನನಾಗಿರಲಾರೆನು. ನಾನು ಇಲ್ಲಿ ಬರೆದ ವಿಷಯಂ ಗಳಿಗೆ ನೀವು ಗಮನ ಕೊಡಬೇಕು. ನನ್ನ ಅನುಭವಗಳಿಂದ ನನ್ನ ಮನಸ್ಸು ಸರಿ ಯಾಗಿಲ್ಲವೆಂದು ನಿಮಗೆ ಕಂಡುಬಂದರೆ ಅದರ ಮೂಲ ಕಾರಣವನ್ನು ಪರಿ ಶೋಧಿಸಿರಿ. ಕಮ್ಯುನಿಷ್ಟತ್ವದ ನಿಜಸ್ವರೂಪವನ್ನು ತಿಳಿದುಕೊಳ್ಳಲು ಪ್ರಯತ್ನಿ ಸಿರಿ. ಪೂರ್ವ ಜರ್ಮನಿ ದೇಶದಲ್ಲಿದ್ದ ಜನರು ತಮ್ಮ ಪ್ರಾಣಗಳನ್ನು ಅಪಾಯ

ದಲ್ಲಿಟ್ಟು ತಮ್ಮ ದೇಶದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಇದರ ಕಾರಣವೇನು ? ಪಶ್ಚಿಮ ದೇಶದಲ್ಲಿರುವ ಅನೇಕರು ನಿದ್ರೆ ಮಾಡುತ್ತಾರೆ. ಅವರು ಎಚ್ಚರವಾಗಿರಬೇಕು.

* * * *

ದುಃಖ ಪಡುವವರು ತಮ್ಮ ದೋಷವನ್ನು ಬೇರೊಬ್ಬನ ಮೇಲೆ ಹಾಕಲು ಯಾವಾಗಲೂ ಪ್ರಯತ್ನಿಸುತ್ತಾರೆ. ಇಂಥವನು ಸಿಕ್ಕರೆ ಅವರ ಭಾರ ಕಡಿಮೆಯಾಗುತ್ತದೆ. ಆದರೆ ಹಾಗೆ ಮಾಡಲು ನನಗಾಗುವದಿಲ್ಲ. ಕಮ್ಯುನಿಷ್ಟತ್ವವನ್ನು ವಿರೋಧಿಸದಿರುವ ಪಶ್ಚಿಮ ದೇಶದ ಸಭೆಗಳ ಪ್ರತಿನಿಧಿಗಳ ಮೇಲೆ ನಾನು ಪೂರ್ಣ ದೋಷವನ್ನು ಹಾಕಲಾರೆನು. ಈ ಕೆಟ್ಟತನವು ಅವರಿಂದುಂಟಾಗದೇ ಪೂರ್ವ ಕಾಲದಿಂದ ಬಂದದ್ದೇ. ಈ ಮುಂದಾಳುಗಳು ಈ ಹಳೆಯ ದುಷ್ಟತ್ವದಿಂದ ಅಪಜಯ ಹೊಂದಿದವರಾಗಿದ್ದಾರೆ. ಅವರು ಸಭೆಯಲ್ಲಿ ದುಃಸ್ಥಿತಿಯನ್ನುಂಟುಮಾಡಲಿಲ್ಲ. ಅವರು ಸಭೆಯಲ್ಲಿ ಸೇರಿದಾಗ ಆ ದುಃಸ್ಥಿತಿ ಅಲ್ಲಿತ್ತು. ನಾನು ಪಶ್ಚಿಮ ದೇಶಗಳಲ್ಲಿ ಅನೇಕ ಸತ್ಯವೇದ ವಿಶ್ವವಿದ್ಯಾಲಯಗಳಿಗೆ ಹೋಗಿದ್ದೇನೆ. ಗಂಟೆಗಳ ಹಾಗೂ ಸಂಗೀತಗಳ ಇತಿಹಾಸದ ವಿಷಯವಾಗಿ ಅನೇಕ ಭಾಷಣಗಳನ್ನು ಕೇಳಿದ್ದೇನೆ. ಪೂರ್ವ ಕಾಲದ ಸಭೆಗಳ ನೇಮನಿಷ್ಠೆಗಳ ವಿಷಯವಾಗಿ ನಾನು ಕೇಳಿದ್ದೇನೆ. ವಿದ್ಯಾರ್ಥಿಗಳು ಕಲಿಯುತ್ತಿರುವ ವಿಷಯಗಳನ್ನು ನಾನು ಕೇಳಿದ್ದೇನೆ. ಅವುಗಳಲ್ಲಿ—"ದೇವರು ನಿಜವಾಗಿ ಈ ಲೋಕವನ್ನು ಸೃಷ್ಟಿಸಲಿಲ್ಲ. ಆದಾಮನು ನಿಜವಾಗಿ ಜೀವಿಸಲಿಲ್ಲ. ಜಲಪ್ರಳಯ ನಿಜವಾಗಿ ಆಗಲಿಲ್ಲ. ಮೋಶೆಯು ಮಹತ್ಕಾರ್ಯಗಳನ್ನು ಮಾಡಿಲ್ಲ. ಪ್ರವಾದನೆಗಳು ನೆರವೇರಿಸಲ್ಪಟ್ಟ ನಂತರ ಬರೆಯಲ್ಪಟ್ಟವು. ಯೇಸುವಿನ ತಾಯಿಯಾದ ಮರಿಯಳು ಕನ್ಯೆಯಾಗಿರಲಿಲ್ಲ. ಯೇಸು ನಿಜವಾಗಿ ಎದ್ದು ಬರಲಿಲ್ಲ. ಆತನ ಎಲುಬುಗಳು ಇನ್ನೂ ಸಮಾಧಿಯಲ್ಲಿವೆ. ಅಪೊಸ್ತಲರು ಪತ್ರಿಕೆಗಳನ್ನು ಬರೆಯಲಿಲ್ಲ. ಒಬ್ಬ ಹುಚ್ಚನು 'ಪ್ರಕಟನೆ' ಎಂಬ ಸತ್ಯವೇದದ ಕಡೆಯ ಪುಸ್ತಕವನ್ನು ಬರೆದನು. ಆದರೂ ಸತ್ಯವೇದವು ಪರಿಶುದ್ಧ ಪುಸ್ತಕವಾಗಿದೆ," ಎಂಬುದೇ. ಇದು ಸತ್ಯವಾಗಿದ್ದರೆ ಕಮ್ಯುನಿಷ್ಟ ವರ್ತಮಾನ ಪತ್ರಿಕೆಗಿಂತ ಸತ್ಯವೇದದಲ್ಲಿ ಹೆಚ್ಚಾದ ಸುಳ್ಳುಗಳಿವೆ.

ಈಗಿನ ಸಭೆಗಳ ಮುಂದಾಳುಗಳು ವಿದ್ಯಾರ್ಥಿಗಳಾಗಿದ್ದಾಗ ಈ ಬೋಧನೆಗಳನ್ನು ಕಲಿತುಕೊಂಡರು. ಅವರು ಈ ವಿಷಯಗಳನ್ನು ನಂಬುತ್ತಾರೆ. ಇಂಥ ಕರ್ತನಿಗೆ ನಂಬಿಗಸ್ತರಾಗಿರುವದು ಕಾರಣವೇನು ? ಆ ಸಭೆಗಳಲ್ಲಿ ಕೆಲವರು—"ದೇವರು ಸತ್ತಿದ್ದಾನೆ," ಎಂದು ಬೋಧಿಸುತ್ತಾರೆ. ಈ ಜನರು ಸಂಸ್ಥಾನಿಕ ಸಭೆಯಲ್ಲಿ ಮುಂದಾಳುಗಳಾಗಿದ್ದಾರೆ. ಆದರೆ ಆ ಸಭೆ ನಿಜವಾಗಿ ಕ್ರಿಸ್ತನ ದೇಹವಲ್ಲ. ಅವರ ಸಭೆಗಳಲ್ಲಿ ಅನೇಕರು ಕ್ರಿಸ್ತನನ್ನು ನಿರಾಕರಿಸಿದ್ದಾರೆ.

ಅವರು ದುಃಖಪಡುವ ಗುಪ್ತ ಸಭಿಕರನ್ನು ಭೆಟ್ಟಿಯಾಗುತ್ತಿರುವಾಗ ಅವರು ಆಶ್ಚರ್ಯಕರವಾದ ವ್ಯಕ್ತಿಗಳ ಹಾಗೆ ಕಾಣಿಸುತ್ತಾರೆ.

ನಾವು ಕೇವಲ ಒಂದೇ ವಿಷಯದ ಸಂಬಂಧವಾಗಿ ಜನರಿಗೆ ತೀರ್ಪು ಮಾಡಬಾರದು. ಫರಿಸಾಯರು ಹಾಗೆ ಮಾಡಿದರು. ಅವರು ಸಬ್ಬತ್ ದಿನದ ವಿಷಯವಾಗಿ ಅನೇಕ ಸಣ್ಣ ಪುಟ್ಟ ನಿಯಮಗಳನ್ನು ಅನುಸರಿಸುತ್ತಿದ್ದರು. ಯೇಸು ಸ್ವಾಮಿ ಈ ನೇಮಗಳನ್ನು ಅಲಕ್ಷ್ಯಮಾಡಿದ್ದರಿಂದ ಆತನು ಅವರ ದೃಷ್ಟಿಯಲ್ಲಿ ಕೆಟ್ಟವನಾಗಿದ್ದನು. ನಿಜವಾಗಿ ನೋಡಬೇಕಾದರೆ ಆತನು ಅವರ ದೃಷ್ಟಿಯಲ್ಲಿ ಅನೇಕ ಒಳ್ಳೇ ಕಾರ್ಯಗಳನ್ನು ಮಾಡುವವನಾಗಿದ್ದನು. ಯಾವ ಸಭೆಯ ಮುಂದಾಳುಗಳು ಕಮ್ಯುನಿಷ್ಟತ್ವದ ವಿಷಯವಾಗಿ ತಪ್ಪಾದ ಅಭಿಪ್ರಾಯವುಳ್ಳವರಾಗಿದ್ದಾರೋ ಅದೇ ಮುಂದಾಳುಗಳು ಬೇರೆ ಅನೇಕ ವಿಷಯಗಳ ಸಂಬಂಧವಾಗಿ ಯಥಾರ್ಥವುಳ್ಳವರಾಗಿರಬಹುದು. ಅವರು ತಪ್ಪು ಮಾಡುವವರಾಗಿದ್ದರೂ ಬದಲಾವಣೆ ಹೊಂದಬಹುದು.

ನಾನು ಒಮ್ಮೆ ರೂಮೆನಿಯಾ ದೇಶದಲ್ಲಿದ್ದ ಆರ್ಥೊಡೋಕ್ಸ್ ಸಭೆಯ ಮೇಲಾಧಿಕಾರಿಯ ಸಂಗಡ ಇದ್ದೆನು. ಅವನು ಕಮ್ಯುನಿಷ್ಟರ ಸಹಕಾರಿಯಾಗಿ ತನ್ನ ಸ್ವಂತ ಸಭಿಕರನ್ನು ನಿರಾಕರಿಸುತ್ತಿದ್ದನು. ನಾನು ಅವನ ಕೈ ಹಿಡಿದು ತಪ್ಪಿ ಹೋದ ಮಗನ ಸಾಮ್ಯವನ್ನು ಅವನಿಗೆ ತಿಳಿಸಿದೆನು. ಅವನ ಮನೆಯ ತೋಟದಲ್ಲಿ ಒಂದು ಸಾಯಂಕಾಲ ಈ ಸಂಗತಿಯಾಯಿತು. ನಾನು ಅವನಿಗೆ —"ದೇವರು ಎಷ್ಟೋ ಸಂತೋಷದಿಂದ ತಿರಿಗಿ ಬರುವ ಪಾಪಿಗಳನ್ನು ಅಂಗೀಕಾರ ಮಾಡುತ್ತಾನೆ. ಸಭೆಯ ಮೇಲಾಧಿಕಾರಿಯಾದರೂ ದೇವರ ಕಡೆಗೆ ತಿರುಗಿಕೊಂಡರೆ ಆತನು ಅವನನ್ನು ಅಂಗೀಕರಿಸುವನು," ಎಂದು ತಿಳಿಸಿದೆ. ಕ್ರೈಸ್ತ ಸಂಗೀತಗಳನ್ನು ಹಾಡಿ ತೋರಿಸಿದೆನು. ಅವನು ದೇವರ ಕಡೆಗೆ ತಿರುಗಿಕೊಂಡನು.

ನಾನು ಆರ್ಥೊಡೊಕ್ಸ್ ಸಭೆಯ ಒಬ್ಬ ಪಾಲಕನ ಸಂಗಡ ಸೆರೆಮನೆಯಲ್ಲಿದ್ದ ಒಂದೇ ಕೋಣೆಯಲ್ಲಿದ್ದೆನು. ಬಿಡುಗಡೆ ಹೊಂದುವ ಆಶೆಯಿಂದ ಅವನು ನಾಸ್ತಿಕತ್ವವನ್ನು ಸಿದ್ಧಾಂತಪಡಿಸುವ ಲೇಖನಗಳನ್ನು ಬರೆದನು. ನಾನು ಅವನ ಸಂಗಡ ಮಾತನಾಡಿದಾಗ ಅವನು ಆ ಕಾಗದಗಳನ್ನು ಹರಿದೊಗೆದನು. ಇದರಿಂದ ಬಿಡುಗಡೆ ಹೊಂದುವ ಅವನ ಆಶೆಯಿಲ್ಲದಂತಾಗಿ ಹೋಯಿತು. ನಾನು ನನ್ನ ಹೃದಯದಲ್ಲಿದ್ದ ಭಾರವನ್ನು ಕಡಿಮೆಮಾಡುವಂತೆ ಇನ್ಯಾರ ಮೇಲೆಯೂ ದೋಷ ಹಾಕಲಾರೆನು.

* * *

ನನಗೆ ಮತ್ತೊಂದು ಮನೋ ದುಃಖವಿದೆ. ನನ್ನ ಆಪ್ತ ಸ್ನೇಹಿತರು ಕೂಡ ನನ್ನನ್ನು ತಪ್ಪಾಗಿ ತಿಳಿದುಕೊಳ್ಳುತ್ತಾರೆ. ನಾನು ಕಹಿಯಾದ ರೀತಿಯಲ್ಲಿ

ಕಮ್ಯುನಿಷ್ಟರನ್ನು ವಿರೋಧಿಸುತ್ತೇನೆಂದು ಅವರು ಹೇಳುತ್ತಾರೆ. ಇದು ಸತ್ಯವಲ್ಲವೆಂದು ನನಗೆ ಗೊತ್ತು.

ಯೇಸು ಸ್ವಾಮಿ ತಾನೇ ಶಾಸ್ತ್ರಿಗಳನ್ನೂ ಫರಿಸಾಯರನ್ನೂ ಖಂಡಿಸುತ್ತಿದ್ದನು. ಆದರೆ ಆತನು – "ನಿಮ್ಮ ವೈರಿಗಳನ್ನು ಪ್ರೀತಿಸಿರಿ. ನಿಮ್ಮನ್ನು ಶಪಿಸುವವರನ್ನು ಆಶೀರ್ವದಿಸಿರಿ," ಎಂದು ತನ್ನ ಶಿಷ್ಯರಿಗೆ ಅಪ್ಪಣೆ ಕೊಟ್ಟನು. ಈ ಎರಡು ವಿಷಯಗಳು ಪರಸ್ಪರ ವಿರುದ್ಧವಾಗಿವೆಯೆಂದು ಕೆಲವರು ಯೋಚಿಸುತ್ತಾರೆ. ನಮ್ಮ ಕರ್ತನು ಸರಿಯಾಗಿ ಯೋಚಿಸಲಿಲ್ಲವೆಂದು ಇದರಿಂದ ಕೆಲವರು ಯೋಚಿಸಿದ್ದಾರೆ. ಆದರೆ ಇದು ತಪ್ಪಾಗಿದೆ. ಯೇಸು ಫರಿಸಾಯರ ತಪ್ಪುಗಳನ್ನು ಖಂಡಿಸಿದರೂ ನಿಜವಾಗಿ ಅವರನ್ನು ಪ್ರೀತಿಸಿದನು. ಅದೇ ರೀತಿಯಲ್ಲಿ ನಾನು ಕಮ್ಯುನಿಷ್ಟತ್ವಕ್ಕೆ ವಿರುದ್ಧವಾಗಿದ್ದಾಗ್ಯೂ ಅವರನ್ನೂ ಸಭೆಯಲ್ಲಿರುವ ಅವರ ಸಹಕಾರಿಗಳನ್ನೂ ಪ್ರೀತಿಸುತ್ತೇನೆ.

ಮೇಲಿಂದ ಮೇಲೆ ಜನರು ನನಗೆ—"ಕಮ್ಯುನಿಷ್ಟರನ್ನು ಮರೆತುಬಿಡಿರಿ; ಕೇವಲ ಆತ್ಮೀಯ ವಿಷಯಗಳಲ್ಲಿ ಕೆಲಸಮಾಡಿರಿ," ಎಂದು ಹೇಳುತ್ತಾರೆ. ಜರ್ಮನಿ ದೇಶದಲ್ಲಿ ನಾಝಿ ಜನರ ಕೈಯಿಂದ ಅನೇಕ ಕಷ್ಟಗಳನ್ನು ಅನುಭವಿಸಿದ ಒಬ್ಬ ವಿಶ್ವಾಸಿಯನ್ನು ಭೆಟ್ಟಿಯಾದೆನು. ಅವನು ನನಗೆ—"ನೀವು ಕ್ರಿಸ್ತನ ವಿಷಯವಾಗಿ ಸಾಕ್ಷಿ ಕೊಡುತ್ತಿರುವಾಗ ನಾನು ಸಂಪೂರ್ಣವಾಗಿ ನಿಮ್ಮ ಪಕ್ಷದಲ್ಲಿದ್ದೇನೆ. ಆದರೆ ನೀವು ಕಮ್ಯುನಿಷ್ಟತ್ವದ ವಿರುದ್ಧವಾಗಿ ಒಂದು ಮಾತನ್ನೂ ಹೇಳಬಾರದು," ಎಂದು ಹೇಳಿದನು. ನಾನು ಅವನನ್ನು—"ಹಿಟ್ಲರನ ಆಳಿಕೆಯು ಜರ್ಮನಿ ದೇಶದಲ್ಲಿದ್ದಾಗ ಅದನ್ನು ವಿರೋಧಿಸಿದ ಕ್ರೈಸ್ತರು ತಪ್ಪನ್ನು ಮಾಡಿದರೋ ? ಅವರು ಕೇವಲ ಸತ್ಯವೇದದಿಂದ ಉಪದೇಶ ಮಾಡಬೇಕಾಯಿತೋ ?" ಎಂದು ಕೇಳಿದನು. ಪ್ರತ್ಯುತ್ತರವಾಗಿ ಅವನು—"ಹಿಟ್ಲರನು 60 ಲಕ್ಷ ಮಂದಿ ಯೆಹೂದ್ಯರನ್ನು ಕೊಲ್ಲಿಸಿದನು. ನಾವು ಅವರ ವಿರುದ್ಧವಾಗಿ ಮಾತನಾಡಲೇ ಬೇಕು," ಎಂದು ಹೇಳಿದನು. ನಾನು ಅವನಿಗೆ—"ಕಮ್ಯುನಿಷ್ಟರು ಮೂರು ಕೋಟಿ ರಷ್ಯದವರನ್ನೂ ಕೋಟ್ಯಾಂತರ ಚೀನ ದೇಶದವರನ್ನೂ ಕೊಂದುಹಾಕಿದ್ದಾರೆ. ಅವರು ಸಹ ಯೆಹೂದ್ಯರನ್ನು ಕೊಲಿಸಿದ್ದಾರೆ. ಯೆಹೂದ್ಯರು ಮಾತ್ರ ಕೊಲ್ಲಲ್ಪಡುವಾಗ ನಾವು ತಕರಾರು ಮಾಡಬೇಕೋ ? ರಷ್ಯದವರು ಸಾಯುವಾಗ ತಕರಾರು ಮಾಡಬಾರದೋ ?" ಎಂದು ಉತ್ತರಿಸಿದೆನು. ಅವನು ನನಗೆ—"ಇದು ಬೇರೆಯಾಗಿದೆ," ಎಂದು ಹೇಳಿದನು. ಆದರೆ ಯಾಕೆ ಬೇರೆಯಾಗಿದೆಯೆಂಬುದನ್ನು ವಿವರಿಸಲಿಲ್ಲ. ಹಿಟ್ಲರನ ಆಳಿಕೆಯಲ್ಲಿಯೂ ಕಮ್ಯುನಿಷ್ಟರ ಆಳಿಕೆಯಲ್ಲಿಯೂ ನಾನು ಪೋಲೀಸರಿಂದ ಹೊಡೆಯಲ್ಪಟ್ಟೆನು. ಹೊಡೆಯುವಿಕೆಯಲ್ಲಿ ನನಗೆ ಹೆಚ್ಚು ಕಡಿಮೆ ಕಂಡುಬರಲಿಲ್ಲ. ಎರಡು ಅನುಭವಗಳಿಂದಲೂ ನನಗೆ ನೋವುಂಟಾಯಿತು.

ಕ್ರೈಸ್ತತ್ವವು ಎಲ್ಲ ತರದ ಪಾಪದ ವಿರುದ್ಧವಾಗಿ ಹೋರಾಡಬೇಕು. ಅದು ಕೇವಲ ಕಮ್ಯುನಿಷ್ಟತ್ವವನ್ನು ವಿರೋಧಿಸುವದಿಲ್ಲ. ಆದರೆ ಈಗಿನ ಕಾಲದಲ್ಲಿ ಕಮ್ಯುನಿಷ್ಟತ್ವವು ಕ್ರೈಸ್ತತ್ವದ ಮುಖ್ಯ ವಿರೋಧಿಯಾಗಿದೆ. ಅದು ಬಹಳ ಅಪಾಯಕರವಾಗಿರುವದರಿಂದ ನಾವು ಅದನ್ನು ವಿರೋಧಿಸುವ ಹಾಗೆ ಒಂದೇ ಮನಸ್ಸುಳ್ಳವರಾಗಿರಬೇಕು.

ದೇವರು ಮನುಷ್ಯನನ್ನು ಉಂಟುಮಾಡಿದ ಉದ್ದೇಶವೇನೆಂದರೆ ಅವನು ಕ್ರಿಸ್ತನ ಹಾಗೆ ಆಗಬೇಕೆಂಬುದೇ. ಇದು ಆಗಬಾರದೆಂದು ಕಮ್ಯುನಿಷ್ಟರ ಮುಖ್ಯ ಉದ್ದೇಶವಾಗಿದೆ. ಅವರು ಧರ್ಮಕ್ಕೆ ವಿರುದ್ಧವಾಗಿದ್ದಾರೆ. ಮರಣವಾದ ನಂತರ ಮನುಷ್ಯನು ಇಲ್ಲದಂತಾಗಿ ಹೋಗುತ್ತಾನೆಂದು ಅವರು ನಂಬುತ್ತಾರೆ. ಮಾನವನಲ್ಲಿ ಆತ್ಮವಿಲ್ಲವೆಂದು ಅವರು ನಂಬುತ್ತಾರೆ. ಮನುಷ್ಯರು ವಸ್ತುಗಳಾಗಿ ವಸ್ತುಗಳ ಹಾಗೆ ಜೀವಿಸಬೇಕೆಂದು ಅವರ ಇಚ್ಛೆಯಿದೆ.

ಅವರು ಸಾಮಾಜಿಕ ದೃಷ್ಟಿಯಿಂದ ಮನುಷ್ಯರನ್ನು ನೋಡುತ್ತಾರೆ. ದೇವರು ಮನುಷ್ಯರಿಗೆ ಕೊಟ್ಟ ವ್ಯಕ್ತಿತ್ವವೆಂಬ ಅತಿ ಶ್ರೇಷ್ಠವಾದ ದಾನವನ್ನು ಇಲ್ಲದಂತಾಗಿ ಮಾಡುವ ಉದ್ದೇಶವುಳ್ಳವರಾಗಿದ್ದಾರೆ. ಒಬ್ಬ ಮನುಷ್ಯನ ಹತ್ತಿರ—"ವೈಯಕ್ತಿಕ ಮನಶ್ಶಾಸ್ತ್ರ" ಎಂಬ ಪುಸ್ತಕ ಸಿಕ್ಕಿದ ಕಾರಣ ಅವನು ಐಗುಪ್ತ ಪೋಲೀಸರಿಂದ ಹಿಡಿಯಲ್ಪಟ್ಟನು. ಅವರು ಅವನಿಗೆ—"ನೀನು ಯಾಕೆ ವೈಯಕ್ತಿಕ ವಿಷಯಗಳ ಸಂಬಂಧವಾಗಿ ಯೋಚಿಸುತ್ತೀ ? ಸಾಮಾಜಿಕ ವಿಷಯಗಳು ವಿಶೇಷವಾಗಿವೆ," ಎಂದು ಹೇಳಿದರು.

ನಾವು ವ್ಯಕ್ತಿಗಳಾಗಬೇಕೆಂದು ಕರ್ತನಾದ ಯೇಸು ಅಪೇಕ್ಷಿಸುತ್ತಾನೆ. ಆದಕಾರಣ ಕ್ರೈಸ್ತತ್ವಕ್ಕೂ ಕಮ್ಯುನಿಷ್ಟತ್ವಕ್ಕೂ ಸಹವಾಸವಿರುವದು ಅಸಾಧ್ಯವಾಗಿದೆ. ಇದು ಕಮ್ಯುನಿಷ್ಟರಿಗೆ ಗೊತ್ತಾಗಿದೆ. ಅವರು—"ವಿಜ್ಞಾನವೂ ಧರ್ಮವೂ" ಎಂಬ ಒಂದು ಮಾಸಪತ್ರಿಕೆಯನ್ನು ಪ್ರಕಟಿಸುತ್ತಾರೆ. ಅದರಲ್ಲಿ ಒಬ್ಬನು—"ಧರ್ಮಕ್ಕೂ ಕಮ್ಯುನಿಷ್ಟತ್ವಕ್ಕೂ ಒಡನಾಟ ಇರಲಾರದು. ಇದು ಅದಕ್ಕೆ ವಿರುದ್ಧವಾಗಿದೆ. ಕಮ್ಯುನಿಷ್ಟ ಪಕ್ಷದ ಉದ್ದೇಶವು ಧರ್ಮಕ್ಕೆ ಮರಣಕರವಾದ ಪೆಟ್ಟಾಗಿದೆ. ನಮ್ಮ ಉದ್ದೇಶವೇನೆಂದರೆ ನಾಸ್ತಿಕದ ಸಮಾಜವನ್ನುಂಟುಮಾಡಬೇಕೆಂಬುದೇ. ಇದರಲ್ಲಿ ಧರ್ಮದ ಗುಲಾಮತನದಿಂದ ಜನರಿಗೆ ಬಿಡುಗಡೆ ಸಿಕ್ಕುವದು," ಎಂದು ಬರೆದನು.

ಕ್ರೈಸ್ತತ್ವವು ಕಮ್ಯುನಿಷ್ಟತ್ವದ ಸಂಗಡ ಸಹವಾಸ ಮಾಡುವದು ಸಾಧ್ಯವೋ ? ಆ ಪ್ರಶ್ನೆಗೆ ಕಮ್ಯುನಿಷ್ಟರು ಕೊಡುವ ಉತ್ತರವೇನೆಂದರೆ—"ಕಮ್ಯುನಿಷ್ಟತ್ವವು ಧರ್ಮಕ್ಕೆ ಮರಣಕರವಾದ ಪೆಟ್ಟಾಗಿದೆ," ಎಂಬುದೇ.

# ಅಧ್ಯಾಯ—೫

ಗುಪ್ತ ಸಭೆಯು ವಿಷಯವಾಗಿ ಇನ್ನೂ ನೋಡೋಣ. ಗುಪ್ತ ಸಭೆಯು ಕಠಿಣವಾದ ಪರಿಸ್ಥಿತಿಯಲ್ಲಿ ತನ್ನ ಕಾರ್ಯ ಸಾಧಿಸುತ್ತದೆ. ಎಲ್ಲಾ ಕಮ್ಯುನಿಷ್ಟ ದೇಶಗಳಲ್ಲಿ ನಾಸ್ತಿಕತ್ವವು ಸಂಸ್ಥಾನಿಕ ಧರ್ಮವಾಗಿದೆ. ವೃದ್ಧರು ತಮ್ಮಿಚ್ಛೆಯ ಪ್ರಕಾರವಾಗಿ ನಂಬಬಹುದು, ಆದರೆ ಯೌವನಸ್ಥರೂ ಮಕ್ಕಳೂ ನಂಬ ಬಾರದು. ದೇವರಲ್ಲಿರುವ ನಂಬಿಕೆಯನ್ನು ಇಲ್ಲದಂತಾಗಿ ಮಾಡಲು ಕಮ್ಯುನಿಷ್ಟರು ಎಲ್ಲಾ ಸಾಧನಗಳನ್ನು ಉಪಯೋಗಿಸುತ್ತಾರೆ. ಆಕಾಶವಾಣಿ, ಟೆಲಿವಿಜನ್, ಚಲನಚಿತ್ರ, ನಾಟ್ಯಶಾಲೆ, ಮುದ್ರಣ, ಪ್ರಕಾಶಣೆ ಇವೆಲ್ಲವೂ ಈ ಉದ್ದೇಶದಿಂದಲೂ ಉಪಯೋಗಿಸಲ್ಪಟ್ಟಿವೆ. ಇಂಥ ಸರಕಾರದ ಯೋಜನೆಗಳನ್ನು ವಿರೋಧಿಸಲು ಗುಪ್ತ ಸಭೆಗೆ ಅಲ್ಪ ಸ್ವಲ್ಪ ಸಾಧನಗಳಿವೆ. ರಷ್ಯ ದೇಶದಲ್ಲಿದ್ದ ಗುಪ್ತ ಸಭೆಗಳ ಪಾಲಕರಿಗೆ ವಿಶೇಷವಾದ ಸತ್ಯವೇದ ಶಿಕ್ಷಣವಿಲ್ಲ. ಅವರಲ್ಲಿ ಅನೇಕರ ಹತ್ತಿರ ಸಂಪೂರ್ಣವಾದ ಸತ್ಯವೇದವಿಲ್ಲ.

ಅವರಲ್ಲಿ ಅನೇಕರು ನೇಮಿಸಲ್ಪಟ್ಟ ವಿಧಾನವನ್ನು ತಿಳಿಸುತ್ತೇನೆ. ಗುಪ್ತ ಸಭೆಯ ಪಾಲಕನಾದ ಒಬ್ಬ ರಷ್ಯ ಯೌವನಸ್ಥ ಪಾಲಕನನ್ನು ಭೆಟ್ಟಿಯಾದೆವು. ನಾನು ಅವನನ್ನು—"ನಿಮ್ಮ ಮೇಲೆ ಕೈಗಳನ್ನಿಟ್ಟು ಈ ಕೆಲಸಕ್ಕಾಗಿ ನಿಮ್ಮನ್ನು ನೇಮಿಸಿದವರ್ಯಾರು ?" ಎಂದು ಕೇಳಿದೆನು. ಅವನು ನನಗೆ—"ನಮ್ಮ ಮೇಲೆ ಕೈಗಳನ್ನಿಟ್ಟು ನೇಮಿಸಲಿಕ್ಕೆ ಯಾವ ಸಭಾಧ್ಯಕ್ಷನೂ ಇರಲಿಲ್ಲ. ಕಮ್ಯುನಿಷ್ಟರ ಒಪ್ಪಿಗೆಯಿಲ್ಲದೇ ಯಾವನೊಬ್ಬನನ್ನೂ ನೇಮಿಸಲು ಸಂಸ್ಥಾನಿಕ ಸಭೆಯ ಪಾಲಕನು ಸಿದ್ಧನಿರಲಿಲ್ಲ. ಆದಕಾರಣ ಯೌವನಸ್ಥ ಕ್ರೈಸ್ತರಲ್ಲಿ ಹತ್ತು ಜನರಾದ ನಾವು ರಕ್ತಸಾಕ್ಷಿಯಾಗಿ ಸತ್ತಂಥ ಒಬ್ಬ ಸಭಾ ಪಾಲಕನ ಸಮಾಧಿಯ ಹತ್ತಿರ ಹೋದೆವು. ನಮ್ಮಲ್ಲಿ ಇಬ್ಬರು ನಮ್ಮ ಕೈಗಳನ್ನು ಅವನ ಸಮಾಧಿಯ ಸ್ಮಾರಕದ ಮೇಲೆ ಇಟ್ಟೆವು. ಉಳಿದವರು ನಮ್ಮ ಸುತ್ತಮುತ್ತಲೂ ನಿಂತುಕೊಂಡರು. ನಮ್ಮನ್ನು ಸಭೆಯ ಕಾರ್ಯಕ್ಕಾಗಿ ಪ್ರತ್ಯೇಕಿಸಬೇಕೆಂದು ನಾವು ದೇವರಾತ್ಮನಿಗೆ ಪ್ರಾರ್ಥನೆ ಮಾಡಿದೆವು. ಯೇಸುವಿನ ತಿವಿಯಲ್ಪಟ್ಟ ಕೈಗಳಿಂದ ನಾವು ನೇಮಿಸಲ್ಪಟ್ಟೆವೆಂದು ನಮಗೆ ನಿಶ್ಚಯತ್ವವಿದೆ," ಎಂದು ಉತ್ತರ ಕೊಟ್ಟನು. ನನ್ನ ದೃಷ್ಟಿಯಲ್ಲಿ ಈ ಯೌವನಸ್ಥನು ದೇವರಿಂದ ನಿಜವಾಗಿ ನೇಮಿಸಲ್ಪಟ್ಟವನಾಗಿದ್ದಾನೆ. ಇಂಥ ಮನುಷ್ಯರು ಅಲ್ಪಸ್ವಲ್ಪ ಸತ್ಯವೇದದ ಶಿಕ್ಷಣ ಹಾಗೂ ತಿಳುವಳಿಕೆಯುಳ್ಳವರಾಗಿದ್ದಾಗ್ಯೂ ಕ್ರಿಸ್ತನ ಸೇವೆಯನ್ನು ಮುನ್ನಡಿಸುವವರಾಗಿದ್ದಾರೆ.

ಮೊದಲನೆಯ ಶತಮಾನದ ಸಭೆಯ ಸ್ಥಿತಿ ಹಾಗಿತ್ತು. ಕ್ರಿಸ್ತನಿಗಾಗಿ ಲೋಕವನ್ನು ಅಲ್ಲೋಲಕಲ್ಲೋಲವಾಗಿ ಮಾಡಿದವರು ಸತ್ಯವೇದದ ವಿದ್ಯಾಲಯಗಳಲ್ಲಿ ಅಭ್ಯಾಸ ಮಾಡಲಿಲ್ಲ. ಅವರಲ್ಲಿ ಕೆಲವರಿಗೆ ಓದಲಿಕ್ಕೆ ಬರುತ್ತಿರಲಿಲ್ಲ.

ಅವರೆಲ್ಲರ ಹತ್ತಿರ ಸತ್ಯವೇದದ ಪ್ರತಿಗಳಿರಲಿಲ್ಲ. ಆದರೆ ದೇವರು ಅವರಿಗೂ ಅವರ ಮೂಲಕವಾಗಿಯೂ ಮಾತನಾಡಿದನು. ಗುಪ್ತ ಸಭೆಗೆ ದೊಡ್ಡ ಸಭಾಸ್ಥಾನಗಳಿಲ್ಲ. ಅವರು ಗುಪ್ತವಾಗಿ ಅರಣ್ಯದಲ್ಲಿ ಕೂಡಿ ಬರುತ್ತಾರೆ. ಅವರ ಮೇಲೆ ದೇವರುಂಟುಮಾಡಿದ ಆಕಾಶವಿದೆ. ಸ್ವರಪೆಟ್ಟಿಗೆಯ ಧ್ವನಿಯ ಬದಲಾಗಿ ಪಕ್ಷಿಗಳ ಹಾಡುಗಳಿದ್ದವು. ಧೂಪದ ಬದಲಾಗಿ ಹೂವಿನ ಸುವಾಸನೆಯಿತ್ತು. ಸೆರೆಮನೆಯಿಂದ ಹೊಸದಾಗಿ ಬಿಡುಗಡೆ ಹೊಂದಿದ ಉಪದೇಶಕನ ಹಳೆಯ ಬಟ್ಟೆಗಳು ನಿಜವಾಗಿ ಸುಂದರವಾದ ಬಟ್ಟೆಗಳಿಗಿಂತ ಪ್ರಭಾವವುಳ್ಳವುಗಳಾಗಿದ್ದವು. ಮೇಣಬತ್ತಿಗಳ ಪ್ರಕಾಶದ ಬದಲಾಗಿ ಚಂದ್ರ ನಕ್ಷತ್ರಗಳ ಪ್ರಕಾಶವಿತ್ತು. ಈ ಸಭೆಯ ಸೌಂದರ್ಯವನ್ನು ನಾನು ವರ್ಣಿಸಲಾರೆನು.

ಈ ಗುಪ್ತ ಸಭೆಗಳಾದ ನಂತರ ವಿಶ್ವಾಸಿಗಳು ಅನೇಕಾವರ್ತಿ ಹಿಡಿಯಲ್ಪಟ್ಟು ಸೆರೆಮನೆಗೆ ಕಳುಹಿಸಲ್ಪಡುತ್ತಾರೆ. ಆದರೆ ಯಾವ ರೀತಿಯಲ್ಲಿ ವಧುವು ವರನಿಂದ ಹೊಂದಿದ ಒಡವೆಗಳನ್ನು ಸಂತೋಷದಿಂದ ಧರಿಸಿಕೊಳ್ಳುತ್ತಾಳೋ ಅದೇ ರೀತಿಯಲ್ಲಿ ಈ ಕ್ರೈಸ್ತರು ಬೇಡಿಗಳನ್ನು ಹಾಕಿಕೊಳ್ಳುತ್ತಾರೆ. ಸೆರೆಮನೆಯಲ್ಲಿ ವಿಶ್ವಾಸಿಗಳು ಕ್ರಿಸ್ತನೊಂದಿಗೆ ಒಳ್ಳೇ ಅನ್ಯೋನ್ಯತೆಯನ್ನು ಅನುಭವಿಸುತ್ತಾರೆ. ಸತ್ಯವೇದದಲ್ಲಿಯೂ ಗುಪ್ತ ಸಭೆಯಲ್ಲಿಯೂ ಸೆರೆಮನೆಯಲ್ಲಿಯೂ ನಾನು ಸಂತೋಷಭರಿತವಾದ ವಿಶ್ವಾಸಿಗಳನ್ನು ನೋಡಿದ್ದೇನೆ.

ಗುಪ್ತ ಸಭೆಗೆ ಹಿಂಸೆ ಇದ್ದಾಗ್ಯೂ ಅದಕ್ಕೆ ಅನೇಕ ಸ್ನೇಹಿತರಿದ್ದಾರೆ. ಗುಪ್ತ ಪೊಲೀಸರಲ್ಲಿಯೂ ಸರಕಾರದಲ್ಲಿಯೂ ಗುಪ್ತ ವಿಶ್ವಾಸಿಗಳು ಗುಪ್ತ ಸಭೆಯನ್ನು ಸಂರಕ್ಷಿಸುತ್ತಾರೆ. ರಷ್ಯ ವರ್ತಮಾನ ಪತ್ರದಲ್ಲಿ "ಹೊರಗಿನ ಅವಿಶ್ವಾಸಿಗಳನ್ನು" ಕುರಿತು ಬರೆಯಲ್ಪಟ್ಟಿದೆ. ಅವರ ಸಂಖ್ಯೆ ಬೆಳೆಯುತ್ತಿದೆ. ಈ ಜನರು ಕಮ್ಯುನಿಷ್ಟರ ಸರಕಾರದಲ್ಲಿ ಕೆಲಸಮಾಡುವವರಾಗಿದ್ದರೂ ಹೊರಗಿನ ರೀತಿಯಲ್ಲಿ ಮಾತ್ರ ಕಮ್ಯುನಿಷ್ಟರಾಗಿದ್ದಾರೆ. ಒಳಗಿನ ರೀತಿಯಲ್ಲಿ ಅವರು ಗುಪ್ತ ವಿಶ್ವಾಸಿಗಳೂ ಗುಪ್ತ ಸಭೆಯ ಸದಸ್ಯರೂ ಆಗಿದ್ದಾರೆ. ಒಬ್ಬ ಯೌವನಸ್ಥ ಸ್ತ್ರೀಯು ಕಮ್ಯುನಿಷ್ಟ ಪ್ರಚಾರದ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಳು. ಸಭೆಯಾದ ನಂತರ ಆಕೆಯು ಆಕೆಯ ಗಂಡನ ಸಂಗಡ ತಮ್ಮ ಮನೆಯಲ್ಲಿ ಯುವಕರ ಒಂದು ಗುಂಪನ್ನು ಕೂಡಿಸಿ ಗುಪ್ತವಾಗಿ ಸತ್ಯವೇದವನ್ನು ಅಭ್ಯಾಸಿಸುತ್ತಾ ಪ್ರಾರ್ಥಿಸುತ್ತಾ ಇದ್ದರು. ಎಲ್ಲಾ ಕಮ್ಯುನಿಷ್ಟ ದೇಶಗಳಲ್ಲಿ ಇಂಥ ಸಂಗತಿಗಳು ನಡೆಯುತ್ತವೆ. ಈ ಜನರು ಹೊರಗಿನ ಸಭೆಗಳ ಕೂಟಗಳಿಗೆ ಹೋಗುವದಿಲ್ಲ. ಅಲ್ಲಿ ಸುವಾರ್ತೆಯು ಸರಿಯಾಗಿ ಸಾರಲ್ಪಡುವದಿಲ್ಲವೆಂದು ಅವರಿಗೆ ಗೊತ್ತಾಯಿತು. ಅಲ್ಲಿ ಗುಪ್ತ ಪೊಲೀಸರು ಅವರನ್ನು ನೋಡುತ್ತಿದ್ದರು. ಅವರು ತಮ್ಮ ಸ್ವಂತ ಸ್ಥಾನಗಳಲ್ಲಿ ಇದ್ದು ಕ್ರಿಸ್ತನಿಗಾಗಿ ಶಾಂತವಾಗಿಯೂ ಪ್ರಯೋಜನಕಾರಿಯಾಗಿಯೂ ಸಾಕ್ಷಿ ಕೊಡುತ್ತಾರೆ. ಗುಪ್ತ ಸಭೆಯು ಕ್ರಿಸ್ತನಿಗೆ ನಂಬಿಗಸ್ತವಾಗಿದೆ. ಅನೇಕ ಬೇರೆ ಬೇರೆ ಸ್ಥಳಗಳಲ್ಲಿ ಅವರು ಗುಪ್ತವಾಗಿ ಕೂಡಿಬರುತ್ತಾರೆ.

ಕ್ರೈಸ್ತರಲ್ಲಿ ಬೇರೆ ಬೇರೆ ವಿಷಯುಗಳ ಸಂಬಂಧವಾಗಿ ಭಿನ್ನಾಭಿಪ್ರಾಯಗಳಿವೆ. ಆದರೆ ರಷ್ಯ ವಿಶ್ವಾಸಿಗಳು ಇಂಥ ವಿಷಯುಗಳ ಸಂಬಂಧವಾಗಿ ವಾದ ವಿವಾದ ಮಾಡುವದಿಲ್ಲ. ಆದರೆ ದೇವರು ಇದ್ದಾನೆಂದು ನಾಸ್ತಿಕರಿಗೆ ಸಿದ್ಧಾಂತಪಡಿಸುವದರಲ್ಲಿ ಅವರು ಪ್ರವೀಣರಾಗಿದ್ದಾರೆ. ಅವರು ಇಂಥವರಿಗೆ —"ನೀವು ಒಂದು ಊಟಕ್ಕೆ ಕರೆಯಲ್ಪಟ್ಟರೆ ಮತ್ತು ಯಾರಾದರೂ ನಿಮಗೆ—'ಅಡಿಗೆ ಮಾಡುವವರು ಯಾರೂ ಇಲ್ಲ,' ಎಂದು ಹೇಳಿದರೆ ನೀವು ಅದನ್ನು ನಂಬುತ್ತೀರೋ ? ಎಂದಿಗೂ ಇಲ್ಲ. ಆದರೆ ಪ್ರಕೃತಿಯಲ್ಲಿ ನಮಗೆ ಟೊಮ್ಯಾಟೋ, ಮಾವು, ಬಾಳೆಹಣ್ಣು, ಹಾಲು, ಜೇನು ಮುಂತಾದವುಗಳು ಇವೆ. ನರಜಾತಿಗಾಗಿ ಅವುಗಳನ್ನು ತಯಾರಿಸಿದವನು ಯಾರು ? ಪ್ರಕೃತಿಯು ಕುರುಡಾಗಿದೆಯೋ ? ದೇವರಿಲ್ಲವೆಂದು ನೀವು ನಂಬಿದರೆ ಕುರುಡಳಾದ ಪ್ರಕೃತಿಯು ನಮಗಾಗಿ ಬೇಕಾದ ಈ ವಸ್ತುಗಳನ್ನು ಹೇರಳವಾಗಿ ತಯಾರಿಸಿದೂ ಹೇಗೆ ಸಾಧ್ಯ ?" ಎಂಬ ಪ್ರಶ್ನೆಗಳನ್ನು ಹಾಕುತ್ತಾರೆ.

ನಿತ್ಯಜೀವ ಉಂಟೆಂದು ಅವರು ಸಿದ್ಧಾಂತಪಡಿಸುತ್ತಾರೆ. ಒಬ್ಬ ವಿಶ್ವಾಸಿಯು ಈ ರೀತಿಯಲ್ಲಿ ಒಬ್ಬ ನಾಸ್ತಿಕನ ಸಂಗಡ ಮಾತನಾಡಿದನು. "ಒಂದು ವಿಷಯು ಕಲ್ಪಿಸೋಣ. ತಾಯಿಯ ಗರ್ಭದಲ್ಲಿರುವ ಕೂಸಿನ ಸಂಗಡ ಮಾತನಾಡುವದು ಸಾಧ್ಯವಿದ್ದರೆ ಏನಾಗುವದು ? ನೀವು ಈ ಕೂಸಿಗೆ 'ನೀನು ಶಾಶ್ವತವಾಗಿ ಗರ್ಭದಲ್ಲಿ ಇರುವದಿಲ್ಲ. ಅಲ್ಲಿ ಕೆಲವು ತಿಂಗಳು ಜೀವಿಸಿದ ನಂತರ ನಿನ್ನ ನಿಜವಾದ ಜೀವನವು ಪ್ರಾರಂಭವಾಗುವದು,' ಎಂದು ಹೇಳುವಿರಿ. ಆದರೆ ಆ ಕೂಸು ಯಾವ ಉತ್ತರ ಕೊಡುವುದು ? ವಿಶ್ವಾಸಿಗಳಾದ ನಾವು ಸ್ವರ್ಗ ನರಕಗಳ ವಿಷಯುವಾಗಿ ನಿಮಗೆ ಮಾತನಾಡುತ್ತಿರುವಾಗ ನಾಸ್ತಿಕರಾದ ನೀವು ನಮಗೆ ಕೊಡುವ ಉತ್ತರವನ್ನು ಆ ಕೂಸು ಕೊಡುವದು. ಅದೇನೆಂದರೆ —'ಈಗಿನ ಜೀವನವು ನಿಜವಾಗಿದೆ. ಬೇರೆ ಜೀವನದ ವಿಷಯುವಾಗಿ ಮಾತನಾಡುವದು ಹುಚ್ಚುತನವಾಗಿದೆ,' ಎಂಬುದೇ. ಆದರೆ ಯೋಚನೆ ಮಾಡಲು ಆ ಕೂಸಿಗೆ ಸಾಧ್ಯವಾಗಿದ್ದರೆ ಅದು ತನ್ನೊಳಗೆ—"ನನ್ನಲ್ಲಿ ಕೈಗಳು ಬೆಳೆಯುತ್ತಿವೆ. ಅವು ಈಗ ನನಗೆ ಬೇಕಾಗಿಲ್ಲ. ಅವುಗಳನ್ನು ಅಗಲಿಸಲು ನನಗೀಗ ಸಾಧ್ಯವಿಲ್ಲ. ಅವು ಯಾಕೆ ಬೆಳೆಯುತ್ತಿವೆ ? ಮುಂದಿನ ಕಾಲದಲ್ಲಿ ಅವುಗಳನ್ನು ಉಪಯೋಗಿಸುವದು ನನಗೆ ಸಾಧ್ಯವೆಂದೆಣಿಸುತ್ತದೆ. ಆವಾಗ ನನ್ನ ಕೈಗಳಿಂದ ನನಗೆ ಕೆಲಸ ಮಾಡಲು ಸಾಧ್ಯವಾಗುತ್ತದೆ. ನನ್ನಿಂದ ಕಾಲುಗಳು ಬೆಳೆಯುತ್ತಿವೆ. ಆದರೆ ಅವುಗಳನ್ನು ಚೆನ್ನಾಗಿ ಅಲುಗಾಡಿಸುವದು ನನಗಾಗುವದಿಲ್ಲ. ಅವುಗಳು ಯಾಕೆ ಬೆಳೆಯುತ್ತವೆ ? ಬಹುಶಃ ಮುಂದಿನ ಜೀವನದಲ್ಲಿ ನಾನು ನಡೆಯಬೇಕಾಗುವದು. ಇಲ್ಲಿ ನಾನು ಕತ್ತಲೆಯಲ್ಲಿದ್ದೇನೆ. ನನಗೆ ಕಣ್ಣುಗಳಿದ್ದರೂ ಅವುಗಳನ್ನುಪಯೋಗಿಸಲಾರೆ. ನನಗೆ ಕಣ್ಣುಗಳು ಯಾಕೆ ಬಂದವು ? ಬಹುಶಃ ನನ್ನ ಮುಂದಿನ ಜೀವನದಲ್ಲಿ ಪ್ರಕಾಶವುಳ್ಳ ಲೋಕದಲ್ಲಿ ನಾನು ಜೀವಿಸ

ಬೇಕಾಗುವದು,' ಎಂದು ಅಂದುಕೊಳ್ಳಬಹುದು. ಗರ್ಭದಲ್ಲಿದ್ದ ಕೂಸು ಈ ರೀತಿಯಲ್ಲಿ ಯೋಚಿಸಬಲ್ಲದ್ದಾಗಿದ್ದರೆ ತಾಯಿಯ ಗರ್ಭದ ಹೊರಗೆ ತನಗೆ ಮುಂದಿನ ಜೀವನ ಇರುವದೆಂದು ಕಲ್ಪಿಸಿಕೊಳ್ಳಬಲ್ಲದು. ನಮ್ಮ ಸ್ಥಿತಿ ಹಾಗೆಯೇ ಇದೆ. ನಮ್ಮ ಯೌವನದಲ್ಲಿ ನಮಗೆ ಶಕ್ತಿಯಿದ್ದರೂ ಅದನ್ನು ಸರಿಯಾಗಿ ಉಪಯೋಗಿಸುವ ಬುದ್ಧಿ ನಮಗಿಲ್ಲ. ನಮ್ಮ ವೃದ್ಧ ಕಾಲದಲ್ಲಿ ನಮ್ಮ ಬುದ್ಧಿ, ವಿವೇಕ, ಅನುಭವಗಳಿದ್ದರೂ ಸಮಾಧಿಗೆ ಹೋಗುತ್ತೇವೆ. ನಾವು ಉಪಯೋಗಿಸಲಾರದ ಬುದ್ಧಿ, ವಿವೇಕಗಳಲ್ಲಿ ಯಾಕೆ ಬೆಳೆದುಬಂದೆವು ? ಗರ್ಭದಲ್ಲಿದ್ದ ಕೂಸಿನಲ್ಲಿ ಕೈ ಕಾಲು, ಕಣ್ಣುಗಳು ಯಾಕೆ ಬೆಳೆಯುತ್ತವೆ ? ಯಾಕೆಂದರೆ ಮುಂದಿನ ಕಾಲದಲ್ಲಿ ಅವುಗಳ ಉಪಯೋಗವಿರುವದು. ನಮ್ಮ ಸ್ಥಿತಿ ಹಾಗೆಯೇ ಇದೆ. ನಾವು ಅನುಭವ, ಜ್ಞಾನ, ವಿವೇಕಗಳಲ್ಲಿ ಬೆಳೆಯುತ್ತಿರುವಾಗ ಮರಣವಾದ ನಂತರ ಹೆಚ್ಚಾದ ಸೇವೆ ಮಾಡಲು ತಯಾರಿಸಲ್ಪಡುತ್ತೇವೆ," ಎಂದು ಅವರು ವಾದಿಸುತ್ತಾರೆ.

ಯೇಸು ಜೀವಿಸಲಿಲ್ಲವೆಂದು ಕಮ್ಯುನಿಷ್ಟ ಪಕ್ಷದ ಬೋಧನೆಯಾಗಿದೆ; ಆದರೆ ಗುಪ್ತ ಸಭೆಯ ಕೆಲಸದವರು ಅದಕ್ಕೆ ಸರಳವಾದ ಉತ್ತರವನ್ನು ಕೊಡುತ್ತಾರೆ. ಅವರು ಕಮ್ಯುನಿಷ್ಟರಿಗೆ – "ಏನಪ್ಪಾ, ನಿಮ್ಮ ಕೈಯಲ್ಲಿ ಯಾವ ವರ್ತಮಾನ ಪತ್ರವಿದೆ ? ಈ ಹೊತ್ತಿನದೋ ? ಯಾವ ದಿನಾಂಕ ? ಮಾರ್ಚ್ 19, 1970 ? ಅದು ಯಾವ ಶಕ ? ಎಂದಿಗೂ ಇಲ್ಲದ ಮನುಷ್ಯನ ಶಕದಿಂದಲೋ ? ಯೇಸು ಎಂದಿಗೂ ಜೀವಿಸಲಿಲ್ಲವೆಂದು ನೀವು ಹೇಳಿದರೂ ಆತನ ಜನ್ಮದಿಂದ ವರ್ಷಗಳ ಲೆಕ್ಕವನ್ನು ಮಾಡುತ್ತೀರಿ. ಆತನು ಬರುವದಕ್ಕಿಂತ ಮೊದಲು ಜನರು ವರ್ಷಗಳ ಲೆಕ್ಕ ಮಾಡುತ್ತಿದ್ದರು. ಆದರೆ ಆತನು ಬಂದ ನಂತರ, ಆತನ ವೇಳೆಯಿಂದ ಹೊಸ ಪ್ರಾರಂಭವಾದದ್ದನ್ನು ನೋಡಿ ಜನರು ಆತನ ಶಕದಿಂದ ವರ್ಷಗಳನ್ನು ಲೆಕ್ಕಿಸಲು ಪ್ರಾರಂಭಿಸಿದರು. ಯೇಸು ಕಲ್ಪನಾ ಕಥೆಯಲ್ಲವೆಂದು ನಿಮ್ಮ ಸ್ವಂತ ಸುದ್ಧಿಪತ್ರಗಳಿಂದ ಕಂಡುಬರುತ್ತದೆ," ಎಂದು ಹೇಳುತ್ತಾರೆ.

ಪಶ್ಚಿಮ ದೇಶಗಳಲ್ಲಿರುವ ಸಭಾ ಪಾಲಕರು ತಮ್ಮ ಸಭೆಗಳಲ್ಲಿರುವ ಸದಸ್ಯರು ಕ್ರೈಸ್ತತ್ವದ ಮುಖ್ಯವಾದ ಸತ್ಯಗಳನ್ನು ದೃಢವಾಗಿ ಗ್ರಹಿಸಿಕೊಂಡಿದ್ದಾರೆ ಎಂದು ಸಾಧಾರಣವಾಗಿ ನಂಬುತ್ತಾರೆ. ಆದರೆ ಇದು ಸತ್ಯವಲ್ಲ. ಆ ತಪ್ಪಾದ ಅಭಿಪ್ರಾಯದಿಂದ ಅವರು ಕ್ರೈಸ್ತತ್ವದ ಸತ್ಯವನ್ನು ಸಿದ್ಧಾಂತಪಡಿಸಲಿಕ್ಕೆ ವಿಶೇಷ ಗಮನ ಕೊಡುವದಿಲ್ಲ. ಆದರೆ ಕಮ್ಯುನಿಷ್ಟ ದೇಶಗಳಲ್ಲಿ ದೇವರ ಕಡೆಗೆ ತಿರುಗಿಕೊಳ್ಳುವವರಿಗೆ ಸ್ಥಿರವಾದ ಆಧಾರವನ್ನು ಕೊಡಬೇಕೆಂದು ಗುಪ್ತ ಸಭೆಯ ಉಪದೇಶಕರು ತವಕಪಡುತ್ತಾರೆ.

ಗುಪ್ತ ಸಭೆಗೂ ಹೊರಗಿನ ಸಭೆಗೂ ಇರುವ ಸಂಬಂಧವನ್ನು ವಿವರಿಸುವದು ಸುಲಭವಲ್ಲ. ಯಾಕೆಂದರೆ ಅವುಗಳಿಗೆ ಸಂಬಂಧವಿದೆ. ಹೊರಗಿನ

ಸಭೆಯ ಪಾಲಕರಲ್ಲಿ ಅನೇಕರು ಗುಪ್ತ ಸೇವೆಗೆ ಸಹ ಗಮನ ಕೊಡುತ್ತಾರೆ. ಅವರು ಕಮ್ಯುನಿಷ್ಟರ ಅಪ್ಪಣೆಗಳನ್ನು ಮೀರಿ ಕ್ರಿಸ್ತನಿಗಾಗಿ ಸಾಕ್ಷಿ ಕೊಡುವವರಾಗಿದ್ದಾರೆ.

ರಷ್ಯದಲ್ಲಿ ಕಮ್ಯುನಿಷ್ಟ ಕ್ರಾಂತಿಗೆ ಯಶವಾದ ನಂತರ ಹೊರಗಿನ ಸಭೆಯು ಪ್ರಾರಂಭವಾಯಿತು. ಸರ್ಜಿಸ್ ಎಂಬ ಪಾಲಕನು ಇದರ ಮೊದಲನೆಯ ಮುಂದಾಳಾದನು. ಮಾಸ್ಕೋ ಪಟ್ಟಣದಲ್ಲಿ ಅವನು ಎಲ್ಲರ ಮುಂದೆ—"ನಮ್ಮ ಸಭೆಯ ಉದ್ದೇಶವೇನೆಂದರೆ ಕ್ರೈಸ್ತ ಸಭೆಯನ್ನೂ ಎಲ್ಲಾ ಧರ್ಮವನ್ನೂ ಇಲ್ಲದಂತಾಗಿ ಮಾಡುವದೇ," ಎಂದು ಪ್ರಚಾರ ಮಾಡಿದನು. ಎಂಥ ಆಶ್ಚರ್ಯಕರವಾದ ಉಪದೇಶ! ಈ ರೀತಿಯಲ್ಲಿ ಹೊರಗಿನ ಸಭೆಯ ಮುಂದಾಳುಗಳಲ್ಲಿ ಅನೇಕರು ಕಮ್ಯುನಿಷ್ಟರ ಸಂಗಡ ಸಹಕಾರ ಮಾಡಿದ್ದಾರೆ. ಪ್ರತಿಯೊಂದು ಕಮ್ಯುನಿಷ್ಟ ದೇಶಗಳಲ್ಲಿ ಇಂಥ ವ್ಯಕ್ತಿಗಳು ಮುಂದೆ ಬಂದರು.

ಹಂಗೇರಿ ದೇಶದಲ್ಲಿ ಕ್ಯಾಥೋಲಿಕ್‌ರಲ್ಲಿ ಬಾಲೋ ಎಂಬವನು ಕೆಲವು ಪ್ರೊಟೆಸ್ಟಂಟರ ಪಾಲಕರ ಸಹಕಾರದಿಂದ ದೇಶವನ್ನು ಸ್ವಾಧೀನ ಮಾಡಿಕೊಳ್ಳಲು ಕಮ್ಯುನಿಷ್ಟರಿಗೆ ಸಹಾಯ ಮಾಡಿದನು. ರೂಮೆನಿಯಾ ದೇಶದಲ್ಲಿ ಬೂರ್ದಕೆಯನೆಂಬ ಆರ್ಥೊಡೊಕ್ಸ್ ಸಭೆಯ ಪಾಲಕನು ಕಮ್ಯುನಿಷ್ಟರಿಗೆ ಬಹಳ ಸಹಾಯವನ್ನು ನೀಡಿದನು. ಅವನು ಮೊದಲು ನಾಝಿ ಪಕ್ಷದವನಾಗಿದ್ದನು. ರಷ್ಯ ದೇಶದ ಗೃಹ ಮಂತ್ರಿಯಾದ ವಿಶಿಂಗಸ್ಕೀ ಒಂದು ಸಮಯದಲ್ಲಿ—"ಈ ಸರಕಾರವು ಭೂಲೋಕದಲ್ಲಿ ಸ್ವರ್ಗವನ್ನು ಬರಮಾಡುವ ಕಾರಣ ಪರಲೋಕದ ಸ್ವರ್ಗ ನಿಮಗೆ ಇನ್ನು ಮುಂದೆ ಬೇಕಾಗುವದಿಲ್ಲ," ಎಂದು ಹೇಳಿದನು. ಈ ಸಭಾ ಪಾಲಕನೂ ಅವನ ಹತ್ತಿರ ನಿಂತುಕೊಂಡು ನಗುತ್ತಾ ಅದಕ್ಕೆ ಒಪ್ಪಿದನು. ರಷ್ಯ ದೇಶದಲ್ಲಿರುವ ಮುಖ್ಯ ಸಭಾಧ್ಯಕ್ಷನಾದ ನಿಕೊದೇಮ ಗುಪ್ತ ಪೊಲೀಸರಿಗೆ ತಿಳುವಳಿಕೆ ಕೊಡುತ್ತಾನೆಂದು ಪೊಲೀಸರಿಂದ ಬಿಟ್ಟವನು ಸಾಕ್ಷಿಕೊಟ್ಟಿದ್ದಾನೆ.

ಅನೇಕ ಸಭೆಗಳಲ್ಲಿ ಅದೇ ಸ್ಥಿತಿ ಇರುತ್ತದೆ. ಕಮ್ಯುನಿಷ್ಟರು ಸಭೆಗಳ ಮುಂದಾಳುಗಳನ್ನು ನೇಮಿಸುತ್ತಾರೆ. ಆ ಮುಂದಾಳುಗಳು ನಿಜವಾದ ವಿಶ್ವಾಸಿಗಳನ್ನು ನಿರಾಕರಿಸಿ ಅವರ ವಿಷಯವಾಗಿ ಗುಪ್ತ ಪೊಲೀಸರಿಗೆ ತಿಳುವಳಿಕೆ ಕೊಡುತ್ತಾರೆ.

ಕಮ್ಯುನಿಷ್ಟರು ಸಾವಿರಾರು ಸಭಾಸ್ಥಾನಗಳನ್ನು ಮುಚ್ಚಿದ್ದಾರೆ. ಆದರೆ ಅವರು ಎಲ್ಲಾ ಸಭಾಸ್ಥಾನಗಳನ್ನು ಮುಚ್ಚುವದಿಲ್ಲ. ಕೆಲವು ಸಭೆಗಳು ಇನ್ನೂ ನಡೆಯುತ್ತಿವೆ. ಕಮ್ಯುನಿಷ್ಟರು ಅವುಗಳಿಗೆ ಚೆನ್ನಾಗಿ ಲಕ್ಷ್ಯಕೊಡುತ್ತಾರೆ. ಯಾಕೆಂದರೆ ಕ್ರೈಸ್ತರನ್ನೂ ಕ್ರೈಸ್ತತ್ವವನ್ನೂ ಸಂಪೂರ್ಣವಾಗಿ ನಾಶಮಾಡುವದು ಅವರ ಉದ್ದೇಶವಾಗಿದೆ. ಕ್ರೈಸ್ತರನ್ನು ನಡಿಸಬೇಕೆಂದು ಅವರು ಸಭೆಗಳನ್ನು

ಸಾಧನಗಳನ್ನಾಗಿ ಉಪಯೋಗಿಸುತ್ತಾರೆ. ಇದು ಮಾತ್ರವಲ್ಲದೇ ಈ ಸಭೆಗಳಿಂದ ಪರದೇಶಗಳಿಂದ ಬರುವಂಥ ಜನರನ್ನು ಅವರು ಮೋಸಗೊಳಿಸುತ್ತಾರೆ. ಇಂಥ ಸಭೆಯಲ್ಲಿ ಪಾಲಕನಾಗಲು ನನಗೆ ಅನುಕೂಲವಿತ್ತು. ಆದರೆ ಸದಸ್ಯರ ವಿಷಯವಾಗಿ ಗುಪ್ತ ಪೊಲೀಸರಿಗೆ ತಿಳುವಳಿಕೆ ಕೊಡಲು ನಾಸು ಮುಂಚಿತವಾಗಿ ಒಪ್ಪಬೇಕೆಂಬುದನ್ನು ನಾನು ತಿಳಿದುಕೊಂಡೆನು. ಇಂಥ ಸ್ಥಿತಿಯನ್ನು ಗ್ರಹಿಸಿಕೊಳ್ಳುವದು ಕಠಿಣವಾಗಿದೆ. ಆದರೆ ಎಲ್ಲಾ ಜನರಿಗೆ ಸುವಾರ್ತೆಯನ್ನು ಸಾರಬೇಕೆಂಬ ಕರ್ತನ ಆಜ್ಞೆಯನ್ನು ನೆರವೇರಿಸಬೇಕೆಂದು ಅಪೇಕ್ಷಿಸುವ ಗುಪ್ತ ಸಭಿಕರು ಈ ರೀತಿಯಲ್ಲಿ ನಾಸ್ತಿಕರಿಗೆ ಆಧೀನರಾಗಿ ಕೆಲಸ ನಡೆಸಲು ಒಪ್ಪಲಾರದೇ ಹೋಗುತ್ತಾರೆ. ಆದಾಗ್ಯೂ ಹೊರಗಿನ ಸಭೆಗಳಲ್ಲಿ ಇನ್ನೂ ಅನೇಕ ವಿಶ್ವಾಸಿಗಳಿದ್ದಾರೆ. ಅವರು ತಮ್ಮ ಮುಂದಾಳುಗಳ ಮಾದರಿಯನ್ನು ಅನುಸರಿಸುವದಿಲ್ಲ. ಪಶ್ಚಿಮ ದೇಶಗಳಲ್ಲಿರುವ ಅನೇಕ ಸಭೆಗಳಲ್ಲಿ ಅದೇ ಸ್ಥಿತಿ ಕಂಡುಬರುತ್ತದೆ. ಕೆಲವರು ಮುಂದಾಳುಗಳು ನಂಬಿಗಸ್ತರಿಲ್ಲದಿದ್ದರೂ ಅನೇಕಾವರ್ತಿ ಸಭೆಗಳಲ್ಲಿರುವವರು ಕರ್ತನಿಗೆ ನಂಬಿಗಸ್ತರಾಗಿದ್ದಾರೆ.

ಆರ್ಥೊಡೊಕ್ಸ್ ಸಭೆಗಳಲ್ಲಿ ಅದೇ ಮಾತುಗಳು ಉಪಯೋಗಿಸಲ್ಪಟ್ಟಿವೆ. ಈ ಮಾತುಗಳಿಂದ ಸಭಿಕರಿಗೆ ಆತ್ಮೀಯ ಆಹಾರ ಸಿಕ್ಕುತ್ತದೆ. ಪ್ರೊಟೆಸ್ಟಂಟರು ತಮ್ಮ ಹಳೆಯ ಸಂಗೀತಗಳನ್ನು ಹಾಡುತ್ತಾರೆ. ಉಪದೇಶಕರು ಕಮ್ಯುನಿಷ್ಟರನ್ನು ಸ್ತುತಿಸುತ್ತಿರುವಾಗಲೂ ಸತ್ಯವೇದದಿಂದ ಕೆಲವು ವಚನಗಳನ್ನು ಉಪಯೋಗಿಸುತ್ತಾರೆ. ಇಂಥ ದ್ರೋಹಿಗಳ ಸಂದೇಶಗಳಿಂದ ಕೆಲವರು ಕ್ರಿಸ್ತನ ಕಡೆಗೆ ತಿರುಗಿಕೊಂಡಿದ್ದಾರೆ. ಆದರೆ ಈ ಉಪದೇಶಕರು ತಮ್ಮ ವಿಷಯವಾಗಿ ಗುಪ್ತ ಪೊಲೀಸರಿಗೆ ತಿಳಿಸುತ್ತಾರೆಂದು ಗ್ರಹಿಸಿಕೊಂಡು ಅವರು ತಮ್ಮ ನಂಬಿಕೆಯನ್ನು ಅವರಿಂದ ಮುಚ್ಚಿಡಬೇಕಾಗುತ್ತದೆ. ಆದರೆ ದೇವರ ವಾಕ್ಯಕ್ಕೆ ಈ ಆಶ್ಚರ್ಯಕರವಾದ ಬಲವಿದೆ. ಹೊರಗಿನ ಸಭೆಗಳಲ್ಲಿ ಸಹ ಕೆಲವು ಮುಂದಾಳುಗಳು ಕಮ್ಯುನಿಷ್ಟತ್ವಕ್ಕೆ ಒಪ್ಪುವದೇ ಇಲ್ಲ.

ಗುಪ್ತ ಸಭೆಯ ಸದಸ್ಯರು ಸಾಧಾರಣವಾಗಿ ಹೊರಗಿನ ಸಭೆಗಳಲ್ಲಿಯೂ ಭಾಗ ತಕ್ಕೊಳ್ಳುತ್ತಾರೆ. ಕೆಲವರು ಬೇರೆ ಬೇರೆ ಕಾರಣಗಳಿಂದ ತಮ್ಮನ್ನು ಮುಚ್ಚಿಕೊಳ್ಳಬೇಕಾಗುತ್ತದೆ. ಅವರ ಮೂಲಕವಾಗಿ ಕ್ರೈಸ್ತತ್ವದ ನಿಜವಾದ ಸತ್ಯತೆಗಳು ಪ್ರಕಟವಾಗಿವೆ. ಸಭೆಗಳನ್ನು ಮುಚ್ಚಬೇಕೆಂದು ಪ್ರಯತ್ನಿಸುತ್ತಿರುವ ಗುಪ್ತ ಪೊಲೀಸರಿಗೆ ಅನೇಕ ವೇಳೆ ಕಷ್ಟಬರುತ್ತದೆ. ಕೆಲವು ಕಮ್ಯುನಿಷ್ಟರು ಕ್ರೈಸ್ತತ್ವವನ್ನು ಇಲ್ಲದಂತಾಗಿ ಮಾಡುವ ಪ್ರಯತ್ನದಿಂದ ಸ್ವತಃ ಪ್ರಾಣವನ್ನು ಕೊಟ್ಟಿದ್ದಾರೆ.

ಆದರೆ ಹೊರಗಿನ ಸಭೆಗಳ ಸಂಖ್ಯೆ ಕಡಿಮೆಯಾಗುತ್ತಾ ಆಗುತ್ತಾ ಇದೆ. ರಷ್ಯ ದೇಶದಲ್ಲಿ ಕೇವಲ ಐದಾರು ಸಾವಿರ ಸಭಾ ಸ್ಥಾನಗಳು ಈಗ ತೆಗೆಯಲ್ಪ

ಟ್ಟಿವೆ. ಅಮೆರಿಕ ದೇಶದ ಜನಸಂಖ್ಯೆ ರಷ್ಯದ ಜನಸಂಖ್ಯೆ ಒಂದೇ ಇದ್ದರೆ ಅಲ್ಲಿ ಮೂರು ಲಕ್ಷ ಸಭಾಸ್ಥಾನಗಳಿವೆ. ಅನೇಕಾವರ್ತಿ ತೆರೆಯಲ್ಪಟ್ಟ ಸಭಾಸ್ಥಾನಗಳು ಒಂದೇ ಸಣ್ಣ ಕೋಣೆಯಾಗಿವೆ. ಮಾಸ್ಕೋ ಪಟ್ಟಣಕ್ಕೆ ಹೋಗುವ ಪರದೇಶಿಯರು ಜನರಿಂದ ತುಂಬಿದ ಸಭಾಸ್ಥಾನವನ್ನು ನೋಡಿ ಸಂತೋಷ ಪಡುತ್ತಾರೆ. ರಷ್ಯ ದೇಶದಲ್ಲಿ ಧಾರ್ಮಿಕ ಸ್ವಾತಂತ್ರ್ಯವಿದೆಯೆಂದು ಅವರು ಯೋಚಿಸುತ್ತಾರೆ. ಆದರೆ ಮಾಸ್ಕೋ ಪಟ್ಟಣದಲ್ಲಿ ಎಪ್ಪತ್ತು ಲಕ್ಷ ಜನರು ಜೀವಿಸುತ್ತಾರೆ. ಈ ಎಲ್ಲಾ ಜನರಿಗೋಸ್ಕರ ಕೇವಲ ಒಂದೇ ಪ್ರೊಟೆಸ್ಟಂಟ ಸಭಾಸ್ಥಾನವಿದೆ. ಇಂಥ ಸಭೆಗಳಿಗೆ ಹೋಗಲಿಕ್ಕೆ ಹೆಚ್ಚುಮಂದಿಗೆ ಅಸಾಧ್ಯವಾಗಿದೆ. ಅವರಿಗೆ ಸುವಾರ್ತೆಯನ್ನು ಸಾರಲು ನಾವು ಗುಪ್ತವಾದ ವಿಧಾನಗಳನ್ನು ಉಪಯೋಗಿಸಲೇ ಬೇಕು. ಕಮ್ಯುನಿಷ್ಟತ್ವವು ಹೆಚ್ಚೆಚ್ಚಾಗಿ ಹಬ್ಬುವಾಗ ಕ್ರೈಸ್ತ ಸೇವೆಯು ಹೆಚ್ಚೆಚ್ಚಾಗಿ ಗುಪ್ತವಾಗಿ ನಡೆಯಬೇಕಾಗುತ್ತದೆ.

## ನಾಸ್ತಿಕರ ಸಾಹಿತ್ಯದಿಂದ ಕ್ರೈಸ್ತ ಸಭೆಯ ಪೋಷಣೆ

ಧರ್ಮ ವಿರೋಧಿಗಳು ಸಹ ಕೂಟಗಳನ್ನು ನಡಿಸುತ್ತಾರೆ. ಆದರೆ ಗುಪ್ತ ಸಭಿಕರು ನಾಸ್ತಿಕರ ಸಭೆಗಳನ್ನೂ ಸಾಹಿತ್ಯಗಳನ್ನೂ ಉಪಯೋಗಿಸುತ್ತಾರೆ.

ಪ್ರವಾದಿಯಾದ ಎಲೀಯನು ಕಾಗೆಗಳಿಂದ ಪೋಷಿಸಲ್ಪಟ್ಟನು. ಇಬ್ರಿಯರಿಗೆ ಕಾಗೆಯು ಅಶುದ್ಧಪಕ್ಷಿಯಾಗಿದೆ. ಕಮ್ಯುನಿಷ್ಟರು ಸತ್ಯವೇದದ ವಚನಗಳನ್ನು ಅಪಹಾಸ್ಯಮಾಡಲು ವಿವೇಕವುಳ್ಳವರೂ ಉತ್ತೇಜಿತರೂ ಆಗಿದ್ದಾರೆ. ಅವರು "ನಗಿಸುವ ಸತ್ಯವೇದ" ಹಾಗೂ "ವಿಶ್ವಾಸಿಗಳ ಮತ್ತು ಅವಿಶ್ವಾಸಿಗಳ ಸತ್ಯವೇದ" ಎಂಬ ಪುಸ್ತಕಗಳನ್ನು ಪ್ರಕಟಿಸಿದರು. ಸತ್ಯವೇದದ ವಚನಗಳು ಹುಚ್ಚುವಾದವುಗಳೆಂದು ತೋರ್ಪಡಿಸಬೇಕೆಂದು ಈ ಪುಸ್ತಕಗಳ ಲೇಖಕರು ಪ್ರಯತ್ನಿಸಿದರು. ಆದರೆ ಇದನ್ನು ಮಾಡುತ್ತಿರುವಾಗ ಅವರು ಅನೇಕ 'ವಚನ' ಗಳನ್ನು ಮುದ್ರಿಸಿದರು. ನಮಗೆ ಅತ್ಯಾನಂದವಾಯಿತು. ಅವರ ವಿವರಣೆಯಲ್ಲಿ ನಿಜವಾದ ಅರ್ಥವಿರಲಿಲ್ಲ. ಆದರೆ ಸತ್ಯವೇದದ ವಚನಗಳು ಅತಿ ಸುಂದರವಾಗಿದ್ದವು. ಕಮ್ಯುನಿಷ್ಟರು ಅವುಗಳನ್ನು ಪ್ರಕಟಿಸಿದರೂ ಅವು ಇನ್ನೂ ಸತ್ಯವಾಗಿವೆ. ಕಮ್ಯುನಿಷ್ಟ ಪ್ರಕಾಶಕರು ಈ ಪುಸ್ತಕಗಳ ವಿಷಯವಾಗಿ ಅನೇಕ ಪತ್ರಗಳನ್ನು ಹೊಂದಿದರು. "ನೀವು ಈ ಪುಸ್ತಕಗಳ ಹೆಚ್ಚಿನ ಪ್ರತಿಗಳನ್ನು ಪ್ರಕಟಿಸಬೇಕು," ಎಂದು ಈ ಪತ್ರಗಳಲ್ಲಿ ಬರೆಯಲ್ಪಟ್ಟಿದ್ದವು. ಆದರೆ ಈ ಪತ್ರಗಳು ಗುಪ್ತ ಸಭಿಕರಿಂದ ಬಂದವೆಂದು ಅವರಿಗೆ ಗೊತ್ತಿರಲಿಲ್ಲ. ಯಾಕೆಂದರೆ ಬೇರೆ ರೀತಿಯಲ್ಲಿ ಸತ್ಯವೇದ ಪ್ರತಿಗಳು ಸಿಕ್ಕುವದು ಅವರಿಗೆ ಸಾಧ್ಯವಿರಲಿಲ್ಲ.

ನಾಸ್ತಿಕರ ಸಭೆಗಳಲ್ಲಿ ಸಹ ನಾವು ನಮ್ಮ ಅನುಕೂಲತೆಗಳನ್ನು ಉಪಯೋಗಿಸುತ್ತಿದ್ದೆವು. ಯೇಸು ಕೇವಲ ಗಾರುಡಿಗನಾಗಿದ್ದಾನೆಂದು ತೋರ್ಪಡಿ

ಸಲು ಒಬ್ಬ ಕಮ್ಯುನಿಷ್ಟ ಪ್ರೊಫೆಸರನು ಭಾಷಣಮಾಡಿದನು. ಅವನ ಮುಂದೆ ನೀರಿನಿಂದ ತುಂಬಿದ ಪಾತ್ರೆಯಿತ್ತು. ಅವನು ಅದರಲ್ಲಿ ಒಂದು ಪುಡಿ ಹಾಕಿದ್ದ ರಿಂದ ಅದು ಕೆಂಪಾಗಿತ್ತು. "ಇದು ಚಮತ್ಕಾರವಲ್ಲವೇ ? ಯೇಸು ತನ್ನ ಅಂಗಿಯ ತೋಳಿನಲ್ಲಿ ಇಂಥ ಪುಡಿಯನ್ನು ಇಟ್ಟುಕೊಂಡಿದ್ದನು. ತಾನು ಆಶ್ಚರ್ಯಕರವಾದ ರೀತಿಯಲ್ಲಿ ನೀರನ್ನು ದ್ರಾಕ್ಷಾರಸವನ್ನಾಗಿ ಮಾಡಿದ್ದೇನೆಂದು ನಟಿಸಿದನು. ಆದರೆ ನಾನು ಯೇಸುವಿಗಿಂತ ದೊಡ್ಡ ಮಹತ್ಕಾರ್ಯವನ್ನು ಮಾಡಬಲ್ಲೆನು. ನಾನು ಈ ದ್ರಾಕ್ಷಾರಸವನ್ನು ತಿರಿಗಿ ನೀರನ್ನಾಗಿ ಮಾಡ ಬಲ್ಲೆನು " ಎಂದು ವಿವರಿಸಿದನು. ಅವನು ಮತ್ತೊಂದು ಪುಡಿಯನ್ನು ಪಾತ್ರೆ ಯಲ್ಲಿ ಹಾಕಿದನು. ದ್ರವವು ತಿರಿಗಿ ನೀರಿನ ಹಾಗೆ ಕಾಣಿಸಿತು. ಅವನು ಮತ್ತೊಂದು ಪುಡಿ ಹಾಕಿದಾಗ ಮತ್ತು ಕೆಂಪಾಗುತ್ತದೆ.

ಒಬ್ಬ ವಿಶ್ವಾಸಿಯು ನಿಂತುಕೊಂಡು—"ಪ್ರೊಫೆಸರ ಸಾಹೇಬರೇ, ನಿಮ್ಮ ಕಾರ್ಯದಿಂದ ನಮಗೆ ಅತ್ಯಾಶ್ಚರ್ಯವಾಯಿತು. ನಾವು ಕೇವಲ ಮತ್ತೊಂದು ಕಾರ್ಯವನ್ನು ಬೇಡಿಕೊಳ್ಳುತ್ತೇವೆ. ದಯಮಾಡಿ ನಿಮ್ಮ ದ್ರಾಕ್ಷಾರಸವನ್ನು ಸ್ವಲ್ಪ ಕುಡಿಯಬೇಕು," ಎಂದು ಹೇಳಿದನು.

ಪ್ರೊಫೆಸರನು —"ನಾನು ಇದನ್ನು ಮಾಡಲಾರೆ. ಯಾಕೆಂದರೆ ಆ ಪುಡಿ ವಿಷವಾಗಿತ್ತು," ಎಂದು ಉತ್ತರಿಸಿದನು.

ಪ್ರತ್ಯುತ್ತರವಾಗಿ ಆ ವಿಶ್ವಾಸಿಯು—"ಇದರಿಂದ ನಿಮಗೂ ಯೇಸು ವಿಗೂ ಇರುವ ನಿಜವಾದ ವ್ಯತ್ಯಾಸ ಕಂಡುಬರುತ್ತದೆ. 2000 ವರ್ಷಗಳಿಂದ ಆತನು ತನ್ನ ದ್ರಾಕ್ಷಾರಸದಿಂದ ನಮಗೆ ಸಂತೋಷವನ್ನು ಕೊಟ್ಟಿದ್ದಾನೆ. ಆದರೆ ನೀವು ನಿಮ್ಮ ದ್ರಾಕ್ಷಾರಸದಿಂದ ನಮಗೆ ವಿಷವನ್ನು ಕೊಡುತ್ತೀರಿ," ಎಂದು ಹೇಳಿದನು. ಆ ವಿಶ್ವಾಸಿಯು ಸೆರೆಮನೆಗೆ ಕಳಿಸಲ್ಪಟ್ಟನು. ಆದರೆ ಈ ಸಂಗತಿಯ ವಿಷಯವಾದ ಸಮಾಚಾರವು ಅನೇಕ ಸ್ಥಳಗಳಿಗೆ ಹಬ್ಬಿ ವಿಶ್ವಾಸಿಗಳ ನಂಬಿಕೆ ಯನ್ನು ದೃಢಪಡಿಸಿತು. ನಾವು ದಾವೀದನ ಹಾಗೆ ಅಶಕ್ತರಾಗಿದ್ದೇವೆ. ಆದರೆ ಯಾವ ರೀತಿಯಲ್ಲಿ ಅವನು ದೈತನಾದ ಗೊಲ್ಯಾತನನ್ನು ಸೋಲಿಸಬಲ್ಲವನಾಗಿ ದ್ದನೋ ಅದೇ ರೀತಿಯಲ್ಲಿ ನಾವು ಕಮ್ಯುನಿಷ್ಟತ್ವವನ್ನು ಸೋಲಿಸುವೆವು. ನಮ್ಮ ಕಡೆಗೆ ಸತ್ಯವಿದೆ.

ಮತ್ತೊಂದು ಸಮಯದಲ್ಲಿ ಒಂದು ಕಾರಖಾನೆಯಲ್ಲಿ ಕಮ್ಯುನಿಷ್ಟ ಭಾಷ್ಯ ಗಾರನು ನಾಸ್ತಿಕತ್ವದ ವಿಷಯವಾಗಿ ಭಾಷಣವನ್ನು ಮಾಡುತ್ತಿದ್ದನು. ಎಲ್ಲಾ ಕೆಲಸದವರು ಬರಬೇಕಾಗಿತ್ತು. ಅವರಲ್ಲಿ ಅನೇಕ ವಿಶ್ವಾಸಿಗಳಿದ್ದರು. ದೇವರ ವಿರುದ್ಧವಾಗಿಯೂ ಕ್ರೈಸ್ತ ನಂಬಿಕೆಯ ವಿರುದ್ಧವಾಗಿಯೂ ಅವನು ಹೇಳಿದ ಎಲ್ಲಾ ವಿವಾದಗಳನ್ನು ಅವರು ಶಾಂತವಾಗಿ ಕೇಳುತ್ತಿದ್ದರು. ದೇವರೂ

ಕ್ರಿಸ್ತನೂ ಸ್ವರ್ಗವೂ ಆತ್ಮವೂ ಇಲ್ಲವೆಂದು ಈ ಭಾಷಣಗಾರನು ಸಿದ್ಧಾಂತಪಡಿಸಿದನು. ಮಾನವನು ಕೇವಲ ಭೌತದ್ರವ್ಯವೆಂದು ಅವನು ಹೇಳಿದನು. ಅವನಿಗೆ ಆತ್ಮವಿಲ್ಲ. ಭೌತದ್ರವ್ಯದ ಹೊರತು ಮತ್ತಾವದಕ್ಕೂ ಅಸ್ತಿತ್ವವಿಲ್ಲವೆಂದೂ ಅವನು ಮೇಲಿಂದ ಮೇಲೆ ಹೇಳುತ್ತಿದ್ದನು. ಒಬ್ಬ ವಿಶ್ವಾಸಿಯು ನಿಂತುಕೊಂಡು ಒಂದು ಮಾತನ್ನು ಹೇಳಲು ಅಪ್ಪಣೆ ಬೇಡಿದನು. ಅವನಿಗೆ ಅಪ್ಪಣೆ ಸಿಕ್ಕಿತು. ಅವನು ತನ್ನ ಕುರ್ಚಿಯನ್ನು ಹಿಡಿದು ಕೆಳಗೆ ಒಗೆದನು. ಅವನು ನಿಂತುಕೊಂಡು ಅದರ ಕಡೆಗೆ ನೋಡುತ್ತಿದ್ದ. ಅವನು ಭಾಷ್ಯಗಾರನ ಕಡೆಗೆ ಹೋಗಿ ಅವನ ಮೋರೆಯ ಮೇಲೆ ಹೊಡೆದನು. ಭಾಷಣಗಾರನಿಗೆ ಬಹಳ ಸಿಟ್ಟು ಬಂತು. ಅವನು ಕೆಟ್ಟ ಕೆಟ್ಟ ಮಾತುಗಳನ್ನು ಕೂಗಿ ತನ್ನನ್ನು ಹೊಡೆದವನನ್ನು ಹಿಡಿಯಲು ಆಜ್ಞಾಪಿಸಿದನು. ಅವನು ಅವನನ್ನು—"ನೀನು ಯಾಕೆ ನನ್ನನ್ನು ಹೊಡೆದೆ ? ಇದರ ಕಾರಣವೇನು ?" ಎಂದು ಕೇಳಿದನು. ವಿಶ್ವಾಸಿಯು ಅವನಿಗೆ—"ಪ್ರೊಫೆಸರರೇ, ನೀವು ನಮಗೆ ಸುಳ್ಳನ್ನು ಹೇಳಿದಿರಿ. ಎಲ್ಲವೂ ಭೌತದ್ರವ್ಯವೆಂದು ನೀವು ಹೇಳಿದಿರಿ. ಇದರ ಹೊರತಾಗಿ ಮತ್ತೇನಿಲ್ಲವೆಂದೂ ಹೇಳಿದಿರಿ. ನಾನು ಕುರ್ಚಿಯನ್ನು ಹಿಡಿದು ಕೆಳಗೆ ಒಗೆದೆನು. ಅದು ನಿಜವಾಗಿ ಭೌತದ್ರವ್ಯ. ಅದು ಸಿಟ್ಟಾಗಲಿಲ್ಲ. ಆದರೆ ನಾನು ನಿಮ್ಮನ್ನು ಹೊಡೆದಾಗ ನೀವು ಕುರ್ಚಿಯ ಹಾಗೆ ವರ್ತಿಸಲಿಲ್ಲ. ನೀವು ಕೋಪಗೊಂಡಿರಿ. ಭೌತದ್ರವ್ಯ ಕೋಪಗೊಳ್ಳುವದಿಲ್ಲ. ಆದರೆ ನೀವು ಕೋಪಗೊಂಡಿರಿ. ಹಾಗಾದರೆ ಸ್ನೇಹಿತರೇ, ನೀವು ತಪ್ಪು ಮಾಡಿದಿರಿ. ಮಾನವನು ಭೌತದ್ರವ್ಯಕ್ಕಿಂತ ಹೆಚ್ಚಿನವನಾಗಿದ್ದಾನೆ. ನಮಗೆ ಆತ್ಮ ಸಹ ಇರುತ್ತದೆ," ಎಂದು ಉತ್ತರ ಕೊಟ್ಟನು. ಇಂಥ ರೀತಿಗಳಲ್ಲಿ ಗುಪ್ತ ಸಭೆಯ ವಿಶ್ವಾಸಿಕರು ನಾಸ್ತಿಕರ ವಾದ ವಿವಾದಗಳನ್ನು ವಿರೋಧಿಸುತ್ತಾರೆ.

ನಾನು ಸೆರೆಮನೆಯಲ್ಲಿದ್ದಾಗ ಒಬ್ಬ ಅಧಿಕಾರಿಯು ನನಗೆ ಕಠಿಣವಾದ ರೀತಿಯಲ್ಲಿ ನನ್ನನ್ನು—"ನೀನು ನಿನ್ನ ಹುಚ್ಚು ನಂಬಿಕೆಯನ್ನು ಇನ್ನೂ ಎಷ್ಟು ವೇಳೆ ಕಾಯ್ದುಕೊಳ್ಳುವಿ ?" ಎಂದು ಕೇಳಿದನು. ನಾನು ಅವನಿಗೆ—"ಅನೇಕ ನಾಸ್ತಿಕರು ಸಾಯುತ್ತಿರುವಾಗ ತಮ್ಮ ನಾಸ್ತಿಕತ್ವದ ವಿಷಯವಾಗಿ ಪಶ್ಚಾತ್ತಾಪ ಪಡುವದನ್ನು ನಾನು ನೋಡಿದ್ದೇನೆ. ಅವರು ಕ್ರಿಸ್ತನ ಸಹಾಯವನ್ನು ಬೇಡಿಕೊಂಡಿದ್ದಾರೆ. ಆದರೆ ಒಬ್ಬ ವಿಶ್ವಾಸಿಯು ಸಾಯುತ್ತಿರುವಾಗ ಪಶ್ಚಾತ್ತಾಪ ಪಡುತ್ತಾನೋ ? ತನ್ನ ವಿಶ್ವಾಸದಿಂದ ಬಿಡಿಸಿಕೊಳ್ಳಲು ಇಂಥವರು ಮಾರ್ಕ್ಸ್‌ನಿಗೆ ಅಥವಾ ಲೆನಿನ್ನನಿಗೆ ಮೊರೆ ಇಡುತ್ತಾರೋ ?" ಎಂದು ಉತ್ತರ ಕೊಟ್ಟನು. ಅವನು ನಗಲಿಕ್ಕೆ ಪ್ರಾರಂಭಿಸಿ—"ನೀವು ಜ್ಞಾನವುಳ್ಳ ಉತ್ತರ ಕೊಟ್ಟಿರಿ," ಎಂದು ಹೇಳಿದನು. ನಾನು ಅವನಿಗೆ—"ಒಬ್ಬ ಎಂಜಿನಿಯರನು ರೇಲ್ವೆಗಾಗಿ ಸೇತುವೆಯನ್ನು ಕಟ್ಟಿಸಿದ ನಂತರ ಅದನ್ನು ಪರೀಕ್ಷಿಸಬೇಕಾಗುತ್ತದೆ. ಕೇವಲ ಒಂದು ಬೆಕ್ಕು ಅದರ ಮೇಲಿಂದ ದಾಟಿದರೆ ಸಾಲದು. ಅದರಿಂದ ಸೇತುವೆ

ಸಾಕಷ್ಟು ಗಟ್ಟಿ ಎಂಬುದು ಕಂಡುಬರುವದಿಲ್ಲ. ರೇಲ್ವೆಯೂ ಡಬ್ಬಿಗಳೂ ಹೋಗಲೇ ಬೇಕು. ನಿಮಗೆ ಕಷ್ಟವಿಲ್ಲದ ಸಮಯದಲ್ಲಿ ನಿಮ್ಮ ನಾಸ್ತಿಕತ್ವದಿಂದ ನಿಮಗೆ ಸಂತೃಪ್ತಿ ಸಿಗಬಹುದು. ಆದರೆ ಇದರಿಂದ ಅದು ಸತ್ಯವೆಂದು ಸಿದ್ಧಾಂತ ವಾಗುವದಿಲ್ಲ. ದೊಡ್ಡ ಕಷ್ಟಗಳು ಬಂದಾಗ ಆ ತತ್ವವು ಸಾಲದು," ಎಂದು ಉತ್ತರ ಕೊಟ್ಟು ಲೆನಿನ್‌ನ ಪುಸ್ತಕಗಳಿಂದ ಅವನು ಸ್ವತಃ ಕಷ್ಟಗಳ ಸಮಯ ದಲ್ಲಿ ಪ್ರಾರ್ಥಿಸುತ್ತಿದ್ದನೆಂದು ತೋರ್ಪಡಿಸಿದೆನು.

ನಾವು ಶಾಂತವಾಗಿ ಮುಂದೆ ಬರುವ ಸಂಗತಿಗಳನ್ನು ಕಾಯಬಲ್ಲವರಾಗಿ ದ್ದೇವೆ. ಕಮ್ಯುನಿಷ್ಟರಿಗೆ ಅಸಮಾಧಾನವಿದೆ. ಅವರು ನಾಸ್ತಿಕತ್ವವನ್ನು ಪ್ರಚಾರ ಮಾಡಲು ಮೇಲಿಂದ ಮೇಲೆ ಹೊಸ ಹೊಸ ಪ್ರಯತ್ನಗಳನ್ನು ಮಾಡುತ್ತಾರೆ. ಸಂತ ಆಗಸ್ಟೀನ್ ಸತ್ಯವಾಗಿ ಬರೆದನು—"ದೇವರಲ್ಲಿ ಸಮಾ ಧಾನ ಸಿಕ್ಕುವ ತನಕ ಮಾನವನ ಹೃದಯಕ್ಕೆ ಸಮಾಧಾನವಿಲ್ಲ," ಎಂಬುದೇ.

## ಕಮ್ಯುನಿಷ್ಟರಿಗೆ ರಕ್ಷಣೆ ಸಿಕ್ಕುವದು ಸಾಧ್ಯ

ಗುಪ್ತ ಸಭೆಯು ಸ್ವತಂತ್ರದಿಂದಿರುವ ವಿಶ್ವಾಸಿಗಳ ಸಹಾಯದಿಂದ ಕಮ್ಯುನಿಷ್ಟರ ಹೃದಯಗಳನ್ನು ದೇವರ ಕಡೆಗೆ ತಿರುಗಿಸಬಲ್ಲದು. ಇದರಿಂದ ಜಗತ್ತಿನಲ್ಲಿ ದೊಡ್ಡ ಮಾರ್ಪಾಟವಾಗುವದು. ಯಾಕೆಂದರೆ ಕಮ್ಯುನಿಷ್ಟತ್ವವು ಮಾನವನ ಸ್ವಭಾವಕ್ಕೆ ವಿರುದ್ಧವಾಗಿದೆ. ಎಲುಬುಗಳನ್ನು ತಿನ್ನಲಿಕ್ಕೆ ನಾಯಿಗೆ ಸ್ವಾಭಾವಿಕ ಮನಸ್ಸಿದೆ. ತಾವು ನಂಬಬೇಕಾದ ವಿಷಯಗಳ ವಿರುದ್ಧವಾಗಿಯೂ ತಾವು ನಡೆಯಬೇಕಾದ ರೀತಿಯ ವಿರುದ್ಧವಾಗಿಯೂ ಕಮ್ಯುನಿಷ್ಟರ ಹೃದಯ ಗಳು ಕ್ರಾಂತಿ ಮಾಡುತ್ತವೆ.

ಎಲ್ಲವೂ ಭೌತದ್ರವ್ಯವಾಗಿದೆ ಎಂದು ಕಮ್ಯುನಿಷ್ಟರು ಹೇಳುತ್ತಾರೆ. ನಾವು ಕೇವಲ ಕ್ರಮಪಡಿಸಲ್ಪಟ್ಟ ರಸಾಯನಿಕ ಸಂಗ್ರಹಗಳು ಎಂದು ಅವರು ಬೋಧಿಸುತ್ತಾರೆ. ನಾವು ಸತ್ತ ನಂತರ ತಿರಿಗಿ ಅದೇ ಸ್ಥಿತಿಗೆ ಹೋಗುವ ವೆಂದು ಅವರ ತತ್ವವಾಗಿದೆ. ಇದನ್ನು ಕೇಳಿ ನಾವು ಅವರನ್ನು—"ಹಾಗಾದರೆ ಅನೇಕ ಕಮ್ಯುನಿಷ್ಟರು ತಮ್ಮ ತತ್ವಕ್ಕಾಗಿ ಸಾಯಲು ಏಕೆ ಸಿದ್ಧರಾಗಿದ್ದರು ? ರಸಾಯನಿಕ ಸಂಗ್ರಹಗಳಿಗೆ ತತ್ವಗಳಿವೆಯೋ ? ಅವುಗಳು ಇತರರಿಗಾಗಿ ತಮ್ಮನ್ನು ತ್ಯಾಗಮಾಡುತ್ತವೋ ?" ಎಂದು ಕೇಳುತ್ತಿದ್ದೆವು. ಈ ಪ್ರಶ್ನೆಗಳಿಗೆ ಉತ್ತರ ಕೊಡಲು ಅವರಿಗೆ ಸಾಧ್ಯವಿರಲಿಲ್ಲ.

ಕಮ್ಯುನಿಷ್ಟರು ಕ್ರೂರರಾಗಿದ್ದಾರೆ. ಕಾಡುಮೃಗಗಳ ಹಾಗೆ ಜೀವಿಸು ವದು ಮಾನವ ಸ್ವಭಾವವಲ್ಲ. ನಾಝಿಯ ಮುಂದಾಳುಗಳಲ್ಲಿ ಅನೇಕರು ಈ ಕಾರಣದಿಂದಲೇ ಆತ್ಮಹತ್ಯ ಮಾಡಿಕೊಂಡರು. ಕೆಲವರು ಪಶ್ಚಾತ್ತಾಪ ಪಟ್ಟು ತಮ್ಮ ದುಷ್ಕೃತ್ಯಗಳನ್ನು ಅರಿಕೆ ಮಾಡಿದರು.

ಕಮ್ಯುನಿಷ್ಟ ದೇಶಗಳಲ್ಲಿ ಅನೇಕರು ಮತ್ತರಾಗುತ್ತಾರೆ. ವಿಸ್ತಾರವಾಗಿ ಜೀವಿಸಲಿಕ್ಕೆ ಅವರಿಗೆ ಇಚ್ಛೆಯಿದೆ. ಆದರೆ ಕಮ್ಯುನಿಷ್ಟತ್ವದಿಂದ ಇದು ಸಾಧ್ಯ ವಿಲ್ಲ. ರಷ್ಯದವರು ಸಾಧಾರಣವಾಗಿ ಆಳವಾಗಿ ಯೋಚಿಸಿ ಹೇರಳವಾಗಿ ಕೊಡುವವರಾಗಿದ್ದಾರೆ. ಆದರೆ ಕಮ್ಯುನಿಷ್ಟತ್ವವು ಆಳವಾದದ್ದಲ್ಲ. ಆಳ ವಾದ ಜೀವನವನ್ನು ಹುಡುಕುವವನು ಕಮ್ಯುನಿಷ್ಟತ್ವದಲ್ಲಿ ಅದನ್ನು ಹೊಂದದೇ ಮದ್ಯಪಾನದಲ್ಲಿ ಅದನ್ನು ಹುಡುಕುತ್ತಾನೆ. ಮದ್ಯದಿಂದ ಅವನಿಗೆ ಸ್ವಲ್ಪ ಮಾತ್ರ ಬಿಡುಗಡೆ ಸಿಕ್ಕುತ್ತದೆ. ಸ್ವಲ್ಪ ವೇಳೆ ಮೋಸದಿಂದ ತುಂಬಿದ ತನ್ನ ಕ್ರೂರವಾದ ಜೀವನವನ್ನು ಅವನು ಮರೆತುಬಿಡುತ್ತಾನೆ ಸತ್ಯವನ್ನು ಗ್ರಹಿಸಿ ಕೊಂಡರೆ ಅವನು ಶಾಶ್ವತವಾದ ಬಿಡುಗಡೆಯನ್ನು ಹೊಂದುವನೆಂಬುದು ಅವ ನಿಗೆ ಗೊತ್ತಿಲ್ಲ.

ರಷ್ಯ ಸೈನಿಕರು ರೂಮೆನಿಯಾ ದೇಶದಲ್ಲಿದ್ದಾಗ ನಾವು ಬುಕಾರೆಸ್ಟ ಎಂಬ ಪಟ್ಟಣದಲ್ಲಿದ್ದೆವು. ಮದ್ಯ ಅಂಗಡಿಯಲ್ಲಿ ಪ್ರವೇಶಿಸಲು ನಾನು ವಿರೋಧಿಸಲಾರದ ಪ್ರೇರಣೆಯನ್ನು ಅನುಭವಿಸಿದೆನು. ನನ್ನ ಸಂಗಡ ಬರಲು ನನ್ನ ಹೆಂಡತಿಯನ್ನು ಕರೆದೆನು. ನಾವು ಒಳಗೆ ಹೋದಾಗ ರಷ್ಯ ಸೇನಾಧಿ ಕಾರಿಯೊಬ್ಬನನ್ನು ನೋಡಿದೆವು. ಅವನ ಕೈಯಲ್ಲಿ ಬಂದೂಕವಿತ್ತು. ಅವನು— "ನೀವು ನಮಗೆ ಹೆಚ್ಚಿನ ಮದ್ಯವನ್ನು ಕೊಡದಿದ್ದರೆ ನಾನು ನಿಮ್ಮನ್ನು ಕೊಲ್ಲು ವೆನು," ಎಂದು ಎಲ್ಲರಿಗೂ ಹೇಳುತ್ತಿದ್ದನು. ಅವನು ಮತ್ತನಾಗಿರುವದ ರಿಂದ ಹೆಚ್ಚು ಕೊಡಲು ಅಂಗಡಿಯ ಯಜಮಾನನಿಗೆ ಮನಸ್ಸಿರಲಿಲ್ಲ. ಎಲ್ಲರೂ ಗಾಬರಿಯಾಗಿದ್ದರು. ಯಜಮಾನನ ಗುರುತು ನನಗಿತ್ತು. ನಾನು ಅವನಿಗೆ— "ಈ ಮನುಷ್ಯನಿಗೆ ಮದ್ಯವನ್ನು ಕೊಡಿರಿ. ನಾನು ಅವನ ಸಂಗಡ ಕೂತು ಕೊಂಡು ಶಾಂತಪಡಿಸುತ್ತೇನೆ," ಎಂದು ಹೇಳಿದೆನು. ಒಂದಾದ ಮೇಲೊಂದು ಬಾಟಲಿ ನಮಗೆ ಕೊಡಲ್ಪಟ್ಟವು. ಮೇಜಿನ ಮೇಲೆ ಮೂರು ಗ್ಲಾಸುಗಳಿದ್ದವು. ಸೇನಾಧಿಕಾರಿಯು ಮರ್ಯಾದೆಯಿಂದ 3 ಗ್ಲಾಸುಗಳನ್ನು ತುಂಬಿ ಅವುಗಳಲ್ಲಿರುವ ಎಲ್ಲಾ ಮದ್ಯವನ್ನು ಕುಡಿದನು. ನನ್ನ ಹೆಂಡತಿಯೂ ನಾನೂ ಕುಡಿಯಲಿಲ್ಲ. ಅವನು ಮತ್ತನಾಗಿದ್ದರೂ ಚೆನ್ನಾಗಿ ಯೋಚಿಸಬಲ್ಲವನಾಗಿದ್ದನು. ಯಾಕೆಂದರೆ ಮದ್ಯಪಾನದ ಅಭ್ಯಾಸ ಅವನಿಗಿತ್ತು. ನಾನು ಕ್ರಿಸ್ತನ ವಿಷಯವಾಗಿ ಅವನ ಸಂಗಡ ಮಾತನಾಡಿದೆನು. ಆಶ್ಚರ್ಯಕರವಾದ ರೀತಿಯಲ್ಲಿ ಅವನು ಲಕ್ಷ್ಯ ಕೊಟ್ಟು ಕೇಳುತ್ತಿದ್ದನು.

ಕಡೆಯದಾಗಿ ಅವನು ನನಗೆ—"ನೀನು ಯಾರೆಂದು ನನಗೆ ಹೇಳಿದಿ. ಈಗ ನಾನು ಯಾರೆಂದು ನಿನಗೆ ತಿಳಿಸುತ್ತೇನೆ. ನಾನು ಆರ್ಥೊಡೊಕ್ಸ್ ಸಭೆ ಯಲ್ಲಿ ಒಬ್ಬ ಪಾಲಕನಾಗಿದ್ದೆನು. ಸ್ಟ್ಯಾಲಿನ್‌ನ ಕಾಲದಲ್ಲಿ ದೊಡ್ಡ ಹಿಂಸೆ ಪ್ರಾರಂಭಿಸಿದಾಗ ನಾನು ನಂಬಿಕೆಯನ್ನು ನಿರಾಕರಿಸಿದ ಮೊದಲನೆಯವರಲ್ಲಿ

ಒಬ್ಬನಾಗಿದ್ದೆನು. ನಾನು ಹಳ್ಳಿ ಹಳ್ಳಿಗಳಿಗೆ ಹೋಗಿ ಭಾಷಣ ಮಾಡುತ್ತಿದ್ದೆನು. ನಾನು ಜನರಿಗೆ—'ದೇವರು ಇಲ್ಲ, ನಾನು ಮೋಸಗಾರನಾಗಿದ್ದೆನು. ಉಳಿದ ಸಭಾ ಪಾಲಕರೂ ಮೋಸಗಾರರು,' ಎಂದು ಹೇಳುತ್ತಿದ್ದೆನು. ನನ್ನ ಉತ್ತೇಜನ ವನ್ನು ನೋಡಿ ಕಮ್ಯುನಿಷ್ಟರಿಗೆ ಸಂತೋಷವಾಯಿತು. ನಾನು ಗುಪ್ತ ಪೊಲೀಸ ರಲ್ಲಿ ಅಧಿಕಾರಿಯಾದೆನು. ದೇವರಿಂದ ನನಗೆ ಬಂದಂಥ ಶಿಕ್ಷೆ ಯಾವುದೆಂದರೆ —"ನಾನು ನನ್ನ ಸ್ವಂತ ಕೈಯಿಂದ ವಿಶ್ವಾಸಿಗಳನ್ನು ಹಿಂಸಿಸಿ ಕೊಲ್ಲುತ್ತಿದ್ದೆವು. ನಾನು ಮಾಡಿದ ದುಷ್ಕೃತ್ಯಗಳನ್ನು ಮರೆಯಲು ಈ ಮದ್ಯಪಾನವನ್ನು ಪ್ರಾರಂಭಿಸಿದ್ದೇನೆ. ಆದರೆ ಇದರಿಂದ ಪ್ರಯೋಜನವೇನೂ ಇಲ್ಲ," ಎಂದು ತಿಳಿಸಿದನು.

ಕಮ್ಯುನಿಷ್ಟರಲ್ಲಿ ಅನೇಕರು ಆತ್ಮಹತ್ಯ ಮಾಡಿಕೊಳ್ಳುತ್ತಾರೆ. ಅವರ ಕವಿಗಳಲ್ಲಿ ಕೆಲವರು ಹಾಗೆ ಮಾಡಿದ್ದಾರೆ. ಫಾದೀವ್ ಎಂಬ ಪ್ರಸಿದ್ಧ ಲೇಖಕನು "ಆನಂದ"ವೆಂಬ ಒಂದು ಕಾದಂಬರಿಯನ್ನು ಬರೆದನು. ಕಮ್ಯುನಿಷ್ಟತ್ವಕ್ಕಾಗಿ ಹೋರಾಡುವದರಿಂದ ಆನಂದ ಬರುತ್ತದೆ ಎಂದು ಇದರಲ್ಲಿ ಅವನು ವಿವರಿಸಿದನು. ಆದರೆ ಈ ಕಾದಂಬರಿಯನ್ನು ಮುಗಿಸಿದ ನಂತರ ಅವನು ಸ್ವಂತ ಜೀವನವನ್ನು ಅಂತ್ಯಗೊಳಿಸಿದನು. ಅನೇಕ ಕಮ್ಯುನಿಷ್ಟರ ಮುಂದಾಳುಗಳು ತಮ್ಮ ತತ್ವದಿಂದ ಬಂದಂಥ ನಿಜವಾದ ಪರಿಣಾಮ ನೋಡಿ ಆತ್ಮಹತ್ಯ ಮಾಡಿಕೊಂಡರು.

ಕಮ್ಯುನಿಷ್ಟರಿಗೆ ಸಂತೋಷವಿಲ್ಲ. ಅವರ ಪ್ರಸಿದ್ಧ ಮುಂದಾಳುಗಳಿಗೂ ಆನಂದವಿಲ್ಲ. ಸ್ಟಾಲಿನ್‌ನಿಗೆ ಸಂತೋಷವಿರಲಿಲ್ಲ. ಅವನು ತನ್ನ ಹಳೆಯ ಸಂಗಡಿಗರಲ್ಲಿ ಅನೇಕರನ್ನು ಕೊಲ್ಲಿಸಿದನು. ಯಾರಾದರೂ ತನ್ನನ್ನು ಕೊಲ್ಲಬಹುದೆಂಬ ಅಂಜಿಕೆಯು ಅವನಿಗೆ ಯಾವಾಗಲೂ ಇತ್ತು. ಅವನ ಮನೆಯಲ್ಲಿ 8 ಮಲಗುವ ಕೋಣೆಗಳಿದ್ದವು. ಬ್ಯಾಂಕಿನ ಬೊಕ್ಕಸದ ಕೋಣೆಗಳ ಹಾಗೆ ಪ್ರತಿಯೊಂದು ಕೋಣೆಯು ಭದ್ರವಾಗಿತ್ತು. ಅವನು ಯಾವದೊಂದು ರಾತ್ರಿಯಲ್ಲಿ ಯಾವ ಕೋಣೆಯಲ್ಲಿ ಮಲಗಿದ್ದಾನೆಂಬುದು ಯಾರಿಗೂ ಎಂದಿಗೂ ಗೊತ್ತಾಗುತ್ತಿರಲಿಲ್ಲ. ಅವನು ಊಟ ಮಾಡುವದಕ್ಕಿಂತ ಮೊದಲು ಅಡಿಗೆ ಮಾಡಿದವನು ಅದನ್ನು ಅವನ ಸಮಕ್ಷಮದಲ್ಲಿ ರುಚಿ ನೋಡಬೇಕಾಯಿತು. ಕಮ್ಯುನಿಷ್ಟತ್ವದಿಂದ ಯಾರಿಗೂ ಸಂತೋಷವಿಲ್ಲ. ಅದು ಸೋಲಿಸಲ್ಪಟ್ಟರೆ ಕಮ್ಯುನಿಷ್ಟರಿಂದ ಹಿಂಸಿಸಲ್ಪಟ್ಟವರಿಗೆ ಮಾತ್ರವಲ್ಲದೇ ಕಮ್ಯುನಿಷ್ಟರಿಗೂ ಬಿಡುಗಡೆ ಸಿಕ್ಕುವದು. ಕಮ್ಯುನಿಷ್ಟರಿಗೆ ಕ್ರಿಸ್ತನು ಬೇಕು. ಈ ಕೊರತೆಯನ್ನು ನೀಗಿಸಲು ಗುಪ್ತ ಸಭೆಗೆ ಸಾಧ್ಯವಾಗಿದೆ. ಬೇಕಾದ ಸಹಾಯವನ್ನು ಅದಕ್ಕೆ ಕೊಡೋಣ.

* * * *

ಗುಪ್ತ ಸಭಿಕರು ವಿಶ್ವಾಸವನ್ನು ದೃಢವಾಗಿ ನಂಬುತ್ತಾರೆ. ಒಬ್ಬ ಗುಪ್ತ ಸಭಾ ಪಾಲಕನು ಈ ಸಂಗತಿಯನ್ನು ತಿಳಿಸುತ್ತಾನೆ :—

ರಷ್ಯ ಸೇನಾಧಿಕಾರಿಯು ಹಂಗೇರಿ ದೇಶದಲ್ಲಿದ್ದ ಒಬ್ಬ ಸಭಾ ಪಾಲಕನ ಹತ್ತಿರ ಹೋದನು. ಅವನು ಯೌವನಸ್ಥನಾಗಿ ತಾನು ಜಯಶಾಲಿಗಳಲ್ಲಿ ಒಬ್ಬನಾಗಿದ್ದೇನೆಂದು ಗರ್ವದಿಂದಿದ್ದನು. ಅವನು ಪಾಲಕನಿಗೆ— "ನಿನ್ನನ್ನು ಒಬ್ಬೊಂಟಿಗನಾಗಿ ಸಂದರ್ಶಿಸಲು ನನಗೆ ಇಚ್ಛೆಯಿದೆ," ಎಂದು ಹೇಳಿದನು. ಪಾಲಕನು ಅವನನ್ನು ಕರೆದುಕೊಂಡು ಒಂದು ಸಣ್ಣ ಕೋಣೆಯೊಳಗೆ ಕರೆದುಕೊಂಡು ಬಾಗಿಲನ್ನು ಮುಚ್ಚಿದನು. ಗೋಡೆಯಲ್ಲಿ ಶಿಲುಬೆಯ ಪ್ರತಿಮೆ ಇತ್ತು.

ಸೇನಾಧಿಕಾರಿಯು ಅದರ ಕಡೆಗೆ ಸನ್ನೆ ಮಾಡಿ ಆ ಸಭಾ ಪಾಲಕನಿಗೆ— "ಇದು ಸುಳ್ಳೆಂದು ನಿನಗೆ ಗೊತ್ತಾಯಿತು. ಬಡವರನ್ನು ಮೋಸಗೊಳಿಸಲು ನೀನು ಈ ಕುಯುಕ್ತಿಯನ್ನು ಉಪಯೋಗಿಸುತ್ತೀ. ಇದರಿಂದ ಬಡವರನ್ನು ತಮ್ಮ ದುಃಸ್ಥಿತಿಯಲ್ಲಿ ಕಾಯಲು ಐಶ್ವರ್ಯವಂತರಿಗೆ ಸುಲಭವಾಗಿದೆ. ನಾವು ಒಬ್ಬಂಟಿಗರಾಗಿದ್ದೇವೆ. ಯೇಸು ಕ್ರಿಸ್ತನು ದೇವರ ಕುಮಾರನಾಗಿದ್ದಾನೆಂದು ನೀನು ನಿಜವಾಗಿ ನಂಬುವದಿಲ್ಲವೆಂದು ನನ್ನ ಮುಂದೆ ಒಪ್ಪಿಕೋ," ಎಂದು ಹೇಳಿದನು.

ಸಭಾ ಪಾಲಕನು ನಸುನಕ್ಕು ಅವನಿಗೆ—"ನನ್ನ ಪ್ರಿಯ ಯೌವನಸ್ಥನೇ, ನಾನು ನಿಜವಾಗಿ ಅದನ್ನು ನಂಬುತ್ತೇನೆ. ಇದು ಸತ್ಯವಾಗಿದೆ," ಎಂದು ಉತ್ತರ ಕೊಟ್ಟನು.

ಸೇನಾಧಿಪತಿಯು—"ನೀನು ನನ್ನನ್ನು ಮೋಸಗೊಳಿಸಬೇಡ. ಇದು ಗಂಭೀರವಾದ ವಿಷಯ. ಸುಮ್ಮನೇ ನಗಬೇಡ," ಎಂದು ಹೇಳಿ ತನ್ನ ಬಂದೂಕನ್ನು ತೆಗೆದು ಆ ಸಭಾ ಪಾಲಕನ ಕಡೆಗೆ ಚಾಚಿ—"ನೀನು ಸುಳ್ಳು ಹೇಳಿದೆಯೆಂದು ಒಪ್ಪದಿದ್ದರೆ ನಾನು ನಿನ್ನನ್ನು ಕೊಲ್ಲುವೆನು," ಎಂದು ಹೇಳಿದನು.

ಸಭಾ ಪಾಲಕನು—"ನಾನು ಅದನ್ನು ಒಪ್ಪಲಾರೆನು. ಯಾಕೆಂದರೆ ಇದು ಸತ್ಯವಲ್ಲ. ನಮ್ಮ ಕರ್ತನು ನಿಜವಾಗಿಯೂ ಸತ್ಯವಾಗಿಯೂ ದೇವರ ಕುಮಾರನಾಗಿದ್ದಾನೆ," ಎಂದನು.

ಸೇನಾಧಿಕಾರಿಯು ತನ್ನ ಬಂದೂಕನ್ನು ಕೆಳಗಿಟ್ಟು ದೇವರ ಸೇವಕನನ್ನು ಅಪ್ಪಿಕೊಂಡನು. ಅವನು ಕಣ್ಣೀರು ಸುರಿಸಿದನು. ಅವನು—"ಇದು ನಿಜವಾಗಿ ಸತ್ಯವಾಗಿದೆ. ನಾನು ಸಹ ನಂಬುತ್ತೇನೆ. ಆದರೆ ಈ ವಿಶ್ವಾಸಕ್ಕಾಗಿ ಜನರು ಸಾಯಲು ಸಿದ್ಧರಾಗಿದ್ದಾರೆಂದು ಪ್ರತ್ಯಕ್ಷವಾಗಿ ನೋಡುವ ತನಕ ನಂಬಲಾರದೇ ಹೋದೆನು. ನಾನು ನಿಮಗೆ ಆಭಾರಿಯಾಗಿದ್ದೇನೆ. ನೀವು ನಮ್ಮ

ನಂಬಿಕೆಯನ್ನು ಸ್ಥಿರಪಡಿಸಿದಿರಿ. ನಾನು ಸಹ ಕ್ರಿಸ್ತನಿಗಾಗಿ ಸಾಯಲು ಸಿದ್ಧನಾಗಿದ್ದೇನೆ. ನೀವು ಅದರ ವಿಧಾನವನ್ನು ತೋರಿಸಿದಿರಿ," ಎಂದು ಹೇಳಿದನು.

ಇಂಥ ಬೇರೆ ಸಂಗತಿಗಳೂ ನನಗೆ ಗೊತ್ತು. ರಷ್ಯ ಸೈನ್ಯವು ರೂಮೆನಿಯಾ ದೇಶದಲ್ಲಿ ಸೇರಿದಾಗ ಇಬ್ಬರು ರಷ್ಯ ಸೈನಿಕರು ಬಂದೂಕಗಳನ್ನು ಹಿಡಿದು ಒಂದು ಕ್ರೈಸ್ತ ಸಭಾಸ್ಥಾನದಲ್ಲಿ ಸೇರಿದರು. ಅವರು ಅಲ್ಲಿದ್ದ ಜನರಿಗೆ—"ನಾವು ನಿಮ್ಮ ವಿಶ್ವಾಸವನ್ನು ನಂಬುವದಿಲ್ಲ. ಅದನ್ನು ತ್ಯಜಿಸಿಬಿಡದವರು ಈಗಲೇ ಕೊಲ್ಲಲ್ಪಡುತ್ತಾರೆ. ಅದನ್ನು ತ್ಯಜಿಸುವವರು ಈಗಲೇ ಬಲಗಡೆಗೆ ಹೋಗಬೇಕು," ಎಂದು ಆಜ್ಞಾಪಿಸಿದರು. ಕೆಲವರು ಬಲಗಡೆಗೆ ಹೋದರು. ಸೈನಿಕರು ಅವರಿಗೆ—"ಸಭಾಸ್ಥಾನವನ್ನು ಬಿಟ್ಟು ಮನೆಗೆ ಹೋಗಿರಿ," ಎಂದು ಆಜ್ಞಾಪಿಸಿದರು. ಅವರು ತಮ್ಮ ಜೀವಗಳನ್ನುಳಿಸಲು ಓಡಿ ಹೋದರು. ರಷ್ಯ ಸೈನಿಕರು ಉಳಿದ ವಿಶ್ವಾಸಿಗಳ ಸಂಗಡ ಒಬ್ಬಂಟಿಗರಾಗಿದ್ದಾಗ ಅವರಿಗೆ—"ನಾವೂ ಸಹ ವಿಶ್ವಾಸಿಗಳಾಗಿದ್ದೇವೆ. ಆದರೆ ಸತ್ಯಕ್ಕಾಗಿ ಸಾಯಲಿಕ್ಕೆ ಸಿದ್ಧರಾದವರೊಂದಿಗೆ ಮಾತ್ರ ಅನ್ಯೋನ್ಯತೆಯನ್ನನುಭವಿಸಲು ನಮಗೆ ಇಚ್ಛೆಯಿದೆ," ಎಂದು ಹೇಳಿದರು. ಇಂಥ ಜನರು ಸುವಾರ್ತೆಗಾಗಿ ಮಾತ್ರವಲ್ಲದೇ ಆತ್ಮಿಯ ಸ್ವಾತಂತ್ರ್ಯಕ್ಕಾಗಿಯೂ ಸತ್ಯಕ್ಕಾಗಿಯೂ ಹೋರಾಡುವವರಾಗಿದ್ದಾರೆ.

ಪಶ್ಚಿಮ ದೇಶಗಳ ಕ್ರೈಸ್ತರ ಮನೆಗಳಲ್ಲಿ ಅನೇಕರು ಆಕಾಶವಾಣಿಯ ಮೂಲಕವಾಗಿ ಲೌಕಿಕ ಸಂಗೀತಗಳನ್ನು ಕೇಳುವದರಲ್ಲಿ ಬಹಳ ವೇಳೆಯನ್ನು ಕಳೆಯುತ್ತಾರೆ. ನಮ್ಮ ಮನೆಗಳಲ್ಲಿ ಸಹ ಆಕಾಶವಾಣಿಯಿಂದ ಅಂಥ ಸಂಗೀತಗಳ ಧ್ವನಿಯು ಗಟ್ಟಿಯಾಗಿ ಕೇಳಿಸುತ್ತದೆ. ಯಾಕೆಂದರೆ ಆ ಧ್ವನಿಯು ಆಗುತ್ತಿರುವಾಗ ನಾವು ಗುಪ್ತವಾಗಿ ಸುವಾರ್ತೆಯ ವಿಷಯವಾಗಿಯೂ ನಮ್ಮ ಗುಪ್ತ ಸೇವೆಯ ವಿಷಯವಾಗಿಯೂ ಬೇರೆಯವರು ಕೇಳಲಾರದ ರೀತಿಯಲ್ಲಿ ಮಾತನಾಡಬಹುದು. ನಮ್ಮ ನೆರೆಹೊರೆಯವರು ನಮ್ಮ ಸಂಭಾಷಣೆಯನ್ನು ಕೇಳಿ ಗುಪ್ತ ಪೊಲೀಸರಿಗೆ ತಿಳಿಸಬಾರದೆಂದು ಹೀಗೆ ಮಾಡುವದು ಅಗತ್ಯವಾಗಿದೆ. ಪಶ್ಚಿಮ ದೇಶಗಳಿಂದ ಬಂದಿರುವ ಸ್ಥಿರವಾದ ವಿಶ್ವಾಸಿಗಳನ್ನು ಅವರು ಭೆಟ್ಟಿಯಾಗುವಾಗ ಎಷ್ಟೋ ಸಂತೋಷಪಡುತ್ತಾರೆ. ಈ ಪುಸ್ತಕವನ್ನು ಬರೆದಿರುವ ನಾನು ಪ್ರಸಿದ್ಧ ಮನುಷ್ಯನಲ್ಲ, ಆದರೆ ಮಾತನಾಡಲಾರದ ಜನರಿಗೋಸ್ಕರ ನಾನು ಮಾತನಾಡುವವನಾಗಿದ್ದೇನೆ. ಅವರ ಪ್ರತಿನಿಧಿಗಳು ಕಮ್ಯುನಿಷ್ಟ ದೇಶಗಳಿಂದ ಪಶ್ಚಿಮ ದೇಶಗಳಿಗೆ ಸಾಧಾರಣವಾಗಿ ಬರುವದಿಲ್ಲ. ವಿಶ್ವಾಸಿಗಳಾದ ನಾವು ನಮ್ಮ ನಂಬಿಕೆಯ ವಿಷಯವಾಗಿ ಗಂಭೀರವುಳ್ಳವರಾಗಿರಬೇಕು. ಕಮ್ಯುನಿಷ್ಟ ದೇಶಗಳಲ್ಲಿ ನಂಬಿಗಸ್ತರಾಗಿ ಕ್ರಿಸ್ತನ ನಾಮಕ್ಕಾಗಿ ಹಿಂಸೆಪಡುತ್ತಿರುವ ಗುಪ್ತ ಸಭೆಗಾಗಿ ನೀವು ಪ್ರಾರ್ಥನೆ ಹಾಗೂ ಸಹಾಯ ಮಾಡಬೇಕೆಂದು ನಾನು ಬೇಡಿಕೊಳ್ಳುತ್ತೇನೆ.

* * * *

ನಾವು ಕಮ್ಯುನಿಷ್ಟರನ್ನು ಕ್ರಿಸ್ತನ ಕಡೆಗೆ ಎಳೆಯುವೆವು. ಯಾಕೆಂದರೆ ಮೊದಲನೆಯದಾಗಿ ದೇವರು ನಮ್ಮ ಕಡೆ ಇದ್ದಾನೆ. ಎರಡನೆಯದಾಗಿ ನಮ್ಮ ಸಂದೇಶವೂ ಅವರ ಹೃದಯಗಳ ಆಳವಾದ ಕೊರತೆಗಳನ್ನು ನೀಗಿಸಬಲ್ಲದ್ದಾಗಿದೆ.

ಜರ್ಮನ್ ದೇಶದಲ್ಲಿ ನಾಝಿಯ ಆಳ್ವಿಕೆಯ ಕಾಲದಲ್ಲಿ ಅನೇಕ ಕಮ್ಯುನಿಷ್ಟರು ಸೆರೆಮನೆಯಲ್ಲಿ ಹಾಕಲ್ಪಟ್ಟರು. ಅವರಲ್ಲಿ ಅನೇಕರು ನನಗೆ—"ಕಷ್ಟ ಬಂದಾಗ ನಾವು ಪ್ರಾರ್ಥನೆ ಮಾಡಿದೆವು," ಎಂದು ಒಪ್ಪಿಕೊಂಡರು. ಕಮ್ಯುನಿಷ್ಟ ಅಧಿಕಾರಿಗಳು—"ಯೇಸುವೇ, ಯೇಸುವೇ," ಎಂದು ಪ್ರಾರ್ಥಿಸುತ್ತಾ ಸಾಯುವದನ್ನು ನಾನು ಕಣ್ಣಾರೆ ನೋಡಿದ್ದೇನೆ.

ನಮ್ಮ ಜನರ ಎಲ್ಲಾ ಸಂಸ್ಕೃತಿಯ ಪ್ರಭಾವವು ನಮ್ಮ ಕಡೆಗಿರುವದರಿಂದ ನಾವು ಜಯ ಹೊಂದುವೆವು. ಆಧುನಿಕ ಕಾಲದ ಕ್ರೈಸ್ತರ ಲೇಖನಗಳು ಹಬ್ಬಬಾರದೆಂದು ಕಮ್ಯುನಿಷ್ಟರು ನೇಮ ಮಾಡಿದ್ದಾರೆ. ಆದರೆ ಪೂರ್ವಕಾಲದ ಲೇಖಕರ ಪುಸ್ತಕಗಳಲ್ಲಿ ಕ್ರಿಸ್ತನ ಪ್ರಕಾಶವು ಕಂಡು ಬರುತ್ತದೆ. ರೂಮೆನಿಯಾ ದೇಶದ ಅತಿ ಪ್ರಸಿದ್ಧ ಲೇಖಕನಾದ ಸದೋವೇನು—"ಸಂತರ ಜೀವಮಾನಗಳು" ಎಂಬ ಒಂದು ಪುಸ್ತಕವನ್ನು ಬರೆದನು. ಕಮ್ಯುನಿಷ್ಟರು ಅದೇ ಪುಸ್ತಕವನ್ನು ತಿರಿಗಿ ಮುದ್ರಿಸಿ ಅದಕ್ಕೆ—"ಸಂತರ ಪುರಾಣಗಳು" ಎಂಬ ಹೆಸರನ್ನು ಕೊಟ್ಟಿದ್ದಾರೆ. ಆದರೆ ಸಂತರ ಮಾದರಿಗಳಿಂದ ಕ್ರಿಸ್ತನ ವಿಷಯವಾಗಿ ಜನರಿಗೆ ಉತ್ತೇಜನೆ ಬರುತ್ತದೆ. ಅದೇ ರೀತಿಯಲ್ಲಿ ಪೂರ್ವ ಕಾಲದ ಚಿತ್ರಗಾರರಾದ ರೆಫೇಲ್, ಮೈಕಲೆಂಜಲೋ ಮುಂತಾದವರು ಬರೆದ ಚಿತ್ರಗಳಲ್ಲಿ ಕ್ರಿಸ್ತನು ಕಾಣಿಸಿಕೊಳ್ಳುತ್ತಾನೆ.

ನಾನು ಕ್ರಿಸ್ತನ ವಿಷಯವಾಗಿ ಒಬ್ಬ ಕಮ್ಯುನಿಷ್ಟನ ಸಂಗಡ ಮಾತನಾಡುತ್ತಿರುವಾಗ ಅವನ ಸ್ವಂತ ಹೃದಯದಲ್ಲಿರುವ ಆತ್ಮಿಯ ಕೊರತೆಗಳು ನನಗೆ ಸಹಾಯ ಮಾಡುತ್ತವೆ. ಒಂದು ವೇಳೆ ನನ್ನ ವಾದ ವಿವಾದಗಳಿಗೆ ಉತ್ತರಗಳನ್ನು ಕೊಡುವದು ಅವನಿಗೆ ಕಠಿಣವಿರಲಿಕ್ಕಿಲ್ಲ. ಆದರೆ ಅವನ ಸ್ವಂತ ಮನಸ್ಸಾಕ್ಷಿಯ ಧ್ವನಿಯನ್ನು ಶಾಂತಪಡಿಸುವದು ಅವನಿಗೆ ಬಹಳ ಕಠಿಣವಾಗುವದು.

ಕಮ್ಯುನಿಷ್ಟತ್ವದ ಪ್ರೊಫೆಸರರ ಗುರುತು ನನಗೆ ಇತ್ತು. ನಾಸ್ತಿಕತ್ವದ ವಿಷಯವಾಗಿ ಭಾಷಣವನ್ನು ಮಾಡುವದಕ್ಕಿಂತ ಮೊದಲು ಅವರು ದೇವರ ಸಹಾಯಕ್ಕಾಗಿ ಆತನಿಗೆ ಪ್ರಾರ್ಥನೆ ಮಾಡಿದರು. ಕಮ್ಯುನಿಷ್ಟರು ಗುಪ್ತ ಸಭೆಗಳ ಕೂಟಗಳಿಗೆ ಹೋಗುತ್ತಾರೆ. ಇದು ಗುಪ್ತ ಪೊಲೀಸರಿಗೆ ಗೊತ್ತಾದಾಗ ಅವರು—"ನಾವು ಅಂಥ ಸಭೆಗೆ ಹೋಗಲಿಲ್ಲ," ಎಂದು ಸುಳ್ಳಾಡುತ್ತಾರೆ. ಅನಂತರ ತಾವು ಸತ್ಯಕ್ಕಾಗಿ ನಿಂತುಕೊಳ್ಳಲು ಧೈರ್ಯವಿಲ್ಲದವರಾಗಿ

ರುವದರಿಂದ ಕಣ್ಣೀರು ಸುರಿಸಿದರು. ಕಮ್ಯುನಿಷ್ಟರು ನಮ್ಮ ಹಾಗೆ ಮನುಷ್ಯರಾಗಿದ್ದಾರೆ. ಆದರೆ ಒಬ್ಬ ವ್ಯಕ್ತಿಯು ಕ್ರಿಸ್ತನಲ್ಲಿ ನಂಬಿಕೆಯಿಟ್ಟ ನಂತರ ಆ ನಂಬಿಕೆ ಬೆಳೆಯುತ್ತಾ ಬರುತ್ತದೆ. ಆ ನಂಬಿಕೆಗೆ ವಿಷಯ ಸಿಕ್ಕೇ ಸಿಕ್ಕುವದು. ಗುಪ್ತ ಸಭೆಯಲ್ಲಿರುವವರಾದ ನಾವು ಇದನ್ನು ಅನೇಕಾವರ್ತಿ ನೋಡಿದ್ದೇವೆ.

ಕ್ರಿಸ್ತನು ಕಮ್ಯುನಿಷ್ಟರನ್ನು ಪ್ರೀತಿಸುತ್ತಾನೆ. ಅವರನ್ನು ಕ್ರಿಸ್ತನ ಕಡೆಗೆ ಎಳೆಯುವದು ಸಾಧ್ಯವೂ ಅಗತ್ಯವೂ ಆಗಿದೆ. ಕಮ್ಯುನಿಷ್ಟ ದೇಶಗಳಲ್ಲಿರುವ ಗುಪ್ತ ಸಭಿಕರು ಅವರನ್ನು ಕ್ರಿಸ್ತನ ಕಡೆಗೆ ಎಳೆಯುಬಲ್ಲರು. ಎಲ್ಲಾ ಜನರಿಗೆ ರಕ್ಷಣೆ ಸಿಕ್ಕುವ ಹಾಗೆ ನಮ್ಮ ಕರ್ತನ ಹೃದಯದ ಅಪೇಕ್ಷೆಯಾಗಿದೆ. ಇದನ್ನು ಪೂರೈಸಬೇಕೆಂದು ಅಪೇಕ್ಷಿಸುವವರೆಲ್ಲರೂ ಗುಪ್ತ ಸಭೆಯ ಸೇವೆಯಲ್ಲಿ ಸಹಾಯ ನೀಡುವ ಹಂಗಿನಲ್ಲಿದ್ದಾರೆ. ಯೇಸು ಸ್ವಾಮಿ ತನ್ನ ಶಿಷ್ಯರಿಗೆ—"ನೀವು ಎಲ್ಲಾ ಜನರನ್ನು ಶಿಷ್ಯರನ್ನಾಗಿ ಮಾಡಿರಿ," ಎಂದು ಆಜ್ಞಾಪಿಸಿದನು. ಕಮ್ಯುನಿಷ್ಟ ದೇಶಗಳನ್ನು ಬಿಟ್ಟು ಎಲ್ಲರಿಗೂ ಸುವಾರ್ತೆಯನ್ನು ಸಾರಬೇಕೆಂದು ಆತನು ಹೇಳಲಿಲ್ಲ. ಈಗ ಲೋಕದಲ್ಲಿ ಮೂರು ಜನರಲ್ಲಿ ಒಬ್ಬನು ಕಮ್ಯುನಿಷ್ಟ ಆಳ್ವಿಕೆಯ ಕೆಳಗಿದ್ದಾನೆ. ಅವರಿಗೆ ದೇವರ ಪ್ರೀತಿಯ ಸುವಾರ್ತೆಯನ್ನು ಸಾರುವದು ನಮ್ಮ ಕರ್ತವ್ಯವಾಗಿದೆ. ಗುಪ್ತ ಸಭೆಯ ಸಂಗಡ ಕಾರ್ಯ ಸಾಧಿಸುತ್ತಿರುವಾಗ ನಾವು ಅಂಥವರಿಗೆ ಸುವಾರ್ತೆಯನ್ನು ಸಾರುವದು ಸಾಧ್ಯವಾದಿದೆ.

## ಗುಪ್ತ ಸಭೆಯಲ್ಲಿರುವ ಮೂರು ಗುಂಪುಗಳು :

### ೧. ಕಮ್ಯುನಿಷ್ಟರು ಅವರ ಸ್ಥಳದಿಂದ ಕಡಿಮೆ ಮಾಡಿದ ಸಭಾ ಪಾಲಕರು ಹಾಗೂ ಸಭಾ ಸೇವಕರು.

ಕಮ್ಯುನಿಷ್ಟ ದೇಶಗಳಲ್ಲಿರುವ ಗುಪ್ತ ಸಭೆಯಲ್ಲಿ ಮೂರು ಗುಂಪುಗಳಿವೆ. ಮೊದಲನೆಯ ಗುಂಪು ಯಾವುದೆಂದರೆ—ಸುವಾರ್ತೆಯ ಸತ್ಯಕ್ಕಾಗಿ ತಮ್ಮ ಸಭೆಗಳಿಂದ ತೆಗೆಯಲ್ಪಟ್ಟ ಸಭಾಪಾಲಕರು ಹಾಗೂ ಸಭಾ ಸೇವಕರು. ಅವರಲ್ಲಿ ಅನೇಕರು ಸೆರೆಮನೆಯಲ್ಲಿ ಹಾಕಲ್ಪಟ್ಟು ತಮ್ಮ ವಿಶ್ವಾಸಕ್ಕಾಗಿ ಹಿಂಸೆಯನ್ನು ತಾಳಿದ್ದಾರೆ. ಸೆರೆಮನೆಯಿಂದ ಬಿಡುಗಡೆ ಹೊಂದಿದ ಕೂಡಲೇ ಅವರು ಗುಪ್ತವಾಗಿ ಗುಪ್ತ ಸಭೆಯಲ್ಲಿ ತಮ್ಮ ಕೆಲಸವನ್ನು ತಿರಿಗಿ ಪ್ರಾರಂಭಿಸಿದ್ದಾರೆ. ಅವರ ಸಭಾ ಸ್ಥಾನಗಳು ಕಮ್ಯುನಿಷ್ಟರಿಂದ ಮುಚ್ಚಲ್ಪಟ್ಟರೂ ಅಥವಾ ಅವರ ಬದಲಾಗಿ ಕಮ್ಯುನಿಷ್ಟರಿಗೆ ಸರಿಬೀಳುವ ಬೇರೆ ಪಾಲಕರು ನೇಮಿಸಲ್ಪಟ್ಟರೂ ಅವರು ಅನೇಕ ಸ್ಥಳಗಳಲ್ಲಿ ವಿಶ್ವಾಸಿಗಳನ್ನು ಕೂಡಿಸಿ ಅವರಿಗೆ ದೇವರ ವಾಕ್ಯವನ್ನು ಬೋಧಿಸುತ್ತಾರೆ. ಈ ಸಾಕ್ಷಿಗಳು ತಮ್ಮ ಸೇವೆಯನ್ನು ನಿಲ್ಲಿಸಲಾರದೇ ಹೋದದ್ದರಿಂದ ತಿರಿಗಿ ಹಿಂಸೆಗೂ ಬಂಧನಕ್ಕೂ ಗುರಿಯಾಗಿದ್ದಾರೆ.

## ೨. ಸಾಧಾರಣ ವಿಶ್ವಾಸಿಗಳು

ಇವರು ಗುಪ್ತ ಸಭೆಯಲ್ಲಿದ್ದ ಎರಡನೆಯ ಭಾಗ. ರಷ್ಯ ದೇಶದಲ್ಲಿ ನಾಮಿಕ ಕ್ರೈಸ್ತರು ಇಲ್ಲವೇ ಇಲ್ಲ. ಯಾಕೆಂದರೆ ಕ್ರಿಸ್ತನ ಹೆಸರನ್ನು ತಕ್ಕೊಳ್ಳು ವದರಿಂದ ಜನರು ಅವಮಾನಕ್ಕೂ ಹಿಂಸೆಗೂ ಗುರಿಯಾಗಿದ್ದಾರೆ. ಆದರೆ ಹಿಂಸಿಸಲ್ಪಟ್ಟ ಈ ವಿಶ್ವಾಸಿಗಳು ಕ್ರಿಸ್ತನಿಗಾಗಿ ಸಾಕ್ಷಿ ಕೊಡುತ್ತಾ ಆತನ ಕಡೆಗೆ ಆತ್ಮಗಳನ್ನು ತರುವವರಾಗಿದ್ದಾರೆ. ಕಮ್ಯುನಿಷ್ಟರ ಹಿಂಸೆಯಿಂದ ಕ್ರೈಸ್ತತ್ವವು ಇಲ್ಲದಂತಾಗಿ ಹೋಗಲಿಲ್ಲ. ಅದರ ಬದಲಾಗಿ ಈ ದೇಶಗಳಲ್ಲಿ ವಿಶ್ವಾಸಿಗಳು ಗಂಭೀರವಾದ ರೀತಿಯಲ್ಲಿ ಕ್ರಿಸ್ತನಿಗಾಗಿ ಜೀವಿಸುವವರಾಗಿದ್ದಾರೆ. ಅಂಥ ವಿಶ್ವಾಸಿಗಳು ಸ್ವಾತಂತ್ರವುಳ್ಳ ದೇಶಗಳಲ್ಲಿ ಹೆಚ್ಚಾಗಿ ಕಾಣಿಸುವದಿಲ್ಲ. ತಾವು ಭೆಟ್ಟಿಯಾಗುವ ಪ್ರತಿಯೊಬ್ಬರನ್ನು ಕ್ರಿಸ್ತನ ಕಡೆಗೆ ಎಳೆಯಬೇಕೆಂದು ಅಪೇಕ್ಷಿ ಸುವವರಾಗಿದ್ದಾರೆ.

"ಕೆಂಪು ತಾರೆ (Red Star)" ಎಂಬ ವರ್ತಮಾನ ಪತ್ರವು ರಷ್ಯ ಸೈನ್ಯ ದಿಂದ ಪ್ರಕಾಶಿಸಲ್ಪಡುತ್ತದೆ. ಇದರಲ್ಲಿ ರಷ್ಯ ಕ್ರೈಸ್ತರ ವಿರುದ್ಧವಾಗಿ— "ಕ್ರಿಸ್ತ ಭಕ್ತರು ಹದ್ದುಗಳ ಹಾಗೆ ಎಲ್ಲರ ಮೇಲೆ ತಮ್ಮ ಉಗುರುಗಳನ್ನು ಇಡಲು ಅಪೇಕ್ಷಿಸುತ್ತಾರೆ," ಎಂದು ಬರೆದಿದೆ. ಆದರೆ ಈ ವಿಶ್ವಾಸಿಗಳು ತಮ್ಮ ಒಳ್ಳೇ ಜೀವಮಾನಗಳಿಂದ ತಮ್ಮ ಜೊತೆ ಗ್ರಾಮಸ್ಥರಿಂದಲೂ ನೆರೆ ಹೊರೆ ಯವರಿಂದಲೂ ಪ್ರೀತಿಯನ್ನೂ ಸನ್ಮಾನವನ್ನೂ ಹೊಂದುತ್ತಾರೆ. ಯಾವ ದೊಂದು ಹಳ್ಳಿಯಲ್ಲಾಗಲೀ ಊರಿನಲ್ಲಾಗಲೀ ವಿಶ್ವಾಸಿಗಳು ಎಲ್ಲರಿಗಿಂತ ಹೆಚ್ಚಾಗಿ ಪ್ರೀತಿಸಲ್ಪಡುತ್ತಾರೆ. ತಾಯಿಯರು ಅಸ್ವಸ್ಥರಾಗುವಾಗ ಕ್ರೈಸ್ತ ಹೆಂಗಸರು ಅವರ ಮಕ್ಕಳನ್ನು ಕಾಪಾಡಲು ಸಹಾಯ ನೀಡುತ್ತಾರೆ. ಒಬ್ಬ ಮನುಷ್ಯನು ಅಸ್ವಸ್ಥನಾದರೆ ಒಬ್ಬ ವಿಶ್ವಾಸಿಯು ಅವನ ಕಟ್ಟಿಗೆಯನ್ನು ಅವನ ಬದಲಾಗಿ ಸೀಳುತ್ತಾನೆ. ಅವರು ಕ್ರಿಸ್ತನಿಗಾಗಿ ಜೀವಿಸುತ್ತಾರೆ. ಜನರು ಅವರ ಜೀವನಗಳಲ್ಲಿ ಕ್ರಿಸ್ತನನ್ನು ನೋಡುತ್ತಾರೆ. ಅವರು ಸಾಕ್ಷಿ ಕೊಡುವಾಗ ಜನರು ಕೇಳಿ ನಂಬುತ್ತಾರೆ. ಕಮ್ಯುನಿಷ್ಟ ಸರಕಾರದಿಂದ ಅಪ್ಪಣೆ ಪಡೆಯದೇ ಯಾರೂ ಸಭಾ ಸ್ಥಾನದಲ್ಲಿ ಉಪದೇಶ ಮಾಡಬಾರದು. ಆದರೆ ಈ ಸಾಧಾರಣ ವಿಶ್ವಾಸಿಗಳು ತಮ್ಮ ಸಾಕ್ಷಿಯಿಂದ ಈ ಜನರನ್ನು ಕ್ರಿಸ್ತನ ಕಡೆಗೆ ಎಳೆಯುತ್ತಾರೆ. ಅವರು ಪೇಟೆಗಳಲ್ಲಿಯೂ ಬಾವಿಗಳ ಹತ್ತಿರವೂ ಮುಂತಾದ ಅನೇಕ ತರದ ಸ್ಥಳಗಳಲ್ಲಿ ಕ್ರಿಸ್ತನ ವಿಷಯವಾಗಿ ಸಾಕ್ಷಿ ಕೊಡುತ್ತಾರೆ. ಕ್ರೈಸ್ತ ವರ್ತಕರು ತಮ್ಮ ಸಾಮಾನುಗಳನ್ನು ಕಟ್ಟಿ ಕೊಡುವ ಕಾಗದದಲ್ಲಿ ಸುವಾರ್ತಾ ಹಸ್ತ ಪತ್ರಿಕೆ ಗಳನ್ನು ಇಡುತ್ತಾರೆ. ಕಮ್ಯುನಿಷ್ಟ ಮುದ್ರಣಾಲಯಗಳಲ್ಲಿ ಕೆಲಸ ಮಾಡುವ ವಿಶ್ವಾಸಿಗಳು ಮಧ್ಯರಾತ್ರಿ ತಿರಿಗಿ ಹೋಗಿ ಬೆಳಗಾಗುವ ವರೆಗೆ ಕ್ರೈಸ್ತ ಸಾಹಿ ತ್ಯದ ಸಾವಿರಾರು ಪ್ರತಿಗಳನ್ನು ಮುದ್ರಿಸುತ್ತಾರೆ. ಮಾಸ್ಕೋ ಪಟ್ಟಣದಲ್ಲಿ

ಕ್ರೈಸ್ತ ಮಕ್ಕಳು ಸುವಾರ್ತಾ ಪುಸ್ತಕಗಳನ್ನು ಎಲ್ಲಿಂದಲೋ ಹೊಂದಿ ಕೈಯಿಂದ ವಚನಗಳನ್ನು ಬರೆದು ತಮ್ಮ ಗುರುಗಳ ಕೋಟುಗಳ ಜೇಬಿನಲ್ಲಿ ಹಾಕಿದ್ದಾರೆ. ಈ ಸಾಧಾರಣ ಕ್ರೈಸ್ತರ ಸಾಕ್ಷಿಯಿಂದ ಅನೇಕರು ಕ್ರಿಸ್ತನ ಕಡೆಗೆ ಎಳೆಯಲ್ಪಡುತ್ತಾರೆ. ಕ್ಯೂಬ ದ್ವೀಪದಲ್ಲಿ ಕಮ್ಯುನಿಷ್ಟರು ಅಧಿಕಾರವನ್ನು ಹೊಂದಿದ ನಂತರ ವಿಶ್ವಾಸಿಗಳಾದ ಎಲ್ಲಾ ಸಭಾ ಪಾಲಕರು ಹಿಡಿಯಲ್ಪಟ್ಟು ಹಿಂಸಿಸಲ್ಪಟ್ಟರು. ಕಮ್ಯುನಿಷ್ಟರು ಅವರ ಬದಲಾಗಿ ತಮ್ಮ ಪಕ್ಷದವರನ್ನು ನಿಯಮಿಸಿದರು. ಆದರೆ ಅಲ್ಲಿ ಸಹ ಸಧಾರಣ ವಿಶ್ವಾಸಿಗಳು ಗುಪ್ತ ಸಭೆಯಾಗಿ ಕ್ರಿಸ್ತನಿಗಾಗಿ ಸಾಕ್ಷಿ ಕೊಡುತ್ತಾರೆ. ಕಮ್ಯುನಿಷ್ಟರು ಹಿಂಸೆ ಎಂಬ ಜ್ವಾಲೆಯಿಂದ ಈ ವಿಶ್ವಾಸಿಗಳನ್ನು ದಹಿಸಲು ಪ್ರಯತ್ನಿಸಿದರು. ಆದರೆ ಅದೇ ಜ್ವಾಲೆಯಿಂದ ಅವರು ನಿಜವಾಗಿ ಶುದ್ಧಿಸಲ್ಪಟ್ಟರು.

## ೩. ಹೊರಗಿನ ಸಭೆಗಳಲ್ಲಿ ನಂಬಿಗಸ್ತರಾದ ಸಭಾ ಪಾಲಕರು ಮತ್ತು ಸಭಾ ಸೇವಕರು

ಗುಪ್ತ ಸಭೆಯಲ್ಲಿ ಇದು ಮೂರನೆಯ ವಿಶೇಷ ಭಾಗ. ಗುಪ್ತ ಸಭೆಯು ಹೊರಗಿನ ಸಭೆಯಿಂದ ಸಂಪೂರ್ಣವಾಗಿ ಪ್ರತ್ಯೇಕಿಸಲ್ಪಡಲಿಲ್ಲ. ಹೊರಗಿನ ಸಭೆಗಳಲ್ಲಿ ಸೇವೆ ಮಾಡುವ ಸಭಾ ಪಾಲಕರಲ್ಲಿ ಅನೇಕರು ಗುಪ್ತ ಸಭೆಯಲ್ಲಿ ಗುಪ್ತವಾದ ಸೇವೆಯನ್ನು ಸಹ ಮಾಡುತ್ತಾರೆ. ಅಂದರೆ ಕೆಲವು ದೇಶಗಳಲ್ಲಿ ಅನೇಕರು ಈ ಎರಡು ತರದ ಸಭೆಗಳಲ್ಲಿ ಸೇವೆ ಮಾಡುತ್ತಾರೆ. ತಮ್ಮ ಚಿಕ್ಕ ಸಭಾ ಸ್ಥಾನಗಳ ಹೊರಗೆ ಕ್ರಿಸ್ತನ ವಿಷಯವಾಗಿ ಮಾತನಾಡಬಾರದೆಂದು ಅವರಿಗೆ ಅಪ್ಪಣೆಯಿದೆ. ಮಕ್ಕಳಿಗಾಗಿಯೂ ಯೌವನಸ್ಥರಿಗಾಗಿಯೂ ಸಭೆಗಳನ್ನು ನಡೆಸಲು ಅವರಿಗಾಗುವದಿಲ್ಲ. ಸಭೆಗಳಿಗೆ ಬರಲು ಅವಿಶ್ವಾಸಿಗಳಿಗೆ ಅಂಜಿಕೆಯಿದೆ. ಅಸ್ವಸ್ಥ ವಿಶ್ವಾಸಿಗಳ ಮನೆಗಳಿಗೆ ಹೋಗಿ ಅಲ್ಲಿ ಅವರಿಗಾಗಿ ಪ್ರಾರ್ಥಿಸಲು ಅವರಿಗೆ ಸ್ವಾತಂತ್ರ್ಯವಿಲ್ಲ. ಅಂದರೆ ಈ ಎಲ್ಲಾ ಕಮ್ಯುನಿಷ್ಟ ನಿಯಮಗಳಿಂದ ಅವರ ಸೇವೆಯಲ್ಲಿ ವಿಶೇಷ ಅರ್ಥವಿಲ್ಲ. ಆದರೆ ಅನೇಕಾವರ್ತಿ ಈ ಪಾಲಕರು ಈ ವಿವೇಕವಿಲ್ಲದ ನಿಯಮಗಳನ್ನು ಅಲಕ್ಷ್ಯಮಾಡಿ ಗುಪ್ತವಾಗಿ ಹೆಚ್ಚಾದ ಸೇವೆಯನ್ನು ಮಾಡುತ್ತಾರೆ. ಅವರು ಮಕ್ಕಳಿಗೂ ಯೌವನಸ್ಥರಿಗೂ ಗುಪ್ತವಾದ ಸೇವೆ ಮಾಡುತ್ತಾರೆ. ಅವರು ಕ್ರೈಸ್ತರ ಮನೆಗಳಲ್ಲಿ ಗುಪ್ತವಾಗಿ ಸುವಾರ್ತೆಯನ್ನು ಸಾರುತ್ತಾರೆ. ಅವರು ಕ್ರೈಸ್ತ ಸಾಹಿತ್ಯವನ್ನು ಗುಪ್ತವಾಗಿ ಹೊಂದಿ ಹಸಿವೆ ಪಡುವ ಆತ್ಮಗಳಿಗೆ ಹಂಚಿಕೊಡುತ್ತಾರೆ. ಇದೆಲ್ಲಾ ಮಾಡುತ್ತಿರುವಾಗ ಅವರು ನಿಜವಾಗಿ ಹಿಂಸೆಗೂ ಬಂಧನಕ್ಕೂ ಗುರಿಯಾಗಿದ್ದಾರೆ. ಹೊರಗಿನ ರೀತಿಯಲ್ಲಿ ಅವರು ಕಮ್ಯುನಿಷ್ಟರ ಅಪ್ಪಣೆಗಳಿಗೆ ಆಧೀನರಾಗಿದ್ದಾರೆ. ಆದರೆ ಅವರು ತಮ್ಮ ಜೀವನಗಳನ್ನು ಅಪಾಯದಲ್ಲಿಟ್ಟು ಗುಪ್ತವಾದ ರೀತಿಯಲ್ಲಿ ದೇವರ ವಾಕ್ಯವನ್ನು ಹಂಚಿಕೊಡುತ್ತಾರೆ. ರಷ್ಯ ದೇಶದಲ್ಲಿ ಅಂಥವರಲ್ಲಿ ಕೆಲವರು ಹೋದ ಕೆಲವು ದಿವಸಗಳಲ್ಲಿ ಪೊಲೀಸರಿಗೆ ಸಿಕ್ಕು ಹಿಡಿಯಲ್ಪಟ್ಟಿದ್ದಾರೆ.

ಅವರು ಕೆಲವು ವರ್ಷಗಳ ವರೆಗೆ ಸೆರೆಮನೆಯಲ್ಲಿ ಹಾಕಲ್ಪಟ್ಟರು. ಇಂಥವರು ಗುಪ್ತ ಸಭೆಯಲ್ಲಿ ಮೂರನೆಯ ಭಾಗವಾಗಿದ್ದಾರೆ.

ಈ ಮೂರು ಗುಂಪಿನವರು ಗುಪ್ತ ಸಭೆಯಲ್ಲಿ ಸೇವೆ ಮಾಡುತ್ತಾ ಇದ್ದಾರೆ. ಪೂರ್ವಕಾಲದಲ್ಲಿ ಸಭಾ ಪಾಲಕರು ಕಮ್ಯುನಿಷ್ಟರಿಂದ ಹಿಂಸಿಸಲ್ಪಟ್ಟಿದ್ದರೂ ಕ್ರಿಸ್ತನಿಗಾಗಿ ಸಾಕ್ಷಿ ಕೊಟ್ಟರು. ಸಾಧಾರಣ ವಿಶ್ವಾಸಿಗಳು ವಿಶೇಷವಾದ ಸೇವೆ ಮಾಡುತ್ತಾರೆ. ಹೊರಗಿನ ಸಭೆಯ ಪಾಲಕರಲ್ಲಿ ಅನೇಕರು ಗುಪ್ತವಾಗಿ ಹೆಚ್ಚಿನ ಸೇವೆ ಮಾಡುತ್ತಾರೆ. ಕಮ್ಯುನಿಷ್ಟತ್ವಕ್ಕೆ ಅಪಜಯವಾಗುವ ವರೆಗೆ ಈ ಗುಪ್ತ ಸಭೆಯು ತನ್ನ ಕಾರ್ಯವನ್ನು ಸಾಧಿಸುತ್ತಾ ಬರುವದು. ಕೆಲವು ದೇಶಗಳಲ್ಲಿ ಒಂದು ಭಾಗವು ಉಳಿದೆರಡು ಭಾಗಗಳಿಗಿಂತ ಹೆಚ್ಚಾದ ಕಾರ್ಯವನ್ನು ಮಾಡುತ್ತದೆ. ಆದರೆ ಮೂರೂ ಭಾಗಗಳು ಆ ದೇಶಗಳಲ್ಲಿ ತಮ್ಮನ್ನು ಅಪಾಯಕ್ಕೆ ಗುರಿಮಾಡಿ ಕ್ರಿಸ್ತನಿಗಾಗಿ ಸೇವೆ ಮಾಡುತ್ತಾರೆ.

ಒಬ್ಬ ಮನುಷ್ಯ ಅನೇಕ ವೇಳೆ ಕಮ್ಯುನಿಷ್ಟ ದೇಶಗಳಲ್ಲಿ ಪ್ರವಾಸಗಳನ್ನು ಮಾಡುತ್ತಾನೆ. ಅವನು ಧಾರ್ಮಿಕ ವಿಷಯಗಳ ಸಂಬಂಧವಾಗಿ ಬಹಳ ವಿಚಾರ ಮಾಡುವವನಾಗಿದ್ದಾನೆ. ಅವನು ಸ್ವದೇಶಕ್ಕೆ ತಿರಿಗಿ ಬಂದು— "ನಾನು ಯಾವದೊಂದು ಗುಪ್ತ ಸಭೆಯನ್ನು ಎಂದಿಗೂ ನೋಡಲಿಲ್ಲ," ಎಂದು ಬರೆದನು. ಕ್ರಿಸ್ತನು ಎದ್ದು ಬಂದು ಹತ್ತು ವರ್ಷಗಳ ವರೆಗೆ ಕ್ರೈಸ್ತರಿಗೆ ಕ್ರೈಸ್ತರೆಂಬ ಹೆಸರು ಇರಲಿಲ್ಲ. ನೀವು ಅವರಿಗೆ—"ನಿಮ್ಮ ಧರ್ಮ ಯಾವುದು ?" ಎಂಬ ಪ್ರಶ್ನೆಯನ್ನು ಹಾಕಿದ್ದರೆ, ಅವರು—"ನಾವು ಯೇಸುವನ್ನು ಮೆಸ್ಸೀಯನನ್ನಾಗಿ ನಂಬುವವರಾಗಿದ್ದೇವೆ," ಎಂದು ಉತ್ತರವನ್ನು ಕೊಟ್ಟಿರುತ್ತಿದ್ದರು. ಅನಂತರ ಇತರರು ಈ ಹೆಸರನ್ನು ಅವರಿಗೆ ಕೊಟ್ಟರು.

"ಗುಪ್ತ ಸಭೆ" ಎಂಬ ಹೆಸರು ಕಮ್ಯುನಿಷ್ಟರಿಂದ ಕೆಲವು ವಿಶ್ವಾಸಿಗಳಿಗೆ ಕೊಡಲ್ಪಟ್ಟಿದೆ. ಪಶ್ಚಿಮ ದೇಶಗಳಲ್ಲಿರುವ ಸಂಶೋಧಕರು ಅದೇ ಹೆಸರನ್ನು ಉಪಯೋಗಿಸುತ್ತಾರೆ. ಎಲ್ಲಾ ದೇಶಗಳಲ್ಲಿ ಈ ಸಭೆಯು ತನ್ನಷ್ಟಕ್ಕೆ ತಾನೇ ಉಂಟಾಯಿತು. ಆದರೆ ಗುಪ್ತ ಸಭೆಯ ಸದಸ್ಯರು ಸ್ವತಃ ಈ ಹೆಸರನ್ನು ಉಪಯೋಗಿಸುವದಿಲ್ಲ. ಅವರು ತಮಗೆ—"ಕ್ರೈಸ್ತರು, ವಿಶ್ವಾಸಿಗಳು ಅಥವಾ ದೇವರ ಮಕ್ಕಳು" ಎಂಬ ಹೆಸರುಗಳನ್ನು ಕೊಡುತ್ತಾರೆ. ಆದರೆ ಅವರು ಗುಪ್ತವಾದ ರೀತಿಯಲ್ಲಿ ಕ್ರಿಸ್ತನಿಗಾಗಿ ಸೇವೆ ಮಾಡುತ್ತಾರೆ. ಅವರು ಗುಪ್ತವಾಗಿ ಕೂಡಿ ಬರುತ್ತಾರೆ. ಅವರು ಗುಪ್ತವಾದ ಕೂಟಗಳಲ್ಲಿ ಸುವಾರ್ತೆಯ ಪ್ರಚಾರವನ್ನು ಮಾಡುತ್ತಾರೆ. ಕೆಲವು ಸಾರೆ ತಾವು ಗುಪ್ತ ಸಭೆಯನ್ನು ನೋಡಲಿಲ್ಲವೆಂದು ಹೇಳುತ್ತಿದ್ದ ಪ್ರವಾಸಿಗಳು ಅಂಥ ಸಭೆಗಳಿಗೆ ಹೋಗಿದ್ದಾರೆ. ಆದರೆ ವಿರೋಧಿಗಳೂ ಹೊರಗಿನಿಂದ ಪ್ರೀತಿಯಿಂದ ಈ ವಿಶ್ವಾಸಿಗಳನ್ನು ನೋಡುವವರೂ ಕೊಡುವ "ಗುಪ್ತ ಸಭೆ" ಎಂಬ ಹೆಸರು ನಿಜವಾಗಿ ಯೋಗ್ಯವಾಗಿದೆ.

ನಾವು ಪಶ್ಚಿಮ ದೇಶಗಳಲ್ಲಿ ಪ್ರವಾಸ ಮಾಡುತ್ತಿದ್ದರೆ ಬಹುಶಃ ಒಬ್ಬ ರಷ್ಯ ಗೂಢಚಾರನು ಭೆಟ್ಟಿಯಾಗುವದಿಲ್ಲ. ಇದರಿಂದ ಆ ದೇಶಗಳಲ್ಲಿ ರಷ್ಯ ಗೂಢಚಾರರು ಇಲ್ಲವೆಂದು ಹೇಳಲು ಸಾಧ್ಯವಿಲ್ಲ. ಗೂಢಚಾರರು ಪ್ರವಾಸಿಗಳನ್ನು ಭೆಟ್ಟಿಯಾಗಿ—"ನಾವು ಗೂಢಚಾರರು," ಎಂದು ಬುದ್ಧಿ ಹೀನರಾಗಿ ಹೇಳುವದಿಲ್ಲ. ಅದೇ ರೀತಿಯಲ್ಲಿ ಗುಪ್ತ ಸಭೆಯು ಸೇವೆ ಹೆಚ್ಚಾಗಿ ಹೊರಗಿನವರಿಗೆ ಕಾಣಿಸುವದಿಲ್ಲ. ಮುಂದಿನ ಅಧ್ಯಾಯದಲ್ಲಿ ಗುಪ್ತ ಸಭೆಯು ಅಸ್ತಿತ್ವಕ್ಕೆ ಸಾಕ್ಷಿ ಕೊಡುವ ರಷ್ಯ ವರ್ತಮಾನ ಪತ್ರಗಳಿಂದ ನಾನು ಕೆಲವು ವಿಷಯಗಳನ್ನು ನಿಮ್ಮ ಗಮನಕ್ಕೆ ತರುವೆನು.

# ಅಧ್ಯಾಯ—೬

ನಾನು ರಷ್ಯ ಸೈನ್ಯದವರಿಗೂ ಕಮ್ಯುನಿಷ್ಟರ ಆಳಿಕೆಯಲ್ಲಿರುವ ರೂಮೆನಿಯಾ ದೇಶದವರಿಗೂ ಗುಪ್ತವಾಗಿ ಮಾಡಿದ ಸುವಾರ್ತಾ ಪ್ರಚಾರದ ವಿಷಯವಾಗಿ ಬರೆದಿದ್ದೇನೆ. ಕಮ್ಯುನಿಷ್ಟರಿಗೂ ಅವರಿಂದ ಪೀಡಿತರಾದ ಜನರಿಗೂ ಸುವಾರ್ತೆಯನ್ನು ಸಾರುವ ಕೆಲಸದಲ್ಲಿ ಸಹಾಯ ಮಾಡಲು ನಾನು ನಿಮಗೆ ವಿನಂತಿ ಮಾಡಿಕೊಂಡಿದ್ದೇನೆ. ಆದರೆ ಹೀಗೆ ಮಾಡುವದು ನಿಜವಾಗಿ ಸಾಧ್ಯವೋ ? ಅಥವಾ ನನ್ನ ಯೋಜನೆ ಸ್ವಪ್ನದ ಹಾಗೆ ಇದೆಯೋ ?

ಈಗಿನ ಕಾಲದಲ್ಲಿ ರಷ್ಯ ದೇಶದಲ್ಲಿಯೂ ಉಳಿದ ಕಮ್ಯುನಿಷ್ಟ ದೇಶಗಳಲ್ಲಿಯೂ ಗುಪ್ತ ಸಭೆಯು ತನ್ನ ಕಾರ್ಯವನ್ನು ಸಾಧಿಸುತ್ತದೋ ? ಇಂಥ ಕಾರ್ಯವನ್ನು ಸಾಧಿಸುವದು ಈಗಲೇ ಸಾಧ್ಯವೋ ? ರಷ್ಯ ಹಾಗೂ ಉಳಿದ ಕಮ್ಯುನಿಷ್ಟ ದೇಶಗಳಲ್ಲಿ ಗುಪ್ತ ಸೇವೆಯನ್ನು ಮಾಡುವದು ಈಗ ಸಾಧ್ಯವೋ ? ಆ ಮೂರು ಪ್ರಶ್ನೆಗಳ ಉತ್ತರ ಯಾವುದೆಂದರೆ—"ಹೌದು, ಅದು ನಿಜವಾಗಿ ಸಾಧ್ಯವಾಗಿದೆ." 50 ವರ್ಷಗಳ ಹಿಂದೆ ರಷ್ಯ ದೇಶದಲ್ಲಿ ಕಮ್ಯುನಿಷ್ಟರ ಆಳಿಕೆ ಪ್ರಾರಂಭಿಸಿತು. ಆದರೆ ಅವರಿಗೆ ಸಂಪೂರ್ಣವಾದ ವಿಜಯ ಸಿಕ್ಕಲಿಲ್ಲ. ನಮ್ಮ ಸಂಸ್ಥಾನದವರು ರಷ್ಯದಲ್ಲಿ ಪ್ರಕಟಿಸಲ್ಪಡುವ ಎಲ್ಲಾ ಸುದ್ದಿ ಪತ್ರಗಳು, ಮಾಸ ಪತ್ರಿಕೆಗಳು ಮುಂತಾದ ಸಾಹಿತ್ಯವನ್ನು ಚೆನ್ನಾಗಿ ಪರಿಶೋಧಿಸುತ್ತಾರೆ. ಆ ಸಾಹಿತ್ಯದಲ್ಲಿ ಗುಪ್ತ ಸಭೆಯ ವಿಷಯವಾಗಿ ಅನೇಕ ವಿಷಯಗಳು ಬರೆಯಲ್ಪಟ್ಟಿವೆ. ಗುಪ್ತ ಸಭೆಯು ಅಭಿವೃದ್ಧಿಯಾಗಿ ಸ್ವಲ್ಪ ಮಟ್ಟಿಗೆ ಬಹಿರಂಗವಾಗಿ ತನ್ನ ಕಾರ್ಯವನ್ನು ಸಾಧಿಸುತ್ತದೆ. ಬೇರೆ ಕಡೆಯಿಂದ ನಮಗೆ ಸಿಕ್ಕುವ ತಿಳುವಳಿಕೆ ಈ ಸ್ಥಿತಿಗೆ ಸಾಕ್ಷಿ ಕೊಡುತ್ತದೆ. ಜ್ಞಾಪಕ ಮಾಡಿರಿ. ಗುಪ್ತ ಸಭೆಯು ಚಳಿ ಭಾಗಗಳ ಸಮುದ್ರಗಳಲ್ಲಿರುವ ಹಿಮದ ಉಂಡೆಗಳಂತೆ ಇದೆ. ಹೆಚ್ಚಿನ ಭಾಗ ನೀರಿನ ಕೆಳಗೆ ಇದೆ. ಸ್ವಲ್ಪ ಭಾಗ ಮಾತ್ರ ಹೊರಗೆ ಕಾಣಿಸುತ್ತದೆ. ಬರುವ ಪುಟಗಳಲ್ಲಿ ಕೆಲವು ಅತಿ ವಿಶೇಷವಾದ ಸಂಗತಿಗಳ ಸಂಬಂಧವಾಗಿ ನಾವು ವರ್ತಮಾನದ ಸಾರಾಂಶವನ್ನು ಕೊಡುತ್ತೇವೆ.

## ಗುಪ್ತ ಸಭೆಯ ಬಹಿರಂಗವಾದ ಕಾರ್ಯ

ನೊವ್ಹೆಂಬರ 7, 1966 ಸುಹೂಮಿ ಎಂಬ ಊರಿನಲ್ಲಿ ಗುಪ್ತ ಸಭೆಯು ಬಯಲಿನ ಪ್ರದೇಶದಲ್ಲಿ ಒಂದು ದೊಡ್ಡ ಕೂಟವನ್ನು ನಡೆಸಿತು. ಇದು ಕಪ್ಪು ಸಮುದ್ರದ ತೀರದಲ್ಲಿದೆ. ಅನೇಕ ಪಟ್ಟಣಗಳಿಂದ ವಿಶ್ವಾಸಿಗಳು ಅಲ್ಲಿ ಕೂಡಿ ಬಂದರು. "ಯೇಸು ಕ್ರಿಸ್ತನ ಮೇಲೆ ನಂಬಿಕೆಯಿಡಲು ಯಾರು ಸಿದ್ಧರಾಗಿದ್ದಾರೆ ?" ಎಂಬ ಕರೆ ಕೊಡಲ್ಪಟ್ಟಾಗ 47 ಯುವಜನರು ಮುಂದೆ ಬಂದರು. ಆದಿ ಸಭೆಯಲ್ಲಿ ನಡೆದ ಹಾಗೆ ಅವರು ಕೂಡಲೇ ಕಪ್ಪು ಸಮುದ್ರ

ದಲ್ಲಿ ದೀಕ್ಷಾಸ್ನಾನ ಹೊಂದಿದರು. ಮುಂಚಿತವಾಗಿ ಅವರಿಗೆ ಏನೂ ಧಾರ್ಮಿಕ ಶಿಕ್ಷಣ ಸಿಕ್ಕಿರಲಿಲ್ಲ. ಈ ಹೋದ 50 ವರ್ಷಗಳಲ್ಲಿ ಗುಪ್ತ ಸಭೆಯ ಪಾಲಕರಿಗೆ ಸತ್ಯವೇದಗಳೂ ಬೇರೆ ಕ್ರೈಸ್ತ ಪುಸ್ತಕಗಳೂ ಇರಲಿಲ್ಲ. ಕ್ರೈಸ್ತ ಬೋಧನೆಯನ್ನು ಅಭ್ಯಾಸಿಸಲು ಅವರು ಸತ್ಯವೇದ ವಿದ್ಯಾಲಯಗಳಿಗೆ ಹೋಗಲಿಲ್ಲ. ಆದರೆ ಸಭಾ ಸೇವಕನಾದ ಫಿಲಿಪ್ಪನು ಸಹ ವಿದ್ಯಾವಂತನಾಗಿರಲಿಲ್ಲ. ಅವನು ಒಂದು ವೇಳೆ ಒಂದು ಗಂಟೆಯ ವರೆಗೆ ಐತಿಯೋಪ್ಯ ದೇಶದ ಒಬ್ಬ ಅಧಿಕಾರಿಯ ಸಂಗಡ ಮಾತನಾಡಿ ಅವನಿಗೆ ಸುವಾರ್ತೆಯನ್ನು ತಿಳಿಸಿದನು. ಆ ಮನುಷ್ಯ ನಂಬಿಕೆಯಿಟ್ಟು ಕೂಡಲೇ ದೀಕ್ಷಾಸ್ನಾನ ಹೊಂದಿದನು. ಗುಪ್ತ ಸಭೆಯು ಈ ವಿಷಯದಲ್ಲಿ ಆದಿ ಸಭೆಯ ಪದ್ಧತಿಗಳನ್ನು ಅನುಸರಿಸಲು ತಿರಿಗಿ ಪ್ರಾರಂಭಿಸಿದೆ.

"ಗುರುಗಳ ಮಾಸಪತ್ರಿಕೆ" ಎಂಬ ಪತ್ರಿಕೆಯಲ್ಲಿ ಆಗಸ್ಟ 23, 1966 ರಲ್ಲಿ ಈ ವಿಷಯ ಮುದ್ರಿಸಲ್ಪಟ್ಟಿತ್ತು. ರೊಸ್ಟಾವ್ ಎಂಬ ಊರಿನಲ್ಲಿ ಕೆಲವರು ಬಾಪ್ಟಿಸ್ಟರು ಕಮ್ಯುನಿಷ್ಟರಿಂದ ನೇಮಿಸಲ್ಪಟ್ಟ ಮುಂದಾಳುಗಳಿಗೆ ಅಧೀನ ರಾಗಲು ಸಿದ್ಧರಾಗಿರಲಿಲ್ಲ. ಅವರು ಬೀದಿಗಳಲ್ಲಿ ಮೆರವಣಿಗೆ ಮಾಡಿ ದರು. ಈ ಸಂಗತಿಯು ಮೇ 1 ರಲ್ಲಿ ಆಯಿತು. ಆ ದಿವಸವು ಕಮ್ಯುನಿಷ್ಟರ ದೊಡ್ಡ ಹಬ್ಬವಾಗಿದೆ. ಅವರು ಯಾವಾಗಲೂ ಆ ದಿನದಲ್ಲಿ ದೊಡ್ಡ ಮೆರ ವಣಿಗೆಯನ್ನು ಮಾಡುತ್ತಾರೆ. ಎಲ್ಲರೂ ಬರಬೇಕೆಂದು ಅವರು ಆಜ್ಞಾಪಿಸು ತ್ತಾರೆ. ಆದರೆ ಯಾವ ರೀತಿಯಲ್ಲಿ ಯೇಸು ಸ್ವಾಮಿ ಫರಿಸಾಯರ ವಿರುದ್ಧವಾಗಿ ಸಬ್ಬತ್ ದಿನಗಳಲ್ಲಿ ತನ್ನ ಮಹತ್ಕಾರ್ಯಗಳನ್ನು ಮಾಡಿದನೋ ಅದೇ ರೀತಿ ಯಲ್ಲಿ ಈ ವಿಶ್ವಾಸಿಗಳು ಕಮ್ಯುನಿಷ್ಟರ ದೊಡ್ಡ ಹಬ್ಬದ ಕಾಲದಲ್ಲಿ ತಮ್ಮ ಮೆರವಣಿಗೆಯನ್ನು ಮಾಡಿದರು. 1,500 ವಿಶ್ವಾಸಿಗಳು ದೇವರ ಪ್ರೀತಿಯಿಂದ ಪ್ರೇರೇಪಿಸಲ್ಪಟ್ಟು ಕೂಡಿಬಂದರು. ಅವರು ಹಿಡಿಯಲ್ಪಟ್ಟು ಸೆರೆಮನೆಗೆ ಕಳುಹಿಸಲ್ಪಡಬಹುದೆಂದು ಅವರಿಗೆ ಚೆನ್ನಾಗಿ ಗೊತ್ತಾಯಿತು.

ಬಾರನೌಲ ಎಂಬ ಪಟ್ಟಣದಲ್ಲಿದ್ದ ವಿಶ್ವಾಸಿಗಳು ಒಂದು "ಗುಪ್ತ ಉದ್ದೇಶ ಪತ್ರಿಕೆ" ಯನ್ನು ಮುದ್ರಿಸಿದರು. ಇದರಲ್ಲಿ ಈ ವಿಷಯ ಬರೆಯಲ್ಪ ಟ್ಟಿದೆ. ಕುಲುಂಡ ಎಂಬ ಹಳ್ಳಿಯಲ್ಲಿ ಮಾರಾ ಎಂಬ ಒಬ್ಬ ಹೆಂಗಸಿಗೆ ಒಂದು ಪತ್ರ ಸಿಕ್ಕಿತು. ಆಕೆಯ ಗಂಡ ಸೆರೆಮನೆಯಲ್ಲಿ ಸತ್ತು ಹೋಗಿದ್ದಾನೆ ಎಂದು ಅದು ತಿಳಿಸಿತ್ತು. ಆಕೆಗೆ ನಾಲ್ಕು ಜನ ಚಿಕ್ಕ ಮಕ್ಕಳಿದ್ದರು. ಆಕೆಯು ಗಂಡನ ಶವ ತರಲ್ಪಟ್ಟಾಗ ಅವನ ಕೈಗಳ ಮೇಲೆ ಬೇಡಿಗಳ ಗುರುತುಗಳು ಕಾಣಿಸಿದವು. ಕೈ ಮತ್ತು ಅಂಗಾಲುಗಳು ಭಯಂಕರವಾಗಿ ಸುಡಲ್ಪಟ್ಟಿದ್ದವು. ಹೊಟ್ಟೆಯ ಮೇಲೆ ಕತ್ತಿಯ ಗಾಯಗಳಿದ್ದವು. ಬಲಗಾಲು ಉಬ್ಬಿತ್ತು. ಎರಡು ಕಾಲು ಗಳ ಮೇಲೆ ಚೆನ್ನಾಗಿ ಹೊಡೆಯಲ್ಪಟ್ಟಿತ್ತು. ಮೈ ತುಂಬ ಗಾಯಗಳಿದ್ದವು.

ಈ ವಿಷಯವು ರೊಸ್ಟೊವ್‌ನಲ್ಲಿ ಮೆರವಣಿಗೆ ಮಾಡಿದ ಪ್ರತಿಯೊಬ್ಬ ವಿಶ್ವಾಸಿಗೆ ಗೊತ್ತಾಯಿತು. ಅವರಿಗೆ ಅದೇ ಅನುಭವವಾಗುವದು ಸಾಧ್ಯವೆಂದು

ಅವರಿಗೆ ಗೊತ್ತಾಯಿತು. ಆದರೆ ಅವರು ಬಂದರು. ಯಾಕೆಂದರೆ ಈ ರಕ್ತ ಸಾಕ್ಷಿಯು ಉತ್ತರ ಕ್ರಿಯೆಗಳ ವಿಷಯವಾಗಿ ಅವರಿಗೆ ಗೊತ್ತಾಯಿತು. ಅವನು ಕೇವಲ 3 ತಿಂಗಳ ಮುಂಚೆ ದೇವರ ಕಡೆಗೆ ತಿರುಗಿಕೊಂಡಿದ್ದನು. ವಿಶ್ವಾಸಿಗಳು ಅವನ ಶವವನ್ನು ಸಮಾಧಿಯ ಕಡೆಗೆ ಒಯ್ಯುತ್ತಿದ್ದಾಗ ದೊಡ್ಡ ಪ್ರಕಟನ ಪತ್ರ ಗಳನ್ನು ಹಿಡಿದುಕೊಂಡು ಹೋದರು. ಅವುಗಳಲ್ಲಿ—

"ನನಗೆ ಬದುಕುವದು ಕ್ರಿಸ್ತನೇ ; ಸಾಯುವದು ಲಾಭವೇ."

"ದೇಹವನ್ನು ಕೊಂದು ಆತ್ಮವನ್ನು ಕೊಲ್ಲಲಾರದವರಿಗೆ ಹೆದರಬೇಡಿರಿ."

"ದೇವರ ವಾಕ್ಯದ ನಿಮಿತ್ತವಾಗಿ ಹತವಾದವರ ಆತ್ಮಗಳು ಯಜ್ಞ ವೇದಿಯ ಕೆಳಗಿರುವದನ್ನು ಕಂಡೆನು," ಎಂದು ಬರೆಯಲ್ಪಟ್ಟಿದ್ದವು.

ಈ ರಕ್ತಸಾಕ್ಷಿಯ ಮಾದರಿಯಿಂದ ಈ ವಿಶ್ವಾಸಿಗಳಿಗೆ ಉತ್ತೇಜನ ಸಿಕ್ಕಿತು. ಅವರು ಓಣಿಯಲ್ಲಿ ಒಂದು ಚಿಕ್ಕ ಮನೆಯ ಸುತ್ತಲೂ ಕೂಡಿ ಬಂದರು. ಕೆಲ ವರು ಸಮೀಪದಲ್ಲಿದ್ದ ಮನೆಗಳ ಮೇಲುಪ್ಪರಿಗೆಯಲ್ಲಿ ಕುಳಿತುಕೊಂಡರು. ಇನ್ನೂ ಕೆಲವರು ಮರಗಳಲ್ಲಿ ಕುಳಿತುಕೊಂಡರು. (ಗಿಡ್ಡನಾದ ಜಕ್ಕಾಯನು ಯೇಸು ಸ್ವಾಮಿಯನ್ನು ನೋಡಲು ಅದೇ ರೀತಿಯಲ್ಲಿ ಒಂದು ಮರವನ್ನು ಏರಿ ದ್ದನು). 80 ಜನರು ಕ್ರಿಸ್ತನ ಕಡೆಗೆ ತಿರುಗಿಕೊಂಡರು. ಅವರಲ್ಲಿ ಹೆಚ್ಚಾಗಿ ಯುವಜನರಾಗಿದ್ದರು. ಆ ಯುವಜನರಲ್ಲಿ 23 ಜನರು ಮೊದಲು ಕಮ್ಯು ನಿಷ್ಟ ಯುವಜನರ ಸಂಘದ ಸದಸ್ಯರಾಗಿದ್ದರು. ವಿಶ್ವಾಸಿಗಳು ಪಟ್ಟಣವನ್ನು ದಾಟಿ ದೋನ್ ನದಿಯ ದಡದಲ್ಲಿ ನಿಂತುಕೊಂಡರು. ಅಲ್ಲಿ ಹೊಸ ವಿಶ್ವಾಸಿ ಗಳಿಗೆ ದೀಕ್ಷಾಸ್ನಾನವಾಯಿತು. ಕಮ್ಯುನಿಷ್ಟ ಪೊಲೀಸರು ಮೋಟಾರುಗಳಲ್ಲಿ ಬಂದರು. 1,500 ಜನರನ್ನು ಹಿಡಿಯುವದು ಅವರಿಗೆ ಸಾಧ್ಯವಿಲ್ಲದ ಕಾರಣ ಮುಂದಾಳುಗಳನ್ನು ಹಿಡಿಯಲು ಅಪೇಕ್ಷಿಸಿದರು. ವಿಶ್ವಾಸಿಗಳು ಮೊಣಕಾಲೂರಿ ದೇವರ ಸಹಾಯವನ್ನು ಬೇಡಿದರು. ಅನಂತರ ಅವರು ಒಬ್ಬರಿಗೊಬ್ಬರು ಸಮೀಪದಲ್ಲಿ ಮುಂದಾಳುಗಳ ಸುತ್ತಲೂ ನಿಂತುಕೊಂಡು ಅವರನ್ನು ಕಾಪಾಡಿ ದರು.

ಇನ್ನೊಂದು ಸಮಯದಲ್ಲಿ ಅದೇ ಪತ್ರಿಕೆಯಲ್ಲಿ ಈ ವಿಷಯ ಕಂಡು ಬಂದಿತು. ರೊಷ್ಟೊವ್‌ನಲ್ಲಿ ವಿಶ್ವಾಸಿಗಳಿಗೆ ಒಂದು ಮುದ್ರಣಾಲಯವಿದೆ. ಇದರ ಮೇಲೆ ಅವರು ಗುಪ್ತವಾಗಿ ಬೇರೆ ಬೇರೆ ಸಾಹಿತ್ಯಗಳನ್ನು ಪ್ರಕಟಿಸುತ್ತಾರೆ. ವಿಶ್ವಾಸಕ್ಕಾಗಿ ಸ್ಥಿರವಾಗಿ ನಿಲ್ಲುವಂತೆ ಯುವಜನರಿಗೆ ಉತ್ತೇಜನ ಕೊಡಲ್ಪಟ್ಟಿದೆ. ಕ್ರೈಸ್ತ ವಿಶ್ವಾಸಿಗಳು ಉತ್ತರ ಕ್ರಿಯೆಗಳನ್ನು ನೋಡಲು ತಮ್ಮ ಮಕ್ಕಳನ್ನು ಕರೆದುಕೊಂಡು ಹೋಗಬೇಕೆಂದು ಸೂಚನೆ ಕೊಡಲ್ಪಟ್ಟಿತ್ತು. ಇದರಿಂದ ಮಾನ ವನ ಜೀವನ ತಾತ್ಕಾಲಿಕವೆಂದು ಮಕ್ಕಳಿಗೆ ಗೊತ್ತಾಗುವದು. ಶಾಲೆಗಳಲ್ಲಿ

ಮಕ್ಕಳಿಗೆ ಸಿಕ್ಕುವ ನಾಸ್ತಿಕತ್ವದ ಸಂಬಂಧವಾಗಿರುವ ಶಿಕ್ಷಣವನ್ನು ವಿರೋಧಿಸ ಬೇಕೆಂದು ತಮ್ಮ ಮಕ್ಕಳಿಗೆ ಮನೆಯಲ್ಲಿ ಸತ್ಯವೇದದ ಶಿಕ್ಷಣವನ್ನು ಕೊಡ ಬೇಕೆಂಬ ಸೂಚನೆ ಸಹ ಪ್ರಕಟವಾಗಿತ್ತು. ಈ ತಿಳುವಳಿಕೆಯನ್ನು ಕೊಟ್ಟ ನಂತರ ಲೇಖಕನು—"ಯಾವ ಕುಟುಂಬಗಳಲ್ಲಿ ಮಕ್ಕಳು ಧಾರ್ಮಿಕ ಶಿಕ್ಷಣದಿಂದ ಹುಚ್ಚ ರಾಗಿ ಮಾಡಲ್ಪಡುತ್ತಾರೋ ಆ ಕುಟುಂಬಗಳಲ್ಲಿ ಗುರುಗಳು ಯಾಕೆ ಧೈರ್ಯ ದಿಂದ ಸೇರುವದಿಲ್ಲ?" ಎಂದು ತನ್ನ ಲೇಖನವನ್ನು ಮುಗಿಸಿದನು.

ಈ ಗುರುಗಳ ಮಾಸಿಕ ಪತ್ರಿಕೆಯಲ್ಲಿ ಗುಪ್ತವಾಗಿ ದೀಕ್ಷಾಸ್ನಾನ ಕೊಟ್ಟ ಗುಪ್ತ ಸಭೆಯ ಮುಂದಾಳುಗಳ ನ್ಯಾಯ ವಿಚಾರಣೆಯ ವಿಷಯವಾಗಿ ವಿವರಿ ಸಲ್ಪಟ್ಟಿದೆ. "ಸಾಕ್ಷಿಗಳಾಗಿ ಕರೆಯಲ್ಪಟ್ಟ ಯುವಜನರಾದ ವಿಶ್ವಾಸಿಗಳು ಕಮ್ಯುನಿಷ್ಟ ನ್ಯಾಯಾಧೀಶರಿಗೆ ಯೋಗ್ಯವಾದ ಸನ್ಮಾನವನ್ನು ತೋರಿಸಲಿಲ್ಲ. ಅವರು ಕೋಪವನ್ನು ತೋರಿಸಿದರು. ಆದರೆ ನ್ಯಾಯಾಲಯದಲ್ಲಿದ್ದ ಕೆಲವರು ಯೌವನಸ್ಥ ಸ್ತ್ರೀಯರು ನ್ಯಾಯವಿಚಾರಣೆಗಾಗಿ ಬಂದಿದ್ದ ಕೈದಿಗಳನ್ನು ಮೆಚ್ಚಿಕೆ ಯಿಂದ ನೋಡುತ್ತಿದ್ದರು. ಅವರು ನಾಸ್ತಿಕರನ್ನು ಮೆಚ್ಚುತ್ತಿರಲಿಲ್ಲ.

ಹೆಚ್ಚಾದ ಸ್ವಾತಂತ್ರ್ಯವನ್ನು ಹೊಂದುವಂತೆ ವಿನಂತಿಗಳನ್ನು ಮಾಡುವಾಗ ಗುಪ್ತ ಸಭೆಯ ಸದಸ್ಯರು ಹೊಡೆವಿಕೆಯನ್ನೂ ಹಿಡಿಯುವಿಕೆಯನ್ನೂ ತಾಳಲು ಸಿದ್ಧರಾಗಿದ್ದಾರೆ. ಬ್ಯಾಪ್ಟಿಷ್ಟರಲ್ಲಿ ಎರಡು ಗುಂಪುಗಳಿವೆ. ಒಂದು ಗುಂಪು ಕಮ್ಯು ನಿಷ್ಟರಿಂದ ನಡೆಸಲ್ಪಟ್ಟಿದೆ. ದ್ರೋಹಿಯಾದ ಕಾರೇವ್ ಅದರ ಮುಂದಾಳಾಗಿ ದ್ದಾನೆ. ಅವನು ಅನೇಕ ವಿಶ್ವಾಸಿಗಳನ್ನು ಕೊಲ್ಲಿಸಿದ ಕಮ್ಯುನಿಷ್ಟರ ದಯೆ ಯನ್ನು ಸ್ತುತಿಸಿ ರಷ್ಯದಲ್ಲಿರುವ ಧಾರ್ಮಿಕ ಸ್ವಾತಂತ್ರ್ಯದ ವಿಷಯವಾಗಿ ಸುಳ್ಳಾದ ಲೇಖನಗಳನ್ನು ಬರೆಯುತ್ತಾನೆ. ಆದರೆ ಮತ್ತೊಂದು ಗುಂಪು ಕಮ್ಯುನಿಷ್ಟರಿಗೆ ಸ್ವಾಧೀನವಾಗುವದಿಲ್ಲ. ಅವರ ಮುಂದಾಳುಗಳು ಈ ಗುಪ್ತ ವಾದ ಪತ್ರವನ್ನು ಪ್ರಕಟಿಸಿದರು. ಅವರು ಮಾಸ್ಕೋ ಪಟ್ಟಣದಲ್ಲಿ ಎಲ್ಲರ ಮುಂದೆ ಮಾಡಿದ ಧಾರಣದ ವಿಷಯವಾಗಿ ಅದರಲ್ಲಿ ಬರೆದಿದೆ.

"ಪ್ರಿಯ ಸಹೋದರ ಸಹೋದರಿಯರೇ, ನಮ್ಮ ತಂದೆಯಾದ ದೇವ ರಿಂದಲೂ ನಮ್ಮ ಕರ್ತನಾದ ಯೇಸು ಕ್ರಿಸ್ತನಿಂದಲೂ ನಿಮಗೆ ಆಶೀರ್ವಾದಗಳೂ ಶಾಂತಿಯೂ ಆಗಲಿ.

ನಾವು ನಿಮಗೆ ತಿಳಿಸುವ ವಿಷಯವೇನೆಂದರೆ—ನಮ್ಮ ಸಭೆಗಳಿಂದ 500 ಜನ ಪ್ರತಿನಿಧಿಗಳು ಮೇ 16, 1966 ರಲ್ಲಿ ಮಾಸ್ಕೋ ಪಟ್ಟಣಕ್ಕೆ ಪ್ರವಾಸಮಾಡಿದರು. ಅವರು ಕಮ್ಯುನಿಷ್ಟ ಪಕ್ಷದ ಕೇಂದ್ರ ಸಮಿತಿಯ ಕಟ್ಟಡಕ್ಕೆ ಹೋಗಿ ಅರ್ಜಿಯನ್ನು ಮಾಡಲು ಅನುಕೂಲತೆಯನ್ನು ಬೇಡಿ

ಕೊಂಡರು. ಮುಖ್ಯ ಸೆಕ್ರೆಟರಿಯಾದ ಬ್ರೆಝ್‌ನೆವ್‌ನ ವಿಳಾಸವನ್ನು ಬರೆದ ಪತ್ರವನ್ನು ನಾವು ಒಳಗೆ ಕೊಟ್ಟೆವು."

ಮುಂದೇನಾಯಿತು ? ಈ 500 ಜನರು ದಿನವೆಲ್ಲಾ ಆ ಕಟ್ಟಡದ ಮುಂದೆ ನಿಂತುಕೊಂಡರು. ಮೊದಲನೆಯ ಸಾರೆ ಜನರು ಮಾಸ್ಕೋ ಪಟ್ಟಣ ದಲ್ಲಿ ಬಹಿರಂಗವಾಗಿ ಕಮ್ಯುನಿಷ್ಟತ್ವಕ್ಕೆ ವಿರುದ್ಧವಾಗಿ ಧಾರಣ ಮಾಡಿದರು. ಈ ಧಾರಣವು ಗುಪ್ತ ಸಭಿಕರ ಸದಸ್ಯರಿಂದ ಮಾಡಲ್ಪಟ್ಟಿತು. ಸಾಯಂಕಾಲ ವಾದಾಗ ಅವರು ಎರಡನೆಯ ವಿನಂತಿಯನ್ನು ಬ್ರೆಝ್‌ನೆವ್‌ನಿಗೆ ಬರೆದು ಒಳಗೆ ಕೊಟ್ಟರು. ಸ್ಮೋಗನೊವ್‌ನೆಂಬ ಒಬ್ಬ ಕಮ್ಯುನಿಷ್ಟ ಪಕ್ಷದವನು ತಮ್ಮ ವಿನಂತಿಯನ್ನು ಬ್ರೆಝ್‌ನೆವ್‌ನಿಗೆ ಮುಟ್ಟಿಸಲಿಲ್ಲವೆಂದು ಅವರು ತಕರಾರು ಮಾಡಿದರು.

ರಾತ್ರಿಯೆಲ್ಲಾ ಈ 500 ಜನ ಪ್ರತಿನಿಧಿಗಳು ಬೀದಿಗಳಲ್ಲಿ ಉಳಿದು ಕೊಂಡರು. ದಾಟಿಹೋಗುವ ಮೋಟರುಗಳಿಂದ ಅವರ ಮೇಲೆ ಕೆಸರು ಹಾಕ ಲ್ಪಟ್ಟಿತು. ಜನರು ಅವರನ್ನು ಹಾಸ್ಯ ಮಾಡಿದರು. ಮಳೆ ಬಂದಿತು. ಆದರೆ ಬೆಳಗಿನ ಜಾವದ ವರೆಗೆ ಅವರು ಕಮ್ಯುನಿಷ್ಟ ಪಕ್ಷದ ಕಟ್ಟಡದ ಮುಂದೆ ಸ್ಥಿರ ವಾಗಿ ನಿಂತಿದ್ದರು.

ಮರುದಿವಸ ಕೆಲವರು ಹೊರಗೆ ಬಂದು ಒಂದು ಸೂಚನೆ ಕೊಟ್ಟರು. ಆ 500 ಜನರು ಒಳಗೆ ಬಂದು ಕೆಲವು ಉಪಾಧಿಕಾರಿಗಳನ್ನು ಸಂದರ್ಶಿಸಲು ಅನುಕೂಲ ಮಾಡಲ್ಪಟ್ಟಿತು. ಆದರೆ ಈ ಸಹೋದರರು ಅದಕ್ಕೆ ಒಪ್ಪಲಿಲ್ಲ. ಯಾಕೆಂದರೆ ಕತ್ತಲೆಯೊಳಗೆ ಸಾಕ್ಷಿಗಳಿರುವದಿಲ್ಲ. ಇಂಥ ಸಮಯಗಳಲ್ಲಿ ವಿಶ್ವಾ ಸಿಗಳು ಅನೇಕಾವರ್ತಿ ಹೊಡೆಯಲ್ಪಡುವರೆಂದು ಅವರಿಗೆ ಗೊತ್ತಾಯಿತು. ಅವರು—"ನಾವು ಮುಖ್ಯ ಸೆಕ್ರೆಟರಿಯಾದ ಬ್ರೆಝ್‌ನೆವರ ಹೊರತಾಗಿ ಮತ್ತಾ ರನ್ನೂ ನೋಡಲು ಅಪೇಕ್ಷಿಸುವದಿಲ್ಲ," ಎಂದು ಒಂದೇ ಧ್ವನಿಯಿಂದ ಉತ್ತರ ಕೊಟ್ಟರು.

ಮಧ್ಯಾಹ್ನ ಒಂದು ಮುಕ್ಕಾಲು ಗಂಟೆಗೆ ಕಮ್ಯುನಿಷ್ಟರ ಪ್ರತಿಕಾರ ಪ್ರಾರಂಭವಾಯಿತು. 28 ಬಸ್ಸುಗಳು ಬಂದವು. ವಿಶ್ವಾಸಿಗಳು ಗೋಲಾ ಕಾರವಾಗಿ ನಿಂತುಕೊಂಡು ಒಬ್ಬೊಬ್ಬರ ಕೈಗಳನ್ನು ಹಿಡಿದು—"ನಾವು ಶಿಲುಬೆ ಯನ್ನು ಹತ್ತುವ ದಿನಗಳು ನಮ್ಮ ಜೀವನದಲ್ಲಿ ಅತ್ಯುತ್ತಮ ದಿನಗಳಾಗಿವೆ," ಎಂಬ ಸಂಗೀತವನ್ನು ಹಾಡಿದರು. ಗುಪ್ತ ಪೊಲೀಸರು ಅವರಲ್ಲಿರುವ ಹಿರಿಯ ರನ್ನೂ ಕಿರಿಯರನ್ನೂ ಹೊಡೆಯಲು ಪ್ರಾರಂಭಿಸಿದರು. ಕೆಲವರನ್ನು ಸಾಲಿ ನಿಂದ ಎಳೆದು ತಲೆಯ ಮೇಲೆ ಹೊಡೆದು ರಸ್ತೆಯ ಮೇಲೆ ನೂಕಿದರು. ಕೆಲವು ಸಹೋದರರನ್ನು ತಲೆ ಕೂದಲಿನಿಂದ ಬಸ್ಸುಗಳಿಗೆ ಜಗ್ಗುತ್ತಾ ಹೋದರು.

ಕೆಲವರು ತಪ್ಪಿಸಿಕೊಳ್ಳಲು ಪ್ರಯತ್ನಿಸಿದಾಗ ಪೊಲೀಸರು ಅವರನ್ನು ಬೆಶುದ್ಧಿಯಾಗುವ ವರೆಗೆ ಹೊಡೆದರು. ಬಸ್ಸುಗಳನ್ನು ವಿಶ್ವಾಸಿಗಳಿಂದ ತುಂಬಿಸಿದ ನಂತರ ಅವರು ಗುಪ್ತವಾದ ಸ್ಥಳಕ್ಕೆ ಒಯ್ಯಲ್ಪಟ್ಟರು. ಬಸ್ಸುಗಳಿಂದ ನಮ್ಮ ಸಹೋದರ ಸಹೋದರಿಯರಿಂದ ಸಂಗೀತಗಳು ಕೇಳಬರುತ್ತಿದ್ದವು. ಇದೆಲ್ಲಾ ಜನರ ದೊಡ್ಡ ಗುಂಪಿನ ಎದುರಿನಲ್ಲಿ ಆಯಿತು.

ಅನಂತರ ಅತಿ ಸುಂದರವಾದ ಸಂಗತಿಯಾಯಿತು. ಈ 500 ಜನ ಹಿಡಿಯಲ್ಪಟ್ಟು ಹಿಂಸಿಸಲ್ಪಟ್ಟ ನಂತರ ಇಬ್ಬರು ಸಹೋದರರು ಧೈರ್ಯದಿಂದ ಅದೇ ಕಟ್ಟಡಕ್ಕೆ ಹೋದರು. ಬಿಂಜ ಹಾಗೂ ಹೋರೇವ್ ಎಂಬ ಈ ಸಹೋದರರು ಕ್ರಿಸ್ತನ ಮುಂದೆಯಲ್ಲಿ ನಿಜವಾದ ಕುರುಬರಾಗಿದ್ದಾರೆ. ಯೇಸು ಸ್ವಾಮಿಯ ಮುಂದೂತನಾದ ಸ್ನಾನಿಕನಾದ ಯೋಹಾನನು ಹಿಡಿಯಲ್ಪಟ್ಟ ನಂತರ ಯೇಸು ತಾನೇ ಅದೇ ಸ್ಥಳದಲ್ಲಿ ಅದೇ ಸಂದೇಶವನ್ನು ಧೈರ್ಯದಿಂದ ಸಾರಿದನು. ಅದೇ ರೀತಿಯಲ್ಲಿ ಈ ಇಬ್ಬರು ಅಲ್ಲಿಗೆ ಹೋಗಿ—"ನೀವು ನಮ್ಮ ಪ್ರತಿನಿಧಿಗಳನ್ನು ಎಲ್ಲಿ ಹಾಕಿದ್ದೀರಿ ? ಅವರಿಗೆ ಬಿಡುಗಡೆ ಕೊಡಬೇಕು," ಎಂದು ಬೇಡಿಕೊಂಡರು. ಧೈರ್ಯವುಳ್ಳ ಈ ಇಬ್ಬರು ಸಹೋದರರು ಮಾಯವಾದರು. ಅನಂತರ ಅವರು ಸೆರೆಯುನೆಯಲ್ಲಿ ಹಾಕಲ್ಪಟ್ಟರೆಂಬ ಸಮಾಚಾರ ಸಿಕ್ಕಿತು.

ಗುಪ್ತ ಸಭೆಯಲ್ಲಿದ್ದ ಈ ವಿಶ್ವಾಸಿಗಳಿಗೆ ಭಯವುಂಟಾಯಿತೋ ? ಇಲ್ಲವೇ ಇಲ್ಲ. ಬೇರೆಯುವರು ಕೂಡಲೇ ಈ 'ಉದ್ದೇಶ ಪತ್ರಿಕೆ'ಯನ್ನು ಪ್ರಕಟಿಸಿ ತಮ್ಮ ಸ್ವಂತ ಸ್ವಾತಂತ್ರ್ಯವನ್ನು ಅಪಾಯದಲ್ಲಿಟ್ಟರು. ಇದರಲ್ಲಿ ನಡೆದ ಸಂಗತಿಯು ಎಲ್ಲಾ ಸಮಾಚಾರವನ್ನು ಅವರು ತಿಳಿಸಿದರು. ಅದು ಮಾತ್ರವಲ್ಲದೇ ಅವರು —"ಕ್ರಿಸ್ತನ ಮೇಲೆ ನಂಬಿಕೆಯಿಡುವದು ಆತನಿಗೋಸ್ಕರ ಬಾಧೆಯನ್ನನುಭವಿಸುವದು ನಮಗೆ ಅನುಗ್ರಹವಾಗಿ ದೊರೆಯಿತು" (ಫಿಲಿಪ್ಪಿ 1 : 29), ಎಂಬ ಸತ್ಯವೇದದ ವಚನವನ್ನು ಅವರ ಗಮನಕ್ಕೆ ತಂದರು. ಅವರು ವಿಶ್ವಾಸಿಗಳಿಗೆ —"ಸಂಕಟಗಳನ್ನು ಅನುಭವಿಸುವದಕ್ಕಾಗಿ ನಾವು ನೇಮಿಸಲ್ಪಟ್ಟೆವೆಂದು ನೀವು ಬಲ್ಲಿರಷ್ಟೇ," (೧ ಥೆಸಲೋನಿಕ 3 : 3) ಎಂಬ ಉತ್ತೇಜನಾ ವಾಕ್ಯವನ್ನು ತಿಳಿಸಿದರು. ಇದು ಮಾತ್ರವಲ್ಲದೇ—"ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಆಗಿರುವ ಯೇಸುವಿನ ಮೇಲೆ ದೃಷ್ಟಿಯನ್ನಿಟ್ಟು ನಮಗೆ ನೇಮಕವಾದ ಓಟವನ್ನು ಸ್ಥಿರಚಿತ್ತದಿಂದ ಓಡೋಣ" (ಇಬ್ರಿಯ 12 : 2), ಎಂಬ ಮಾತುಗಳನ್ನು ವಿಶ್ವಾಸಿಗಳ ಗಮನಕ್ಕೆ ತಂದರು.

ಗುಪ್ತ ಸಭೆಯು ಯುವಜನರಿಗೆ ಕೊಡಲ್ಪಡುವ ನಾಸ್ತಿಕತ್ವವೆಂಬ ಆತ್ಮಿಯ ವಿಷಯವನ್ನು ಬಹಿರಂಗವಾಗಿ ರೊಸ್ತೋವಿನಲ್ಲಿಯೂ ಮಾಸ್ಕೋದಲ್ಲಿಯೂ ರಷ್ಯ ದೇಶದಲ್ಲಿಯೂ ವಿರೋಧಿಸಿತು. ಅವರು ಹೊರಗಿನ ಸಭೆಯು

ದ್ರೋಹಿಗಳಾದ ಮುಂದಾಳುಗಳನ್ನು ವಿರೋಧಿಸಿದ್ದಾರೆ. ಅವರು ಮತ್ತೊಂದು ಗುಪ್ತ ಉದ್ದೇಶ ಪತ್ರಿಕೆಯಲ್ಲಿ—"ನಮ್ಮ ಕಾಲದಲ್ಲಿ ಸೈತಾನನು ಸಭೆಗಾಗಿ ನೇಮಗಳನ್ನು ಮಾಡುತ್ತಿದ್ದಾನೆ. ಆದರೆ ಈ ನೇಮಗಳು ದೇವರ ಅಪ್ಪಣೆಗಳ ವಿರುದ್ಧವಾಗಿವೆ," ಎಂದು ಬರೆದರು. (ಇದು ಕಮ್ಯುನಿಷ್ಟರ ವರ್ತಮಾನ ಪತ್ರದಲ್ಲಿ ಪ್ರತಿ ಮುದ್ರಿಸಲ್ಪಟ್ಟಿದೆ.)

ಮತ್ತೊಂದು ಸುದ್ದಿ ಪತ್ರದಲ್ಲಿ ಮೂವರ ನ್ಯಾಯ ವಿಚಾರಣೆಯ ವಿಷಯದಲ್ಲಿ ಬರೆದಿದೆ. ಅಮೆರಿಕ ದೇಶದಿಂದ ಬಂದಂಥ ಆಕಾಶವಾಣಿಯ ಮೇಲೆ ಪ್ರಕಟವಾಗುವ ಸಂದೇಶಗಳನ್ನು ಕೇಳಬೇಕೆಂದು ಅವರು ಜನರ ಗುಂಪುಗಳನ್ನು ಕೂಡಿಸುತ್ತಿದ್ದರು. ಇದು ಮಾತ್ರವಲ್ಲದೇ ಅವರು ಟೇಪರಿಕಾರ್ಡರಿನ ಮೇಲೆ ಈ ಸಂದೇಶಗಳ ಪ್ರತಿಗಳನ್ನು ಮಾಡಿ ಬೇರೆಯವರಿಗೆ ಕೇಳಿಸುವಂತೆ ಅವುಗಳನ್ನು ಉಪಯೋಗಿಸುತ್ತಿದ್ದರು. ಇದು ಮಾತ್ರವಲ್ಲದೇ ಅವರು 'ಪಿಕ್‌ನಿಕ್' ಹಾಗೂ ಸಂಸ್ಕೃತಿಯ ಕೂಟಗಳ ರೂಪದಿಂದ ಸುವಾರ್ತಾ ಸಭೆಗಳನ್ನು ಆಚರಿಸಿದರು. ಈ ರೀತಿಯಲ್ಲಿ ಆದಿ ಸಭೆಯು ರೋಮಾ ಪಟ್ಟಣದಲ್ಲಿ ಗುಪ್ತವಾದ ಸೇವೆ ಮಾಡಿದ ಹಾಗೆ ಈ ಗುಪ್ತ ಸಭೆಯು ತನ್ನ ಕಾರ್ಯವನ್ನು ಸಾಧಿಸುತ್ತಿದೆ.

ಮತ್ತೊಂದು ವರ್ತಮಾನ ಪತ್ರದಲ್ಲಿ ಸೆಪ್ಟೆಂಬರ 15, 1966 ರಲ್ಲಿ ಗುಪ್ತ ಸಭೆಯ ವಿಷಯವಾಗಿ ಹೆಚ್ಚಿನ ಸಮಾಚಾರವಿತ್ತು. ಅವರು ಚಿಕ್ಕ ಪುಸ್ತಕಗಳನ್ನು ಮುದ್ರಿಸಿ ಪ್ರಕಟಿಸುತ್ತಾರೆ. ದೇಶಗಳ ನಿಯಮಗಳ ವಿರುದ್ಧವಾಗಿ ಅವರು ಬಹಿರಂಗವಾಗಿ ಕೂಡಿಬರುತ್ತಾರೆ. ಅವರು ಬೇರೆ ಬೇರೆ ಸ್ಥಳಗಳಿಗೆ ಹೋಗಿ ಕ್ರಿಸ್ತನಿಗಾಗಿ ಸಾಕ್ಷಿ ಕೊಡುತ್ತಾರೆ. ರೇಲ್ವೆಯಲ್ಲಿ ಪ್ರವಾಸ ಮಾಡುತ್ತಿದ್ದ ಮೂವರು ಯೌವನಸ್ಥರು ನಾಲ್ವರು ತರುಣಿಯರು "ನಮ್ಮ ಯೌವನ ಕಾಲವನ್ನು ಕ್ರಿಸ್ತನಿಗೆ ಅರ್ಪಿಸೋಣ," ಎಂಬ ಸಂಗೀತವನ್ನು ಹಾಡಿದರು. ಇದನ್ನು ಕೇಳಿ ಲೇಖನವನ್ನು ಬರೆದವನು ಇದನ್ನು ಅಸಹ್ಯವಾದ ಸಂಗತಿಯನ್ನಾಗಿ ಎಣಿಸಿದನು. ಯಾಕೆಂದರೆ ಈ ವಿಶ್ವಾಸಿಗಳು ಬೀದಿಗಳಲ್ಲಿಯೂ ನಿಲ್ದಾಣಗಳಲ್ಲಿಯೂ ರೇಲ್ವೆಗಳಲ್ಲಿಯೂ ಬಸ್ಸುಗಳಲ್ಲಿಯೂ ರಾಷ್ಟ್ರೀಯ ಸಂಸ್ಥಾನಗಳಲ್ಲಿಯೂ ಉಪದೇಶಿಸುತ್ತಿದ್ದರು. ಈ ರೀತಿಯಲ್ಲಿ ರಷ್ಯ ದೇಶದಲ್ಲಿ ಗುಪ್ತ ಸಭೆಯು ತನ್ನ ಕಾರ್ಯವನ್ನು ಸಾಧಿಸುತ್ತಿದೆ. ಈ ಜನರು ಬಹಿರಂಗವಾದ ಸ್ಥಳಗಳಲ್ಲಿ ಕ್ರೈಸ್ತ ಸಂಗೀತಗಳನ್ನು ಹಾಡಿದ ಅಪರಾಧಕ್ಕಾಗಿ ನ್ಯಾಯವನ್ನು ಹೊಂದಿದರು. ನ್ಯಾಯಾಧೀಶನು ತೀರ್ಪನ್ನು ಹೇಳಿದಾಗ ಅವರು ಮೊಣಕಾಲೂರಿ—"ನಾವು ನಮ್ಮನ್ನು ದೇವರ ಕೈಗೆ ಒಪ್ಪಿಸಿಕೊಡುತ್ತೇವೆ—ಕರ್ತನೇ, ಈ ವಿಶ್ವಾಸಕ್ಕಾಗಿ ನಾವು ಕಷ್ಟಪಡುವಂತೆ ನೀನು ನಮಗೆ ಅನುಗ್ರಹ ಮಾಡಿದ್ದಕ್ಕಾಗಿ ನಾವು ನಿನಗೆ ಉಪಕಾರ ಸ್ತುತಿಯನ್ನು ಮಾಡುತ್ತೇವೆ," ಎಂದು

ಪ್ರಾರ್ಥಿಸಿದರು. ಇದನ್ನು ಕೇಳಿ ನ್ಯಾಯವಿಚಾರವನ್ನು ನೋಡಲು ಬಂದಿದ್ದ ವಿಶ್ವಾಸಿಗಳು ಅದೇ ಸಂಗೀತವನ್ನು ನ್ಯಾಯಾಲಯದಲ್ಲಿಯೇ ಹಾಡಿದರು.

ಮೇ 1 ನೆಯ ದಿನಾಂಕ ಎರಡು ಹಳ್ಳಿಗಳ ವಿಶ್ವಾಸಿಗಳು ಅರಣ್ಯದಲ್ಲಿ ದೇವರ ಆರಾಧನೆ ಮಾಡಿದರು. ಯಾಕೆಂದರೆ ಅವರಿಗೆ ಸಭಾ ಸ್ಥಾನಗಳಿಲ್ಲ. ಅದೇ ರೀತಿಯಲ್ಲಿ ಅವರು ಜನರ ಜನ್ಮದಿನಗಳಲ್ಲಿ ಮಿತ್ರರನ್ನು ಮನೆಗೆ ಕರೆದು ಸಭೆಗಳನ್ನು ನಡೆಸುತ್ತಾರೆ. (ಕೆಲವು ಕ್ರೈಸ್ತ ಕುಟುಂಬದಲ್ಲಿ ಕೇವಲ 4 ಜನರಿದ್ದರೂ ವರ್ಷಕ್ಕೆ 35 ಸಾರೆ ಹುಟ್ಟುದಿನಗಳನ್ನು ಆಚರಿಸುತ್ತಾರೆ.) ಕೈದಿತನದಿಂದಲೂ ಹಿಂಸೆಯಿಂದಲೂ ಗುಪ್ತ ಸಭೆಯ ವಿಶ್ವಾಸಿಗಳಿಗೆ ಭಯವಿಲ್ಲ. ಈ ಕಷ್ಟಗಳ ಮುಖಾಂತರವಾಗಿ ಕ್ರಿಸ್ತನ ಮೇಲಿರುವ ಅವರ ಭಕ್ತಿ ಹೆಚ್ಚಾಗುತ್ತಿದೆ.

ಯುಕ್ರೇನ್ ಪ್ರಾಂತದಲ್ಲಿ ಪ್ರಕಟವಾದ ವರ್ತಮಾನ ಪತ್ರದಲ್ಲಿ ಶ್ರೀ ಪ್ರೊಕೋಫೀವ್ಹ ಎಂಬವನ ವಿಷಯವಾಗಿ ಬರೆಯಲ್ಪಟ್ಟಿತು. ಅವನು ರಷ್ಯ ದೇಶದ ಗುಪ್ತ ಸಭೆಯ ಮುಂದಾಳುಗಳಲ್ಲಿ ಒಬ್ಬನಾಗಿದ್ದಾನೆ. ಅವನು ಮೂರು ಸಾರೆ ಸೆರೆಮನೆಯಲ್ಲಿ ಹಾಕಲ್ಪಟ್ಟಿದ್ದಾನೆ. ಬಿಡುಗಡೆ ಹೊಂದಿದ ಕೂಡಲೇ ಅವನು ತಿರಿಗಿ ಗುಪ್ತವಾದ ಭಾನುವಾರ ಶಾಲೆಗಳನ್ನು ನಡೆಸಲು ಪ್ರಾರಂಭಿಸುತ್ತಾನೆ. ಅವನು ತಿರಿಗಿ ಸೆರೆಮನೆಯಲ್ಲಿ ಹಾಕಲ್ಪಟ್ಟಿದ್ದಾನೆ. ಅವನು —"ಕಮ್ಯುನಿಷ್ಟರ ನೇಮಗಳಿಗೆ ಆಧೀನರಾಗಿರುವದರಿಂದ ಬಹಿರಂಗವಾದ ಸಭೆಯು ದೇವರ ಆಶೀರ್ವಾದವನ್ನು ಹೊಂದದೇ ಹೋಗಿದೆ," ಎಂದು ಒಂದು ಗುಪ್ತವಾದ ಉದ್ದೇಶ ಪತ್ರಿಕೆಯನ್ನು ಬರೆದನು. ಒಂದು ಸಂಗತಿಯನ್ನು ಜ್ಞಾಪಿಸಿರಿ. ಕಮ್ಯುನಿಷ್ಟ ದೇಶಗಳಲ್ಲಿರುವ ಎಲ್ಲಾ ಕೈದಿಗಳಿಗೆ ಹಸಿವೆ, ಹಿಂಸೆ, ಮನೋ ತೊಳಲಿಕೆಗಳಾಗುತ್ತವೆ.

'ವಿಜ್ಞಾನ ಹಾಗೂ ಧರ್ಮ' ಎಂಬ ಪತ್ರಿಕೆಯಲ್ಲಿ 1966 ರಲ್ಲಿ 9 ನೆಯ ಸಂಚಿಕೆಯಲ್ಲಿ ಹೀಗೆ ಬರೆದಿದೆ. ಕ್ರೈಸ್ತರು ಚಿತ್ರಮಯವಾದ ಒಂದು ಮಾಸ ಪತ್ರಿಕೆಯ ಮೇಲ್ಹೊದಿಕೆಗಳಲ್ಲಿ ಸುವಾರ್ತೆಯನ್ನು ಪ್ರಚಾರ ಮಾಡುತ್ತಾರೆ. ಅವರ ಪುಸ್ತಕಗಳ ಹೊರಭಾಗವು ಕಾದಂಬರಿಯು ಹಾಗೆ ಕಂಡುಬರುತ್ತದೆ. ಆದರೆ ಒಳಗೆ ಸತ್ಯವೇದದ ಒಂದು ಭಾಗವಿದೆ. ಅವರು ಕಮ್ಯುನಿಷ್ಟರ ಹಾಡುಗಳ ರಾಗಗಳಿಗೆ ಕ್ರಿಸ್ತನನ್ನು ಸ್ತುತಿಸುವ ಮಾತುಗಳನ್ನು ಜೋಡಿಸಿದ್ದಾರೆ ಎಂಬ ವಿಷಯವು ಮತ್ತೊಂದು ವರ್ತಮಾನ ಪತ್ರದಲ್ಲಿ ಜೂನ್ 30, 1966 ರಲ್ಲಿ ಪ್ರಕಟವಾಗಿದೆ.

ಸೈಬೀರಿಯಾ ಪ್ರಾಂತದಲ್ಲಿರುವ ಕುಲಂದ ಎಂಬ ಊರಿನಲ್ಲಿ ಕ್ರೈಸ್ತ ವಿಶ್ವಾಸಿಗಳು ಒಂದು ಗುಪ್ತ ಪತ್ರಿಕೆಯನ್ನು ಕಳಿಸಿದರು. ಇದರಲ್ಲಿ ಅವರು—ಕಮ್ಯುನಿಷ್ಟರ ಆಧೀನದಲ್ಲಿರುವ ಬ್ಯಾಪ್ಟಿಸ್ಟ ಸಭೆಯ ಮುಂದಾಳುಗಳು ನಿಜವಾದ

ಸಭೆಯನ್ನು ಅದರ ನಿಜವಾದ ಸೇವಕರನ್ನೂ ನಾಶಮಾಡಿದ್ದಾರೆಂದು ಹೇಳಿದ್ದರು. ಆ ಮುಂದಾಳುಗಳು ಕ್ರಿಸ್ತನನ್ನು ಪಿಲಾತನ ಕೈಗೆ ಒಪ್ಪಿಸಿದ ಯಾಜಕರ, ಶಾಸ್ತ್ರಿಗಳ ಮತ್ತು ಫರಿಸಾಯರ ಹಾಗೆ ಇದ್ದಾರೆಂದು ಅವರು ಬರೆದರು. ಆದರೆ ಗುಪ್ತ ಸಭೆಯು ನಂಬಿಗಸ್ತವಾಗಿ ಕ್ರಿಸ್ತನಿಗಾಗಿ ಸೇವೆ ಮಾಡುತ್ತಿದೆ. ಅವರು ಕಮ್ಯುನಿಷ್ಟರನ್ನೂ ಕ್ರಿಸ್ತನ ಕಡೆಗೆ ಎಳೆಯುತ್ತಾರೆಂದು ಕಮ್ಯುನಿಷ್ಟರು ತಾವೇ ಒಪ್ಪಿಕೊಳ್ಳುತ್ತಾರೆ. ಕಮ್ಯುನಿಷ್ಟರನ್ನು ಕ್ರಿಸ್ತನ ಕಡೆಗೆ ಎಳೆಯುವದು ಸಾಧ್ಯವಾಗಿದೆ.

ಬಾಕುವಿನ ಕೆಲಸದವನು ಎಂಬ ಪತ್ರಿಕೆಯಲ್ಲಿ ಏಪ್ರಿಲ್ 27, 1966 ರಲ್ಲಿ ಟಾನೀಯಾ ಎಂಬ ಹುಡುಗಿಯ ಒಂದು ಪತ್ರವು ಪ್ರಕಟಿಸಲ್ಪಟ್ಟಿತು. ಆಕೆಯು ಮೊದಲು ಕಮ್ಯುನಿಷ್ಟ ಯುವಜನ ಸಂಘದ ಸದಸ್ಯಳಾಗಿದ್ದಳು. ಆಕೆಯು ಕ್ರಿಸ್ತನ ಕಡೆಗೆ ತಿರುಗಿಕೊಂಡಳು. ಆಕೆಯು ತನ್ನ ಚಿಕ್ಕಮ್ಮನಿಗೆ ಬರೆದ ಒಂದು ಪತ್ರವು ಕಮ್ಯುನಿಷ್ಟರ ಕೈಗೆ ಸಿಕ್ಕಿತು. ಇದರಲ್ಲಿ ಆಕೆಯು—

"ಪ್ರಿಯ ಚಿಕ್ಕಮ್ಮ,

ನಮ್ಮ ಪ್ರಿಯ ಕರ್ತನಿಂದ ನಾನು ನಿಮಗೆ ಆಶೀರ್ವಾದಗಳನ್ನು ಕಳುಹಿಸುತ್ತೇನೆ. ಚಿಕ್ಕಮ್ಮಾ, ಆತನು ನನ್ನನ್ನು ಎಷ್ಟೋ ಪ್ರೀತಿಸುತ್ತಾನೆ! ಆತನ ಮುಂದೆ ನಾವು ಏನೂ ಇಲ್ಲದವರು. 'ನಿಮ್ಮ ವೈರಿಗಳನ್ನು ಪ್ರೀತಿಸಿರಿ. ನಿಮ್ಮನ್ನು ಹಿಂಸೆಪಡಿಸುವವರಿಗೋಸ್ಕರ ದೇವರನ್ನು ಪ್ರಾರ್ಥಿಸಿರಿ,' ಎಂದು ಆತನು ಹೇಳಿದ ಮಾತುಗಳ ಅರ್ಥ ನಿಮಗೆ ಗೊತ್ತಾಗಿದೆಯೆಂದು ನಾನು ನಂಬುತ್ತೇನೆ," ಎಂದು ಬರೆದಿದ್ದಳು.

ಈ ಪತ್ರ ಪೊಲೀಸರ ಕೈಗೆ ಸಿಕ್ಕ ನಂತರ ಆಕೆಯನ್ನೂ ಇನ್ನೂ ಅನೇಕ ಕಮ್ಯುನಿಷ್ಟ ಯುವಜನರನ್ನೂ ಕ್ರಿಸ್ತನ ಕಡೆಗೆ ಎಳೆದ ಪೀಟರ್ ಎಂಬ ಸಹೋದರನನ್ನು ಸೆರೆಮನೆಗೆ ಕಳುಹಿಸಲಾಯಿತು. ಕಮ್ಯುನಿಷ್ಟರ ವರ್ತಮಾನ ಪತ್ರದಲ್ಲಿ ಅವರ ಉಪದೇಶದ ಕೆಲವು ಮಾತುಗಳನ್ನು ಮುದ್ರಿಸಲಾಗಿತ್ತು. ಅವು ಯಾವುವೆಂದರೆ—"ಆದಿ ಕ್ರೈಸ್ತರ ಹಾಗೆ ನಾವು ನಮ್ಮ ರಕ್ಷಕನನ್ನು ನಂಬಬೇಕು. ಸತ್ಯವೇದವು ನಮಗೆ ಮುಖ್ಯವಾದ ನೇಮವಾಗಿದೆ. ಇದರ ಹೊರತಾಗಿ ನಾವು ಬೇರೆ ಅಧಿಕಾರಕ್ಕೆ ಅಧೀನರಾಗುವದಿಲ್ಲ. ಜನರನ್ನು ವಿಶೇಷವಾಗಿ ಯುವಜನರನ್ನು ಪಾಪದಿಂದ ರಕ್ಷಿಸಬೇಕೆಂದು ನಾವು ಆಸಕ್ತಿಯುಳ್ಳವರಾಗಿರಬೇಕು." ಅಧಿಕಾರಿಗಳು ಅವನಿಗೆ—"ಯುವಜನರಿಗೆ ಕ್ರಿಸ್ತನ ವಿಷಯವಾಗಿ ಹೇಳುವದು ನಮ್ಮ ದೇಶದ ನೇಮಕ್ಕೆ ವಿರುದ್ಧವಾಗಿದೆ," ಎಂದು ಹೇಳಿದಾಗ ಅವನು--"ನಮಗೆ ಸತ್ಯವೇದವು ನೇಮವಾಗಿದೆ," ಎಂದು ಉತ್ತರ ಕೊಟ್ಟನು. ಕ್ರೂರವಾದ ನಾಸ್ತಿಕರಿಂದ ಆಳಲ್ಪಟ್ಟ ದೇಶದಲ್ಲಿ ಅದು ನಿಜವಾಗಿ ಸದುತ್ತರವಾಗಿದೆ. ಆ ಪತ್ರಿಕೆಯಲ್ಲಿ—"ತರುಣ ತರುಣಿಯರು ಆತ್ಮೀಯ ಸಂಗೀತಗಳನ್ನು

ಹಾಡುತ್ತಾರೆ. ಅವರು ದೀಕ್ಷಾಸ್ನಾನವನ್ನು ಹೊಂದುತ್ತಾರೆ. ವೈರಿಗಳನ್ನು ಪ್ರೀತಿಸಬೇಕೆಂಬ ದುಷ್ಟ ದ್ರೋಹವಾದ ಶಿಕ್ಷಣವನ್ನು ಹೊಂದುತ್ತಾರೆ," ಎಂಬ ಭಯಂಕರವಾದ ಚಿತ್ರವನ್ನು ವಿವರಿಸಿದರು.

ಅದೇ ಪತ್ರಿಕೆಯಲ್ಲಿ—ಅನೇಕ ಯುವಜನರು ಕಮ್ಯುನಿಷ್ಟರ ಯುವಜನ ಸಂಘದಲ್ಲಿ ಸದಸ್ಯರಾಗಿದ್ದರೂ ನಿಜವಾಗಿ ಕ್ರೈಸ್ತರಾಗಿದ್ದಾರೆ. ಲೇಖಕನ ಕಡೆಯ ಭಾಗದಲ್ಲಿ—ಕ್ರೈಸ್ತ ಪಾಲಕರು ಶಿಷ್ಯರನ್ನು ಶಿಕ್ಷಕರ ಕಣ್ಣೆದುರಿನಲ್ಲಿ ಎಳೆಯುವದು ಸಾಧ್ಯವಾಗಿರುವ ಕಾರಣ ಕಮ್ಯುನಿಷ್ಟ ಶಾಲೆಗಳಲ್ಲಿ ಅವರಿಗೆ ಎಷ್ಟೋ ಬೇಸರವಾಗಿರಬೇಕು.

ಮತ್ತೊಂದು ವರ್ತಮಾನ ಪತ್ರದಲ್ಲಿ ಜೂನ್ 30, 1966 ರಲ್ಲಿ—"ಶಾಲೆಯಲ್ಲಿ ಎಲ್ಲರಿಗಿಂತ ಉತ್ತಮವಾದ ವಿದ್ಯಾರ್ಥಿಯು ಕ್ರೈಸ್ತನು" ಎಂಬ ಅತ್ಯಾಶ್ಚರ್ಯಕರವಾದ ವಿಷಯ ಮುದ್ರಿಸಲ್ಪಟ್ಟಿತು.

ಇನ್ನೊಂದು ವರ್ತಮಾನ ಪತ್ರದಲ್ಲಿ ಜನವರಿ 16, 1966 ರಲ್ಲಿ—ಗುಪ್ತ ಸಭಿಕರು ತಾಯಂದರಿಗಾಗಿ ಬರೆದ ಒಂದು ಹಸ್ತ ಪತ್ರಿಕೆಯು ಮುದ್ರಿಸಲ್ಪಟ್ಟಿದೆ. ಅದರಲ್ಲಿ—"ನಮ್ಮ ಮಕ್ಕಳು ಇನ್ನೂ ತೊಟ್ಟಿಲಲ್ಲಿರುವಾಗ ಅವರ ಜೀವಮಾನಗಳು ದೇವರಿಗಾಗಿ ಪ್ರತ್ಯೇಕಿಸಲಿಕ್ಕೆ ನಮ್ಮ ಪ್ರಾರ್ಥನೆಗಳನ್ನೂ ಪ್ರಯತ್ನಗಳನ್ನೂ ಮಾಡೋಣ, ಲೋಕದ ಪ್ರಭಾವದಿಂದ ನಮ್ಮ ಮಕ್ಕಳನ್ನು ರಕ್ಷಿಸಿಕೊಳ್ಳೋಣ," ಎಂದು ಬರೆದಿದೆ.

ಈ ಪ್ರಯತ್ನಗಳಿಂದ ಯಶ ಸಿಕ್ಕಿತು. ಕಮ್ಯುನಿಷ್ಟರ ವರ್ತಮಾನ ಪತ್ರಗಳು ಇದಕ್ಕೆ ಸಾಕ್ಷಿ ಕೊಡುತ್ತವೆ. ಕ್ರೈಸ್ತತ್ವವು ಯುವಜನರಲ್ಲಿ ಮುಂದೆ ಮುಂದೆ ಹೋಗುತ್ತಿದೆ.

ನೀನಾ ಎಂಬ ಹುಡುಗಿ ಕಮ್ಯುನಿಷ್ಟ ಯುವಜನ ಸಂಘದ ಸದಸ್ಯಳಾಗಿದ್ದಳು. ಆಕೆಯು ಒಂದು ಗುಪ್ತ ಕ್ರೈಸ್ತ ಸಭೆಗೆ ಹೋಗಿ ತಾನೇ ಕ್ರೈಸ್ತಳಾದಳೆಂದು ಮತ್ತೊಂದು ವರ್ತಮಾನ ಪತ್ರದಲ್ಲಿ ಬರೆಯಲ್ಪಟ್ಟಿತು.

'ಸೋವ್ಹಿಯತ್ ನ್ಯಾಯ' ಎಂಬ ಮಾಸಪತ್ರಿಕೆಯ 1966 ರ 9 ನೆಯ ಸಂಚಿಕೆಯಲ್ಲಿ ಅಂಥ ಸಭೆಯು ವರ್ಣಿಸಲ್ಪಟ್ಟಿತು :—"ಈ ಕೂಟ ಮಧ್ಯರಾತ್ರಿಯಾಯಿತು. ಬೇರೆ ಬೇರೆ ಸ್ಥಳಗಳಿಂದ ಜನರು ಎಚ್ಚರಿಕೆಯಿಂದ ಬಂದರು. ಕತ್ತಲೆಯುಳ್ಳ ಕೋಣೆಯು ಜನರಿಂದ ತುಂಬಿಹೋಯಿತು. ಮೇಲ್ಛಾವಣಿಯು ಬಹಳ ಕೆಳಗಿತ್ತು. ಅಲ್ಲಿ ಬಹಳ ಜನರಿದ್ದ ಕಾರಣ ಮೊಣಕಾಲೂರಲು ಅವರಿಗೆ ಸಾಧ್ಯವಿರಲಿಲ್ಲ. ಹವೆಯು ಕಡಿಮೆಯಿದ್ದ ಕಾರಣ ದೀಪವು ನಂದಿಹೋಯಿತು.

ಜನರ ಮುಖಗಳಿಂದ ಬೆವರು ಹರಿಯುತ್ತಿತ್ತು. ಕರ್ತನ ಸೇವಕರಲ್ಲಿ ಒಬ್ಬನು ಹೊರಗೆ ನಿಂತು ಪೊಲೀಸರನ್ನು ಗವಂನಿಸುತ್ತಿದ್ದನು," ಎಂಬುದೇ. ಇಂಥ ಸಭೆ ಯಲ್ಲಿ ನೀನಾ ಪ್ರೀತಿಯಿಂದ ಸ್ವಾಗತಿಸಲ್ಪಟ್ಟಳು. ಆಕೆಯು—"ಅವರಿಗೆ ಪ್ರಕಾಶಕೊಡುವ ದೊಡ್ಡ ನಂಬಿಕೆಯಿತ್ತು. ಈಗ ಅವರ ಹಾಗೆ ದೇವರಲ್ಲಿ ನನಗೂ ನಂಬಿಕೆಯಿದೆ. ಆತನು ನಮ್ಮನ್ನು ಕಾಪಾಡುತ್ತಾನೆ. ಕಮ್ಯುನಿಷ್ಟ ಯುವಜನರು ನನ್ನನ್ನು ಅಲಕ್ಷ್ಯಮಾಡಿದರೂ ನನ್ನನ್ನು ಹಾಸ್ಯಮಾಡಿದರೂ ನನಗೆ ಚಿಂತೆಯಿಲ್ಲ. ಯಾಕೆಂದರೆ ಈಗ ನನಗೆ ಅವರು ಬೇಡ," ಎಂದು ಸಾಕ್ಷಿ ಕೊಟ್ಟಳು. ಆದೇ ರೀತಿಯಲ್ಲಿ ಅನೇಕ ಕಮ್ಯುನಿಷ್ಟ ಯೌವನಸ ರು ಕಡೆಯ ವರೆಗೆ ಕ್ರಿಸ್ತನನ್ನು ಸೇವಿಸುವ ತೀರ್ಮಾನ ಮಾಡಿದ್ದಾರೆ.

ಗುಪ್ತ ಸಭೆಯ ಕ್ರೈಸ್ತರು ಅನೇಕಾವರ್ತಿ ಕಮ್ಯುನಿಷ್ಟ ನ್ಯಾಯಸ್ಥಾನ ಗಳಲ್ಲಿ ಪರೀಕ್ಷಿಸಲ್ಪಡುತ್ತಾರೆ. ಸದುತ್ತರ ಕೊಡಲು ದೇವರ ಪವಿತ್ರಾತ್ಮನು ಅವರನ್ನು ಪ್ರೇರೇಪಿಸುತ್ತಾನೆ. ಒಬ್ಬ ನ್ಯಾಯಾಧೀಶನು ಒಬ್ಬ ಕ್ರೈಸ್ತ ಸಹೋದರಿ ಯನ್ನು—"ನೀನು ದೇಶದ ನೇಮದ ವಿರುದ್ಧವಾಗಿ ಜನರನ್ನು ನಿನ್ನ ಧರ್ಮಕ್ಕೆ ಯಾಕೆ ಆಕರ್ಷಿಸುತ್ತೀ ?" ಎಂದು ಕೇಳಿದನು. ಆಕೆಯು—"ಲೋಕದಲ್ಲಿರುವ ಎಲ್ಲಾ ಜನರನ್ನು ಕ್ರಿಸ್ತನ ಕಡೆಗೆ ಎಳೆಯುವದು ನಮ್ಮ ಉದ್ದೇಶವಾಗಿದೆ," ಎಂದು ಉತ್ತರ ಕೊಟ್ಟಳು.

ಇನ್ನೊಂದು ನ್ಯಾಯ ವಿಚಾರಣೆಯಲ್ಲಿ ಒಬ್ಬ ವಿದ್ಯಾರ್ಥಿನಿಯು ನ್ಯಾಯಾ ಧೀಶನ ಮುಂದೆ ನಿಂತುಕೊಂಡಿದ್ದಳು. ನ್ಯಾಯಾಧೀಶನು ಆಕೆಗೆ—"ನಿನ್ನ ಧರ್ಮ ವಿಜ್ಞಾನಕ್ಕೆ ವಿರುದ್ಧವಾಗಿದೆ," ಎಂದು ಹಾಸ್ಯದಿಂದ ಹೇಳಿದನು. ಆಕೆಯು ಅವನಿಗೆ—"ಐನ್‌ಸ್ಟೈನ್ ಹಾಗೂ ನ್ಯೂಟನ್‌ರಿಗಿಂತ ನಿಮಗೆ ಹೆಚ್ಚಿನ ವಿಜ್ಞಾನ ಗೊತ್ತಾಗಿದೆಯೋ ? ಅವರು ವಿಶ್ವಾಸಿಗಳಾಗಿದ್ದರು. ವಿಶ್ವದಲ್ಲಿ ಐನ್‌ಸ್ಟೈನ್ ಹೆಸರು ಪ್ರಸಿದ್ಧವಾಗಿದೆಯೆಂದು ನಾನು ಹೈಸ್ಕೂಲಿನಲ್ಲಿ ಕಲಿತೆನು. ಅವನು—'ನಾವು ಯೆಹೂದಿ ಪ್ರವಾದಿಗಳು ಬೋಧಿಸಿದ ಧರ್ಮವನ್ನು ಯೇಸು ತಾನೇ ಬೋಧಿಸಿದ ಕ್ರೈಸ್ತತ್ವವನ್ನೂ ಅವರ ಕಾಲವಾದ ನಂತರ ಬಂದಂಥ ಪೂಜಾರಿತನದಿಂದಲೂ ಇತರ ಬೋಧನೆಗಳಿಂದಲೂ ಶುದ್ಧಗೊಳಿಸಿದರೆ ಎಲ್ಲಾ ಸಾಮಾಜಿಕ ದುಷ್ಟತ್ವಗಳಿಂದ ಲೋಕವನ್ನು ರಕ್ಷಿಸಬಲ್ಲ ಧರ್ಮವು ನಮಗಿರು ವದು. ಆ ಧರ್ಮಕ್ಕೆ ವಿಜಯ ಸಿಕ್ಕುವಂತೆ ಹೋರಾಡುವದು ಪ್ರತಿಯೊಬ್ಬ ಮನುಷ್ಯನ ಪರಿಶುದ್ಧ ಕರ್ತವ್ಯವಾಗಿದೆ,' ಎಂದು ಬರೆದನು. ಶರೀರ ವಿಜ್ಞಾನಿ ಯಾದ ನಮ್ಮ ಮಹಾ ಪೆವೆಲೋವರವರನ್ನು ಜ್ಞಾಪಕಮಾಡಿರಿ. ಅವನು ಕ್ರೈಸ್ತನೆಂದು ನಮ್ಮ ಸ್ವಂತ ಪುಸ್ತಕಗಳು ಸ್ಪಷ್ಟವಾಗಿ ತಿಳಿಸುತ್ತವೆ. ಮಾರ್ಕ್ಸನು ಸ್ವತಃ ತನ್ನ ಮುಖ್ಯವಾದ ಪುಸ್ತಕದ ಮುನ್ನುಡಿಯಲ್ಲಿ—'ಪ್ರೊಟೆಸ್ಟಂಟ ರೂಪದ ಕ್ರೈಸ್ತತ್ವವು ಪಾಪದಿಂದ ಕೆಡಿಸಲ್ಪಟ್ಟ ಮಾನವನ ಗುಣಗಳನ್ನು ಸರಿಪಡಿಸುವ

ಸದ್ಧರ್ಮವಾಗಿದೆ; ಎಂದು ಬರೆದನು. ನಾನು ಪಾಪದಿಂದ ಕೆಡಿಸಲ್ಪಟ್ಟವಳಾಗಿದ್ದೆನು. ನನ್ನ ಗುಣವನ್ನು ಸರಿಪಡಿಸುವಂತೆ ಕ್ರೈಸ್ತಳಾಗಬೇಕೆಂದು ಮಾರ್ಕ್ಸರವರು ನನಗೆ ಬೋಧನೆ ಮಾಡಿದ್ದಾರೆ. ಮಾರ್ಕ್ಸನ ತತ್ವವನ್ನು ಅನುಸರಿಸುವವರಾದ ನೀವು ಇದಕ್ಕಾಗಿ ನನಗೆ ನ್ಯಾಯ ತೀರಿಸುವದು ಯೋಗ್ಯವಾಗಿದೆಯೋ ?" ಎಂದು ಉತ್ತರ ಕೊಟ್ಟಳು. ನ್ಯಾಯಾಧೀಶನು ಯಾಕೆ ಮೌನವಾದನೆಂದು ಗ್ರಹಿಸುವದು ಸುಲಭವಾಗಿದೆ.

ಮತ್ತೊಬ್ಬ ನ್ಯಾಯಾಧೀಶನು ಒಬ್ಬ ಕ್ರೈಸ್ತನಿಗೆ—''ನಿನ್ನ ಧರ್ಮವು ವಿಜ್ಞಾನ ಶಾಸ್ತ್ರಕ್ಕೆ ವಿರುದ್ಧವಾಗಿದೆ,'' ಎಂದು ಹೇಳಿದನು. ಆ ವಿಶ್ವಾಸಿಯು ನ್ಯಾಯಾಲಯದಲ್ಲಿ ನಿಂತುಕೊಂಡು—''ಶ್ರೀ ನ್ಯಾಯಾಧೀಶರೇ, ಕ್ಲೋರೋಫಾರ್ಮ ಮುಂತಾದ ಔಷಧಗಳನ್ನು ಪರಿಶೋಧಿಸಿದ ನೆಂಸೋನನಿಗಿಂತ ನೀವು ಹೆಚ್ಚಿನ ವಿಜ್ಞಾನ ಶಾಸ್ತ್ರಿಯಲ್ಲವೆಂದು ನನಗೆ ಭರವಸ ಉಂಟು. ಒಂದು ದಿವಸ ಒಬ್ಬ ವ್ಯಕ್ತಿ ಅವನನ್ನು—'ನೀವು ಪರಿಶೋಧಿಸಿದ ವಿಷಯಗಳಲ್ಲಿ ಮುಖ್ಯವಾದದ್ದು ಯಾವುದು ?' ಎಂದು ಕೇಳಿದಾಗ ಅವನು—'ಅದು ಕ್ಲೋರೋಫಾರ್ಮ ಅಲ್ಲ. ನಾನು ಪಾಪಿಯಾಗಿದ್ದೇನೆಂತಲೂ ದೇವರ ಕೃಪೆಯಿಂದ ರಕ್ಷಿಸಲ್ಪಟ್ಟವನೆಂತಲೂ ತಿಳಿದುಕೊಳ್ಳುವದು ನಮ್ಮ ಸಂಶೋಧನೆಗಳಲ್ಲಿ ಅತಿ ಪ್ರಮುಖವಾದದ್ದು' ಎಂದು ಹೇಳಿದನು,'' ಎಂದು ಅವನು ಉತ್ತರ ಕೊಟ್ಟನು.

ಗುಪ್ತ ಸಭೆಯ ಕ್ರೈಸ್ತರು ತಮ್ಮ ವಿಶ್ವಾಸಕ್ಕಾಗಿ ಜೀವಿಸುತ್ತಾ ಸ್ವತ್ಯಾಗ ಮಾಡುತ್ತಾ ತಮ್ಮ ರಕ್ತವನ್ನು ಸುರಿಸಲು ಸಿದ್ಧರಾಗುತ್ತಾ ಇದ್ದಾರೆ. ಇವುಗಳಿಂದ ಅವರು ಕ್ರೈಸ್ತತ್ವಕ್ಕೆ ಸಾಕ್ಷಿ ಕೊಡುತ್ತಾರೆ. ಆಫ್ರಿಕ ದೇಶದಲ್ಲಿ ಆಲ್ಬರ್ಟ ಸ್ವೈಟ್ಜರ ಎಂಬವನು ಸುಪ್ರಸಿದ್ಧ ಮಿಶನರಿಯಾಗಿದ್ದನು. ಅವನು—''ಸಂಕಟವೆಂಬ ಗುರುತಿನವರ ಪರಿಶುದ್ಧ ಅನ್ಯೋನ್ಯತೆ'' ಯನ್ನು ಕುರಿತು ಬರೆದನು. ಈ ವಿಶ್ವಾಸಿಗಳು ದುಃಖಿತ ಮನುಷ್ಯನಾದ ಯೇಸುವಿನ ಸಂಗಡ ಆ ಅನ್ಯೋನ್ಯತೆಯಲ್ಲಿದ್ದಾರೆ. ಈ ಬಂಧನದಿಂದ ಅವರು ಒಬ್ಬರಿಗೊಬ್ಬರು ಕಟ್ಟಲ್ಪಟ್ಟಿದ್ದಾರೆ. ಅವರನ್ನು ಸೋಲಿಸಲು ಲೋಕದಲ್ಲಿ ಯಾರಿಗೂ ಸಾಧ್ಯವಿಲ್ಲ. ಅವರು ಗುಪ್ತವಾಗಿ ಹೊರಗೆ ಕಳುಹಿಸಲ್ಪಟ್ಟ ಒಂದು ಪತ್ರದಲ್ಲಿ—"ನಾವು ಉತ್ತಮ ಕ್ರೈಸ್ತರಾಗಬೇಕೆಂದು ಪ್ರಾರ್ಥಿಸುವದಿಲ್ಲ. ಆದರೆ ನಾವು ಯಾವ ಕ್ರೈಸ್ತರಾಗಬೇಕೆಂದು ದೇವರು ಇಚ್ಛೈಸುತ್ತಾನೋ ಆ ಕ್ರೈಸ್ತರಾಗಬೇಕೆಂದು ನಾವು ಪ್ರಾರ್ಥಿಸುತ್ತೇವೆ. ಅವರು ಎಂಥವರಾಗಿದ್ದಾರೆಂದು ನೀವು ಕೇಳಿದರೆ—ಕ್ರಿಸ್ತನ ಹಾಗೆ ದೇವರ ಮಹಿಮೆಗಾಗಿ ಶಿಲುಬೆಯನ್ನು ಹೊತ್ತುಕೊಳ್ಳುವ ಕ್ರೈಸ್ತರಾಗಿದ್ದಾರೆ,'' ಎಂದು ಬರೆದರು. ಕ್ರಿಸ್ತನ ಅಪ್ಪಣೆಯ ಪ್ರಕಾರ ಈ ವಿಶ್ವಾಸಿಗಳು ಸರ್ಪಗಳ ಹಾಗೆ ಜ್ಞಾನಿಗಳಾಗಿ ತಮ್ಮ ಮುಂದಾಳುಗಳು ಯಾರೆಂದು ಪೊಲೀಸರಿಗೂ ನ್ಯಾಯಾಧೀಶರಿಗೂ ತಿಳಿಸಲು ಒಪ್ಪುವದಿಲ್ಲ.

ಜನವರಿ 15, 1966 ರಲ್ಲಿ ಒಂದು ವರ್ತಮಾನ ಪತ್ರದಲ್ಲಿ ಈ ವಿಷಯ ಬರೆದಿದೆ. ನ್ಯಾಯಾಧೀಶನು ಮರಿಯ ಎಂಬ ಹೆಂಗಸನ್ನು—"ನಿನ್ನನ್ನು ಕ್ರಿಸ್ತನ ಕಡೆಗೆ ಯಾರು ತಂದರು ?'' ಎಂದು ಕೇಳಿದನು. ಆಕೆಯು—''ದೇವರು ತನ್ನ ಸಭೆಯಲ್ಲಿ ನನ್ನನ್ನು ಆಕರ್ಷಿಸಿದನು," ಎಂದು ಉತ್ತರಿಸಿದಳು. ಮತ್ತೊಬ್ಬ ನ್ಯಾಯಾಧೀಶನು ಇನ್ನೊಬ್ಬ ವಿಶ್ವಾಸಿಯನ್ನು—''ನಿಮ್ಮ ಮುಂದಾಳು ಯಾರು ?'' ಎಂದು ಕೇಳಿದನು. ಅವನು—"ಮನುಷ್ಯನಾದ ಮುಂದಾಳು ನಮಗಿಲ್ಲ," ಎಂದು ಉತ್ತರ ಕೊಟ್ಟನು.

ಕಮ್ಯುನಿಷ್ಟ ಮಕ್ಕಳ ಸಂಘದ ಗುರುತು ಒಂದು ಕೆಂಪು ನೆಕ್ ಟೈ ಆಗಿದೆ. ಕ್ರೈಸ್ತ ಮಕ್ಕಳು ಆ ಸಂಘವನ್ನು ಬಿಟ್ಟು ಅವರ ನೆಕ್ ಟೈ ಧರಿಸಿಕೊಳ್ಳುವದಿಲ್ಲ. ಇದನ್ನು ನೋಡಿ ಕೆಲವರು—"ನೀವು ಹೀಗೆ ಯಾಕೆ ಮಾಡಿದಿರಿ ?" ಎಂದು ಅವರನ್ನು ಕೇಳಿದರು. ಅವರು—"ನಾವು ನಮ್ಮಷ್ಟಕ್ಕೆ ನಾವೇ ಹಾಗೆ ಮಾಡಿದ್ದೇವೆ. ಯಾರೂ ಹಾಗೆ ಮಾಡುವಂತೆ ನಮಗೆ ಹೇಳಲಿಲ್ಲ," ಎಂದು ಉತ್ತರ ಕೊಟ್ಟರು.

ಕೆಲವು ಸ್ಥಳಗಳಲ್ಲಿ ಗುಪ್ತ ಸಭೆಯ ಕಾರ್ಯ ಸ್ವಲ್ಪ ಮಟ್ಟಿಗೆ ಹೊರಗೆ ಕಾಣಿಸುತ್ತದೆ. ಬೇರೆ ಸ್ಥಳಗಳಲ್ಲಿ ತಮ್ಮ ಮುಂದಾಳುಗಳಿಗೆ ಕಷ್ಟವಾಗದಂತೆ ಕ್ರೈಸ್ತರು ತಮ್ಮನ್ನು ದೀಕ್ಷಾಸ್ನಾನ ಮಾಡಿಸಿಕೊಳ್ಳುತ್ತಾರೆ. ಬೇರೆ ಸ್ಥಳಗಳಲ್ಲಿ ವಿಶ್ವಾಸಿಗಳು ನದಿಗಳಲ್ಲಿ ದೀಕ್ಷಾಸ್ನಾನ ಮಾಡುತ್ತಾರೆ. ಆದರೆ ಫೋಟೋಗಳಿಂದ ಅವರ ಗುರುತು ಇತರರಿಗೆ ತಿಳಿಸದಂತೆ ಅವರು ಮೋರೆಗಳ ಮೇಲೆ ಮುಸುಕು ಹಾಕಿಕೊಳ್ಳುತ್ತಾರೆ.

ಮತ್ತೊಂದು ಮಾಸ ಪತ್ರಿಕೆಯಲ್ಲಿ ಜನವರಿ 30, 1964 ರಲ್ಲಿ ಈ ಸಂಗತಿ ಬರೆಯಲ್ಪಟ್ಟಿತು :— ಮ್ಹೊರೋನಿನ್ ಗ್ರಾಮದಲ್ಲಿ ಒಬ್ಬ ನಾಸ್ತಿಕನು ಒಂದು ಭಾಷಣ ಮಾಡಿದನು. ಅವನ ಭಾಷಣ ಮುಗಿದ ನಂತರ ವಿಶ್ವಾಸಿಗಳು ಪ್ರಶ್ನೆಗಳ ಮೂಲಕವಾಗಿ ಆ ಬೋಧನೆಯನ್ನು ವಿರೋಧಿಸಲು ಪ್ರಾರಂಭಿಸಿದರು. ಆ ಪ್ರಶ್ನೆಗಳಿಗೆ ಉತ್ತರ ಕೊಡಲು ಆ ನಾಸ್ತಿಕನಿಗೆ ಸಾಧ್ಯವಿರಲಿಲ್ಲ. ಅವರು—"ಕಮ್ಯುನಿಷ್ಟರಾದ ನೀವು ಕೆಲವು ನೈತಿಕ ತತ್ವಗಳನ್ನು ಪ್ರಚಾರ ಮಾಡುತ್ತೀರಿ. ಆದರೆ ನೀವು ಸ್ವತಃ ಅವುಗಳನ್ನು ಅನುಸರಿಸುವದಿಲ್ಲ. ಅವುಗಳಲ್ಲಿ—ಕದಿಯಬಾರದು ಮತ್ತು ನರಹತ್ಯ ಮಾಡಬಾರದು ಎಂಬ ಎರಡು ತತ್ವಗಳಿವೆ. ಅವುಗಳು ನಿಮಗೆ ಎಲ್ಲಿಂದ ಸಿಕ್ಕುತ್ತವೆ ? ನೀವು ಯಾವ ಸತ್ಯವೇದದ ವಿರೋಧವಾಗಿ ಮಾತಾಡುತ್ತೀರೋ ಆ ಸತ್ಯವೇದದಲ್ಲಿಯೇ ಈ ತತ್ವಗಳು ಸಿಕ್ಕುತ್ತವೆ," ಎಂದು ಹೇಳಿದರು. ಭಾಷಣಗಾರನಿಗೆ ಕಳವಳವಾಯಿತು. ವಿಶ್ವಾಸಿಗಳಿಗೆ ವಿಜಯ ಸಿಕ್ಕಿತು.

## ಗುಪ್ತ ಸಭೆಯು ತಾಳುವ ಹಿಂಸೆ

ಪೂರ್ವ ಕಾಲಕ್ಕಿಂತ ಈಗಿನ ಕಾಲದಲ್ಲಿ ಗುಪ್ತ ಸಭೆಯು ಕ್ರೈಸ್ತರು ಹೆಚ್ಚಾದ ಕಷ್ಟವನ್ನು ತಾಳುತ್ತಿದ್ದಾರೆ. ರಷ್ಯ ದೇಶದಲ್ಲಿ ಎಲ್ಲಾ ಧರ್ಮಗಳನ್ನು ಅನುಸರಿಸುವವರಿಗೆ ಹಿಂಸೆಯಾಗುತ್ತಿದೆ. ಯೆಹೂದ್ಯರಿಗೆ ಆಗುವ ಹಿಂಸೆಯ ವಿಷಯವಾಗಿ ಕೇಳಿ ವಿಶ್ವಾಸಿಗಳು ದುಃಖಪಡುತ್ತಾರೆ. ಆದರೆ ಗುಪ್ತ ಸಭೆಯು ಹಿಂಸೆಯ ಮುಖ್ಯ ಗುರಿಯಾಗಿದೆ. ಅನೇಕ ವಿಶ್ವಾಸಿಗಳ ಹಿಡಿಯುವಿಕೆಯು ಮತ್ತು ನ್ಯಾಯವಿಚಾರಣೆಯ ವಿಷಯವಾಗಿ ರಷ್ಯ ವರ್ತಮಾನ ಪತ್ರಗಳಲ್ಲಿ ಬರೆಯಲ್ಪಟ್ಟಿತು. ಒಂದು ಸ್ಥಳದಲ್ಲಿ 82 ಜನ ಕ್ರೈಸ್ತರು ಹುಚ್ಚರಾಸ್ಪತ್ರೆಯಲ್ಲಿ ಹಾಕಲ್ಪಟ್ಟರು. ಕೆಲವು ದಿವಸಗಳಾದ ನಂತರ 24 ಜನರು ಸತ್ತರು. ಅವರು "ಹೆಚ್ಚಿನ ಪ್ರಾರ್ಥನೆಯನ್ನು" ಮಾಡಿದ ಕಾರಣ ಸತ್ತರೆಂದು ರಷ್ಯ ವರ್ತಮಾನ ಪತ್ರಿಕೆಗಳಲ್ಲಿ ಬರೆದಿದೆ. ಪ್ರಾರ್ಥನೆಯಿಂದ ಜನರು ಸಾಯುತ್ತಾರೋ ? ಅವರು ತಾಳಿದ ಕಷ್ಟಗಳನ್ನು ಕಲ್ಪಿಸುವದು ನಿಮಗೆ ಸಾಧ್ಯವೋ ?

ಎಲ್ಲಾ ಕಷ್ಟಗಳಿಗಿಂತ ಮುಖ್ಯವಾದ ಕಷ್ಟವಾವುದೆಂದರೆ—ಕ್ರೈಸ್ತ ತಂದೆ ತಾಯಿಗಳು ಕ್ರಿಸ್ತನ ವಿಷಯವಾಗಿ ತಮ್ಮ ಮಕ್ಕಳಿಗೆ ಶಿಕ್ಷಣ ಕೊಟ್ಟರೆ ಆ ಮಕ್ಕಳು ಶಾಶ್ವತವಾಗಿ ಅವರಿಂದ ಅಗಲಿಸಲ್ಪಡುತ್ತಾರೆ. ಅವರ ಸ್ವಂತ ಮಕ್ಕಳನ್ನು ಭೆಟ್ಟಿಯಾಗುವ ಹಕ್ಕು ಆ ತಂದೆತಾಯಿಗಳಿಗಿಲ್ಲ. ಸಂಯುಕ್ತ ರಾಷ್ಟ್ರಗಳು ಶಿಕ್ಷಣದ ವಿಷಯವಾಗಿ ಒಂದು ಉದ್ದೇಶ ಪತ್ರಿಕೆಯನ್ನು ಪ್ರಕಟಿಸಿದವು. ರಷ್ಯ ದೇಶದ ಪ್ರತಿನಿಧಿಗಳು ಅದಕ್ಕೆ ಸಹಿ ಹಾಕಿದರು. ಅದರಲ್ಲಿ—"ತಂದೆತಾಯಿಗಳು ತಮ್ಮ ಸ್ವಂತ ನಂಬಿಕೆಯ ಪ್ರಕಾರ ತಮ್ಮ ಮಕ್ಕಳ ಧಾರ್ಮಿಕ ಹಾಗೂ ನೈತಿಕ ಶಿಕ್ಷಣವನ್ನು ಕೊಡುವ ಹಕ್ಕು ಚೆನ್ನಾಗಿ ಕಾಪಾಡಲ್ಪಡ ಬೇಕಾಗುತ್ತದೆ," ಎಂದು ಬರೆದಿದೆ. ಹೊರಗಿನ ಬ್ಯಾಪ್ಟಿಸ್ಟ ಸಭೆಗಳ ಸಂಗಡ ಮುಂದಾಳಾದ ಕಾರೇವ್—ಇದು ರಷ್ಯದಲ್ಲಿ ಸತ್ಯವೆಂದು ಬರೆದನು. ಅವನು ನಿಜವಾಗಿ ದ್ರೋಹಿಯೂ ಮೋಸಗಾರನೂ ಆಗಿದ್ದಾನೆ. ಆದರೆ ರಷ್ಯ ದೇಶದ ವರ್ತಮಾನ ಪತ್ರಗಳಲ್ಲಿ ಬರೆದ ಸಂಗತಿಗಳಿಗೆ ನಾವು ಲಕ್ಷ್ಯಕೊಡಬೇಕು.

ಒಂದು ಮಾಸ ಪತ್ರಿಕೆಯಲ್ಲಿ ಜೂನ್ 4, 1963 ರಲ್ಲಿ ಈ ಸಂಗತಿ ಬರೆಯಲ್ಪಟ್ಟಿದೆ. ಮಾಕ್ರೀನ್ ಕಾವ್ಹಾ ಎಂಬ ಕ್ರೈಸ್ತ 'ವಿಶ್ವಾಸಿನಿಗೆ ಆರು ಜನ ಮಕ್ಕಳಿದ್ದರು. ಆಕೆಯು ಅವರಿಗೆ ಕ್ರೈಸ್ತ ವಿಶ್ವಾಸವನ್ನು ಬೋಧಿಸಿ—"ನೀವು ಆ ಕೆಂಪು ನೆಕ್ ಟೈ ಧರಿಸಿಕೊಳ್ಳಬಾರದು," ಎಂದು ಬೋಧಿಸಿದಳು. ನ್ಯಾಯವಿಚಾರಣೆಯಲ್ಲಿ ಆ ಆರು ಮಕ್ಕಳು ಆಕೆಯಿಂದ ವಿಭಾಗಿಸಲ್ಪಟ್ಟರು. ಇದನ್ನು ಕೇಳಿ ಆಕೆಯು—"ನಾನು ನಂಬಿಕೆಗಾಗಿ ಕಷ್ಟಪಡುತ್ತೇನೆ," ಎಂದು ಹೇಳಿದಳು. ಆಕೆಯು ಈ ಮಕ್ಕಳ ಪೋಷಣೆಗಾಗಿ ಖರ್ಚನ್ನು ಕೊಡಬೇಕಾಗುತ್ತದೆ. ಆಕೆಯ ಮಕ್ಕಳ ಮನಸ್ಸುಗಳಿಗೆ ನಾಸ್ತಿಕತ್ವವೆಂಬ ವಿಷವು ಕೊಡಲ್ಪಟ್ಟಿದೆ. ಕ್ರೈಸ್ತ ತಾಯಂದಿರೇ, ಆಕೆಯ ದುಃಖದ ವಿಷಯವಾಗಿ ಯೋಚನೆ ಮಾಡಿರಿ !

ಇನ್ನೊಂದು ಮಾಸ ಪತ್ರಿಕೆಯಲ್ಲಿ ಮತ್ತೊಂದು ದಂಪತಿಯ ವಿಷಯವಾಗಿ ಬರೆಯಲ್ಪಟ್ಟಿತು. ನ್ಯಾಯಾಧೀಶನು ಅವರಿಗೆ—"ನೀವು ನಿಮ್ಮ ವಿಶ್ವಾಸವನ್ನು ತ್ಯಜಿಸಿಬಿಡಬೇಕು," ಎಂದು ಅಪ್ಪಣೆ ಕೊಟ್ಟನು. ಆನಂತರ ಅವನು— "ಯಾವನು ಬೇಕು ? ನಿಮ್ಮ ದೇವರೋ ? ನಿಮ್ಮ ಮಗಳೋ ? ಆರಿಸಿ ಕೊಳ್ಳಿರಿ. ನೀವು ದೇವರನ್ನು ಆರಿಸಿಕೊಳ್ಳುತ್ತೀರೋ ?" ಎಂದು ಕೇಳಿದನು. ತಂದೆಯು ಪ್ರತ್ಯುತ್ತರವಾಗಿ—"ನಾನು ನನ್ನ ವಿಶ್ವಾಸವನ್ನು ತ್ಯಜಿಸಿಬಿಡಲಾರೆನು," ಎಂದು ಹೇಳಿದನು.

ಶ್ರೀ ಪೌಲನು—"ದೇವರನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯ ಗಳು ಅನುಕೂಲವಾಗುತ್ತವೆ ಎಂದು ನಮಗೆ ಗೊತ್ತಿದೆ," ಎಂದು ಬರೆದನು. ಅನೇಕಾವರ್ತಿ ಕ್ರೈಸ್ತರಾಗಿ ಶಿಕ್ಷಣವನ್ನು ಹೊಂದಿದ ಮಕ್ಕಳು ತಮ್ಮ ತಂದೆ ತಾಯಂದಿರಿಂದ ವಿಭಾಗಿಸಲ್ಪಟ್ಟು ಕಮ್ಯುನಿಷ್ಟ ಶಾಲೆಗಳಲ್ಲಿ ಇಡಲ್ಪಟ್ಟಿದ್ದಾರೆ. ಆದರೆ ಅವರು ನಾಸ್ತಿಕತ್ವದಿಂದ ಕೆಡಿಸಲ್ಪಡಲಿಲ್ಲ. ಅದರ ವಿರುದ್ಧವಾಗಿ ಅವರು ತಮ್ಮ ಮನೆಗಳಲ್ಲಿ ಕಲಿತ ವಿಶ್ವಾಸವನ್ನು ಅಲ್ಲಿದ್ದ ಉಳಿದ ಮಕ್ಕಳಿಗೆ ತಿಳಿಸು ತ್ತಿದ್ದರು.

ಯೇಸು ಸ್ವಾಮಿ ತಾನೇ—"ಮಗನ ಮೇಲಾಗಲೀ ಮಗಳ ಮೇಲಾಗಲೀ ನನ್ನ ಮೇಲೆ ಇಡುವದಕ್ಕಿಂತ ಹೆಚ್ಚಾದ ಮಮತೆ ಇಡುವವನು ನನಗೆ ಯೋಗ್ಯ ನಲ್ಲ," ಎಂದು ತನ್ನ ಶಿಷ್ಯರಿಗೆ ಹೇಳಿದನು. ಕಮ್ಯುನಿಷ್ಟ ದೇಶಗಳಲ್ಲಿ ಈ ಮಾತುಗಳಿಗೆ ವಿಶೇಷವಾದ ಅರ್ಥವಿದೆ. ಒಂದು ವಾರದ ವರೆಗೆ ಮಕ್ಕಳನ್ನು ನೋಡದೇ ಜೀವಿಸುವದು ನಮಗೆ ಕಠಿಣವಾಗಿದೆ. ಹಾಗಾದರೆ ರಷ್ಯ ದೇಶ ದಲ್ಲಿ ತಮ್ಮ ಮಕ್ಕಳಿಂದ ಶಾಶ್ವತವಾಗಿ ಪ್ರತ್ಯೇಕಿಸಲ್ಪಟ್ಟ ತಂದೆ ತಾಯಿಯರ ಮನೋದುಃಖ ಎಷ್ಟೋ ಭಯಂಕರವಾಗಿದೆ.

ಕೇವಲ ಪ್ರೊಟೆಸ್ಟಂಟರ ಗುಪ್ತ ಸಭೆಯ ವಿಷಯವಾಗಿ ಮಾತನಾಡು ವದು ಯೋಗ್ಯವಲ್ಲ. ರಷ್ಯ ದೇಶದಲ್ಲಿದ್ದ ಆರ್ಥೊಡೊಕ್ಸ್ ಸಭೆಯ ಕ್ರೈಸ್ತರಿಗೆ ದೊಡ್ಡ ಬದಲಾವಣೆಯಾಯಿತು. ಅವರಲ್ಲಿ ಅನೇಕರು ಸೆರೆಮನೆಯಲ್ಲಿ ಹಾಕ ಲ್ಪಟ್ಟಿದ್ದಾರೆ. ಅಲ್ಲಿ ಅವರಿಗೆ ಆರಾಧನೆಗೋಸ್ಕರ ಉಪಯೋಗಿಸುವ ಕ್ರಿಸ್ತನ ಪ್ರತಿಮೆಗಳೂ ಚಿತ್ರಗಳೂ ಧೂಪವೂ ಮೇಣಬತ್ತಿಗಳೂ ಇಲ್ಲವೇ ಇಲ್ಲ. ಸಾಧಾರಣ ಸಭಿಕರಿಗೋಸ್ಕರ ಸಭೆಯಲ್ಲಿ ಪಾದ್ರಿಗಳಿಲ್ಲ. ಪಾದ್ರಿಗಳಿಗೆ ದೀಕ್ಷಾ ವಸ್ತ್ರಗಳೂ ಕರ್ತನ ಭೋಜನಕ್ಕಾಗಿ ಬೇಕಾಗುವ ರೊಟ್ಟಿ ದ್ರಾಕ್ಷಾರಸಗಳೂ ಎಣ್ಣೆಯೂ ಪ್ರಾರ್ಥನಾ ಪುಸ್ತಕಗಳೂ ಇರಲಿಲ್ಲ. ಆದರೆ ಅವುಗಳನ್ನು ಉಪ ಯೋಗಿಸದೇ ಪ್ರಾರ್ಥನೆಯ ಮೂಲಕ ದೇವರ ಸಂಗಡ ಅನ್ಯೋನ್ಯತೆಯಲ್ಲಿ ರುವದು ಸಾಧ್ಯವೆಂದು ಅನುಭವದಿಂದ ಕಲಿತುಕೊಂಡರು. ಅವರು ಪ್ರಾರ್ಥನೆ ಮಾಡುವಾಗ ದೇವರು ತಾನೇ ಅವರ ಮೇಲೆ ತನ್ನ ಪವಿತ್ರಾತ್ಮ ವರವನ್ನು

ಸುರಿಸಿದನು. ರಷ್ಯದಲ್ಲಿದ್ದ ಆರ್ಥೊಡೋಕ್ಸ್ ಸಭೆಯಲ್ಲಿ ಪವಿತ್ರಾತ್ಮನು ವಿಶೇಷವಾದ ರೀತಿಯಲ್ಲಿ ತನ್ನ ಕಾರ್ಯವನ್ನು ಸಾಧಿಸುವವನಾಗಿದ್ದಾನೆ. ಈ ರೀತಿಯಲ್ಲಿ ರಷ್ಯ ದೇಶದಲ್ಲಿಯೂ ಪೂರ್ವ ಯೂರೋಪಿನಲ್ಲಿದ್ದ ಉಳಿದ ಕಮ್ಯುನಿಷ್ಟ ದೇಶಗಳಲ್ಲಿಯೂ ಆರ್ಥೊಡೊಕ್ಸ್ ಗುಪ್ತ ಸಭೆ ಇರುತ್ತದೆ. ಅದರಲ್ಲಿರುವ ವಿಶ್ವಾಸಿಗಳು ಸುವಾರ್ತೆಯನ್ನು ಸಾರುತ್ತಾ ಸತ್ಯವೇದದ ಬೋಧನೆಗಳನ್ನು ದೃಢವಾಗಿ ಅನುಸರಿಸುತ್ತಾ ದೇವರ ಅನ್ಯೋನ್ಯತೆಯಲ್ಲಿ ದೃಢವಾಗಿ ಜೀವಿಸುತ್ತಿದ್ದಾರೆ. ಅವರು ತಮ್ಮ ಹಳೆಯ ಪದ್ಧತಿಯನ್ನು ಸ್ವಲ್ಪ ಮಾತ್ರ ಅನುಸರಿಸುತ್ತಾರೆ. ಅವರಲ್ಲಿ ಅನೇಕರು ರಕ್ತಸಾಕ್ಷಿಗಳಾಗಿದ್ದಾರೆ. ಕಲ್ಲುಗ ಎಂಬ ಪಟ್ಟಣದ ಮುಖ್ಯವಾದ ಬಿಷಪ್‌ನಾದ ಎರ್ಮೊಗನ್ ಸದ್ಯ ಎಲ್ಲಿ ಇದ್ದಾನೆಂದು ಹೇಳಲು ಯಾರಿಗೂ ಸಾಧ್ಯವಿಲ್ಲ. ಹೊರಗಿನ ಸಭೆಯ ಮುಂದಾಳುಗಳು ನಾಸ್ತಿಕರಾದ ಕಮ್ಯುನಿಷ್ಟರ ಸರಕಾರದ ಸಂಗಡ ಸಹಕಾರವನ್ನು ಮಾಡಿದಾಗ ಅವನು ಅದರ ವಿರುದ್ಧವಾಗಿ ಧೈರ್ಯದಿಂದ ಮಾತಾಡಿದನು.

50 ವರ್ಷಗಳಿಂದ ಕಮ್ಯುನಿಷ್ಟರು ರಷ್ಯದಲ್ಲಿ ರಾಜ್ಯಾಧಿಕಾರವನ್ನು ನಡೆಸುತ್ತಾ ಬಂದಿದ್ದಾರೆ. ಆದರೆ ರಷ್ಯದ ವರ್ತಮಾನ ಪತ್ರಗಳಲ್ಲಿ ಗುಪ್ತ ಸಭೆಯ ವಿಷಯವಾಗಿ ಹೇರಳವಾಗಿ ಬರೆಯಲ್ಪಟ್ಟಿದೆ. ಅದು ಕಠಿಣವಾದ ಅನುಭವಗಳನ್ನು ಹೊಂದುತ್ತಿರುವಾಗ ದೇವರಿಗೆ ನಂಬಿಗಸ್ತವಾಗಿ ಬೆಳೆಯುತ್ತಾ ಬರುತ್ತಿದೆ. ನಾವು ರೂಮೆನಿಯಾ ದೇಶದಲ್ಲಿದ್ದಾಗ ರಷ್ಯ ಸೈನಿಕರಲ್ಲಿ ದೇವರ ವಾಕ್ಯವೆಂಬ ಒಳ್ಳೇ ಬೀಜವನ್ನು ಬಿತ್ತಿದೆವು. ಬೇರೆಯವರು ಬೇರೆ ದೇಶಗಳಲ್ಲಿ ಹಾಗೆಯೇ ಮಾಡಿದ್ದಾರೆ. ಆ ಬೀಜದಿಂದ ಫಲ ಈಗ ಬಂದಿದೆ. ಕಮ್ಯುನಿಷ್ಟರನ್ನು ಅವರಿಂದ ಆಳಲ್ಪಟ್ಟ ಜನರನ್ನು ಕ್ರಿಸ್ತನ ಕಡೆಗೆ ಎಳೆಯುವದು ಸಾಧ್ಯವಾಗಿದೆ. ಆದರೆ ನಾವು ಅವರಿಗೆ ಸಹಾಯ ಮಾಡಬೇಕು. ಈಗಲೇ ಅನೇಕ ಕಮ್ಯುನಿಷ್ಟ ದೇಶಗಳಲ್ಲಿ ಗುಪ್ತ ಸಭೆಯು ಅಭಿವೃದ್ಧಿ ಹೊಂದುತ್ತಾ ಇದೆ. ಈ ಭಯಂಕರವಾದ ಪರಿಸ್ಥಿತಿಗಳಲ್ಲಿ ಜೀವಿಸುತ್ತಿರುವ ನಮ್ಮ ಜೊತೆ ವಿಶ್ವಾಸಿಗಳ ಸೌಂದರ್ಯವನ್ನು ತೋರ್ಪಡಿಸಲು ನಾವು ರಷ್ಯ ದೇಶದಿಂದ ಕೆಲವು ಪತ್ರಗಳನ್ನು ಕೊಡುತ್ತೇವೆ. ಕಡೆಯ ಪತ್ರಗಳು ಸೆರೆಮನೆಗಳಲ್ಲಿ ಬರೆಯಲ್ಪಟ್ಟವು.

## ಕಮ್ಯುನಿಷ್ಟ ಹುಡುಗಿಯಾದ ವ್ಹರಿಯಾ ಕ್ರಿಸ್ತನನ್ನು ಕಂಡುಕೊಂಡು ಆತನಿಗೆ ಸಾಕ್ಷಿಕೊಟ್ಟು ಬಿಟ್ಟೇ ಕೆಲಸ ಮಾಡಿದ ವಿಧಾನ

ಮೊದಲನೆಯ ಮೂರು ಪತ್ರಗಳು ವ್ಹರಿಯಳನ್ನು ಕ್ರಿಸ್ತನ ಕಡೆಗೆ ಎಳೆದ ಮರಿಯಾ ಎಂಬ ಕ್ರೈಸ್ತ ಹುಡುಗಿಯಿಂದ ಬರೆಯಲ್ಪಟ್ಟವು.

## ಒಂದನೆಯ ಪತ್ರ

ನಾನು ಇನ್ನೂ ಇಲ್ಲಿ ಜೀವಿಸುತ್ತಿದ್ದೇನೆ. ನಾನು ಬಹಳವಾಗಿ ಪ್ರೀತಿಸಲ್ಪಟ್ಟವಳಾಗಿದ್ದೇನೆ. ಕಮ್ಯುನಿಷ್ಟ ಯುವಜನ ಸಂಘದ ಗುಂಪಿನಲ್ಲಿರುವ ಒಬ್ಬ ಹುಡುಗಿ ನನ್ನನ್ನು ಪ್ರೀತಿಸುತ್ತಾಳೆ. ಆಕೆಯು ನನಗೆ—"ನಿನ್ನ ಸ್ವಭಾವವನ್ನು ನಾನು ಗ್ರಹಿಸಿಕೊಳ್ಳಲಾರೆನು. ಇಲ್ಲಿ ಅನೇಕರು ನಿನ್ನನ್ನು ಹಾಸ್ಯಮಾಡುತ್ತಾ ಹಿಂಸಿಸುತ್ತಾ ಇದ್ದಾರೆ. ಆದರೆ ನೀನು ಅವರೆಲ್ಲರನ್ನೂ ಪ್ರೀತಿಸುತ್ತೀ," ಎಂದು ಹೇಳಿದಳು. ನಾನು ಆಕೆಗೆ—"ನಾವು ನಮ್ಮ ಮಿತ್ರರನ್ನು ಮಾತ್ರವಲ್ಲದೇ ನಮ್ಮ ಶತ್ರುಗಳನ್ನೂ ಸಹ ಪ್ರೀತಿಸಬೇಕೆಂದು ದೇವರು ನಮಗೆ ಬೋಧಿಸಿದ್ದಾನೆ. ಆದಕಾರಣ ನಾವು ಎಲ್ಲರನ್ನೂ ಪ್ರೀತಿಸುತ್ತೇವೆ," ಎಂದು ಉತ್ತರ ಕೊಟ್ಟೆನು. ಮುಂಚಿತವಾಗಿ ಈ ಹುಡುಗಿ ನನಗೆ ಬಹಳ ಕೇಡನ್ನು ಮಾಡಿದ್ದಳು. ಆದರೆ ನಾನು ವಿಶೇಷವಾದ ಚಿಂತೆಯಿಂದ ಆಕೆಗಾಗಿ ಪ್ರಾರ್ಥಿಸಿದೆನು. ಆಕೆಯು ನನ್ನನ್ನು—"ನೀನು ನನ್ನನ್ನು ಸಹ ಪ್ರೀತಿಸಬಲ್ಲೆಯಾ ?" ಎಂದು ಕೇಳಿದಾಗ ನಾನು ಆಕೆಯನ್ನು ಅಪ್ಪಿಕೊಂಡೆನು. ನಾವಿಬ್ಬರೂ ಅಳಲಿಕ್ಕೆ ಪ್ರಾರಂಭಿಸಿದೆವು. ಈಗ ನಾವು ಕೂಡಿ ಪ್ರಾರ್ಥನೆ ಮಾಡುತ್ತೇವೆ. ದಯಮಾಡಿ ಆಕೆಗಾಗಿ ಪ್ರಾರ್ಥನೆ ಮಾಡಿರಿ. ಆಕೆಯ ಹೆಸರು ವ್ಹರಿಯಾ.

ದೇವರು ಇಲ್ಲವೆಂದು ಗಟ್ಟಿಯಾಗಿ ಹೇಳುವವರ ಮಾತುಗಳನ್ನು ನೀವು ಕೇಳುತ್ತಿರುವಾಗ ಅದು ಅವರ ನಿಜವಾದ ನಂಬಿಕೆ ಎಂದು ಕಂಡುಬರುತ್ತದೆ. ಆದರೆ ಅವರ ಜೀವನದಿಂದ ಮತ್ತೊಂದು ವಿಷಯ ಕಾಣುತ್ತದೆ. ಅವರು ತಮ್ಮ ತುಟಿಗಳಿಂದ ದೇವರನ್ನು ಶಪಿಸುತ್ತಿದ್ದರೂ ಅವರ ಹೃದಯಗಳಲ್ಲಿ ಒಂದು ದೊಡ್ಡ ಕುತೂಹಲ ಇರುತ್ತದೆ. ಅವರ ಹೃದಯದ ಒಳಸಪ್ಪಳವನ್ನು ನೀವು ಕೇಳಬಹುದು. ಅವರು ಏನಾದರೂ ಹುಡುಕುತ್ತಿದ್ದಾರೆ. ಅವರು ತಮ್ಮ ಒಳಗಿನ ಬರಿದಾದ ಸ್ಥಿತಿಯನ್ನು ನಾಸ್ತಿಕತ್ವದಿಂದ ಮುಚ್ಚಿಕೊಳ್ಳಲು ಪ್ರಯತ್ನಿಸುತ್ತಾರೆ.

ಕ್ರಿಸ್ತನಲ್ಲಿ ನಿನ್ನ ಸಹೋದರಿಯಾದ
—ಮರಿಯಾ

## ಎರಡನೆಯ ಪತ್ರ

ನನ್ನ ಹಿಂದಿನ ಪತ್ರದಲ್ಲಿ ನಾನು ವ್ಹರಿಯಾ ಎಂಬ ನಾಸ್ತಿಕಳಾದ ಹುಡುಗಿಯ ವಿಷಯವಾಗಿ ಬರೆದೆನು. ಈಗ ನನ್ನ ಪ್ರಿಯರೇ, ನಮ್ಮ ಮಹಾನಂದದ ವಿಷಯವಾಗಿ ನಿಮಗೆ ತಿಳಿಸಲು ಅಪೇಕ್ಷಿಸುತ್ತೇನೆ. ವ್ಹರಿಯಾ ಕ್ರಿಸ್ತನನ್ನು ತನ್ನ ವೈಯಕ್ತಿಕ ರಕ್ಷಕನನ್ನಾಗಿ ಅಂಗೀಕಾರ ಮಾಡಿದ್ದಾಳೆ. ಆಕೆಯು ಎಲ್ಲರ ಮುಂದೆ ಆತನ ವಿಷಯವಾಗಿ ಸಾಕ್ಷಿ ಕೊಡುತ್ತಾಳೆ.

ಆಕೆಯು ಕ್ರಿಸ್ತನಲ್ಲಿ ನಂಬಿಕೆಯನ್ನಿಟ್ಟಾಗ ರಕ್ಷಣಾನಂದವನ್ನು ಅನುಭವಿಸಿದ್ದಾಗ್ಯೂ ಬಹಳ ದುಃಖವನ್ನು ಸಹ ಪಟ್ಟಳು. ಯಾಕೆಂದರೆ ದೇವರಿಲ್ಲವೆಂದು

ಆಕೆಯು ಪ್ರಚಾರ ಮಾಡಿದ್ದಳು. ಆ ಪಾಪದ ಪರಿಣಾಮವನ್ನು ಪರಿಹಾರ ಮಾಡಲು ಆಕೆಯು ನಿಶ್ಚಯಿಸಿದ್ದಾಳೆ.

ನಾವು ವ್ಹರಿಯಳ ಸಂಗಡ ನಾಸ್ತಿಕರ ಕೂಟಕ್ಕೆ ಹೋದೆವು. ನಾನು ಆಕೆಗೆ—"ನೀನು ಎಚ್ಚರವಾಗಿರಬೇಕು," ಎಂದು ಹೇಳಿದ್ದು ನಿಷ್ಪ್ರಯೋಜನಕರ ವಾಗಿತ್ತು. ಏನಾಗುವದೆಂದು ನೋಡಲು ನಾನು ಆಕೆಯ ಸಂಗಡ ಹೋದೆನು. ಎಲ್ಲರೂ ಕೂಡಿ ಕಮ್ಯುನಿಷ್ಟರ ಸಂಗೀತವನ್ನು ಹಾಡಿದರೂ ವ್ಹರಿಯಾ ಹಾಡ ಲಿಲ್ಲ. ಆನಂತರ ಮಾತಾಡುವ ಅಪ್ಪಣೆಯನ್ನು ಆಕೆಯು ಬೇಡಿದಳು. ಬೇರೆ ಬೇರೆ ಜನರು ಕ್ರಮವಾಗಿ ಮಾತನಾಡಿದರು. ಆಕೆಯ ಸರತಿ ಬಂದಾಗ ಆಕೆಯು ಎಲ್ಲರ ಮುಂದೆ ನಿಂತುಕೊಂಡಳು. ಧೈರ್ಯದಿಂದಲೂ ಮನೋದುಃಖ ದಿಂದಲೂ ಆಕೆಯು ತನ್ನ ರಕ್ಷಕನಾದ ಕ್ರಿಸ್ತನ ವಿಷಯವಾಗಿ ಸಾಕ್ಷಿ ಕೊಟ್ಟಳು. ಆಕೆಯು—"ನನ್ನ ಜೊತೆ ಕೆಲಸದವರೇ, ನೀವು ನನ್ನನ್ನು ಕ್ಷಮಿಸಬೇಕು. ನನ್ನ ಆತ್ಮೀಯ ಕಣ್ಣುಗಳು ಮುಚ್ಚಲ್ಪಟ್ಟ ಕಾರಣ ನಾನು ಸ್ವತಃ ನರಕಕ್ಕೆ ಹೋಗು ವವಳಾಗಿದ್ದೆನೆಂತಲೂ ಇತರರನ್ನು ಆ ಮಾರ್ಗದಲ್ಲಿ ಮುನ್ನಡಿಸುತ್ತಿದ್ದೆನೆಂತಲೂ ಈಗ ತಿಳಿದುಕೊಂಡೆನು. ನೀವೆಲ್ಲರೂ ಪಾಪದ ಮಾರ್ಗವನ್ನು ಬಿಟ್ಟು ಬಿಟ್ಟು ಕ್ರಿಸ್ತನ ಕಡೆಗೆ ತಿರುಗಿಕೊಳ್ಳಿರಿ," ಎಂದು ಬೇಡಿಕೊಂಡಳು.

ಎಲ್ಲರೂ ಮೌನರಾಗಿದ್ದರು. ಯಾರೂ ಆಕೆಗೆ—"ಸುಮ್ಮನಿರು," ಎಂದು ಹೇಳಲಿಲ್ಲ. ಆಕೆಯು ಮಾತನಾಡಿದ ನಂತರ ಒಂದು ಸಂಗೀತವನ್ನು ಹಾಡಿ ದಳು. ಆಕೆಯು ಚೆನ್ನಾಗಿ ಹಾಡುತ್ತಾಳೆ. "ಶಿಲುಬೆಯ ಮೇಲೆ ಸತ್ತ ಕ್ರಿಸ್ತ ನನ್ನು ಪ್ರಚಾರ ಮಾಡಲೂ ಆತನ ಆಜ್ಞೆಗಳ ಹಾಗೂ ಶಿಲುಬೆಯ ಬಲದ ಸಲುವಾಗಿ ಹೋರಾಡಲೂ ನಾಚುವದಿಲ್ಲ," ಎಂದು ಹಾಡಿದಳು. ಆನಂತರ ಅವರು ವ್ಹರಿಯಳನ್ನು ಹಿಡಿದುಕೊಂಡು ಹೊರಗೆ ಒಯ್ದರು. ಈ ಹೊತ್ತು ಮೇ 9 ನೆಯ ದಿನಾಂಕ : ಆಕೆ ಎಲ್ಲಿ ಎಂಬುದು ನಮಗೆ ಗೊತ್ತಿಲ್ಲ. ಆದರೆ ದೇವರು ಆಕೆಯನ್ನು ರಕ್ಷಿಸಬಲ್ಲವನಾಗಿದ್ದಾನೆ. ಪ್ರಾರ್ಥನೆ ಮಾಡಿರಿ.

—ನಿಮ್ಮ ಮರಿಯಾ

## ಮೂರನೆಯ ಪತ್ರ

ನಿನ್ನೆ ಅಂದರೆ ಆಗಸ್ಟ 2 ನೆಯ ದಿನಾಂಕ ನಾನು ನಮ್ಮ ಪ್ರಿಯ ವ್ಹರಿ ಯಳ ಸಂಗಡ ಸೆರೆಮನೆಯಲ್ಲಿ ಸಂಭಾಷಣೆ ಮಾಡಿದೆನು. ಆಕೆಯ ವಿಷಯ ವಾಗಿ ಯೋಚನೆ ಮಾಡುತ್ತಿರುವಾಗ ನನಗೆ ಅತಿ ದುಃಖವಾಗುತ್ತದೆ. ಆಕೆ ಇನ್ನೂ ಸಣ್ಣವಳಾಗಿದ್ದಾಳೆ. ಆಕೆಯ ವಯಸ್ಸು ಕೇವಲ 19 ವರ್ಷ. ಕರ್ತನ ವಿಶ್ವಾಸದಲ್ಲಿ ಆಕೆ ಇನ್ನೂ ಆತ್ಮೀಯ ಕೂಸಾಗಿದ್ದಾಳೆ. ಆದರೆ ಆಕೆಯು ಕರ್ತ ನನ್ನು ಹೃದಯಪೂರ್ವಕವಾಗಿ ಪ್ರೀತಿಸಿ ಕಠಿಣವಾದ ಮಾರ್ಗವನ್ನು ಹಿಡಿದಿ

ದ್ದಾಳೆ. ಆ ಬಡ ಹುಡುಗಿಗೆ ಬಹಳ ಹಸಿವೆಯಾಯಿತು. ಆಕೆಯು ಸೆರೆಮನೆಯಲ್ಲಿದ್ದಾಳೆಂದು ಕೇಳಿ ನಾವು ಪೊಟ್ಟಣಗಳನ್ನು ಕಳುಹಿಸಲು ಪ್ರಾರಂಭಿಸಿದೆವು. ಆದರೆ ನಾವು ಕಳುಹಿಸಿದ ಸಾಮಾನುಗಳಲ್ಲಿ ಅಲ್ಪಸ್ವಲ್ಪ ಆಕೆಗೆ ಮುಟ್ಟಿದವು. ನಾನು ನಿನ್ನೆ ಆಕೆಯನ್ನು ನೋಡಿದಾಗ ಆಕೆಯು ಅಶಕ್ತಳೂ ಹೊಡೆಯಲ್ಪಟ್ಟವಳೂ ಇದ್ದಳು. ಆದರೆ ಆಕೆಯ ಕಣ್ಣುಗಳಲ್ಲಿ ದೇವರ ಸಮಾಧಾನವೂ ಪರಮಾನಂದವೂ ಹೊಳೆಯುತ್ತಿದ್ದವು.

ನನ್ನ ಪ್ರಿಯರೇ, ಕ್ರಿಸ್ತನ ಆಶ್ಚರ್ಯಕರವಾದ ಆನಂದವನ್ನು ಅನುಭವಿಸದವರು ಅದನ್ನು ಗ್ರಹಿಸಿಕೊಳ್ಳಲಾರರು. ಆದರೆ ಆ ಆನಂದವನ್ನು ಹೊಂದಿದವರು ಎಷ್ಟೋ ಧನ್ಯರಾಗಿದ್ದಾರೆ. ಕ್ರಿಸ್ತನಲ್ಲಿರುವ ನಮಗೆ ಸಂಕಟಗಳೂ ಕಷ್ಟಗಳೂ ಅಡ್ಡಿ ಮಾಡಬಾರದು.

ಸಳಿಗಳಿಂದ ಮಾಡಲ್ಪಟ್ಟ ಬಾಗಿಲುಗಳು ನಮ್ಮ ಮಧ್ಯದಲ್ಲಿದ್ದವು. ನಾನು ಆಕೆಯನ್ನು—"ವ್ಹರಿಯಾ ನೀನು ಮಾಡಿದ್ದಕ್ಕೆ ಪಶ್ಚಾತ್ತಾಪಪಡುತ್ತೀಯೋ ?" ಎಂದು ಕೇಳಿದೆನು. ಆಕೆಯು ನನಗೆ —"ಇಲ್ಲವೇ ಇಲ್ಲ. ಅವರು ನನಗೆ ಬಿಡುಗಡೆ ಕೊಟ್ಟಿದ್ದರೆ ನಾನು ತಿರಿಗಿ ಅವರ ಕಡೆಗೆ ಹೋಗಿ ಕ್ರಿಸ್ತನ ಮಹಾ ಪ್ರೀತಿಯ ವಿಷಯವಾಗಿ ತಿಳಿಸುತ್ತಿದ್ದೆನು. ನನ್ನ ಕಷ್ಟಗಳ ವಿಷಯವಾಗಿ ಚಿಂತೆ ಮಾಡಬೇಡ. ಕರ್ತನು ನನ್ನನ್ನು ಬಹಳವಾಗಿ ಪ್ರೀತಿಸಿ ತನ್ನ ನಾಮಕ್ಕಾಗಿ ಕಷ್ಟಪಡುವ ಆನಂದವನ್ನು ಕೊಟ್ಟದ್ದಕ್ಕಾಗಿ ನನಗೆ ಬಹಳ ಸಂತೋಷವಾಯಿತು," ಎಂದು ಉತ್ತರ ಕೊಟ್ಟಳು.

ನೀವು ವಿಶೇಷವಾಗಿ ಹೃದಯಪೂರ್ವಕವಾಗಿ ಆಕೆಗೋಸ್ಕರ ಪ್ರಾರ್ಥನೆ ಮಾಡಬೇಕೆಂದು ನನ್ನ ವಿನಂತಿ ಇದೆ. ಬಹುಶಃ ಆಕೆಯು ಸೈಬೀರಿಯಾ ಪ್ರಾಂತಕ್ಕೆ ಕಳುಹಿಸಲ್ಪಡುವಳು. ಅವರು ಆಕೆಯಿಂದ ಬಟ್ಟೆಗಳನ್ನೂ ಉಳಿದ ಎಲ್ಲಾ ಸಾಮಾನುಗಳನ್ನೂ ತೆಗೆದು ಹಾಕಿದ್ದಾರೆ. ಆಕೆಯ ಮೈಮೇಲಿರುವ ಬಟ್ಟೆಗಳ ಹೊರತಾಗಿ ಆಕೆಗೆ ಏನೂ ಇಲ್ಲ. ಆಕೆಗೆ ಸಂಬಂಧಿಕರಿಲ್ಲ. ನಾವು ಅತ್ಯಗತ್ಯವಾದ ವಸ್ತುಗಳನ್ನು ಸಂಪಾದಿಸಿಕೊಳ್ಳಬೇಕು. ನೀವು ನನಗೆ ಕಳುಹಿಸಿ ಕೊಟ್ಟ ಹಣವನ್ನು ಇದಕ್ಕಾಗಿ ಇಟ್ಟಿದ್ದೇನೆ. ವ್ಹರಿಯಾ ದೂರ ಪ್ರಾಂತಕ್ಕೆ ಕಳುಹಿಸಲ್ಪಟ್ಟರೆ ನಾನು ಇದನ್ನು ಆಕೆಗೆ ಕೊಡುತ್ತೇನೆ. ದೇವರು ಆಕೆಯನ್ನು ಬಲಪಡಿಸಿ ಮುಂದಿನ ಕಾಲದಲ್ಲಿ ಕಷ್ಟ ತಾಳುವಂತೆ ಶಕ್ತಿಯನ್ನು ಕೊಡುತ್ತಾನೆಂದು ನಾನು ನಂಬುತ್ತೇನೆ. ದೇವರು ಆಕೆಯನ್ನು ಕಾಪಾಡಲಿ.

—ನಿಮ್ಮ ಮರಿಯಾ

## ನಾಲ್ಕನೆಯ ಪತ್ರ

ಪ್ರಿಯ ಮರಿಯಾ,

ಕಡೆಯದಾಗಿ ನಿಮಗೆ ಪತ್ರ ಬರೆಯಲು ನನಗೆ ಅನುಕೂಲವಾಯಿತು. ನಾವು ಸುರಕ್ಷಿತವಾಗಿ...........ಎಂಬ ಸ್ಥಳಕ್ಕೆ ಮುಟ್ಟಿದೆವು. ನಮ್ಮ ವಾಸ

ಸ್ಥಾನವು ಊರಿಂದ ಹತ್ತು ಮೈಲು ದೂರದಲ್ಲಿದೆ. ನಮ್ಮ ಜೀವನವನ್ನು ವರ್ಣಿಸುವ ಅಗತ್ಯವಿಲ್ಲ. ಇದು ನಿನಗೆ ಗೊತ್ತಾಗಿದೆ. ನನ್ನ ವಿಷಯವಾಗಿ ಅಲ್ಪ ಸ್ವಲ್ಪ ಮಾತ್ರ ಬರೆಯಲು ನನಗೆ ಇಷ್ಟವಿದೆ. ದೇವರು ನನಗೆ ಆರೋಗ್ಯವನ್ನು ಕೊಟ್ಟದ್ದರಿಂದ ಕೆಲಸ ಮಾಡಲು ನನಗೆ ಸಾಕಷ್ಟು ದೈಹಿಕ ಶಕ್ತಿಯಿದೆ. ನಾನೂ "ಅಕ್ಕಮ್ಮ" ಸಹೋದರಿಯೂ ಕಾರಖಾನೆಯಲ್ಲಿ ಕೆಲಸ ಮಾಡಲು ಇಡಲ್ಪಟ್ಟೆವು. ಕೆಲಸ ಕಠಿಣವಾಗಿದೆ. 'ಅಕ್ಕಮ್ಮ'ನಿಗೆ ಆರೋಗ್ಯವಿಲ್ಲ. ನಾನು ನನಗೋಸ್ಕರವೂ ಆಕೆಗೋಸ್ಕರವೂ ಕೆಲಸ ಮಾಡಬೇಕು. ನನ್ನ ಸ್ವಂತ ಕೆಲಸವನ್ನು ಮುಗಿಸಿದ ನಂತರ ನಾನು ಆಕೆಗೆ ಸಹಾಯ ಮಾಡುತ್ತೇನೆ. ನಾವು ದಿನಾಲು 12-13 ಗಂಟೆಗಳ ವರೆಗೆ ಕೆಲಸ ಮಾಡುತ್ತೇವೆ. ನಿಮ್ಮ ಸ್ಥಿತಿಯ ಹಾಗೆ ನಮಗೂ ಸಹ ಅಲ್ಪ ಸ್ವಲ್ಪ ಆಹಾರ ಸಿಕ್ಕುತ್ತದೆ. ಅದರ ವಿಷಯವಾಗಿ ಹೆಚ್ಚಾಗಿ ಬರೆಯಲು ನನಗೆ ಮನಸ್ಸಿಲ್ಲ.

ದೇವರು ನಿನ್ನ ಮೂಲಕವಾಗಿ ನನಗೆ ರಕ್ಷಣಾ ಮಾರ್ಗವನ್ನು ತೋರಿಸಿದ್ದಕ್ಕಾಗಿ ನಾನು ಹೃದಯಪೂರ್ವಕವಾಗಿ ಆತನಿಗೆ ಉಪಕಾರ ಸ್ತುತಿಯನ್ನು ಸಲ್ಲಿಸುತ್ತೇನೆ. ನಾನು ಈ ಮಾರ್ಗದಲ್ಲಿರುವದರಿಂದ ನನ್ನ ಜೀವನಕ್ಕೆ ಉದ್ದೇಶವಿದೆ. ನಾನು ಎಲ್ಲಿ ಹೋಗಬೇಕೆಂತಲೂ ಯಾರಿಗಾಗಿ ಕಷ್ಟ ಪಡುತ್ತೇನೆಂತಲೂ ತಿಳಿದುಕೊಂಡಿದ್ದೇನೆ. ರಕ್ಷಣೆಯ ಮಹಾನಂದದ ವಿಷಯವಾಗಿ ಎಲ್ಲರಿಗೂ ಸಾಕ್ಷಿ ಹೇಳಲು ನನಗೆ ಇಷ್ಟವಿದೆ. ಯಾಕೆಂದರೆ ಆ ಆನಂದವು ನನ್ನ ಹೃದಯದಲ್ಲಿದೆ. ಕ್ರಿಸ್ತನಲ್ಲಿ ತೋರಿಬರುವ ದೇವರ ಪ್ರೀತಿಯಿಂದ ನಮ್ಮನ್ನು ಅಗಲಿಸುವವರು ಯಾರು ? ಯಾರೂ ಏನೂ ಅದಕ್ಕೆ ಮಾಡಲಾರರು. ನನ್ನ ಹೃದಯವು ದೇವರ ಕೃಪೆಯಿಂದ ತುಂಬಿ ಹೊರಸೂಸುತ್ತದೆ. ನಾನು ಕೆಲಸದಲ್ಲಿ ಮೌನವಾಗಿರಲಾರೆನು. ಕರ್ತನು ನನಗಾಗಿ ಮಾಡಿದ್ದನ್ನು ಇತರರಿಗೆ ತಿಳಿಸುವ ಕಾರಣ ಕೆಲಸದಲ್ಲಿ ಅವರು ನನ್ನನ್ನು ಶಪಿಸುತ್ತಾ ಶಿಕ್ಷಿಸುತ್ತಾ ನನಗೆ ಹೆಚ್ಚಿನ ಕೆಲಸ ಕೊಡುತ್ತಿದ್ದಾರೆ. ಆದರೆ ನಾಶನದ ಮಾರ್ಗದಲ್ಲಿ ಹೋಗುತ್ತಿದ್ದ ನನ್ನನ್ನು ಕರ್ತನು ಹೊಸ ಸೃಷ್ಟಿಯನ್ನಾಗಿ ಮಾಡಿದ್ದಾನೆ. ನಾನು ಮೌನವಾಗಿರಲು ಸಾಧ್ಯವೋ ? ಎಂದಿಗೂ ಇಲ್ಲ. ನನಗೆ ಮಾತನಾಡುವ ಶಕ್ತಿಯಿರುವ ಮಟ್ಟಿಗೆ ಆತನ ಮಹಾ ಪ್ರೀತಿಯ ವಿಷಯವಾಗಿ ಎಲ್ಲರಿಗೂ ಸಾಕ್ಷಿ ಕೊಡುತ್ತೇನೆ.

ನಮ್ಮ ವಾಸಸ್ಥಾನಕ್ಕೆ ಹೋಗುತ್ತಿರುವಾಗ ನಾವು ಕ್ರಿಸ್ತನಲ್ಲಿರುವ ಅನೇಕ ಸಹೋದರ ಸಹೋದರಿಯರನ್ನು ಸಂದರ್ಶಿಸಿದೆವು. ವಿಶ್ವಾಸಿಗಳನ್ನು ನೋಡಿದ ಕೂಡಲೇ ಅವರು ದೇವರ ಮಕ್ಕಳಾಗಿದ್ದಾರೆಂಬ ಭಾವನೆ ಪವಿತ್ರಾತ್ಮನಿಂದ ಆಶ್ಚರ್ಯಕರವಾದ ರೀತಿಯಲ್ಲಿ ಆಗುತ್ತದೆ. ಮಾತನಾಡುವ ಅಗತ್ಯವಿಲ್ಲ. ಅವರನ್ನು ನೋಡಿದ ಕೂಡಲೇ ಅವರು ಯಾರಾಗಿದ್ದಾರೆಂದು ನಿಮಗೆ ಗೊತ್ತಾಗುತ್ತದೆ. ನಾವು ಪ್ರವಾಸದಲ್ಲಿದ್ದಾಗ ಒಂದು ರೇಲ್ವೆ ನಿಲ್ದಾಣದಲ್ಲಿ ಒಬ್ಬ

ಹೆಂಗಸು ಬಂದು ನಮಗೆ ಆಹಾರ ಕೊಟ್ಟು—"ದೇವರು ಜೀವಿಸುತ್ತಾನೆ," ಎಂಬ ಕೇವಲ ಎರಡು ಮಾತುಗಳನ್ನಾಡಿದಳು. ನಾವು ರಾತ್ರಿಯ ವೇಳೆ ಇಲ್ಲಿ ತಲುಪಿದೆವು. ನಮ್ಮ ನಿದ್ರೆಯ ಕೋಣೆಗಳು ನೆಲಮನೆಯಲ್ಲಿವೆ. ನಾವು ಒಳಗೆ ಸೇರಿದ ಕೂಡಲೇ ಅಲ್ಲಿದ್ದವರಿಗೆ—"ನಿಮಗೆ ಸಮಾಧಾನವಾಗಲಿ," ಎಂಬ ವಂದನೆ ಕೊಟ್ಟೆವು. ಎಲ್ಲಾ ಕಡೆಗಳಿಂದ ಅವರು—"ನಾವು ಸಮಾಧಾನದಿಂದ ನಿಮ್ಮನ್ನು ಅಂಗೀಕರಿಸುತ್ತೇವೆ," ಎಂದು ಉತ್ತರವನ್ನು ಮಹಾ ಸಂತೋಷದಿಂದ ಕೊಟ್ಟರು. ಆ ಮೊದಲನೆಯ ಸಾಯಂಕಾಲದಿಂದ ನಾವು ಒಂದೇ ಕುಟುಂಬ ದಲ್ಲಿ ಇದ್ದೇವೆಂದು ಎಣಿಸಿದೆವು.

ಸ್ಥಿತಿ ನಿಜವಾಗಿ ಹಾಗೆಯೇ ಆಯಿತು. ಕ್ರಿಸ್ತನನ್ನು ತಮ್ಮ ಸ್ವಂತ ರಕ್ಷಕ ನನ್ನಾಗಿ ಅಂಗೀಕಾರ ಮಾಡಿದವರಲ್ಲಿ ಅನೇಕರು ಇಲ್ಲಿ ಇದ್ದಾರೆ. ಕೈದಿಗಳಲ್ಲಿ ಅರ್ಧ ಕ್ಕಿಂತ ಹೆಚ್ಚು ಜನ ವಿಶ್ವಾಸಿಗಳಾಗಿದ್ದಾರೆ. ಸಾಯಂಕಾಲದಲ್ಲಿ ನಮ್ಮ ಕಠಿಣ ವಾದ ಕೆಲಸವು ಮುಗಿದ ನಂತರ ನಾವು ಕೂಡಿಬಂದೆವು. ಸ್ವಲ್ಪ ವೇಳೆ ನಮ್ಮ ರಕ್ಷಕನ ಪಾದಗಳ ಹತ್ತಿರ ಪ್ರಾರ್ಥನೆಯಲ್ಲಿ ಕಳೆಯುತ್ತೇವೆ. ಇದು ಆಶ್ಚರ್ಯ ಕರವಾದ ಅನುಕೂಲವಾಗಿದೆ. ನಾನು ಇಲ್ಲಿ ಅನೇಕ ಆತ್ಮೀಯ ಸಂಗೀತಗಳನ್ನು ಕಲಿತುಕೊಂಡಿದ್ದೇನೆ. ದಿನಾಲು ದೇವರು ತನ್ನ ವಾಕ್ಯದಿಂದ ನಮಗೆ ಹೆಚ್ಚೆ ಚ್ಚಾಗಿ ಬೋಧನೆಯನ್ನು ಕೊಡುತ್ತಾನೆ. ನಾನು ಹತ್ತೊಂಬತ್ತನೆಯ ವಯಸ್ಸಿ ನವಳಾಗಿ ಮೊದಲನೆಯ ಸಾರೆ ಕ್ರಿಸ್ತ ಜಯಂತಿಯನ್ನು ಆಚರಿಸಿದೆನು. ನಾವು ದಿನವೆಲ್ಲಾ ಕೆಲಸ ಮಾಡಬೇಕಾಯಿತು. ಆದರೆ ಹತ್ತಿರದಲ್ಲಿದ್ದ ನದಿಗೆ ಹೋಗಲು ನಮ್ಮ ಸಹೋದರರಲ್ಲಿ ಕೆಲವರಿಗೆ ಅನುಕೂಲ ಸಿಕ್ಕಿತು. ಅವರು ನದಿಯ ಮೇಲಿದ್ದ ಬರ್ಫನ್ನು ಮುರಿದು ಒಂದು ಸ್ಥಳವನ್ನು ಸಿದ್ಧಮಾಡಿದರು. ರಾತ್ರಿ ಯಲ್ಲಿ ದೇವರ ವಾಕ್ಯಾನುಸಾರವಾಗಿ ನಾನೂ ಏಳು ಜನ ಸಹೋದರರೂ ದೀಕ್ಷಾ ಸ್ನಾನ ಹೊಂದಿದೆವು. ನನಗೆ ಬಹಳ ಸಂತೋಷವಾಯಿತು. ಮರಿಯಾ ನೀನು ನಮ್ಮ ಸಂಗಡವಿದ್ದರೆ ಎಷ್ಟೋ ಒಳ್ಳೆಯದಾಗುವದು. ನಾನು ಪೂರ್ವಕಾಲ ದಲ್ಲಿ ನಿನಗೆ ಮಾಡಿದ ಕೇಡಿನ ಬದಲಾಗಿ ನಿನಗೆ ಪ್ರೀತಿಯನ್ನು ತೋರಿಸಲು ನನಗೆ ಇಷ್ಟವಿದೆ. ಆದರೆ ದೇವರು ನಮ್ಮಲ್ಲಿ ಪ್ರತಿಯೊಬ್ಬರನ್ನು ಅವರವರ ಸ್ಥಳದಲ್ಲಿ ಇಡುತ್ತಾನೆ. ದೇವರು ನಮ್ಮನ್ನು ಇಟ್ಟ ಸ್ಥಳಗಳಲ್ಲಿ ನಾವು ಸ್ಥಿರ ವಾಗಿ ನಿಂತುಕೊಳ್ಳಬೇಕು. ದೇವರ ಮಕ್ಕಳೆಲ್ಲರಿಗೂ ನನ್ನ ವಂದನೆಗಳನ್ನು ತಿಳಿಸು. ದೇವರು ನನ್ನನ್ನು ಆಶೀರ್ವದಿಸಿದ ಹಾಗೆ ನಿಮ್ಮೆಲ್ಲರನ್ನೂ ಸಹ ಆಶೀ ರ್ವದಿಸುವನು (ಇಬ್ರಿಯ 12 : 1–3 ಓದಿರಿ).

ನಮ್ಮ ಎಲ್ಲಾ ಸಹೋದರರೂ ನಿಮಗೆ ವಂದನೆಗಳನ್ನು ತಿಳಿಸುತ್ತಾರೆ. ದೇವರಲ್ಲಿ ನಿಮಗೆ ಬಲವಾದ ನಂಬಿಕೆಯಿರುವದರಿಂದಲೂ ನೀವು ಎಡೆಬಿಡದೇ ನಿಮ್ಮ ಕಷ್ಟಕರವಾದ ಸ್ಥಿತಿಗಳಲ್ಲಿಯೂ ದೇವರನ್ನು ಸ್ತುತಿಸುತ್ತಿರುವದರಿಂದಲೂ

ಅವರಿಗೆ ಸಂತೋಷವಿದೆ. ನೀನು ಇತರರಿಗೆ ಪತ್ರಗಳನ್ನು ಬರೆದರೆ ನಮ್ಮ ವಂದನೆಗಳನ್ನು ಅವರಿಗೆ ತಿಳಿಸು.

— ನಿಮ್ಮ ವ್ಹರಿಯಾ

**ಐದನೆಯ ಪತ್ರ**

ಪ್ರಿಯ ಮರಿಯಾ,

ಕಡೆಯಲ್ಲಿ ನಿನಗೆ ಸಣ್ಣ ಪತ್ರವನ್ನು ಬರೆಯಲು ನನಗೆ ಅನುಕೂಲ ಸಿಕ್ಕಿದೆ. ದೇವರ ಕೃಪೆಯಿಂದ ನಾನೂ ಸಹೋದರಿಯಾದ 'ಅಕ್ಕಮ್ಮ'ನೂ ಆರೋಗ್ಯದಲ್ಲಿದ್ದೇವೆಂದು ತಿಳಿಸುತ್ತೇನೆ. ನಾವು ಈಗ..............ಎಂಬ ಸ್ಥಳದಲ್ಲಿದ್ದೇವೆ. ಅವರು ನಮ್ಮನ್ನು..... ............ಕ್ಕೆ ಕಳುಹಿಸುವರು. ನಾವು ಅಲ್ಲಿಯೇ ಉಳಿಯುವೆವು.

ನೀನು ತಾಯಿಯ ಹಾಗೆ ನನಗಾಗಿ ಚಿಂತಿಸುತ್ತೀಯೆಂದು ನಾನು ನಿನಗೆ ಕೃತಜ್ಞತೆಯುಳ್ಳವಳಾಗಿದ್ದೇನೆ. ನೀನು ನಮಗಾಗಿ ಸಿದ್ಧಮಾಡಿದ ಎಲ್ಲಾ ವಸ್ತುಗಳನ್ನು ಹೊಂದಿದ್ದೇವೆ. ವಿಶೇಷವಾಗಿ ಅತ್ಯಮೂಲ್ಯವಾದ ವಸ್ತುವಾದ ಸತ್ಯವೇದಕ್ಕಾಗಿ ನಾನು ನಿನಗೆ ಆಭಾರಿಯಾಗಿದ್ದೇನೆ. ಎಲ್ಲರಿಗೂ ನನ್ನ ಉಪ ಕಾರ ಸ್ತುತಿಯನ್ನು ತಿಳಿಸು. ನೀವು ಪತ್ರ ಬರೆಯುವಾಗ ನನ್ನ ವಂದನೆಗಳನ್ನೂ ಉಪಕಾರ ಸ್ತುತಿಯನ್ನೂ ಅವರಿಗೆ ತಿಳಿಸು. ಕರ್ತನು ತನ್ನ ಪರಿಶುದ್ಧ ಪ್ರೀತಿಯ ವಿಷಯವಾದ ಗುಪ್ತವನ್ನು ನನಗೆ ತಿಳಿಸಿದ ನಂತರ ನಾನು ಲೋಕದಲ್ಲಿ ಅತಿ ಸಂತೋಷವುಳ್ಳವಳಾಗಿದ್ದೇನೆಂದು ನಾನು ಯೋಚಿಸುತ್ತೇನೆ. ನಾನು ತಾಳುವ ಕಷ್ಟಗಳು ವಿಶೇಷವಾದ ಕೃಪೆಯೆಂದೆನಿಸುತ್ತೇನೆ. ನಾನು ನಂಬಿಕೆಯಿಟ್ಟ ಮೊದ ಲನೆಯ ದಿನಗಳಿಂದ ಆತನಿಗಾಗಿ ಕಷ್ಟಪಡುವ ಆನಂದವನ್ನು ಕರ್ತನು ನಮಗೆ ಕೊಟ್ಟದ್ದಕ್ಕಾಗಿ ನಾನು ಸಂತೋಷಪಡುತ್ತೇನೆ. ನಾನು ಕಡೆಯ ವರೆಗೂ ಕರ್ತ ನಿಗೆ ನಂಬಿಗಸ್ತಳಾಗಿ ನಿಂತುಕೊಳ್ಳುವ ಹಾಗೆಯೂ ಪರಿಶುದ್ಧ ಹೋರಾಟಕ್ಕಾಗಿ ಕರ್ತನು ನಿಮ್ಮೆಲ್ಲರನ್ನೂ ಕಾಯುತ್ತಾ ಬಲಪಡಿಸುತ್ತಾ ಇರಲಿ.

ನಾನೂ ಅಕ್ಕಮ್ಮನೂ ನಿಮ್ಮೆಲ್ಲರನ್ನೂ ವಂದಿಸುತ್ತೇವೆ. ನಾವು...... ಎಂಬ ಸ್ಥಳಕ್ಕೆ ಕಳುಹಿಸಲ್ಪಟ್ಟ ನಂತರ ಒಂದು ವೇಳೆ ತಿರಿಗಿ ನಿನಗೆ ಪತ್ರವನ್ನು ಬರೆಯುವ ಅನುಕೂಲವನ್ನು ಹೊಂದಬಹುದು. ನಮ್ಮ ವಿಷಯವಾಗಿ ಚಿಂತೆ ಮಾಡಬೇಡ. ಪರಲೋಕದಲ್ಲಿ ನಮಗೆ ದೊಡ್ಡ ಬಹುಮಾನ ಸಿಕ್ಕುವದರಿಂದ ನಾವು ಸಂತೋಷವುಳ್ಳವರಾಗಿದ್ದೇವೆ (ಮತ್ತಾಯ 5 : 11, 12).

ನಿಮ್ಮ

ವ್ಹರಿಯಾ.

ಇದು ವೃದ್ಧರಿಯಳ ಕಡೆಯ ಪತ್ರ. ಆ ಕಮ್ಯುನಿಷ್ಟ ಹುಡುಗಿ ಕ್ರಿಸ್ತನನ್ನು ಕಂಡುಕೊಂಡು ಆತನ ವಿಷಯವಾಗಿ ಸಾಕ್ಷಿಕೊಟ್ಟು ಬಿಟ್ಟೀ ಕೆಲಸಕ್ಕೆ ನೇಮಿಸಲ್ಪಟ್ಟಳು. ಆಕೆಯ ವಿಷಯುವಾಗಿ ಯಾರೂ ಮತ್ತೇನೂ ಕೇಳಲಿಲ್ಲ. ಆದರೆ ಕಮ್ಯುನಿಷ್ಟರ ಆಧೀನದಲ್ಲಿದ್ದ ಲೋಕದ $\frac{1}{3}$ ದಲ್ಲಿ ಇರುವ ಕಷ್ಟಪಡುವ ನಂಬಿಗಸ್ತಿಕೆಯಾದ ಗುಪ್ತ ಸಭೆಯ ಆತ್ಮೀಯ ಸೌಂದರ್ಯದಲ್ಲಿ ಈ ಹುಡುಗಿಯ ಸುಂದರವಾದ ಪ್ರೀತಿಯು ಸಾಕ್ಷಿಗಳಲ್ಲಿ ಕಂಡುಬರುತ್ತದೆ.

❖❖❖❖❖❖❖❖

# ಅಧ್ಯಾಯ—೭

## ಗುಪ್ತ ಸಭೆಯಿಂದ ನಾನು ನಿಮಗೆ ಕೊಡುವ ಸಂದೇಶ

"ಗುಪ್ತ ಸಭೆಯ ಧ್ವನಿ" ಎಂಬ ಹೆಸರು ನನಗೆ ಕೊಡಲ್ಪಟ್ಟಿದೆ. ಕ್ರಿಸ್ತನ ದೇಹದ ಈ ಸನ್ಮಾನ್ಯವುಳ್ಳ ಭಾಗದ ಧ್ವನಿಯಾಗಲು ನಾನು ಯೋಗ್ಯನಲ್ಲವೆಂದು ಎಣಿಸುತ್ತೇನೆ. ಆದರೆ ನಾನು ಕಮ್ಯುನಿಷ್ಟ ದೇಶಗಳಲ್ಲಿ ಕೆಲವು ವರ್ಷಗಳ ವರೆಗೆ ಗುಪ್ತ ಸಭೆಯ ಒಂದು ಭಾಗದಲ್ಲಿ ಮುಂದಾಳಾಗಿದ್ದೆನು. ದೇವರ ಮಹತ್ಕಾರ್ಯದಿಂದ ನಾನು 14 ವರ್ಷಗಳ ಹಿಂಸೆಯನ್ನೂ ಬಂಧನವನ್ನೂ ತಾಳಿದೆನು. ಎರಡು ವರ್ಷಗಳ ವರೆಗೆ ನಾನು ಸಾಯುವ ಸ್ಥಿತಿಯಲ್ಲಿದ್ದೆನು. ಅದಕ್ಕಿಂತ ಆಶ್ಚರ್ಯಕರವಾದ ರೀತಿಯಲ್ಲಿ ದೇವರು ನನ್ನನ್ನು ಸೆರೆಮನೆಯಿಂದ ಬಿಡಿಸಿ ಪಶ್ಚಿಮ ದೇಶಗಳಲ್ಲಿ ಸ್ವಾತಂತ್ರ್ಯದಲ್ಲಿರುವ ಸಭೆಗೆ ಸಂದೇಶ ಕೊಡಲು ನನಗೆ ಅನುಕೂಲವನ್ನು ಕೊಟ್ಟನು. ಹೆಸರಿಲ್ಲದ ಅನೇಕ ಸಮಾಧಿಗಳಲ್ಲಿ ಹೂಣ ಲ್ಪಟ್ಟ ನನ್ನ ಸಹೋದರರ ಪರವಾಗಿ ನಾನು ಮಾತನಾಡುತ್ತೇನೆ. ಅರಣ್ಯ ಗಳಲ್ಲಿಯೂ ಚಿಕ್ಕ ಚಿಕ್ಕ ಕೋಣೆಗಳಲ್ಲಿಯೂ ಮುಂತಾದ ಅನೇಕ ಸ್ಥಳಗಳಲ್ಲಿಯೂ ಕೂಡಿ ಬರುವ ನನ್ನ ಸಹೋದರರ ಪರವಾಗಿ ನಾನು ಮಾತನಾಡುತ್ತೇನೆ.

ನಾನು ಸ್ವದೇಶವನ್ನು ಬಿಟ್ಟು ಸ್ವತಂತ್ರದಲ್ಲಿ ಜೀವಿಸುವ ಕ್ರೈಸ್ತರಿಗೆ ಸಂದೇಶವನ್ನು ಕೊಡಲು ಪ್ರಯತ್ನಿಸಬೇಕೆಂದು ರೂಮೇನಿಯಾ ದೇಶದಲ್ಲಿರುವ ಗುಪ್ತ ಸಭಿಕರು ತೀರ್ಮಾನಮಾಡಿದರು. ದೇವರ ಮಹತ್ಕಾರ್ಯದಿಂದ ನಾನೀಗ ಹೊರಗೆ ಬಂದು ಕಮ್ಯುನಿಷ್ಟ ದೇಶಗಳಲ್ಲಿ ಉಳಿದು ಕೆಲಸ ಮಾಡುತ್ತಾ ಅಪಾಯದಲ್ಲಿರುತ್ತಾ ಕಷ್ಟಪಡುತ್ತಾ ಸಾಯುತ್ತಾ ಇರುವ ನನ್ನ ಸಹೋದರ ರಿಂದ ನನಗೆ ಕೊಟ್ಟ ಆಜ್ಞೆಯನ್ನು ನೆರವೇರಿಸಲು ಪ್ರಯಾಸಪಡುತ್ತೇನೆ. ನಾನು ಗುಪ್ತ ಸಭೆಯಿಂದ ತರುವ ಸಂದೇಶವಾವುದೆಂದರೆ —

"ನಮ್ಮನ್ನು ಬಿಟ್ಟುಬಿಡಬಾರದು !"

"ನಮ್ಮನ್ನು ಮರೆಯಬಾರದು !"

"ನಮ್ಮನ್ನು ತ್ಯಜಿಸಬಾರದು !"

"ನಮಗೆ ಬೇಕಾಗುವ ಆಯುಧಗಳನ್ನು ಕೊಡಿರಿ. ಅವುಗಳನ್ನು ಉಪ ಯೋಗಿಸುವ ಬೆಲೆಯನ್ನು ನಾವು ಕೊಡುವೆವು," ಎಂಬುದೇ.

ಯಾವ ಗುಪ್ತ ಸಭೆಯು ಸ್ವತಃ ಮಾತನಾಡಲು ಅನುಕೂಲ ಹೊಂದುವ ದಿಲ್ಲವೋ ಆ ಸಭೆಯ ಪರವಾಗಿ ನಾನು ಮಾತನಾಡುತ್ತೇನೆ.

ಕಮ್ಯೂನಿಷ್ಟ ದೇಶಗಳಲ್ಲಿರುವ ನಿಮ್ಮ ಸಹೋದರ ಸಹೋದರಿಯರ ಮೊರೆಯನ್ನು ಕೇಳಿರಿ. ತಪ್ಪಿಸಿಕೊಂಡು ಸುರಕ್ಷಿತವಾಗಿ ಸುಖದಲ್ಲಿ ಜೀವಿಸ ಬೇಕೆಂದು ಅವರು ಬೇಡಿಕೊಳ್ಳುವದಿಲ್ಲ. ಆದರೆ ನಾಸ್ತಿಕತ್ವವೆಂಬ ವಿಷದಿಂದ ತಮ್ಮ ಯೌವನಸ್ಥರು ಕೆಡಬಾರದೆಂದು ಅದನ್ನು ವಿರೋಧಿಸುವ ಆಯುಧಗಳು ಅವರಿಗೆ ಬೇಕು. ದೇವರ ವಾಕ್ಯವನ್ನು ಹಬ್ಬಿಸುವಂತೆ ಸತ್ಯವೇದಗಳು ಅವ ರಿಗೆ ಬೇಕು. ದೇವರ ವಾಕ್ಯವು ಅವರ ಕಡೆಗೆ ಇಲ್ಲದಿದ್ದರೆ ಅವರು ಹಬ್ಬಿಸು ವದು ಹೇಗೆ ಸಾಧ್ಯ ?

ಒಬ್ಬ ಡಾಕ್ಟರರು ರೇಲು ಗಾಡಿಯಲ್ಲಿ ಪ್ರವಾಸಮಾಡುತ್ತಿದ್ದನು. ಒಂದು ಅಪಘಾತವಾಯಿತು. ನೂರಾರು ಜನರು ಗಾಯ ಹೊಂದಿ ನೆಲದ ಮೇಲೆ ಸಾಯುತ್ತಾ ಬಿದ್ದಿದ್ದರು. ಆದರೆ ಆ ಡಾಕ್ಟರರಿಗೆ ಚಿಕಿತ್ಸೆ ಕೊಡಲು ಸಾಧ್ಯ ವಿರಲಿಲ್ಲ. ಅವನ ಹತ್ತಿರ ಅವನ ಆಯುಧಗಳಿರಲಿಲ್ಲ. ಅವನು ತಿರುಗಾಡುತ್ತಾ —"ಅಯ್ಯೋ, ನನ್ನ ಹತ್ತಿರ ನನ್ನ ಆಯುಧಗಳಿದ್ದರೆ ಎಷ್ಟೋ ಒಳ್ಳೇದಾಗು ತ್ತಿತ್ತು !" ಎಂದು ಕೂಗಾಡುತ್ತಿದ್ದನು. ಆ ಶಸ್ತ್ರಕ್ರಿಯೆಯ ಆಯುಧಗಳಿಂದ ಅನೇಕರ ಪ್ರಾಣವನ್ನುಳಿಸಲು ಅವನಿಗೆ ಸಾಧ್ಯವಿತ್ತು. ಸಹಾಯಮಾಡಲು ಅವನು ಸಿದ್ಧನಾದನು. ಆದರೆ ಅವನ ಆಯುಧಗಳು ಅವನ ಹತ್ತಿರವಿರಲಿಲ್ಲ.

ಗುಪ್ತ ಸಭೆಯು ಸ್ಥಿತಿ ಹಾಗೆಯೇ ಇದೆ. ಅದರ ಸದಸ್ಯರು ಎಲ್ಲವನ್ನೂ ಕೊಡಲು ಸಿದ್ಧರಾಗಿದ್ದಾರೆ. ಅವರಲ್ಲಿ ಅನೇಕರು ರಕ್ತ ಸಾಕ್ಷಿಗಳಾಗಿ ಸತ್ತಿದ್ದಾರೆ. ಅನೇಕರು ಸೆರೆಮನೆಯಲ್ಲಿ ಅನೇಕ ವರ್ಷ ಕಳೆದಿದ್ದಾರೆ. ಆದರೆ ಕೆಲಸಕ್ಕಾಗಿ ಬೇಕಾಗುವ ಆಯುಧಗಳು ಇರದಿದ್ದರೆ ಅದರ ಕಾರ್ಯವಮಾಡುವದು ಹೇಗೆ ಸಾಧ್ಯ ? ಆದಕಾರಣ ಗುಪ್ತ ಸಭೆಯು ಸ್ವತಂತ್ರದಲ್ಲಿರುವ ವಿಶ್ವಾಸಿಗಳಿಗೆ— "ನಮಗೆ ಆಯುಧಗಳನ್ನು ಅಂದರೆ ಸುವಾರ್ತಾ ಪುಸ್ತಕಗಳನ್ನೂ, ಸತ್ಯವೇದ ಗಳನ್ನೂ ಬೇರೆ ಸಾಹಿತ್ಯವನ್ನೂ ಕೊಡಿರಿ. ನಾವು ಅವುಗಳನ್ನುಪಯೋಗಿಸು ವೆವು," ಎಂದು ವಿನಂತಿ ಮಾಡುತ್ತಿದೆ.

## ಸ್ವತಂತ್ರರಾದ ವಿಶ್ವಾಸಿಗಳು ಸಲ್ಲಿಸತಕ್ಕ ಸಹಾಯ

ಪ್ರತಿಯೊಬ್ಬ ವಿಶ್ವಾಸಿಯು ಈ ರೀತಿಗಳಲ್ಲಿ ಈಗಲೇ ಸಹಾಯಮಾಡ ಬಹುದು : —

ತಮ್ಮ ಜೀವನಕ್ಕೆ ಅದೃಷ್ಯವಾದ ಕಾರಣಗಳಿವೆಯೆಂದು ನಾಸ್ತಿಕರು ಒಪ್ಪು ವದಿಲ್ಲ. ವಿಶ್ವದಲ್ಲಿಯೂ ಜೀವನದಲ್ಲಿಯೂ ಅದ್ಭುತವಾದ ವಿಷಯಗಳಿವೆ ಎಂದು ಅವರು ಗ್ರಹಿಸಿಕೊಳ್ಳುವದಿಲ್ಲ. ಆದರೆ ಕ್ರೈಸ್ತ ವಿಶ್ವಾಸಿಗಳು ನೋಡು ವವರಾಗಿ ನಡೆಯದೆ ನಂಬುವವರಾಗಿಯೇ ನಡೆಯುತ್ತಿದ್ದರೆ ಅವರು ನಾಸ್ತಿಕರಿಗೆ

ಒಳ್ಳೇ ಸಾಕ್ಷಿಯನ್ನು ಕೊಡಬಹುದು. ಯಾಕೆಂದರೆ ಈ ರೀತಿಯಲ್ಲಿ ಅವರು ಅದೃಷ್ಯವಾದ ದೇವರೊಂದಿಗೆ ಅನ್ಯೋನ್ಯತೆಯಲ್ಲಿ ಜೀವಿಸುತ್ತಾರೆ. ಕ್ರೈಸ್ತರು ಸ್ವಹಿತವನ್ನು ನೋಡಿಕೊಳ್ಳದೆ ಯೋಗ್ಯವಾದ ಹಿತವನ್ನು ನೋಡಿಕೊಳ್ಳುತ್ತಿರುವಾಗ ಕಷ್ಟಪಡುವ ವಿಶ್ವಾಸಿಗಳಿಗೆ ಸಹಾಯ ಮಾಡಬಹುದು. ಬೇರೆ ಕ್ರೈಸ್ತರು ಹಿಂಸಿಸಲ್ಪಡುತ್ತಿರುವಾಗ ಅವರು ಅದರ ವಿರುದ್ಧವಾಗಿ ಬಹಿರಂಗವಾಗಿ ಮಾತನಾಡುತ್ತಿರುವಾಗ ಅವರಿಗೆ ಸಹಾಯ ಸಿಕ್ಕುತ್ತದೆ.

ಕಮ್ಯುನಿಷ್ಟರು ರಕ್ಷಣೆ ಹೊಂದುವ ಹಾಗೆ ವಿಶ್ವಾಸಿಗಳೆಲ್ಲರೂ ಪ್ರಾರ್ಥನೆ ಮಾಡಬೇಕು. ಹೀಗೆ ಪ್ರಾರ್ಥಿಸುವದು ನಿಷ್ಪ್ರಯೋಜನವೆಂದು ಕಂಡುಬರಬಹುದು. ನಾವು ಕಮ್ಯುನಿಷ್ಟರಿಗಾಗಿ ಪ್ರಾರ್ಥನೆ ಮಾಡಿದ ಮರುದಿನದಲ್ಲಿ ಅವರು ಮೊದಲಿಗಿಂತ ನಮ್ಮನ್ನು ಹೆಚ್ಚಾಗಿ ಹೊಡೆದರು. ಕರ್ತನು ತನ್ನನ್ನು ಶಿಲುಬೆಗೆ ಹಾಕಿದವರಿಗಾಗಿ ಪ್ರಾರ್ಥನೆ ಮಾಡಿದನು. ಆತನು ಶಿಲುಬೆಯ ಮೇಲೆ ಸಾಯಬೇಕಾಯಿತು. ಆದರೆ ಏಳು ವಾರಗಳಾದ ನಂತರ 5,000 ಜನ ಒಂದೇ ದಿನದಲ್ಲಿ ದೇವರ ಕಡೆಗೆ ತಿರುಗಿಕೊಂಡರು. ಆ ಪ್ರಾರ್ಥನೆ ನಿಜವಾಗಿ ನಿಷ್ಪ್ರಯೋಜನವಾಗಲಿಲ್ಲ. ಪ್ರಾರ್ಥನೆಯಿಂದ ನಿಮಗೂ ಸಹ ಆಶೀರ್ವಾದ ಸಿಕ್ಕುತ್ತದೆ. ಅನೇಕ ವಿಶ್ವಾಸಿಗಳು ಹಿಟ್ಲರನಿಗಾಗಿಯೂ ಅವನ ಅನುಯಾಯಿಗಳಿಗಾಗಿಯೂ ಪ್ರಾರ್ಥನೆ ಮಾಡಿದನು. ಸೈನ್ಯಗಳ ಪ್ರಯತ್ನಗಳಿಂದ ಮಾತ್ರವಲ್ಲದೇ ಪ್ರಾರ್ಥನಾ ಬಲದಿಂದಲೂ ಸಹ ಆತನು ಸೋಲಿಸಲ್ಪಟ್ಟನು. ನಾವು ನಮ್ಮ ನೆರೆಯವರನ್ನೂ ಹಾಗೆ ಪ್ರೀತಿಸಬೇಕು. ಕಮ್ಯುನಿಷ್ಟರು ತಿಳಿದವರ ಹಾಗೆ ನಮಗೆ ನೆರೆಯವರಾಗಿದ್ದಾರೆ. ಕ್ರಿಸ್ತನು ಮನುಷ್ಯರಿಗೆ ಜೀವವು ಇರಬೇಕೆಂತಲೂ ಸಮೃದ್ಧಿಯು ಇರಬೇಕೆಂತಲೂ ಬಂದನು. ಕಮ್ಯುನಿಷ್ಟರು ಆ ಜೀವವನ್ನು ಹೊಂದಲಿಲ್ಲ. ಯಾಕೆಂದರೆ ಕ್ರೈಸ್ತ ವಿಶ್ವಾಸಿಗಳು ಆ ಸಮೃದ್ಧಿಯಾದ ಜೀವನದ ವಿಷಯವಾಗಿ ಎಲ್ಲರಿಗೂ ತಿಳಿಸಿಲ್ಲ. ಅನೇಕರು ಈ ಅಮೂಲ್ಯವಾದ ವಿಷಯವನ್ನು ಗ್ರಹಿಸಿಕೊಳ್ಳದೇ ಹೋಗಿದ್ದಾರೆ. ಅಂಥವರು ಕ್ರಾಂತಿ ಮಾಡಿ ಕಮ್ಯುನಿಷ್ಟ ಪಕ್ಷದಲ್ಲಿ ಸೇರಿದ್ದಾರೆ. ಅವರಲ್ಲಿ ಅನೇಕರು ಸಾಮಾಜಿಕ ಅನ್ಯಾಯವನ್ನು ತಾಳಿದ್ದಾರೆ. ಈಗ ಅವರು ತಮ್ಮ ಕಹಿಯಾದ ಅನುಭವಗಳಿಂದ ಕ್ರೂರರಾಗಿದ್ದಾರೆ. ಅವರ ವಿರುದ್ಧವಾಗಿ ನಾವು ಹೋರಾಡಬೇಕು. ಆದರೆ ವಿಶ್ವಾಸಿಗಳು ಹೋರಾಡುತ್ತಿರುವಾಗಲೂ ತಮ್ಮ ವೈರಿಗಳನ್ನು ಪ್ರೀತಿಸುವವರಾಗಿರಬೇಕು. ನಾವು ನಮ್ಮ ಸ್ವಂತ ಕರ್ತವ್ಯವನ್ನು ಅಲಕ್ಷ್ಯಮಾಡಿದ್ದರಿಂದ ಕೆಲವರು ಕಮ್ಯುನಿಷ್ಟರಾಗಿದ್ದಾರೆ. ಈ ಪಾಪವನ್ನು ಪರಿಹರಿಸುವ ಹಾಗೆ ನಾವು ಅವರನ್ನು ಪ್ರೀತಿಸಿ ಅವರಿಗಾಗಿ ಪ್ರಾರ್ಥನೆ ಮಾಡಬೇಕು.

ಕೇವಲ ಪ್ರೀತಿಯಿಂದ ಕಮ್ಯುನಿಷ್ಟರ ಸಮಸ್ಯೆ ಇಲ್ಲದಂತಾಗಿ ಹೋಗುವದೆಂದು ನಾನು ನಂಬುವದಿಲ್ಲ. ಯಾವದೊಂದು ದೇಶದಲ್ಲಿ ಕಳ್ಳಗುಂಪುಗಳಿದ್ದರೆ

ಕೇವಲ ಪ್ರೀತಿಯಿಂದ ಅವರನ್ನು ಸೋಲಿಸುವದು ಸಾಧ್ಯವಿಲ್ಲ. ಅವರನ್ನು ಹಿಡಿಯಲಿಕ್ಕೆ ಪೊಲೀಸರು ಬೇಕು. ಅವರ ನ್ಯಾಯ ವಿಚಾರಣೆಮಾಡಲು ನ್ಯಾಯಾಧೀಶರು ಬೇಕು. ಅವರು ಜನರಿಗೆ ಕಷ್ಟಕೊಡಬಾರದೆಂದು ಸೆರೆಮನೆಗಳು ಬೇಕು. (ಈ ವಿಷಯಗಳು ಕೇವಲ ಪಾಲಕರಿಗೆ ಬೇಡ.) ಈ ಕಳ್ಳರು ತಮ್ಮ ದುಷ್ಕಾರ್ಯಗಳನ್ನು ತ್ಯಜಿಸಿಬಿಡದಿದ್ದರೆ ಸೆರೆಮನೆಯಲ್ಲಿ ಹಾಕಲ್ಪಡಬೇಕು. ಕಮ್ಯುನಿಷ್ಟರನ್ನು ವಿರೋಧಿಸುವದು ಯೋಗ್ಯವಾದ ರಾಷ್ಟ್ರೀಯ, ಆರ್ಥಿಕ ಹಾಗೂ ಸಂಸ್ಕೃತಿಕ ಉಪಾಯಗಳನ್ನು ಉಪಯೋಗಿಸುವದು ಯೋಗ್ಯವಾಗಿದೆ. ಕಳ್ಳರು ಒಬ್ಬನ ಹಣದ ಚೀಲವನ್ನು ಕದಿಯುತ್ತಾರೆ. ಆದರೆ ಕಮ್ಯುನಿಷ್ಟರು ದೇಶಗಳನ್ನು ಕದಿಯುತ್ತಾರೆ. ಆದರೆ ಕಮ್ಯುನಿಷ್ಟರನ್ನು ಪ್ರೀತಿಸುತ್ತಾ ಅವರಿಗಾಗಿ ಪ್ರಾರ್ಥಿಸುತ್ತಾ ಅವರನ್ನು ಕ್ರಿಸ್ತನ ಕಡೆಗೆ ಎಳೆಯುವದು ಪ್ರತಿಯೊಬ್ಬ ವಿಶ್ವಾಸಿಯ ಕರ್ತವ್ಯವಾಗಿದೆ.

## ಸತ್ಯವೇದಗಳೂ ಅದರ ಭಾಗಗಳೂ ಅಗತ್ಯವಾಗಿವೆ

ಎರಡನೆಯದಾಗಿ, ಸ್ವಾತಂತ್ರದಲ್ಲಿರುವ ವಿಶ್ವಾಸಿಗಳು ಇಂಥ ಪುಸ್ತಕಗಳನ್ನು ಕಳುಹಿಸಿ ಕೊಡಬಹುದು. ಅವುಗಳನ್ನು ಕಳುಹಿಸುವ ವಿಧಾನಗಳಿವೆ. ನಾನು ಹೊರಗೆ ಬಂದ ನಂತರ ಅನೇಕ ಇಂಥ ಪುಸ್ತಕಗಳನ್ನು ಕಳುಹಿಸಿದ್ದೇನೆ. ಅವುಗಳು ಸುರಕ್ಷಿತವಾಗಿ ಬಂದಿವೆ. ನಾನು ಇನ್ನೂ ರೂಮೆನಿಯಾದಲ್ಲಿದ್ದಾಗ ಅನೇಕ ಸತ್ಯವೇದಗಳನ್ನು ಹೊಂದಿದ್ದೆನು. ಕಳುಹಿಸುವದು ಸಾಧ್ಯವಾಗಿದೆ. ಆದರೆ ಪ್ರತಿಗಳು ಪೂರೈಸಲ್ಪಡಬೇಕು. ಅವು ಅತ್ಯಗತ್ಯವಾಗಿವೆ. ಅನೇಕ ವರ್ಷಗಳಿಂದ ಕಮ್ಯುನಿಷ್ಟ ದೇಶಗಳಲ್ಲಿ ಸಾವಿರಾರು ವಿಶ್ವಾಸಿಗಳು ಸತ್ಯವೇದಗಳನ್ನೂ ಸುವಾರ್ತಾ ಪುಸ್ತಕಗಳನ್ನೂ ನೋಡಿಲ್ಲ.

ಒಂದು ದಿವಸ ಹೊಲಸಾದ ಬಟ್ಟೆಗಳನ್ನು ಹಾಕಿಕೊಂಡ ಇಬ್ಬರು ಹಳ್ಳಿಗರು ನನ್ನ ಮನೆಗೆ ಬಂದರು. ಅವರು ತಮ್ಮ ಹಳ್ಳಿಯನ್ನು ಬಿಟ್ಟು ದೊಡ್ಡ ಪಟ್ಟಣಕ್ಕೆ ಬಂದಿದ್ದರು. ಹಿಮಕಾಲವೆಲ್ಲಾ ಕಠಿಣವಾದ ಕೂಲಿ ಕೆಲಸ ಮಾಡಲು ಅವರು ಸಿದ್ಧರಾಗಿದ್ದರು. ಯಾಕೆಂದರೆ ಒಂದು ವೇಳೆ ಸತ್ಯವೇದದ ಒಂದು ಹಳೆಯ ಪ್ರತಿಯನ್ನು ಕೊಂಡುಕೊಂಡು ತಮ್ಮ ಹಳ್ಳಿಗೆ ತೆಗೆದುಕೊಂಡು ಹೋಗಲು ಅವರಿಗೆ ಆಶೆಯಿತ್ತು. ನಾನು ಅಮೆರಿಕ ದೇಶದಿಂದ ಸತ್ಯವೇದಗಳನ್ನು ಹೊಂದಿದ್ದಕ್ಕಾಗಿ ಒಂದು ಹೊಸ ಪ್ರತಿಯನ್ನು ಅವರಿಗೆ ಕೊಡಲು ನನಗೆ ಸಾಧ್ಯವಿತ್ತು. ಇದನ್ನು ನೋಡಿ ಅವರು ಅತ್ಯಾಶ್ಚರ್ಯಪಟ್ಟರು. ತಾವು ಕೂಲಿ ಕೆಲಸ ಮಾಡಿ ಹೊಂದಿದ ಹಣವನ್ನು ನನಗೆ ಕೊಡಲು ಪ್ರಯತ್ನಿಸಿದಾಗ ನಾನು ಬೇಡವೆಂದು ಹೇಳಿದೆನು. ಅವರು ಸತ್ಯವೇದವನ್ನು ಹಿಡಿದುಕೊಂಡು ತಮ್ಮ ಹಳ್ಳಿಗೆ ತಿರುಗಿ ಓಡಿಹೋದರು. ಕೆಲವು ದಿವಸಗಳಾದ ನಂತರ

ಸಂತೋಷಭರಿತವಾದ ಒಂದು ಪತ್ರ ನನಗೆ ಸಿಕ್ಕಿತು. 30 ಜನ ಹಳ್ಳಿಗರು ಅದಕ್ಕೆ ಸಹಿ ಮಾಡಿದ್ದರು. ಅವರು ಆ ಸತ್ಯವೇದವನ್ನು ತೆಗೆದುಕೊಂಡು 30 ಭಾಗ ಮಾಡಿ ಒಬ್ಬೊಬ್ಬರಿಗೆ ಒಂದೊಂದು ಭಾಗವನ್ನು ಹಂಚಿಕೊಂಡರು.

ರಷ್ಯದವರು ಸತ್ಯವೇದದ ಒಂದು ಪುಟವನ್ನಾದರೂ ಹೊಂದಲು ಅಪೇಕ್ಷಿಸುತ್ತಾರೆ. ಅದರಿಂದ ಅವರಿಗೆ ಆತ್ಮಿಯ ಆಹಾರ ಸಿಕ್ಕುತ್ತದೆ. ಸತ್ಯವೇದದ ಒಂದು ಪ್ರತಿಗಾಗಿ ಒಂದು ಹಸುವನ್ನು ಅಥವಾ ಆಡನ್ನು ಕೊಡಲು ಅವರು ಸಿದ್ಧರಾಗಿದ್ದಾರೆ. ಹೊಸ ಒಡಂಬಡಿಕೆಯ ಒಂದು ಹಳೆಯ ಪ್ರತಿಗಾಗಿ ಒಬ್ಬ ಮನುಷ್ಯ ತನ್ನ ಲಗ್ನದ ಗುರುತಾದ ಉಂಗುರವನ್ನು ಈಡಾಗಿ ಕೊಟ್ಟನು. ನಮ್ಮ ಮಕ್ಕಳು ಕ್ರಿಸ್ತ ಜಯಂತಿಯ ಕಾರ್ಡುಗಳನ್ನು ಎಂದಿಗೂ ನೋಡಿಲ್ಲ. ಅವರ ಹತ್ತಿರ ಒಂದು ಇದ್ದರೆ ಗ್ರಾಮದ ಎಲ್ಲಾ ಮಕ್ಕಳು ಅದನ್ನು ನೋಡಲು ಕೂಡಿಬರುವರು. ಯಾವನೊಬ್ಬ ಮುದುಕನು ಕೂಸಾದ ಯೇಸುವಿನ ವಿಷಯವಾಗಿಯೂ ಕನ್ಯಳಾದ ಮರಿಯಳ ವಿಷಯವಾಗಿಯೂ ವಿವರಿಸಿ ಕ್ರಿಸ್ತನ ಹಾಗೂ ರಕ್ಷಣೆಯ ಮಾರ್ಗವನ್ನು ಪ್ರಸಿದ್ಧಿಪಡಿಸಲು ಅನುಕೂಲ ಹೊಂದಬಹುದು. ಕ್ರೈಸ್ತ ಸಾಹಿತ್ಯವನ್ನೂ ಸತ್ಯವೇದಗಳನ್ನೂ ಕಳುಹಿಸುವದು ಸಾಧ್ಯವಾಗಿದೆ.

ಮೂರನೆಯದಾಗಿ, ನಾಸ್ತಿಕತ್ವವೆಂಬ ವಿಷಯವನ್ನು ವಿರೋಧಿಸಲು ನಾವು ವಿಶೇಷವಾದ ಸಾಹಿತ್ಯವನ್ನು ಸಿದ್ಧಪಡಿಸಬೇಕು. ಪ್ರಾಥಮಿಕ ಶಾಲೆಯ ಮೊದಲನೆಯ ವರ್ಗದಿಂದ ವಿಶ್ವ ವಿದ್ಯಾಲಯದ ವರೆಗೆ ಈ ಬೋಧನೆ ಮಕ್ಕಳಿಗೂ ಯೌವನಸ್ಥರಿಗೂ ಕೊಡಲ್ಪಟ್ಟಿದೆ. ಕಮ್ಯುನಿಷ್ಟರು—"ನಾಸ್ತಿಕತ್ವದ ಮಾರ್ಗದರ್ಶಕ" ಎಂಬ ಒಂದು ಪುಸ್ತಕವನ್ನು ಪ್ರಕಟಿಸಿದ್ದಾರೆ. ಇದು ನಾಸ್ತಿಕರ ವೇದವಾಗಿದೆ. ಚಿಕ್ಕ ಮಕ್ಕಳಿಗೆ ಅದು ಸುಲಭವಾದ ಭಾಷೆಯಲ್ಲಿ ಮುದ್ರಿಸಲ್ಪಟ್ಟಿದೆ. ಅವರು ಬೆಳೆಯುತ್ತಾ ಬರುವಾಗ ನಾಸ್ತಿಕತ್ವದ ವಿಷಯವಾಗಿ ಹೆಚ್ಚಿನ ವಿಷಯಗಳು ಬೋಧಿಸಲ್ಪಡುತ್ತವೆ. ಈ ದುಷ್ಟ "ವೇದ"ದಿಂದ ಮಕ್ಕಳ ಮನಸ್ಸುಗಳು ಕೆಡಿಸಲ್ಪಟ್ಟಿವೆ. ಆದರೆ "ನಾಸ್ತಿಕದ ಮಾರ್ಗದರ್ಶಕ" ಎಂಬ ಈ ಪುಸ್ತಕದ ತಪ್ಪುಗಳಿಗೆ ಉತ್ತರ ಕೊಡಲು ಕ್ರೈಸ್ತರು ಎಂದಿಗೂ ಒಂದು ಪುಸ್ತಕವನ್ನು ಮುದ್ರಿಸಲಿಲ್ಲ. ಇಂಥ ಪುಸ್ತಕವನ್ನು ತಯಾರಿಸಿ ಕಳುಹಿಸುವದು ಅಗತ್ಯವಾಗಿದೆ. ಇದನ್ನು ಬೇಗನೆ ಮಾಡುವದು ಅತ್ಯಗತ್ಯವಾಗಿದೆ. ಯಾಕೆಂದರೆ "ನಾಸ್ತಿಕನ ಮಾರ್ಗದರ್ಶಕ" ಎಂಬ ಪುಸ್ತಕದಿಂದ ಕೆಡಿಸಲ್ಪಟ್ಟ ಯುವಜನರಿಗೆ ಕೊಡತಕ್ಕ ಸಾಹಿತ್ಯ ಗುಪ್ತ ಸಭೆಗೆ ಇಲ್ಲ. ಕಮ್ಯುನಿಷ್ಟ ದೇಶಗಳ ಬೇರೆ ಬೇರೆ ಭಾಷೆಗಳಲ್ಲಿ ಅಂಥ ಸಾಹಿತ್ಯ ಸಿಕ್ಕುವ ತನಕ ಅದು ಸರಿಯಾದ ರೀತಿಯಲ್ಲಿ ತನ್ನ ಕಾರ್ಯವನ್ನು ಸಾಧಿಸಲಾರದು. ನಾಸ್ತಿಕತ್ವದಿಂದ ಕೆಡಿಸಲ್ಪಟ್ಟ ನಮ್ಮ ಯುವ ಜನರಿಗೆ ದೇವರ ಉತ್ತರಗಳು ಬೇಕು. ಆ ಉತ್ತರವನ್ನು ತೋರ್ಪಡಿಸುವ

ಸಾಹಿತ್ಯವನ್ನು ಪೂರೈಸುವದರಿಂದ ನಾವು ಸಹಾಯ ಮಾಡಬಲ್ಲೆವು. ಯೌವನಸ್ಥರ ಲಕ್ಷ್ಯವನ್ನು ಆಕರ್ಷಿಸುವಂತೆ ಅಂಥ ಪುಸ್ತಕಗಳಿಗೆ ಚಿತ್ರಗಳು ಇರಬೇಕು.

ನಾಲ್ಕನೆಯದಾಗಿ, ಅವರಿಗೆ ಆರ್ಥಿಕ ಸಹಾಯ ಅಗತ್ಯವಾಗಿದೆ. ಬೇರೆ ಬೇರೆ ಸ್ಥಳಗಳಿಗೆ ಹೋಗಿ ಜನರಿಗೆ ಸುವಾರ್ತೆಯನ್ನು ತಿಳಿಸಲು ಅವರಿಗೆ ಮನಸ್ಸಿದೆ. ಆದರೆ ಪ್ರವಾಸಕ್ಕಾಗಿ ಅವರ ಹತ್ತಿರ ಸಾಕಷ್ಟು ಹಣವಿಲ್ಲ. ಸ್ವಲ್ಪ ಸಹಾಯವನ್ನು ಕೊಡುವದರಿಂದ ಅವರಿಗೆ ಹಾಗೆ ಮಾಡುವದು ಸಾಧ್ಯವಾಗುವದು. ತಮ್ಮ ನಂಬಿಕೆಗಾಗಿ ಮೊದಲು ಸೆರೆಮನೆಯಲ್ಲಿದ್ದ ಪಾಲಕರು ಸುವಾರ್ತೆಯನ್ನು ಸಾರಲು ಬಹಳವಾಗಿ ಅಪೇಕ್ಷಿಸುತ್ತಾರೆ. ಆದರೆ ಊರುಗಳಿಗೂ ಹಳ್ಳಿಗಳಿಗೂ ಹೋಗಲು ಅವರಿಗೆ ಸಾಧ್ಯವಿಲ್ಲ. ಸಾಧಾರಣ ವಿಶ್ವಾಸಿಗಳೂ ಸಹ ಕೇವಲ ತಮ್ಮ ಹೊಟ್ಟೆಗಳನ್ನು ತುಂಬಿಸುವ ಸಂಬಳವನ್ನು ಹೊಂದುತ್ತಾರೆ. ಅವರಿಗೆ ಸ್ವಲ್ಪ ಆರ್ಥಿಕ ಸಹಾಯವಿದ್ದರೆ ತಮ್ಮ ಸಾಕ್ಷಿಯಲ್ಲಿ ಹೆಚ್ಚಿನ ಪ್ರಯೋಜನವಾಗುವದು. ಹೊರಗಿನ ಸಭೆಗಳಲ್ಲಿ ಕೆಲಸ ಮಾಡುವ ಪಾಲಕರಲ್ಲಿ ಅನೇಕರು ಗುಪ್ತವಾಗಿ ಕ್ರಿಸ್ತನಿಗಾಗಿ ಹೆಚ್ಚಾಗಿ ಸೇವೆ ಮಾಡುತ್ತಾರೆ. ಆದರೆ ಕಮ್ಯುನಿಷ್ಟ ಅಧಿಕಾರಿಗಳಿಂದ ಅವರಿಗೆ ಅಲ್ಪ ಸ್ವಲ್ಪ ಸಂಬಳ ಸಿಕ್ಕುತ್ತದೆ. ತಮ್ಮ ಗುಪ್ತ ಸೇವೆಯನ್ನು ಸರಿಯಾಗಿ ಮಾಡಲು ಅವರಿಗೆ ಸಹಾಯಬೇಕು. ಈ ರೀತಿಯಲ್ಲಿ ಸಹ ಗುಪ್ತ ಸಭೆಗೆ ಸಹಾಯಮಾಡಲು ಸ್ವತಂತ್ರವುಳ್ಳ ವಿಶ್ವಾಸಿಗಳಿಗೆ ಸಾಧ್ಯವಾಗಿದೆ.

ಐದನೆಯದಾಗಿ, ನಾವು ಆಕಾಶವಾಣಿಯ ಮೂಲಕವಾಗಿ ಸುವಾರ್ತೆಯನ್ನು ಕಮ್ಯುನಿಷ್ಟ ದೇಶಗಳಿಗೆ ಪ್ರಚಾರಮಾಡಬೇಕು. ಸ್ವಾತಂತ್ರ್ಯವುಳ್ಳ ದೇಶಗಳಲ್ಲಿರುವ ಆಕಾಶವಾಣಿ ಕೇಂದ್ರಗಳನ್ನು ಉಪಯೋಗಿಸಿ ನಾವು ಗುಪ್ತ ಸಭೆಯ ವಿಶ್ವಾಸಿಗಳಿಗೆ ಆತ್ಮೀಯ ಆಹಾರವನ್ನು ಕೊಡಬಹುದು. ತಮ್ಮ ತತ್ವಗಳನ್ನು ಪ್ರಚಾರ ಮಾಡಲು ಕಮ್ಯುನಿಷ್ಟರು ಸ್ವತಃ ಆಕಾಶವಾಣಿಯನ್ನು ಉಪಯೋಗಿಸುತ್ತಾರೆ. ಲಕ್ಷ ಲಕ್ಷಾಂತರ ರಷ್ಯದವರ ಹಾಗೂ ಇತರ ದೇಶಗಳ ಜನರ ಹತ್ತಿರ ರೇಡಿಯೋಗಳಿವೆ. ಈ ಸಂದೇಶಗಳನ್ನು ಕೇಳಲು ಅವರಿಗೆ ಸಾಧ್ಯವಾಗಿದೆ. ಈ ಕೆಲಸ ಈಗ ನಡೆಯುತ್ತಿದೆ. ನಾವು ಅದನ್ನು ಹೆಚ್ಚಾಗಿ ಮಾಡಬೇಕು. ಈ ರೀತಿಯಲ್ಲಿ ಗುಪ್ತ ಸಭೆಗೆ ಆತ್ಮೀಯ ಆಹಾರವನ್ನು ಕೊಟ್ಟು ಅದಕ್ಕೆ ಸಹಾಯ ನೀಡುವದು ಸಾಧ್ಯವಾಗಿದೆ.

## ಕ್ರೈಸ್ತ ಸಾಕ್ಷಿಗಳ ಕುಟುಂಬಗಳ ದುಃಸ್ಥಿತಿ

ತಮ್ಮ ಸಾಕ್ಷಿಗಾಗಿ ಸೆರೆಮನೆಗೆ ಹೋದವರ ಕುಟುಂಬಗಳಿಗಾಗಿ ನಾವು ಸಹಾಯವನ್ನು ನೀಡಬೇಕು. ಸಾವಿರಾರು ಅಂಥ ಕುಟುಂಬಗಳಿಗೆ ಈಗ ಅತಿಶಯ ಕಷ್ಟವಿದೆ. ಗುಪ್ತ ಸಭೆಯ ಒಬ್ಬ ಸದಸ್ಯನು ಹಿಡಿಯಲ್ಪಡುವಾಗ ಅವನ ಮನೆಯವರಿಗೆ ಭಯಂಕರವಾದ ಸ್ಥಿತಿಯಾಗುತ್ತದೆ. ಅವರಿಗೆ ಸಹಾಯ ಮಾಡುವದು ನೇಮಗಳ ವಿರುದ್ಧವಾಗಿದೆ. ಈ ರೀತಿಯಲ್ಲಿ ಹೆಂಡತಿ ಮಕ್ಕಳಿಗೆ

ಬಹಳ ಕಷ್ಟಕರವಾದ ಸಂದರ್ಭವಿದೆ. ಒಬ್ಬ ವಿಶ್ವಾಸಿಯು ಸೆರೆಮನೆಗೆ ಹೋಗು ವಾಗ ಅವನಿಗೆ ಹಿಂಸೆಯೂ ಅನೇಕಾವರ್ತಿ ಮರಣವೂ ಬರುತ್ತವೆ. ಆದರೆ ಅವನ ಕುಟುಂಬಕ್ಕೆ ಸಹ ಕಷ್ಟವಾಗುತ್ತದೆ. ಸ್ವತಂತ್ರ ದೇಶಗಳಲ್ಲಿರುವ ಒಬ್ಬ ಸಾಧಾರಣ ವಿಶ್ವಾಸಿಯು ನನಗೂ ನನ್ನ ಕುಟುಂಬಕ್ಕೂ ಸಹಾಯ ಕಳಿಸದ ಹೊರತಾಗಿ ನಾನು ಇನ್ನೂ ಜೀವಿಸುತ್ತಾ ಈ ಮಾತುಗಳನ್ನು ಬರೆಯುತ್ತಾ ಇರುತ್ತಿರಲಿಲ್ಲ.

ಈ ಪುಸ್ತಕವು ಬರೆಯಲ್ಪಡುತ್ತಿದ್ದಾಗ ರಷ್ಯ ದೇಶದಲ್ಲಿ ಅನೇಕ ಕ್ರೈಸ್ತರು ಹಿಡಿಯಲ್ಪಟ್ಟಿದ್ದಾರೆ. ಹೆಚ್ಚು ಜನರು ರಕ್ತಸಾಕ್ಷಿಗಳಾಗಿ ಸಾಯಲಿಕ್ಕಿದ್ದಾರೆ. ಅವರು ಸಮಾಧಿಯಲ್ಲಿ ವಿಶ್ರಾಂತಿಯನ್ನು ಹೊಂದುತ್ತಿರುವಾಗ ಅವರ ಮನೆ ಯವರು ಕಠಿಣವಾದ ಪರಿಸ್ಥಿತಿಯಲ್ಲಿ ಜೀವಿಸುತ್ತಾರೆ. ಲೋಕದಲ್ಲಿ ಅನೇಕ ದೇಶಗಳಲ್ಲಿ ಜನರು ಹಸಿವೆಪಡುತ್ತಾ ಇದ್ದಾರೆ. ಅವರಿಗೆ ನಾವು ಸಹಾಯ ಮಾಡಲೇ ಬೇಕು. ಆದರೆ ಕ್ರಿಸ್ತನಿಗಾಗಿ ಹಿಂಸೆಪಡುತ್ತಿರುವ ಅಥವಾ ಸತ್ತು ಹೋದ ವಿಶ್ವಾಸಿಗಳ ಕುಟುಂಬಗಳಿಗೆ ಸಹಾಯ ಮಾಡುವದು ಪ್ರತಿಯೊಬ್ಬ ವಿಶ್ವಾಸಿಯ ಕರ್ತವ್ಯವಾಗಿದೆ.

ನಾನು ಗುಪ್ತ ಸಭೆಯ ಸದಸ್ಯನಾಗಿ ಕಷ್ಟವನ್ನು ತಾಳಿ ಸ್ವತಂತ್ರಕ್ಕೆ ಪಾರಾ ಗಿದ್ದೇನೆ. ನಾನು ಆ ದೇಶಗಳಲ್ಲಿ ಉಳಿದಿರುವ ನನ್ನ ಸಹೋದರರಿಂದ ನಿಮಗೆ ವಿನಂತಿ ಮಾಡುತ್ತೇನೆ. ಈ ಸಂದೇಶವನ್ನು ಕೊಡಲು ಅವರು ನನ್ನನ್ನು ಕಳು ಹಿಸಿದ್ದಾರೆ. ಅದನ್ನು ತಿಳಿಸುವ ಹಾಗೆ ದೇವರು ಆಶ್ಚರ್ಯಕರವಾದ ರೀತಿ ಯಲ್ಲಿ ನನ್ನನ್ನು ಕಾಪಾಡಿದ್ದಾನೆ.

ಕಮ್ಯುನಿಷ್ಟ ದೇಶಗಳವರಿಗೆ ಕ್ರಿಸ್ತನನ್ನು ಪ್ರಚಾರ ಮಾಡುವದು ಈಗಲೇ ಅಗತ್ಯವೆಂದು ನಾನು ನಿಮಗೆ ತಿಳಿಸಿದ್ದೇನೆ. ಕ್ರೈಸ್ತ ರಕ್ತಸಾಕ್ಷಿಗಳ ಕುಟುಂಬ ಗಳಿಗೆ ಸಹಾಯ ಮಾಡುವದು ಅಗತ್ಯವೆಂದು ನಾನು ತಿಳಿಸಿದ್ದೇನೆ. ಸುವಾ ರ್ತೆಯ ಪ್ರಚಾರಕ್ಕಾಗಿ ನೀವು ಗುಪ್ತ ಸಭೆಗೆ ಕೊಡತಕ್ಕ ಸಹಾಯವನ್ನು ಕುರಿತು ನಾನು ತಿಳಿಸಿದ್ದೇನೆ.

ನನ್ನ ಅಂಗಾಲವು ಹೊಡೆಯಲ್ಪಟ್ಟಾಗ ನನ್ನ ನಾಲಿಗೆ ಕೂಗಿತು. ನನ್ನ ನಾಲಿಗೆ ಯಾಕೆ ಕೂಗಿತು ? ಅದು ಹೊಡೆಯಲ್ಪಡಲಿಲ್ಲವಲ್ಲ ? ಆದರೆ ನಾಲಿ ಗೆಯೂ ಕಾಲುಗಳೂ ಒಂದೇ ದೇಹದ ಭಾಗಗಳಾಗಿರುವದರಿಂದ ನಾಲಿಗೆಯು ಕೂಗಿತು. ಸ್ವತಂತ್ರರಾದ ಕ್ರೈಸ್ತ ವಿಶ್ವಾಸಿಗಳೂ ಕಮ್ಯುನಿಷ್ಟ ದೇಶಗಳಲ್ಲಿರುವ ವಿಶ್ವಾಸಿಗಳೂ ಕ್ರಿಸ್ತನ ಒಂದೇ ದೇಹದಲ್ಲಿದ್ದಾರೆ. ಒಂದು ಭಾಗವು ಕಮ್ಯು ನಿಷ್ಟ ಸೆರೆಮನೆಗಳಲ್ಲಿ ಕಷ್ಟಪಟ್ಟು ಕ್ರಿಸ್ತನಿಗಾಗಿ ರಕ್ತಸಾಕ್ಷಿಗಳನ್ನು ಕೊಡುತ್ತಿದೆ. ನಮ್ಮ ಕಷ್ಟವನ್ನು ಅನುಭವಿಸಲು ನಿಮಗೆ ಸಾಧ್ಯವಿಲ್ಲವೋ ? ಕಮ್ಯುನಿಷ್ಟ

ದೇಶಗಳಲ್ಲಿ ಆದಿ ಸಭೆಯ ಸೌಂದರ್ಯ, ತ್ಯಾಗ, ಭಕ್ತಿಗಳು ತಿರಿಗಿ ಕಾಣಿಸಿಕೊಳ್ಳುತ್ತಿವೆ.

ನಮ್ಮ ಕರ್ತನಾದ ಯೇಸು ಕ್ರಿಸ್ತನು ತೀವ್ರವಾದ ದುಃಖವನ್ನು ಪಟ್ಟವನಾಗಿ ಗೆತ್ಸೆಮನೆಯ ತೋಟದಲ್ಲಿ ಪ್ರಾರ್ಥಿಸುತ್ತಿದ್ದಾಗ ಪೇತ್ರ, ಯಾಕೋಬ, ಯೋಹಾನರು ಸ್ವಲ್ಪ ದೂರದಲ್ಲಿದ್ದರು. ಆದರೆ ಈ ಮಹತ್ಕಾರ್ಯ ನಡೆಯುತ್ತಿದ್ದಾಗ ಅವರೆಲ್ಲರೂ ಗಾಢ ನಿದ್ರೆಯನ್ನು ಮಾಡುತ್ತಿದ್ದರು. ನೀವು ದುಃಖದಲ್ಲಿರುವ ನಿಮ್ಮ ಸಹೋದರರಿಗಾಗಿ ಚಿಂತಿಸುತ್ತೀರೋ ? ಅವರಿಗಾಗಿ ಸಹಾಯ ಮಾಡಲು ನೀವು ಪ್ರಯತ್ನಿಸುತ್ತೀರೋ ? ಕಮ್ಯುನಿಷ್ಟ ದೇಶಗಳಲ್ಲಿ ವಿಶ್ವಾಸಿಗಳು ಆದಿಕ್ರೈಸ್ತರ ಹಾಗೆ ಕಷ್ಟಪಡುತ್ತಿರುವಾಗ ಸ್ವತಂತ್ರ ದೇಶಗಳಲ್ಲಿರುವ ಅನೇಕ ವಿಶ್ವಾಸಿಗಳು ಆತ್ಮಿಯ ರೀತಿಯಲ್ಲಿ ನಿದ್ರೆಮಾಡುತ್ತಾರೆ. ಅಲ್ಲಿರುವ ನಮ್ಮ ಸಹೋದರರು ಧೈರ್ಯದಿಂದ ಮಹಾ ಆತ್ಮಿಯ ಯುದ್ಧವನ್ನು ಮಾಡುತ್ತಿದ್ದಾರೆ. ಮೊಧಲನೆಯ ಶತಮಾನದಲ್ಲಿ ಆದಿ ಕ್ರೈಸ್ತರು ಹಿಂಸಿಸಲ್ಪಟ್ಟ ಹಾಗೆ ಅವರು ಹಿಂಸಿಸಲ್ಪಡುತ್ತಾರೆ. ಆದರೆ ಪೇತ್ರ, ಯಾಕೋಬ, ಯೋಹಾನರು ತಮ್ಮ ರಕ್ಷಕನ ಮಹಾ ದುಃಖವುಳ್ಳ ಕಾಲದಲ್ಲಿ ನಿದ್ರೆಮಾಡಿದ ಹಾಗೆ ಸ್ವತಂತ್ರ ದೇಶಗಳಲ್ಲಿರುವ ವಿಶ್ವಾಸಿಗಳು ನಿದ್ರೆ ಮಾಡುತ್ತಿದ್ದಾರೆ.

ಗುಪ್ತ ಸಭೆಯಲ್ಲಿರುವ ನಿಮ್ಮ ಸಹೋದರರು ಸುವಾರ್ತೆಗಾಗಿ ಕ್ರಿಸ್ತನ ಹೆಸರಿನಲ್ಲಿ ಕಷ್ಟಪಡುತ್ತಾ ಹೋರಾಡುತ್ತಾ ಇರುವಾಗ ನೀವೂ ಸಹ ನಿದ್ರೆ ಮಾಡುತ್ತಿದ್ದೀರೋ ?

"ನಮ್ಮನ್ನು ಜ್ಞಾಪಕಮಾಡಿರಿ. ನಮಗೆ ಸಹಾಯ ಮಾಡಿರಿ. ನಮ್ಮನ್ನು ತ್ಯಜಿಸಬೇಡಿರಿ," ಎಂಬ ಅವರ ಸಂದೇಶವನ್ನು ನೀವು ಕೇಳುತ್ತಿದ್ದೀರೋ ? ಆ ಸಂದೇಶವನ್ನು ನಾನು ನಿಮಗೆ ಮುಟ್ಟಿಸಿದ್ದೇನೆ. ಅದು ನಾಸ್ತಿಕರಾದ ಕಮ್ಯುನಿಷ್ಟರ ಕೈಯಿಂದ ಕಷ್ಟಪಡುತ್ತಿರುವ ನಿಮ್ಮ ಸಹೋದರ ಸಹೋದರಿಯರಿಂದಲೇ ಬಂದದ್ದು. ಅದಕ್ಕೆ ಲಕ್ಷ್ಯಕೊಡಲು ದೇವರು ನಿಮಗೆ ಸಹಾಯ ಮಾಡಲಿ.

* * * *

ಗುಪ್ತ ಸಭೆಗಾಗಿ ಸಹಾಯ ಮಾಡಲು ನಿಮಗೆ ಮನಸ್ಸಿದ್ದರೆ, ಹೆಚ್ಚಿನ ತಿಳುವಳಿಕೆ ಹೊಂದಲು ಕೆಳಗಿನ ವಿಳಾಸಕ್ಕೆ ಬರೆಯಿರಿ.

WURMBRAND PUBLICATIONS
P.O. BOX 656
BOMBAY—1

ವುರ್ಮ್ ಬ್ರ್ಯಾಂಡ್ ಪ್ರಕಾಶನ,
ಪೋಸ್ಟ್ ಬಾಕ್ಸ್ 656
ಮುಂಬಾಯಿ —1



ಇದು ಒಂದು ಹಿಂಸಾಯುಕ್ತಾ ವಿಷಯವನ್ನೊಳಗೊಂಡ ಹಾಗೂ ಭಯಂಕರವಾದ ಹಿಂಸೆಯನ್ನೊಳಗೊಂಡ ಪುಸ್ತಕ—

ಕಮ್ಯುನಿಸ್ಟ್ ದೇಶಗಳಲ್ಲಿ ಕ್ರೈಸ್ತರು ಹಿಂಸೆಪಟ್ಟಂತ ವಿಷಯವಾಗಿದೆ. ಗ್ರಂಥಕರ್ತನು ಬರೆಯುವುದು—ಕ್ರೈಸ್ತರು ಬಹಳವಾಗಿ ಹಿಂಸಿಸಲ್ಪಟ್ಟು, ತುದಿಯಲ್ಲಿ ಕಬ್ಬಿಣದ ಮೊಳೆಗಳುಳ್ಳ ಚಬಕನ್ನು ಬೆಂಕಿಯಲ್ಲಿ ಕಾಯಿಸಿ ಹೊಡೆಯುತ್ತಿದ್ದರು. ದಾಹಗೊಂಡ ಕ್ರೈಸ್ತರಿಗೆ ಕೇವಲ ಉಪ್ಪಿನ ನೀರನ್ನು ಕುಡಿಯಲು ಕೊಡುತ್ತಿದ್ದರು. ಆದರೆ ಈ ಎಲ್ಲಾದರಲ್ಲಿ ಕ್ರೈಸ್ತರು ತಮ್ಮ ಹಿಂಸೆಗಾಗಿ ಹೆಚ್ಚಾಗಿ ಪ್ರಾರ್ಥನೆ ಮಾಡುತ್ತಿದ್ದರು ಮತ್ತು ದೇವರು ಈ ಸಂದರ್ಭದಲ್ಲಿ ತಮಗೆ ಸಹಾಯ ಮಾಡುತ್ತಿದ್ದಾನೆಂದು ನಂಬಿದ್ದರು.